ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದುರ್ಗಾ ಪೂಜೆಗೆ ಸಿದ್ಧತೆ

ದುರ್ಗಾ ಪೂಜೆಗೆ ಪೂರ್ವಭಾವಿಯಾಗಿ ಪಶ್ಚಿಮ ಬಂಗಾಳದ ನಾಡಿಯಾದಲ್ಲಿ ಕಲಾವಿದೆಯೊಬ್ಬರು ಶನಿವಾರ ದೇವಿಯ ವೇಷತೊಟ್ಟು ತಾಲೀಮು ನಡೆಸಿದರು

VISION NEET ACADEMY

ವಿಷನ್ ನೀಟ್ ಅಕಾಡೆಮಿ

BLR ENVISION ACADEMY LLP ಬೆಂಗಳೂರು | ಬಳ್ಳಾರಿ

ಕರ್ನಾಟಕದ ಅತ್ಯಂತ ಯಶಸ್ವಿ ಮತ್ತು ವಿಶ್ವಾಸಾರ್ಹ ನೀಟ್ ಕೋಚಿಂಗ್ ಸಂಸ್ಥೆ

17 years of academic excellence

4045

2015ರಿಂದ 4045ಕ್ಕೂ ಅಧಿಕ ನಮ್ಮ ವಿದ್ಯಾರ್ಥಿಗಳು ಸರ್ಕಾರಿ ಮೆಡಿಕಲ್ ಸೀಟ್ ಪಡೆದಿದ್ದಾರೆ.

NEET 2022 ಅದ್ಭುತವಾದ ಫಲಿತಾಂಶ

ನಮ್ಮ ವಿದ್ಯಾರ್ಥಿಗಳು ಪಡೆದ ಅದ್ಭುತವಾದ ಫಲಿತಾಂಶದಿಂದ ವಿಷನ್ ನೀಟ್ ಅಕಾಡೆಮಿ ಕರ್ನಾಟಕದ ಅತೀ ವಿಶ್ವಾಸಾರ್ಹ ಮತ್ತು ಯಶಸ್ವೀ ನೀಟ್ ಕೋಚಿಂಗ್ ಸಂಸ್ಥೆ ಎಂದು ಪುನಃ ಸಾಬೀತಾಗಿದೆ.

ALL INDIA RANKS

AIR* 99 Rank — G O RUCHITHA 220410919775

AIR* 39 Rank — PRAVEEN KUMAR 220410022565

AIR* 131 Rank — AMIT PUJAR 220410852424

* Category Ranks

ವರ್ಷವಾರು MBBS (Govt. ಮೆಡಿಕಲ್) ಸೀಟ್ ಪಡೆದ ವಿಷನ್ ವಿದ್ಯಾರ್ಥಿಗಳ ವಿವರ

- 2015 — 471 ಮೆಡಿಕಲ್ ಸೀಟ್‌ಗಳು
- 2016 — 689 ಮೆಡಿಕಲ್ ಸೀಟ್‌ಗಳು
- 2017 — 590 ಮೆಡಿಕಲ್ ಸೀಟ್‌ಗಳು
- 2018 — 648 ಮೆಡಿಕಲ್ ಸೀಟ್‌ಗಳು
- 2019 — 642 ಮೆಡಿಕಲ್ ಸೀಟ್‌ಗಳು
- 2020 — 610 ಮೆಡಿಕಲ್ ಸೀಟ್‌ಗಳು
- 2021 — 395 ಮೆಡಿಕಲ್ ಸೀಟ್‌ಗಳು

2022 ರಲ್ಲಿ 415 ಕ್ಕೂ ಅಧಿಕ ಸರ್ಕಾರಿ ಮೆಡಿಕಲ್ ಸೀಟ್ ಪಡೆಯುತ್ತಾರೆಂದು ನಿರೀಕ್ಷಿಸಲಾಗಿದೆ

ಸುಮಾರು 15 ವರ್ಷಗಳಿಂದ ಮೆಡಿಕಲ್/ ಜೆಇಇ ಕೋಚಿಂಗ್ ನಲ್ಲಿ ವಿದ್ಯಾರ್ಥಿಗಳ ಮತ್ತು ಪೋಷಕರ ವಿಶ್ವಾಸವನ್ನು ಉಳಿಸಿಕೊಂಡು ಬಂದಿರುವ ಕರ್ನಾಟಕದ ಏಕೈಕ ಕೋಚಿಂಗ್ ಸಂಸ್ಥೆ.

ವಿಷನ್ ನೀಟ್ ಅಕಾಡೆಮಿ 2022 ಟಾಪರ್ಸ್

Marks	Name	Number
680 Marks	HARSHITH C	220410289033
661 Marks	PRERITHA N.S	220411069127
658 Marks	VARUN U S	220410969528
655 Marks	PAVANKUMAR I D	220410792596
649 Marks	PRAJNA J	220411084601
631 Marks	MAINUDDIN S M	220410432326
628 Marks	MANJUNATH O S	220410908350
627 Marks	MD SAQUIIB	220410046758
626 Marks	PRAVEEN KUMAR	220410022565
626 Marks	SRINISHA N V	220410207071
623 Marks	MANJUNATH BM	220411063060
620 Marks	ABDUL SAMAD	220411294987
619 Marks	SANJANA G P	220410835341
618 Marks	SAMARTH R K	220410841936
617 Marks	BHARATH PATIL	220410964879
616 Marks	VINOD K S	220410672121
612 Marks	TIPPU GOWDA	220410346515
611 Marks	MD ZAHEER	220411357222
610 Marks	SHREYAS K S	220410086097
607 Marks	AKSHAY GH	220410368414
603 Marks	SRISATYASAGAR	220410706825
603 Marks	CHETAN B	220410822122

and counting...

ನಮ್ಮ ವಿದ್ಯಾರ್ಥಿಗಳು ಪಡೆದ ಮಾರ್ಕ್ಸ್

- 22 Students — 600+ Marks
- 66 Students — 550+ Marks
- 87 Students — 500+ Marks
- 78 Students — 470+ Marks
- 126 Students — 450+ Marks

2022ರ ನೀಟ್ ಫಲಿತಾಂಶದಲ್ಲಿ ಪಡೆದ ಮಾರ್ಕ್ಸ್ ಮೇಲೆ ಫೀ ಡಿಸ್ಕೌಂಟ್ ಸಿಗುತ್ತದೆ

- 20% ಫೀ ಡಿಸ್ಕೌಂಟ್ — 300-350 ಮಾರ್ಕ್ಸ್
- 25% ಫೀ ಡಿಸ್ಕೌಂಟ್ — 350-400 ಮಾರ್ಕ್ಸ್
- 30% ಫೀ ಡಿಸ್ಕೌಂಟ್ — 400-450 ಮಾರ್ಕ್ಸ್
- 40% ಫೀ ಡಿಸ್ಕೌಂಟ್ — 450-500 ಮಾರ್ಕ್ಸ್
- 50% ಫೀ ಡಿಸ್ಕೌಂಟ್ — 500+ ಮಾರ್ಕ್ಸ್

* ಈ ಸ್ಕಾಲರ್‌ಶಿಪ್ ಸೆಪ್ಟೆಂಬರ್ 15, 2022 ವರೆಗೆ ಟ್ಯೂಷನ್ ಫೀ ಗೆ ಮಾತ್ರ ಅನ್ವಯಿಸುತ್ತದೆ

ನಮ್ಮ ವಿದ್ಯಾರ್ಥಿಗಳ 2021 ರಲ್ಲಿ ಪಡೆದ ನೀಟ್ ಮಾರ್ಕ್ಸ್ ಮತ್ತು ವಿಷನ್ ನೀಟ್ ಅಕಾಡೆಮಿ ಕೋಚಿಂಗ್ ನಿಂದ ಈಗ ಪಡೆದ ನೀಟ್ ಮಾರ್ಕ್ಸ್ ನಡುವೆ ವ್ಯತ್ಯಾಸ

STUDENT NAME	PLACE	NEET 2021 MARKS	NEET 2022 MARKS	MARKS IMPROVED
PAVANKUMAR I DURGAD	Belagavi	367	655	288
PRAJNA J	Mysuru	362	649	287
MAINUDDIN SHANUR MAKANDAR	Belagavi	412	631	219
MANJUNATH O S	Chitradurga	329	628	299
MOHAMMED SAQUIIB QADIR	Ballary	389	626	237
ABDUL SAMAD	Bijapur	348	620	272
BHARATH PATIL	Yadgiri	378	617	239
VINOD K S	Mysuru	320	616	296
TIPPU GOWDA	Mandya	397	612	215
CHETAN.B	Ballary	360	603	243
ADITYA KUMAR	Bengaluru	360	591	231
SHIVREDDY D T	Gulbarga	360	591	231
MANJUSHREE	Ballary	358	590	232
YOGITHA M N	Mandya	250	585	335
ADITYA H KULKARNI	Gulbarga	344	582	238
PUNEETH A P	Mandya	218	582	364
CHARITHA R	Mysuru	211	577	366
VAISHNAVI S	Ballary	278	576	298
CHARAN N	Davanagere	335	562	227
RAJESH Y S	Ballary	320	562	242
KUNAL SOMASHEKAR CHONNAD	Belagavi	212	558	346
DIVYA	Gulbarga	238	556	318
RAHUL DHAREPPA METRI	Bijapura	206	555	349
KARTIK KONDABHINGI	Gadag	300	552	252
HITHESH A V	Tumkur	320	550	230
ROUNAK V CHAWLA	Bagalkote	169	548	379
YASEEN A PATVEGAR	Bijapur	224	535	311
SUBIKSHA PREETHI	Rasipuram	190	526	336
ADARSH R AMBORE	Hospet	254	521	267
HEMANTH N S	Chikkamagaluru	210	521	311
SHRIVASTAV S CHAVAN	Bijapur	281	520	239
HARSHA A KANAVI	Gadag	205	518	313
MAYUR S URS	Mysuru	185	507	322
PRAVEEN G T	Davanagere	276	503	227
MALLIKARJUN S M	Koppala	270	500	230

2023ರ ಪ್ರವೇಶಾತಿ ಪ್ರಾರಂಭವಾಗಿದೆ

ಸೆಪ್ಟೆಂಬರ್ 15 ರಿಂದ 2ನೇ ಬ್ಯಾಚ್ ಪ್ರಾರಂಭ

LIMITED SEATS AVAILABLE

ಪ್ರವೇಶ ಪಡೆಯಲು ಸಂಪರ್ಕಿಸಿ

ನೀಟ್ NEET

Admissions Open

ಲಾಂಗ್ ಟರ್ಮ್ ಮೆಡಿಕಲ್ ಕೋಚಿಂಗ್ — LONG TERM MEDICAL COACHING

ಬೆಂಗಳೂರು ಕ್ಯಾಂಪಸ್: 73497 44105 | 74112 68903, 98862 18399 | 90357 17875

ಬಳ್ಳಾರಿ ಕ್ಯಾಂಪಸ್: 63665 81638, 63665 81639

ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕ್ಯಾಂಪಸ್ ಮತ್ತು ಹಾಸ್ಟಲ್ ವ್ಯವಸ್ಥೆಯಿದೆ

ವಿಳಾಸ: ನಂ.802, 9ನೇ ಬಿ ಮೇನ್, ಹೆಚ್‌ಆರ್‌ಬಿಆರ್ 1ನೇ ಬ್ಲಾಕ್, ಕಲ್ಯಾಣ ನಗರ, ಬಾಣಸವಾಡಿ, ಬೆಂಗಳೂರು – 43

www.visionedu.in

ಸೂಚನೆ: ಈ ಜಾಹೀರಾತಿನಲ್ಲಿ ಪ್ರಕಟವಾದ ಯಾವುದೇ ಅಂಶವನ್ನು ಪರಿಶೀಲಿಸಿ ನಮ್ಮ ಗಮನಕ್ಕೆ ತರಬಹುದು

ad6.in

ಮಹದೇವಪುರ ವ್ಯಾಪ್ತಿಯಲ್ಲಿ ಮನೆಗಳಿಗೆ ಮರಳುತ್ತಿರುವ ನಿವಾಸಿಗಳು • ರಿಪೇರಿಯೇ ದೊಡ್ಡ ಸವಾಲು

ನೆರೆ: ಬೆಲೆ ಬಾಳುವ ವಸ್ತುಗಳು ಗುಜರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವ್ಯಾಪ್ತಿಯಲ್ಲಿ ಮನೆಗಳಿಗೆ ನುಗ್ಗಿದ್ದ ನೀರು ಈಗ ಕಡಿಮೆಯಾಗಿದ್ದು, ಮನೆಗಳನ್ನು ಸ್ವಚ್ಛಗೊಳಿಸಿ ನಿವಾಸಿಗಳು ಮರಳಿ ವಾಸಕ್ಕೆ ಅಣಿಯಾಗುತ್ತಿದ್ದಾರೆ. ಬೆಲೆಬಾಳುವ ಪೀಠೋಪಕರಣ, ಎಲೆಕ್ಟ್ರಾನಿಕ್ ವಸ್ತುಗಳು ಈಗ ಗುಜರಿಗೆ ಹೋಗುತ್ತಿವೆ.

ರೈನ್‌ಬೋ ಡ್ರೈವ್ ಲೇಔಟ್‌ನಲ್ಲಿ ಬಹುತೇಕ ವಿಲ್ಲಾಗಳಿಗೆ ನೀರು ತುಂಬಿತ್ತು. ಮಳೆ ಕಡಿಮೆಯಾದ ಬಳಿಕ ನೀರಿನ ಹರಿವು ಕಡಿಮೆಯಾಗಿದೆ. ಮನೆಯಲ್ಲಿನ ನೀರು ಹೊರ ಹಾಕಿ ಸ್ವಚ್ಛಗೊಳಿಸುವ ಕಾರ್ಯದಲ್ಲಿ ನಿವಾಸಿಗಳು ನಿರತರಾಗಿದ್ದಾರೆ.

ನೀರಿನ ಹರಿವು ಹೆಚ್ಚಾಗಿದ್ದ-ರಿಂದ ಏಕಾಏಕಿ ಖಾಲಿ ಮಾಡಿದ್ದ ನಿವಾಸಿಗಳು, ಈಗ ಮನೆಗೆ ಹೋಗಿ ಹಾಳಾಗಿರುವ ಪರಿಸ್ಥಿತಿ ನೋಡಿ ಕಣ್ಣೀರಿ-ಡುತ್ತಿದ್ದಾರೆ. ಕಸ ಕಡ್ಡಿ ಎಲ್ಲವೂ ಮನೆಗೆ ತುಂಬಿಕೊಂಡಿದ್ದು, ಸ್ವಚ್ಛಗೊಳಿಸುವು-ದೇ ದೊಡ್ಡ ಸವಾಲಾಗಿದೆ. ನೀರಿನಲ್ಲಿ ಮುಳುಗಿದ್ದ ಪೀಠೋಪಕರಣ ಮರು ಬಳಕೆಗೆ ಯೋಗ್ಯವಾಗಿಲ್ಲ. ಲಕ್ಷಗಟ್ಟಲೆ ಹಣ ಕೊಟ್ಟು ತಂದಿದ್ದ ವಸ್ತುಗಳು ಈಗ ಗುಜರಿಗೆ ಬಿಸಾಡಬೇಕಾದ ಸ್ಥಿತಿಗೆ ಬಂದಿರುವುದು ಬೇಸರ ತರಿಸಿದೆ ಎಂದು ನಿವಾಸಿಗಳು ಅಳಲು ತೋಡಿಕೊಳ್ಳುತ್ತಾರೆ.

ಜೀವನ್ ಎಕ್ಸೋಟಿಕ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ನೀರು ಹರಿಯುತ್ತಿರುವುದನ್ನು ತಪ್ಪಿಸುವ ಕಾಮಗಾರಿ ನಡೆಯುತ್ತಿದೆ

'ಮನೆಯ ಮುಂದೆ ನಿಲ್ಲಿಸಿದ್ದ ಕಾರು ಮತ್ತು ದ್ವಿಚಕ್ರ ವಾಹನಗಳೂ ಚಾಲನೆ ಮಾಡುವ ಸ್ಥಿತಿಯಲ್ಲಿ ಇಲ್ಲ. ಅವುಗಳ ರಿಪೇರಿಗೂ ಲಕ್ಷಗಟ್ಟಲೆ ಖರ್ಚಾಗುವ ಸಾಧ್ಯತೆ ಇದೆ. ವಿಮಾ ಕಂಪನಿಗಳ ಪ್ರತಿನಿಧಿಗಳಿಗೆ ಕರೆ ಮಾಡಿದರೆ ಸ್ಪಂದಿಸುತ್ತಿಲ್ಲ. ಯಾರ ಬಳಿ ಕಷ್ಟ ಹೇಳಿಕೊಳ್ಳುವುದೋ ಗೊತ್ತಾಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಮನೆಗಳ ನೀರು ಹೊರಹಾಕಲು ಬಿಬಿಎಂಪಿ ಮತ್ತು ಜಲ ಮಂಡಳಿ ಅಧಿಕಾರಿಗಳು ಸಹಕಾರ ನೀಡಿದ್ದಾರೆ. ರಾಸಾಯನಿಕ ಸಿಂಪರಣೆ ಮಾಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಆಗಿರುವ ನಷ್ಟಕ್ಕೆ ಪರಿಹಾರ ಕೊಡುವ ಬಗ್ಗೆ ಯಾರೂ ಮಾತನಾಡು-ತ್ತಿಲ್ಲ' ಎಂದರು.

ಜೋಪಡಿಗಳಿಂದ ನೀರು ಹೊರಕ್ಕೆ

ತೂಬರಹಳ್ಳಿ, ಮುನ್ನೇಕೊಳಲು ಬಳಿ ವಲಸೆ ಕಾರ್ಮಿಕರ ಗುಡಿಸಿಲುಗಳಿಗೆ ನುಗ್ಗಿದ್ದ ನೀರನ್ನು ಕಡೆಗೂ ಬಿಬಿಎಂಪಿ ಸಿಬ್ಬಂದಿ ಹೊರ ಹಾಕಿದರು.

ಒಂದು ವಾರದಿಂದ ಗುಡಿ-ಸಿಲುಗಳಲ್ಲೇ ಇದ್ದ ನೀರನ್ನು ಮೋಟರ್‌ಗಳ ಮೂಲಕ ರಾಜಕಾಲುವೆಗೆ ಪಂಪ್ ಮಾಡಿದರು. ಜೋಪಡಿಗಳಲ್ಲಿ ಅಳಿದುಳಿದ ವಸ್ತುಗಳನ್ನು ಕಾರ್ಮಿಕರು ಜೋಡಿಸಿ ಒಣಗಿಸುವ ಪ್ರಯತ್ನ ಮಾಡಿದರು.

'ಕೆಲವರು ಶೀತ–ಜ್ವರದಿಂದ ಬಳಲುತ್ತಿದ್ದು, ಸೋಮವಾರ ಆರೋಗ್ಯ ತಪಾಸಣಾ ಶಿಬಿರ ನಡೆಸುವುದಾಗಿ ಬಿಬಿಎಂಪಿ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಕಾರ್ಮಿಕರ ಊಟದ ವ್ಯವಸ್ಥೆಯನ್ನು ಸೋಮವಾರದ ತನಕ ವಿಸ್ತರಣೆ ಮಾಡಲು ಒಪ್ಪಿದ್ದಾರೆ' ಎಂದು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಪಿ.ಮುನಿರಾಜು ತಿಳಿಸಿದರು.

145 ಕಡೆ ಪ್ರವಾಹ, ಶೀಘ್ರ ಪರಿಹಾರ ಕಾರ್ಯ: ಲಿಂಬಾವಳಿ ಸೂಚನೆ

ಕೆ.ಆರ್.ಪುರ: 'ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲಾ ಕೆರೆಗಳೂ ತುಂಬಿದ್ದು, ಸುಮಾರು 145 ಕಡೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ವಾರ್ಡ್‌ವಾರು ತಂಡಗಳನ್ನು ರಚಿಸಿ, ಜನರಿಗೆ ಅನುಕೂಲವಾಗುವಂತೆ ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸೂಚನೆ ನೀಡಲಾಗಿದೆ' ಎಂದು ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಮಳೆಯ ನೀರು ನಿಲ್ಲದಂತೆ ಶಾಶ್ವತ ಪರಿಹಾರ ಕಾಮಗಾರಿ ಕೈಗೊಳ್ಳುವ ಸಂಬಂಧ ಮಹದೇವ ಪುರ ವಿಧಾನಸಭಾ ಕ್ಷೇತ್ರದ ಮಾರತಹಳ್ಳಿಯ ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಬಿಬಿಎಂಪಿ, ಬಿಡಬ್ಲ್ಯೂಎಸ್‌ಎಸ್‌ಬಿ, ಆರೋಗ್ಯ, ಕಂದಾಯ ಹಾಗೂ ಇತರೆ ಅಧಿಕಾರಿಗಳೊಂದಿಗೆ ತುರ್ತು ಕ್ರಮಗಳ ಕುರಿತು ಚರ್ಚೆ ನಡೆಸಿದರು.

'ತುರ್ತು ಪರಿಹಾರಗಳ ಪೈಕಿ ಅಪಾರ್ಟ್‌ಮೆಂಟ್ ಮತ್ತು ಬಡಾವಣೆಗಳಲ್ಲಿ ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವುದು, ವಿದ್ಯುತ್ ಪರಿವರ್ತಕ ಸರಿಪಡಿಸುವುದು, ಹೂಳು ತೆಗೆಯುವುದು, ನೀರು ನಿಂತ ಸ್ಥಳಗಳಲ್ಲಿ ಬ್ಲೀಚಿಂಗ್ ಪೌಡರ್ ಸಿಂಪಡಿಸುವುದು ಮತ್ತು ಕಾಳಜಿ ಕೇಂದ್ರ ತೆರೆಯಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.

ಇದೇ ವೇಳೆ ಒತ್ತುವರಿಯಾ-ಗಿರುವ ಕಾಲುವೆಗಳನ್ನು ಕೂಡಲೇ ತೆರವುಗೊಳಿಸಲು ಮತ್ತು ತ್ವರಿತವಾಗಿ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ ವಲಯ ಆಯುಕ್ತ ತ್ರಿಲೋಕಚಂದ್ರ, ತಹಶೀಲ್ದಾರ್ ಅಜಿತ್ ರೈ, ಜಂಟಿ ಆಯುಕ್ತ ವೆಂಕಟಾಚಲಪತಿ, ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರ ರೆಡ್ಡಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಬಿ.ಎನ್.ನಟರಾಜ್, ಮಹಾದೇವಪುರ ಕಾರ್ಯಪಡೆ ಅಧ್ಯಕ್ಷ ಕ್ಲೆಮೆಂಟ್ ಜಯಕುಮಾರ್ ಇದ್ದರು.

ಆಸ್ಪತ್ರೆ ಬಿಲ್ ಪಾವತಿಸಲು ವಿಮಾ ಕಂಪನಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಸ್ಪತ್ರೆಯಲ್ಲಿ ಪ್ರವೇಶ ಪಡೆದವರು ದಿನದ 24 ಗಂಟೆ ಒಳರೋಗಿಯಾಗಿ ಪ್ರವೇಶ ಪಡೆದಿದ್ದರೆ ಮಾತ್ರವೇ ಅಂತಹವರಿಗೆ ಆರೋಗ್ಯ ವಿಮಾ ಸೌಲಭ್ಯ ಪಾವತಿಸಲು ಶಕ್ಯ' ಎಂಬ ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ವಾದವನ್ನು ತಳ್ಳಿ ಹಾಕಿರುವ ಬೆಂಗಳೂರು ನಗರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ, ದೂರುದಾರರ ಆಸ್ಪತ್ರೆ ಖರ್ಚಿನ ಬಾಬ್ತು ₹ 34 ಸಾವಿರ ಪಾವತಿ ಮಾಡುವಂತೆ ಕಂಪನಿಗೆ ಆದೇಶಿಸಿದೆ.

ಈ ಸಂಬಂಧ ವೇದಿಕೆಯ ಅಧ್ಯಕ್ಷ ಕೆ.ಎಸ್.ಬೀಳಗಿ, ಸದಸ್ಯರಾದ ರೇಣುಕಾದೇವಿ ದೇಶಪಾಂಡೆ, ಎಚ್. ಜನಾರ್ದನ ಅವರಿದ್ದ ತ್ರಿಸದಸ್ಯ ಪೀಠವು ಇದೇ 1ರಂದು ಈ ಆದೇಶ ನೀಡಿದ್ದು, 'ಆಸ್ಪತ್ರೆಯ ಬಾಬ್ತು ₹ 34,638 ಮತ್ತು ವ್ಯಾಜ್ಯದ ಖರ್ಚು ₹ 1 ಸಾವಿರ ಮೊತ್ತವನ್ನು ದೂರುದಾರರಿಗೆ ಪಾವತಿಸಬೇಕು. 30 ದಿನಗಳ ಒಳಗಾಗಿ ಆದೇಶ ಪಾಲನೆ ಮಾಡದಿದ್ದಲ್ಲಿ, ವಾರ್ಷಿಕ ಶೇ 10 ಬಡ್ಡಿ ದರದಲ್ಲಿ ಪಾವತಿ ಮಾಡಬೇಕಾಗುತ್ತದೆ' ಎಂದು ನಿರ್ದೇಶಿಸಿದೆ.

ಪ್ರಕರಣವೇನು?: ಬಸವೇಶ್ವರ ನಗರದ ನಿವಾಸಿ ಎಸ್.ಆದರ್ಶ ವಿ.ಎಂ.ವೇರ್ ಸಾಫ್ಟ್‌ವೇರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಅಡಿಯಲ್ಲಿ ಆರೋಗ್ಯ ವಿಮೆ ಹೊಂದಿದ್ದಾರೆ. ಹತ್ತು ವರ್ಷಗಳಿಂದ ಪ್ರೀಮಿಯಂ ಭರ್ತಿ ಮಾಡುತ್ತಿರುವ ಇವರ ವಿಮಾ ಸೌಲಭ್ಯದಲ್ಲಿ ತಾಯಿ ಮತ್ತು ತಂದೆಯೂ ಫಲಾನುಭವಿಯಾಗಿದ್ದಾರೆ.

ಕಳೆದ ವರ್ಷ ಜುಲೈ 22ರಂದು ದೂರುದಾರರ ತಾಯಿ ಗಂಭೀರ ಅನಾರೋಗ್ಯದ ಕಾರಣ ರಾಜಾಜಿನಗರದ ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿದ್ದರು. ಕೋವಿಡ್–19ರ ಕಾರಣ ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಲಾಗಿತ್ತು.

ತಪಾಸಣೆಯ ನಂತರ ಅವರಿಗೆ ಕೋವಿಡ್ ನೆಗೆಟಿವ್ ಎಂದು ವರದಿ ನೀಡಲಾಗಿತ್ತು. ಹೀಗಾಗಿ, ಕೋವಿಡ್ ಸೋಂಕು ಇಲ್ಲದ ರೋಗಿಗಳು ಡಿಸ್ಚಾರ್ಜ್ ಮಾಡಿಸಿಕೊಂಡು ಹೋಗುವಂತೆ ವೈದ್ಯರು ಸೂಚಿಸಿದ್ದ ಪರಿಣಾಮ ಅವರು ಮರುದಿನ ಮನೆಗೆ ಮರಳಿದ್ದರು.

ಮರಳುವ ಸಮಯದಲ್ಲಿ ಆಸ್ಪತ್ರೆಯ ಬಿಲ್ ಅನ್ನು ನಗದುರಹಿತ ರೂಪದಲ್ಲಿ ಪಾವತಿ ಮಾಡಲು ವಿಮಾ ಕಂಪನಿ ನಿರಾಕರಿಸಿತ್ತು. 'ರೋಗಿಯು 24 ಗಂಟೆಗಳ ಕಾಲ ಆಸ್ಪತ್ರೆಯಲ್ಲಿ ಇರಲಿಲ್ಲ' ಎಂಬ ಕಾರಣದೊಂದಿಗೆ ವಿಮಾ ಸೌಲಭ್ಯ ನಿರಾಕರಿಸಿತ್ತು. ದೂರುದಾರರು ಗ್ರಾಹಕರ ಕಾಯ್ದೆ –2019ರ ಅಡಿಯಲ್ಲಿ ಇದನ್ನು ಪ್ರಶ್ನಿಸಿದ್ದರು.

ಅಂಚೆ ಕಚೇರಿಯಿಂದ ಜಾಗೃತಿ ಅಭಿಯಾನ • 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಸಹಯೋಗ

ಮಕ್ಕಳಲ್ಲಿ ಉಳಿತಾಯ ಜಾಗೃತಿ: ಅಂಚೆ 'ಮಕ್ಕಳ ಹುಂಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳಲ್ಲಿ ಉಳಿತಾಯದ ಮನೋಭಾವ ಜಾಗೃತಗೊಳಿಸಲು ಮುಂದಾಗಿರುವ ಭಾರತೀಯ ಅಂಚೆ ಇಲಾಖೆ ಮೊದಲ ಹಂತದಲ್ಲಿ ಬೆಂಗಳೂರು ನಗರದ ಆಯ್ದ 10 ಶಾಲೆಗಳಲ್ಲಿ ಜಾಗೃತಿ ಕಾರ್ಯ-ಕ್ರಮಗಳನ್ನು ಆಯೋಜಿಸುತ್ತಿದೆ. 'ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್' ಬಳಗ ಈ ಅಭಿಯಾನಕ್ಕೆ ಕೈ ಜೋಡಿಸಿದೆ.

ಭಾರತೀಯ ಅಂಚೆ ಇಲಾಖೆ ತನ್ನ ಎಲ್ಲ ಅಂಚೆ ಕಚೇರಿಗಳನ್ನೂ ಕೋರ್ ಬ್ಯಾಂಕಿಂಗ್ ಸರ್ವೀಸ್ (ಸಿಬಿಎಸ್) ಅಥವಾ ಕೇಂದ್ರೀಕೃತ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸೇರಿಸಿಕೊಳ್ಳುವ ಅತ್ಯುನ್ನತ ಸಾಧನೆ ಮಾಡಿದೆ. ವಿಶ್ವದ ಅತಿದೊಡ್ಡ ಆರ್ಥಿಕ ಸೇವಾ ಜಾಲವನ್ನು ಹೊಂದಿರುವ ಅಂಚೆ ಇಲಾಖೆ ಜನರಿಗೆ ಹತ್ತು ಹಲವು ಸೇವೆಗಳನ್ನು ನೀಡುತ್ತಿದೆ.

ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ 2011–2016ರ ಅವಧಿಯಲ್ಲಿ ಮಹಿಳೆಯರು ಬ್ಯಾಂಕ್ ಖಾತೆ ತೆರೆಯುವ ಪ್ರಮಾಣ ಶೇ 9ರಷ್ಟು ಸ್ಥಗಿ-ತಗೊಂಡಿತ್ತು. ಹೀಗಾಗಿ, ಮಹಿಳೆಯರು ತಮ್ಮ ಜೀವನ ನಿರ್ವಹಣೆಯ ಮೇಲೆ ಸ್ವಯಂ ನಿಯಂತ್ರಣ ಸಾಧಿಸಲು ಕಷ್ಟವಾಗುತ್ತಿತ್ತು. ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಅಂಚೆ ಇಲಾಖೆ ಖಾತೆಗಳನ್ನು ತೆರೆಯಲು ಮಹಿಳೆಯರನ್ನು ಪ್ರೋತ್ಸಾಹಿಸುವ ಮೂಲಕ ಸ್ತ್ರೀ ಸಬಲೀಕರಣಕ್ಕೆ ಒತ್ತು ನೀಡಿದೆ. ಸುಕನ್ಯಾ ಸಮೃದ್ಧಿ ಮೂಲಕ ಹೆಣ್ಣು ಮಕ್ಕಳಿಗೆ ಠೇವಣಿ ಯೋಜನೆ ಜಾರಿಗೆ ತಂದಿದೆ. ವರ್ಷಕ್ಕೆ ಗರಿಷ್ಠ ₹1.5 ಲಕ್ಷ ಠೇವಣಿ ಇಡಬಹುದು. ಅದಕ್ಕೆ ಶೇ 7.6 ಬಡ್ಡಿ ನೀಡಲಾಗುತ್ತಿದೆ.


ರಾಜೇಂದ್ರಕುಮಾರ್

> ಶಾಲಾ ಹಂತದಲ್ಲೇ ಮಕ್ಕಳಿಗೆ ಉಳಿತಾಯದ ಮನೋಭಾವ ಬೆಳೆಸಿದರೆ ಭವಿಷ್ಯದಲ್ಲಿ ಆರ್ಥಿಕ ಭದ್ರತೆ ದೊರೆಯಲಿದೆ. ಮಕ್ಕಳೇ ಪೋಷಕರ ಮೊಬೈಲ್‌ನಿಂದ ಹಣ ಜಮೆ ಮಾಡಿಸಬಹುದು
>
> **ಎಸ್.ರಾಜೇಂದ್ರಕುಮಾರ್,** ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಬೆಂಗಳೂರು.

ಈಗ ಶಾಲಾ ಮಕ್ಕಳಿಗೂ ಖಾತೆ ತೆರೆದು ಬಾಲ್ಯದಿಂದಲೇ ಉಳಿತಾಯ ಮಾಡುವುದನ್ನು ರೂಢಿಸಲು, ಉಳಿತಾಯದಿಂದ ಭವಿಷ್ಯದಲ್ಲಿ ಸಿಗುವ ಪ್ರಯೋಜನ ಕುರಿತು ಮಾಹಿತಿ ನೀಡಲು ಮುಂದಾಗಿದೆ.

10 ವರ್ಷದ ಒಳಗಿನ ಶಾಲಾ ಮಕ್ಕಳು ತಮ್ಮದೇ ಖಾತೆ ತೆರೆದು ಪೋಷಕರು ನೀಡುವ ಹಣವನ್ನು ಖಾತೆಗೆ ಜಮೆ ಮಾಡಬಹುದು. ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅಗತ್ಯವಿದ್ದಾಗ ಆನ್‌ಲೈನ್ ಮೂಲಕ ಖರ್ಚು ಮಾಡಬಹುದು. 18 ವರ್ಷಗಳ ನಂತರ ಸ್ವತಂತ್ರವಾಗಿ ತಮ್ಮ ಖಾತೆಯನ್ನು ನಿರ್ವಹಣೆ ಮಾಡಬಹುದು. ಮೊದಲು ಬೆಂಗಳೂರು ನಗರದಿಂದ ಆರಂಭಿಸಿ, ನಂತರ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲಾಗುವುದು ಎನ್ನುತ್ತಾರೆ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರಕುಮಾರ್.

ಶಾಲಾ ಅಂಗಳದಲ್ಲೇ ಆಧಾರ್

ಅಂಚೆ ಇಲಾಖೆಯ ಸಿಬ್ಬಂದಿ ಶಾಲೆಗಳಿಗೇ ತೆರಳಿ ಆಧಾರ್ ಸೇವೆ ಒದಗಿಸುವ ಕೆಲಸವನ್ನು ಅಂಚೆ ಇಲಾಖೆ ಮಾಡುತ್ತಿದೆ. ಮಕ್ಕಳಿಗೆ ಆಧಾರ್ ಸಂಖ್ಯೆ ಕೊಡಿಸುವುದು, ಆಧಾರ್‌ಗಳಲ್ಲಿನ ಲೋಪಗಳನ್ನು ಸರಿಪಡಿಸುವುದು, ಮೊಬೈಲ್ ನಂಬರ್ ಜೋಡಣೆ ಮತ್ತಿತರ ಸೇವೆಗಳನ್ನು ಉಚಿತವಾಗಿ ನೀಡುತ್ತಿದೆ.

ಅಂಚೆಚೀಟಿ ಸಂಗ್ರಹದ ಹವ್ಯಾಸ: ಶಾಲಾ ಮಕ್ಕಳಲ್ಲಿ ಅಂಚೆಚೀಟಿ ಸಂಗ್ರಹದ ಹವ್ಯಾಸ ಮೂಡಿಸಲು ಇಲಾಖೆ ಶ್ರಮಿಸುತ್ತಿದೆ. ಪ್ರತಿ ಅಂಚೆ ಚೀಟಿಯೂ ಹೊಂದಿರುವ ಭಾಷೆ, ದೇಶ, ನಮೂದಿಸಿದ ಕಾಲಘಟ್ಟ, ಮೌಲ್ಯ, ಇತಿಹಾಸ, ಆ ಪ್ರದೇಶದ ಸಂಸ್ಕೃತಿ, ಕಲೆ, ರಾಜಕೀಯ, ವಿಶೇಷ ಘಟನಾವಳಿಗಳ ಅರಿವು ಮೂಡಿಸುತ್ತದೆ. ಹಾಗಾಗಿ, ಅಂಚೆಚೀಟಿ ಸಂಗ್ರಹ ಅಧ್ಯಯನ ಯೋಗ್ಯವೂ ಆಗಿದೆ ಎನ್ನುತ್ತಾರೆ ರಾಜೇಂದ್ರಕುಮಾರ್.

ಸ್ವಾತಂತ್ರ್ಯೋತ್ಸವದ ಅಮೃತ ಸೇವೆ: ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಮಯದಲ್ಲಿ ಅಂಚೆ ಇಲಾಖೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಸ್ವಾತಂತ್ರ್ಯ ಹೋರಾಟಗಾರರನ್ನು ಗುರುತಿಸುವ 100ಕ್ಕೂ ಹೆಚ್ಚು ವಿಶೇಷ ಕವರ್ ಬಿಡುಗಡೆ ಮಾಡಿದೆ. ರಾಣಿ ಅಬ್ಬಕ್ಕ, ಕಾರ್ನಾಡ್ ಸದಾಶಿವರಾವ್, ನೀಲಕಂಠಯ್ಯ, ಕಡಿದಾಳ್ ಮಂಜಪ್ಪ ಸೇರಿದಂತೆ ರಾಜ್ಯದ ಹಲವರನ್ನು ಸ್ಮರಿಸಲಾಗಿದೆ. ಹರ್ ಘರ್ ತಿರಂಗಾ ಅಂಗವಾಗಿ ರಾಜ್ಯದ ಅಂಚೆ ಕಚೇರಿಗಳು 10 ಲಕ್ಷ ಧ್ವಜ ಮಾರಾಟ ಮಾಡಿವೆ.

ಅರ್ಕಾವತಿ ಬಡಾವಣೆ: ಕಂದಾಯ ವಿವರ ಅಪ್‌ಲೋಡ್‌ಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅರ್ಕಾವತಿ ಬಡಾವಣೆಯ ವಿವರಗಳನ್ನು ಮುಂದಿನ ಹತ್ತು ವಾರಗಳಲ್ಲಿ ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

'ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಕುರಿತ ವಿವರಗಳನ್ನು ಬಿಡಿಎ ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು' ಎಂದು ಏಕಸದಸ್ಯ ನ್ಯಾಯಪೀಠ ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿ ಬಿಡಿಎ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ವೇಳೆ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಬಿಡಿಎ ತನ್ನ ಕಾರ್ಯಚಟುಟಿಕೆಯ-ಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಬಡಾವಣೆಗಳ ರಚನೆಯ ಪ್ರತಿಯೊಂದು ವಿವರವನ್ನೂ ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು' ಎಂದು ನಿರ್ದೇಶಿಸಿದೆ.

ಏನಿರಬೇಕು?: ಬಡಾವಣೆಗಳ ರಚನೆಗೆ ಹೊರಡಿಸಲಾದ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಗಳಲ್ಲಿ ಸೂಚಿಸಲಾದ ಜಮೀನಿನ ಒಟ್ಟು ವಿಸ್ತೀರ್ಣ, ಡಿನೋಟಿಫಿಕೇಷನ್‌ಗೆ ಕಾರಣ ಮತ್ತು ಡಿನೋಟಿಫಿಕೇಷನ್‌ನ ಪ್ರತಿಗಳನ್ನು ಗ್ರಾಮ ನಕ್ಷೆಯೊಂದಿಗೆ, ಆಯಾ ಗ್ರಾಫಿಕ್ ವಿವರಣೆಯೊಂದಿಗೆ ಪ್ರತ್ಯೇಕವಾಗಿ ಅಪ್‌ಲೋಡ್ ಮಾಡಬೇಕು. ಇದು ಗೂಗಲ್ ನಕ್ಷೆ, ಪರಿಷ್ಕೃತ ಮಾಸ್ಟರ್ ಪ್ಲಾನ್ ಇತ್ಯಾದಿ ವಿವರಗಳನ್ನು ಒಳಗೊಂಡಿರಬೇಕು.

ಯಾವಾಗ ಸ್ವಾಧೀನಪಡಿಸಿಕೊಳ್ಳಲಾಯಿತು ಮತ್ತು ಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣ, ಸ್ವಾಧೀನ ಸೂಚನೆಗಳು, ಮಹಜರ್ ಮತ್ತು ಬಿಡಿಎ ಕಾಯ್ದೆ–1976ರ ಕಲಂ 16(2)ರ ಅಡಿಯಲ್ಲಿ ಅಭಿವೃದ್ಧಿ ಯೋಜನೆ ಅಧಿಸೂಚನೆಗಳ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು. ಭೂಸ್ವಾಧೀನಕ್ಕೆ ಸಂಬಂಧಿಸಿದ ವ್ಯಾಜ್ಯಗಳ ವಿವರಗಳು, ಅವುಗಳ ಸರ್ವೆ ನಂಬರ್‌ವಾರು ವಿವರ ಮತ್ತು ಪ್ರಕರಣಗಳ ಸ್ಥಿತಿಯನ್ನು ಅಪ್‌ಲೋಡ್ ಮಾಡಬೇಕು.

ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾದ ಜಮೀನಿನ ಒಟ್ಟು ವಿಸ್ತೀರ್ಣ, ಅಳತೆಗಳೊಂದಿಗೆ ರಚಿಸಲಾದ ಒಟ್ಟು ನಿವೇಶನಗಳ ಸಂಖ್ಯೆ ಮತ್ತು ಪ್ರತಿ ಸರ್ವೆ ನಂಬರ್‌ನಲ್ಲಿ ರಚಿಸಲಾದ ನಿವೇಶನಗಳ ಸಂಖ್ಯೆಯೊಂದಿಗೆ ನಿವೇಶನಗಳ ಸಂಖ್ಯೆ ಮತ್ತು ಪ್ರತಿ ಬಡಾವಣೆಯಲ್ಲಿ ಅವುಗಳ ಅಳತೆಯ ಬಗ್ಗೆಗಿನ ಸರ್ವೆ ಸಂಖ್ಯೆವಾರು ವಿವರಗಳು ವೆಬ್‌ಸೈಟ್‌ನಲ್ಲಿ ಸಾರ್ವಜ-ನಿಕರಿಗೆ ಲಭ್ಯವಾಗುವಂತಿರಬೇಕು.

ಸಂಘ ಪರಿವಾರದ ಮುಖಂಡನಿಗೆ ಜೀವ ಬೆದರಿಕೆ

ಪ್ರಜಾವಾಣಿ ವಾರ್ತೆ

ಸುಳ್ಯ (ದಕ್ಷಿಣ ಕನ್ನಡ): ಬೆಳ್ಳಾರೆ ಬಿಜೆಪಿ ಯುವ ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಣಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಬಂಧಿತನಾಗಿರುವ ಆರೋಪಿ ಶಫೀಕ್ ಸಹೋದರ ಶಾಫ್ರಿದ್ ಎಂಬಾತ ದೂರವಾಣಿ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿರುವುದಾಗಿ ಆರೋಪಿಸಿ ಸಂಘ ಪರಿವಾರದ ಸಂಘಟನೆಯೊಂದರ ಮುಖಂಡ, ಬೆಳ್ಳಾರೆ ಗ್ರಾಮದ ಉಮಿಕ್ಕಳದ ಪ್ರಶಾಂತ್ ಪೂಂಜ ಅವರು ಬೆಳ್ಳಾರೆ ಠಾಣೆಗೆ ಶನಿವಾರ ರಾತ್ರಿ ದೂರು ನೀಡಿದ್ದಾರೆ.

'ಶಾಫ್ರಿದ್ ಶನಿವಾರ ಸಂಜೆ ದೂರವಾಣಿ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಒಡ್ಡಿದ್ದಾನೆ. ಆತನನ್ನು ಠಾಣೆಗೆ ಕರೆಸಿ, ಇನ್ನು ಮುಂದೆ ನನ್ನ ತಂಟೆಗೆ ಬಾರದಂತೆ ಎಚ್ಚರಿಕೆ ನೀಡಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಬೆಳ್ಳಾರೆಯ ದೇವಿ ಹೈಟ್ಸ್ ಲಾಡ್ಜ್‌ನ ವ್ಯ-ವಸ್ಥಾಪಕರೂ ಆಗಿರುವ ಪ್ರಶಾಂತ್ ಪೂಂಜ ಒತ್ತಾಯಿಸಿದ್ದಾರೆ.

ಪ್ರಶಾಂತ್ ಪೂಂಜಾ ದೂರು ನೀಡಲು ಬಂದಾಗ ಅವರ ಜೊತೆ ಸಂಘ ಪರಿವಾರದ ಸಂಘಟನೆಗಳ ನೂರಾರು ಕಾರ್ಯಕರ್ತರೂ ಠಾಣೆಯ ಬಳಿ ಜಮಾಯಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರವೀಣ್ ನೆಟ್ಟಾರು ಹತ್ಯೆ ಬಳಿಕ ಸುಮಾರು ಒಂದು ತಿಂಗಳ ಕಾಲ ಬೆಳ್ಳಾರೆ ಪರಿಸರದಲ್ಲಿ ನಿತ್ಯ ಪೊಲೀಸ್ ಬಂದೋಬಸ್ತ್ ಮಾಡುವಂತಹ ಪರಿಸ್ಥಿತಿ ಇತ್ತು. ಪಟ್ಟಣವು ಸಹಜ ಸ್ಥಿತಿಗೆ ಬರುತ್ತಿದ್ದಂತೆಯೇ ಮತ್ತೆ ಅಹಿತಕರ ಘಟನೆ ಮರುಕಳಿಸಿರುವುದು ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

ದೂರವಾಣಿ ಕರೆ ಮಾಡಿದ ಆರೋಪ ಹೊತ್ತಿರುವ ಶಾಫ್ರಿದ್, ಬೆಳ್ಳಾರೆಯಲ್ಲಿ ಪ್ರವೀಣ್ ನೆಟ್ಟಾರು ನಡೆಸುತ್ತಿದ್ದ ಅಕ್ಷಯ ಫ್ರೆಷ್ ಫಾರ್ಮ್ ಚಿಕನ್ ಮಳಿಗೆಯಲ್ಲಿ ಈ ಹಿಂದೆ ಕೆಲಸಕ್ಕಿದ್ದ ಇಬ್ರಾಹಿಂ ಅವರ ಪುತ್ರ.

ಜನ್ಮದಿನೋತ್ಸವದಲ್ಲಿ ಸಿದ್ಧಲಿಂಗ ಸ್ವಾಮೀಜಿ ಅಭಿಮತ

'ಬಿ.ಡಿ. ಜತ್ತಿ ಸಾಧನೆ ಹಿಮಾಲಯದಷ್ಟೇ ಎತ್ತರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿ.ಡಿ. ಜತ್ತಿಯವರ-ದ್ದು ಇಡೀ ವಿಶ್ವವೇ ಬಲ್ಲಂತಹ ವ್ಯಕ್ತಿತ್ವ. ಅವರ ಸಾಧನೆ ಮತ್ತು ಕೊಡುಗೆ ಹಿಮಾಲಯದಷ್ಟೇ ಎತ್ತರ' ಎಂದು ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಶ್ಲಾಘಿಸಿದರು.

ನಗರದಲ್ಲಿ ಶನಿವಾರ ನಡೆದ ಬಸವ ಸಮಿತಿಯ ಸಂಸ್ಥಾಪಕರ ದಿನಾಚರಣೆ, ಡಾ.ಬಿ.ಡಿ. ಜತ್ತಿಯವರ 110ನೇ ಜನ್ಮದಿನೋತ್ಸವ, ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಬಿ.ಡಿ. ಜತ್ತಿಯವರು ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಅಸಾಮಾನ್ಯ ಕೆಲಸಗಳನ್ನು ಮಾಡಿದ್ದಾರೆ. ಪಂಚಾಯಿತಿ ಸದಸ್ಯನ ಹುದ್ದೆಯಿಂದ ಹಿಡಿದು ದೇಶದ ಅತ್ಯುನ್ನತ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದ್ದಾರೆ. ಫ.ಗು. ಹಳಕಟ್ಟಿ, ಹರ್ಡೇಕರ್ ಮಂಜಪ್ಪ ಮತ್ತು ಬಿ.ಡಿ. ಜತ್ತಿಯವರ ತ್ಯಾಗ ಮತ್ತು ಪರಿಶ್ರಮದಿಂದ ಇಂದು ವಚನಗಳು ನಮಗೆ ಲಭ್ಯವಾಗಿವೆ' ಎಂದರು.

ಬಸವ ಸಮಿತಿಯ ಹಿರಿಯ ಸದಸ್ಯ ಭೀಮಣ್ಣ ಖಂಡ್ರೆಯವರಿಗೆ 'ಬಸವ ಕಾರುಣ್ಯ'ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ, ಶಂಕರ ಬಿದರಿ, ಬೇಲಿಮಠದ ಶಿವರುದ್ರ ಸ್ವಾಮೀಜಿ, ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ದಿಬ್ಬೂರು ಸಿದ್ದಲಿಂಗಯ್ಯ ಹಾಗೂ ಶಾಸಕ ವೆಂಕಟರಡ್ಡಿ ಮುದ್ನಾಳ್ ಇದ್ದಾರೆ —ಪ್ರಜಾವಾಣಿ ಚಿತ್ರ

'ಫ.ಗು. ಹಳಕಟ್ಟಿಯವರು ವಚನಗಳನ್ನು ಸಂಶೋಧಿಸಿ ಸಂಗ್ರ-ಹಿಸದಿದ್ದರೆ, ಶರಣರ ವಿಚಾರಗಳ ಬಗ್ಗೆ ನಮಗೇನೂ ಸಿಗುತ್ತಿರಲಿಲ್ಲ. ಅವರ ತ್ಯಾಗ, ಪರಿಶ್ರಮದಿಂದ ವಚನ ಧರ್ಮ, ಮಾನವೀಯ ಬದುಕಿಗೆ ಬೇಕಾಗುವಂತಹ ವಚನಗಳ ಸಂವಿಧಾನ ಲಭ್ಯವಾಗಿವೆ' ಎಂದರು.

'ಹರ್ಡೇಕರ ಮಂಜಪ್ಪನವರು ಗಾಂಧೀಜಿಯವರಿಗೆ ಬಸವಣ್ಣನ-ವರ ವಚನಗಳ ಬಗ್ಗೆ ಪರಿಚಯ ಮಾಡಿಕೊಟ್ಟರು. ದಾವಣಗೆರೆಯಲ್ಲಿ ನೂರಾರು ವರ್ಷಗಳ ಹಿಂದೆ ಬಸವ ಜಯಂತಿಯನ್ನು ಆಚರಿಸಿದ ಕೀರ್ತಿ ಮೃತ್ಯುಂಜಯಪ್ಪ ಸ್ವಾಮೀಜಿ ಮತ್ತು ಮಂಜಪ್ಪನವರಿಗೆ ಸಲ್ಲುತ್ತದೆ' ಎಂದು ತಿಳಿಸಿದರು.

'ಇದಕ್ಕೊಂದು ಬಹುದೊಡ್ಡ ರೂಪ ಕೊಟ್ಟಿದ್ದು, ಬಿಡಿ ಜತ್ತಿಯವರು. 1964ರಲ್ಲಿ ಬಸವ ಸಮಿತಿ ಸ್ಥಾಪಿಸುವುದರ ಮೂಲಕ ಬಸವ ತತ್ವಗಳನ್ನು ದೇಶದ ಪ್ರತಿಯೊಂದು ಮನೆಗೆ ತಲುಪಿಸುವ ಕೆಲಸ ಮಾಡಿದರು. ಜತೆಗೆ ಬಸವ ಪಥ ಪತ್ರಿಕೆ ಪ್ರಾರಂಭಿಸಿ, ದೇಶದ ವಿವಿಧ ಭಾಷೆಗಳಲ್ಲಿ ಮುದ್ರಿಸಿದರು. ಸದ್ಯ ಅವರು ಹಾಕಿದ ಬೀಜ ವಟವೃಕ್ಷವಾಗಿ ಬೆಳೆದಿದೆ. ದೇಶ–ವಿದೇಶಗಳಲ್ಲಿ ಇದರ ಶಾಖೆಗಳಿವೆ. ಈಗ ಭಾರತದ ಎಲ್ಲಾ ಭಾಷೆಗಳಲ್ಲಿ ವಚನಗಳು ಲಭ್ಯ ಇವೆ' ಎಂದರು.

> ಬಸವ ಸಮಿತಿಯೂ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಬಸವ ತತ್ವಗಳು ಮತ್ತು ವಚನಗಳ ಮೂಲಕ ವಿಶೇಷ ಕಾರ್ಯಕ್ರಮಗಳ ಆಯೋಜಿಸುತ್ತಿದೆ
>
> **ಸಿದ್ಧಲಿಂಗ ಸ್ವಾಮೀಜಿ**
> ಸಿದ್ಧಗಂಗಾ ಮಠ ತುಮಕೂರು

ಬಸವ ಪಥ ಪತ್ರಿಕೆ ವಿಶೇಷ ಸಂಚಿಕೆ ಬಿಡುಗಡೆಗೊಳಿಸಲಾಯಿತು. ಸಮಿತಿಯ ಹಿರಿಯ ಸದಸ್ಯ ಭೀಮಣ್ಣ ಖಂಡ್ರೆಯರಿಗೆ ಬಸವ ಕಾರುಣ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದಲ್ಲಿ ಇಂದು

ಉಚಿತ ಜ್ಯೋತಿಷ್ಯ ಉಪನ್ಯಾಸ: ಅತಿಥಿಗಳು: ಯೋಗಾನರಸಿಂಹ, ಪ್ರಾಣೇಶ್.ಎಸ್., ಅರುಳಾಳನ್, ಬಿ. ಗಜೇಂದ್ರ, ಕೆ.ಎಂ. ತ್ರಿಪುರಾಂಬ, ಆಯೋಜನೆ: ವಿಶ್ವಕರ್ಮ ಇನ್‌ಸ್ಟಿಟ್ಯೂಟ್ ಆಫ್ ಅಸ್ಟ್ರಾಲಜಿ ಆ್ಯಂಡ್ ರಿಸರ್ಚ್ ಸೆಂಟರ್, ಸ್ಥಳ: ರಾಮಾಂಜನೇಯಸ್ವಾಮಿ ದೇವಸ್ಥಾನ ಸಭಾಂಗಣ, ಎಂ.ಎಸ್. ಬಿಲ್ಡಿಂಗ್ ಪಕ್ಕ, ಕೆ.ಆರ್. ಸರ್ಕಲ್, ಬೆಳಿಗ್ಗೆ 8.30

ಕುವೆಂಪು ಚಿಂತನೆಗಳು, ಸಮಕಾಲಿನ ಸಂದರ್ಭ ರಾಜ್ಯ ಮಟ್ಟದ ವಿಚಾರ ಸಂಕಿರಣ: ಉದ್ಘಾಟನೆ: ಪಿ.ಜಿ.ಆರ್. ಸಿಂಧ್ಯಾ, ಪ್ರಶಸ್ತಿ ಪ್ರದಾನ: ಟಿ. ತಿಮ್ಮೇಗೌಡ, ಅಧ್ಯಕ್ಷತೆ: ಎಸ್.ಜಿ. ಸಿದ್ದರಾಮಯ್ಯ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10


ಸಿದ್ದರಾಮಯ್ಯ

'ಮಾರ್ನಿಂಗ್ ರಾಗಾಸ್' ಸಂಗೀತ ಕಾರ್ಯಕ್ರಮ: ಗಾಯನ: ಜಯತೀರ್ಥ ಮೇವುಂಡಿ, ಮ್ಯಾಂಡೋಲಿನ್: ಯು. ರಾಜೇಶ್, ತಬಲಾ: ಯಶವಂತ ವೈಷ್ಣವ್, ಮೃದಂಗ: ವಿ. ಪ್ರವೀಣ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಕೋಟಕ್ ಸಮೂಹ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವಯ್ಯಾಲಿ ಕಾವಲ್, ಬೆಳಿಗ್ಗೆ 9.30

ಪ್ರತಿಭಾ ಪುರಸ್ಕಾರ ಹಾಗೂ ನವೀಕೃತ ಸಭಾಂಗಣದ ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ತೇಜಸ್ವಿನಿ ಅನಂತಕುಮಾರ್, ಅಧ್ಯಕ್ಷತೆ: ಎಚ್.ಎಸ್. ಸುಧೀಂದ್ರ ಕುಮಾರ್, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಬ್ರಾಹ್ಮಣ ಮಹಾಸಭಾ, ಕೆಂಗೇರಿ ಉಪನಗರ, ಬೆಳಿಗ್ಗೆ 10

ಹಿರಣ್ಮಯಿ ಎಸ್

'ಸ್ವರ ಯಾತ್ರಾ' ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ: ಗಾಯನ: ಹಿರಣ್ಮಯಿ ಎಸ್., ತಬಲಾ: ಶ್ರೀದತ್ತ ಎಂ.ಜಿ., ಹಾರ್ಮೋನಿಯಂ: ಗೌರವ ಗಡಿಯಾರ, ಆಯೋಜನೆ: ಕೊಬಾಲ್ಟ್ ಫೋರಂ ಆಫ್ ಆರ್ಟ್ ಆ್ಯಂಡ್ ಮ್ಯೂಸಿಕ್ ಸಂಸ್ಥೆ, ಸ್ಥಳ: ಕೊಬಾಲ್ಟ್ ಗ್ಯಾಲರಿ, ರಾಜರಾಜೇಶ್ವರಿನಗರ, ಸಂಜೆ 5

ಪದಾಧಿಕಾರಿಗಳ ಪದಗ್ರಹಣ, ಪ್ರತಿಭಾ ಪುರಸ್ಕಾರ ಹಾಗೂ ಗಂಗಾ ವಿದ್ಯಾಸಿರಿ ಯೋಜನೆಗೆ ಚಾಲನೆ: ಸಾನ್ನಿಧ್ಯ: ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ, ಉದ್ಘಾಟನೆ: ಲಾಲಾಜಿ ಮೆಂಡನ್, ಉಪಸ್ಥಿತಿ: ಮೌಲಾಲಿ, ಅಧ್ಯಕ್ಷತೆ: ಎಂ. ಶ್ರೀನಿವಾಸ್, ಆಯೋಜನೆ: ರಾಜ್ಯ ಗಂಗಾಮತ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಕೆ.ಇ.ಬಿ. ಎಂಜಿನಿಯರ್ಸ್ ಸಮುದಾಯ ಭವನ, ಆನಂದರಾವ್ ಸರ್ಕಲ್, ಬೆಳಿಗ್ಗೆ 10

ಬೆಳ್ಳಿ ಹಬ್ಬದ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಅತಿಥಿಗಳು: ವಿ. ಸೋಮಣ್ಣ, ಅಧ್ಯಕ್ಷತೆ: ಟಿ.ಆರ್. ಶಶಿಕಲಾ, ಆಯೋಜನೆ: ಲಕ್ಷ್ಮೀ ಮಹಿಳಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 10.30

ಹಿಂದಿ ಹೇರಿಕೆ ಮತ್ತು ನುಡಿ ಸಮಾನತೆ: ಒಂದು ಮಾತುಕತೆ: ಆಯೋಜನೆ: ಬನವಾಸಿ ಬಳಗ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಳಿಗ್ಗೆ 11

ಕೆ.ಆರ್. ಸ್ವಾಮಿ ಅವರ 'ಚಿಗುರು ಚಿತ್ತಾರ', ಬಿ. ಜನಾರ್ದನ ಭಟ್ ಅವರ 'ಗಮ್ಯ', ಕೆ.ಕೆ. ಗಂಗಾಧರನ್ ಅವರ 'ಮರಳಿ ಮನೆಗೆ' ಪುಸ್ತಕಗಳ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಅತಿಥಿಗಳು: ಪಿ. ಶೇಷಾದ್ರಿ, ಮಾಯಾ ನಾಯರ್, ಆಯೋಜನೆ: ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ರಮೇಶ್ ಅರವಿಂದ್ ಅವರ 'ಪ್ರೀತಿಯಿಂದ ರಮೇಶ್' ಕೃತಿ ಬಿಡುಗಡೆ: ಅನಂತನಾಗ್, ಜೋಗಿ, ರಾಘವೇಂದ್ರ ಹುಣಸೂರು, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 11

ದಶವಾತಾರ ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷಮಿತ್ರರು, ಸ್ಥಳ: ಬಯಲು ರಂಗಮಂದಿರ, ವಿ.ಎಲ್.ಎಸ್. ಶಾಲಾ ಪಕ್ಕದ ಮೈದಾನ, ಶಾರದಾ ಕಾಲೊನಿ, ಬಸವೇಶ್ವರನಗರ, ಮಧ್ಯಾಹ್ನ 2

ಸುರ್‌ಸಂಗೀತ್ ನವಭಾವಗೀತೋತ್ಸವ–2022 ಮತ್ತು ಸುರ್‌ಸಂಗೀತ್ ಸಾಧಕ್ ಪ್ರಶಸ್ತಿ ಪ್ರದಾನ ಸಮಾರಂಭ: ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಪ್ರಶಸ್ತಿ ಪ್ರದಾನ: ಅನಂತ ಭಾಗ್ವತ್, ಅತಿಥಿಗಳು: ಕೆನಡಿ ಶಾಂತಕುಮಾರ್, ಎಸ್. ಅನಿಲ್‌ಕುಮಾರ್, ಆಯೋಜನೆ: ಸುರ್‌ಸಂಗೀತ್ ಮ್ಯೂಸಿಕ್ ಅಕಾಡೆಮಿ, ಸ್ಥಳ: ಶ್ರೀಜಯರಾಮ ಸೇವಾ ಮಂಡಳಿ, ಜಯನಗರ, ಮಧ್ಯಾಹ್ನ 3

ಡಾ.ಸರ್ವಪಲ್ಲಿ ರಾಧಾಕೃಷ್ಣ ಪ್ರಶಸ್ತಿ ಸಮಾರಂಭ: ಅತಿಥಿಗಳು: ತೇಜಸ್ವಿ ಸೂರ್ಯ, ಆಯೋಜನೆ: ಭಾ.ಜ.ಪಾ ಸಮರ್ಥಕ್ ಮಂಚ್ ಕರ್ನಾಟಕ, ಸ್ಥಳ: ರಜಪೂತ್ ಸಭಾಂಗಣ, ವಸಂತನಗರ, ಮಧ್ಯಾಹ್ನ 3

ಧಾರ್ಮಿಕ ಪ್ರವಚನ: ವಿಷಯ: ರಾಮಾಯಣ ನಿರ್ಣಯಗಳು, ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 7

ರಮೇಶ್‌ಗೆ ಕೊಂಕಣಿ ಅಕಾಡೆಮಿ ಪ್ರಶಸ್ತಿ



ಮಂಗಳೂರು: ರಂಗಕರ್ಮಿ ಬೆಂಗಳೂರಿನ ರಮೇಶ್ ಕಾಮತ್ ಅವರು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ಇದೇ 18ರಂದು ಸಂಜೆ 5 ಗಂಟೆಗೆ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷ ಜಗದೀಶ್ ಪೈ ಅವರು ತಿಳಿಸಿದರು.

'ಪುರಾಣ ಕನ್ಯೆ' ಕಾದಂಬರಿ ಬಿಡುಗಡೆಯಲ್ಲಿ ಚಿಂತಕ ಡಾ.ನಟರಾಜ್ ಬೂದಾಳ್ ಅಭಿಪ್ರಾಯ

'ಹಳೆಯದು ಮರೆತರೆ ಹೊಸತು ಸೃಷ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುರಾಣ ಕನ್ಯೆ ಕಾದಂಬರಿಯು ಸಾಂಸ್ಕೃತಿಕ ಪ್ರವಾಸ ಕಥನವಾಗಿದ್ದು, ಓದುಗನಿಗೆ ಅತಂತ್ಯ ಪ್ರಿಯ ಆಗಲಿದೆ' ಎಂದು ಸಂಸ್ಕೃತಿ ಚಿಂತಕ ಡಾ.ನಟರಾಜ್ ಬೂದಾಳ್ ಶನಿವಾರ ಇಲ್ಲಿ ಹೇಳಿದರು.

ನಗರದ ನ್ಯಾಷನಲ್ ಕಾಲೇಜಿನಲ್ಲಿ ಕಾ.ತ.ಚಿಕ್ಕಣ್ಣ ಅವರ 'ಪುರಾಣ ಕನ್ಯೆ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಕಾದಂಬರಿಯಲ್ಲಿ ಪುರಾಣ, ವರ್ತಮಾನ ಮುಖಾಮುಖಿ ಆಗಿವೆ. ಇಡೀ ಕಾದಂಬರಿ ಹೆಣ್ಣುಧ್ವನಿಯಲ್ಲಿ ಇದೆ. ಅದು ವಿಶೇಷ ಅನುಭೂತಿ ನೀಡುತ್ತಿದೆ. ರಮಿಸಿ, ಸಂತೈಸಿ ಓದುವಂತೆ ಮಾಡುತ್ತದೆ. ಗಂಡಿಗೆ ಹೆಣ್ಣಿನಂತೆಯೇ ಅಂತಃಕರಣವಿದ್ದರೆ ಅದಕ್ಕಿಂತ ಮೇಲಿನ ಸ್ಥಾನದಲ್ಲಿ ಪುರುಷ ನಿಲ್ಲುತ್ತಾನೆ' ಎಂದರು.

'ಚಿಕ್ಕಣ್ಣ ಅವರು ಕಾದಂಬರಿಯಲ್ಲಿ ಎಚ್ಚರಿಕೆಯಿಂದ ಸಾಂಸ್ಕೃತಿಕ ರಾಜ-ಕಾರಣವನ್ನು ಕಟ್ಟಿಕೊಡುವ ಕೆಲಸ ಮಾಡಿದ್ದಾರೆ. ಜತೆಗೆ, ಸಮೃದ್ಧ ಭಾಷೆಯೂ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ' ಎಂದು ವಿಶ್ಲೇಷಿಸಿದರು.

ನಗರದ ನ್ಯಾಷನಲ್ ಕಾಲೇಜಿನಲ್ಲಿ ರಶ್ಮಿ ಪುಸ್ತಕ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ.ಎಚ್.ಎಸ್. ಶಿವಪ್ರಕಾಶ್ (ಎಡದಿಂದ ಮೂರನೆಯವರು) 'ಪುರಾಣ ಕನ್ಯೆ' ಕಾದಂಬರಿ ಬಿಡುಗಡೆ ಮಾಡಿದರು. (ಎಡದಿಂದ) ಲೇಖಕ ಕಾ.ತ.ಚಿಕ್ಕಣ್ಣ, ಚಿಂತಕ ನಟರಾಜ ಬೂದಾಳ, ಚಿಂತಕ ಬಂಜಗೆರೆ ಜಯಪ್ರಕಾಶ್, ನ್ಯಾಷನಲ್ ಎಜುಕೇಷನ್ ಸೊಸೈಟಿ ಟ್ರಸ್ಟಿ ಎ.ಎಚ್. ರಾಮರಾವ್, ಪ್ರೊ.ಎಸ್.ಎನ್.ನಾಗರಾಜ್ ರೆಡ್ಡಿ ಇದ್ದರು ಪ್ರಜಾವಾಣಿ ಚಿತ್ರ

'ವಚನ ಸಾಹಿತಿಗಳು ರಾಮಾಯಾಣ, ಮಹಾಭಾರತ-ವನ್ನು ನಿರ್ಲಕ್ಷ್ಯ ಮಾಡಿಯೇ ಶ್ರೇಷ್ಠ ಸಾಹಿತ್ಯ ರಚಿಸಿದರು. ಈ ಸಾಹಿತ್ಯದಲ್ಲಿ ಎಲ್ಲಿಯೂ ಮಹಾಕೃತಿಗಳ ಸಾಲುಗಳು ಸುಳಿಯುವುದಿಲ್ಲ. ಅದನ್ನು ನಿರ್ಲಕ್ಷ್ಯ ಮಾಡಿಯೇ ಅದ್ಭುತ ಸಾಹಿತ್ಯ ರಚಿಸಿದರು' ಎಂದು ಪ್ರತಿಪಾದಿಸಿದರು.

'ಹಳೆಯ ವಿಷಯ ಮರೆತರೆ ಮಾತ್ರ ಹೊಸತು ಸೃಷ್ಟಿಸಲು ಸಾಧ್ಯ. ಹಳಬರು ಮಹಾನ್ ಕಾರ್ಯವನ್ನು ಮಾಡಿಲ್ಲ. ಅವರನ್ನು ದಾಟಿ ಬರಬೇಕಿದೆ' ಎಂದು ಹೇಳಿದರು.

ಕವಿ ಎಚ್.ಎಸ್.ಶಿವಪ್ರಕಾಶ ಮಾತನಾಡಿ, 'ಇದು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಕಾದಂಬರಿ. ನನಗೆ ಕಾದಂಬರಿ ಓದುವಷ್ಟು ತಾಳ್ಮೆ ಇಲ್ಲ. ಆದರೆ, ಈ ಕೃತಿ ಓದಿಸಿಕೊಂಡು ಹೋಯಿತು. ಕೃತಿಯು ಕಥನ ಶೈಲಿಯಿದೆ. ಕಾದಂಬರಿಯಲ್ಲಿ ಲೇಖಕರು ಗತಕಾಲವನ್ನು ವೈಭವೀಕರಿಸಿದೇ ಕೃತಿ ರಚಿಸಿದ್ದಾರೆ' ಎಂದು ಹೇಳಿದರು.

ಈ ಕಾದಂಬರಿಯಲ್ಲಿ ಕೆಲವು ಪಾತ್ರಗಳು ಸಂವಾದಿಸುತ್ತವೆ. ಗ್ರಾಮೀಣ ಸಂಸ್ಕೃತಿಯಲ್ಲಿ ಪಾತ್ರಗಳನ್ನು ಕಟ್ಟಿ-ಕೊಡಲಾಗಿದೆ. ನವ್ಯ ಸಾಹಿತ್ಯದಲ್ಲಿ ಕೆಲವು ಕೊರತೆಗಳಿದ್ದವು. ಇತ್ತೀಚೆಗೆ ಆ ಕೊರತೆಯೂ ನೀಗಿದೆ ಎಂದು ಹೇಳಿದರು.

ಕುಲ ಹಾಗೂ ಸ್ಥಳ ಪುರಾಣದ ಅಧ್ಯಯನ ಅಗತ್ಯ. ಈ ಅಧ್ಯಯನವನ್ನು ಸ್ವತಂತ್ರವಾಗಿ ಮಾಡಬೇಕಿದೆ ಎಂದು ಸಲಹೆ ನೀಡಿದರು.

ಚಿಂತಕ ಬಂಜಗೆರೆ ಜಯಪ್ರಕಾಶ ಅಧ್ಯಕ್ಷತೆ ವಹಿಸಿದ್ದರು. ನ್ಯಾಷನಲ್ ಎಜುಕೇಷನ್ ಸೊಸೈಟಿಯ ಟ್ರಸ್ಟಿ ರಾಮರಾವ್, ಕಾರ್ಯದರ್ಶಿ ಪ್ರೊ.ಎಸ್. ಎನ್.ನಾಗರಾಜ್‌ರೆಡ್ಡಿ, ಪ್ರಕಾಶಕಿ ವಿ.ಎಂ. ಕಲಾವತಿ ಹಾಜರಿದ್ದರು.

ಪುಸ್ತಕ ಪರಿಚಯ

- ಕಾದಂಬರಿ: ಪುರಾಣ ಕನ್ಯೆ
- ಲೇಖಕ: ಕಾ.ತ.ಚಿಕ್ಕಣ್ಣ
- ಪ್ರಕಾಶನ: ರಶ್ಮಿ ಪುಸ್ತಕ
- ಪುಟಗಳು: 184
- ಬೆಲೆ: ₹ 200

ಭಾನುವಾರ, ಸೆಪ್ಟೆಂಬರ್ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 252 | ಪುಟ 20
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸುಸ್ಥಿರ ನಗರಗಳ ಕನಸು ನನಸಾಗಲು ನಮ್ಮಲ್ಲೂ ನಾಗರಿಕ ಪ್ರಜ್ಞೆ, ಒಗ್ಗಟ್ಟಿರಬೇಕು. ಪ್ರಕೃತಿಯೊಂದಿಗೆ ಬಾಳುವ ಪಾಠ ತಿಳಿದಿರಬೇಕು.

ಯುವಧ್ವನಿ ನಮ್ಮ ಧ್ವನಿ– ಡಿಕೆಶಿ 7
ಲೈಂಗಿಕ ದೌರ್ಜನ್ಯ ಪ್ರಕರಣದ ಉನ್ನತ ತನಿಖೆಗೆ ಒತ್ತಾಯ
'ಜೀಸಸ್ ಮಾತ್ರ ದೇವರು': ವಾಕ್ಸಮರ 8
ಚಿತ್ರದುರ್ಗ: 'ಮಕ್ಕಳೊಂದಿಗೆ ನಾವು' ಜಾಥಾ 7

ಅತಿ ಹೆಚ್ಚು ವಂಚನೆ ಪ್ರಕರಣ: ದೇಶದಲ್ಲಿ ಕರ್ನಾಟಕಕ್ಕೆ ಮೂರನೇ ಸ್ಥಾನ

ಸೈಬರ್ ಜಾಲ: ವಂಚಕರ ಗಾಳ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಬ್ಯಾಂಕ್ ಪ್ರತಿನಿಧಿಗಳ ಸೋಗಿನಲ್ಲಿ ಕರೆ ಮಾಡಿದ್ದ ವಂಚಕ, ಗ್ರಾಹಕನ ಖಾತೆ ವಿವರ ಪಡೆದು ಉಳಿತಾಯದ ಹಣವನ್ನೆಲ್ಲ ಖಾಲಿ ಮಾಡಿದ. ಡೇಟಿಂಗ್ ಆ್ಯಪ್ ಮೂಲಕ ಸಲುಗೆ ಬೆಳೆಸಿದ್ದ ಯುವತಿ, ಉದ್ಯಮಿಯ ನಗ್ನ ವಿಡಿಯೊ ಚಿತ್ರೀಕರಿಸಿಕೊಂಡು ಲಕ್ಷ ಲಕ್ಷ ಕಿತ್ತಳು. ನಕಲಿ ಡೆಬಿಟ್ ಕಾರ್ಡ್ ಹಾಗೂ ಸಿಮ್‌ಕಾರ್ಡ್ ಸೃಷ್ಟಿಸಿದ್ದ ಅಪರಿಚಿತ, ತನ್ನದಲ್ಲದ ಖಾತೆಯಲ್ಲಿದ್ದ ಹಣವನ್ನೆಲ್ಲ ಗುಳುಂ ಮಾಡಿದ. ಉಡುಗೊರೆ ಆಮಿಷವೊಡ್ಡಿದ್ದ ವಿದೇಶಿ ಪ್ರಜೆ, ಕಸ್ಟಮ್ಸ್ ಹೆಸರಿನಲ್ಲಿ ಹಣ ಕಿತ್ತು ನಾಪತ್ತೆಯಾದ...

ಹೀಗೆ ನಾನಾ ರೀತಿಯಲ್ಲಿ ಜನರನ್ನು ಸೈಬರ್ ಜಾಲದೊಳಗೆ ಸಿಲುಕಿಸಿ ಹಣ ದೋಚುವ ತಂಡಗಳು ದೇಶದಾದ್ಯಂತ ಸಕ್ರಿಯವಾಗಿ ಕೆಲವು ವರ್ಷಗಳೇ ಕಳೆದಿವೆ. ಆದರೆ ಇವುಗಳ ಕೃತ್ಯಕ್ಕೆ ಲಗಾಮು ಹಾಕುವ ಕೆಲಸ ಮಾತ್ರ ಸಮರ್ಪಕವಾಗಿ ನಡೆದಿಲ್ಲ. ಪೊಲೀಸ್ ಸಿಬ್ಬಂದಿ ಹಾಗೂ ಸಂಪನ್ಮೂಲಗಳ ಕೊರತೆಯಿಂದಾಗಿ ಸೈಬರ್ ವಂಚನೆ ಪ್ರಕರಣಗಳ ತನಿಖೆ ಕುಂಠಿತವಾಗಿದೆ. ಹೆಚ್ಚಿನ ಪ್ರಕರಣಗಳ ಕಡತಗಳು ಇಂದಿಗೂ ಪೊಲೀಸ್ ಭದ್ರತಾ ಕೊಠಡಿಯಲ್ಲೇ ದೂಳು ತಿನ್ನುತ್ತಿವೆ.

ಮೂರನೇ ಸ್ಥಾನ: ರಾಷ್ಟ್ರೀಯ ಅಪರಾಧ ದಾಖಲೆ ಬ್ಯುರೊ (ಎನ್‌ಸಿಆರ್‌ಬಿ) ಬಿಡುಗಡೆಗೊಳಿಸಿರುವ 2021ರ ಅಂಕಿ–ಅಂಶಗಳ ಪ್ರಕಾರ ಅತಿ ಹೆಚ್ಚು ಸೈಬರ್ ಕ್ರೈಂ ದಾಖಲಾದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ.

ಅಂತರ್ಜಾಲ ಬಳಕೆದಾರರ ಸಂಖ್ಯೆ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಕೆಲ ವಂಚಕರು ತಮ್ಮದೇ ತಂಡ ಕಟ್ಟಿಕೊಂಡು ಸೈಬರ್ ವಂಚನೆಗೆ ಇಳಿಯುತ್ತಿದ್ದಾರೆ. ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿದ ಹಾಗೂ ನಿರುದ್ಯೋಗಿ ಯುವಕರನ್ನು ಗುರುತಿಸಿ ತರಬೇತಿ ನೀಡುತ್ತಿರುವ ತಂಡಗಳು, ಅವರ ಮೂಲಕವೇ ಜನರನ್ನು ಸೈಬರ್ ಜಾಲದೊಳಗೆ ಸಿಲುಕಿಸುತ್ತಿವೆ.

ಸಮಾಜ ಸೇವೆಗಾಗಿ ಹಣ ಸಂಗ್ರಹಿಸುವ (ಚಾರಿಟಿ) ಸಂದೇಶಗಳ ಮೂಲಕ ಆರಂಭವಾದ ವಂಚನೆಗಳು, ಇದೀಗ ನಾನಾ ಸ್ವರೂಪ ಪಡೆದುಕೊಂಡಿವೆ. ಒನ್ ಟೈಂ ಪಾಸ್‌ವರ್ಡ್ (ಒಟಿಪಿ), ಬ್ಲ್ಯಾಕ್‌ಮೇಲ್‌ನಿಂದ ಹಿಡಿದು ಕ್ರಿಪ್ಟೊ ಕರೆನ್ಸಿ ಹೂಡಿಕೆವರೆಗೂ ವಂಚನೆ ಜಾಲದ ಕಬಂಧಬಾಹು ಚಾಚಿಕೊಂಡಿದೆ.

ಬಹುರಾಷ್ಟ್ರೀಯ ಕಂಪನಿಗಳ ರೀತಿಯಲ್ಲೇ ಸುಸಜ್ಜಿತ ಕಚೇರಿಗಳನ್ನು ತೆರೆಯುವ ತಂಡಗಳು, ವಂಚನೆ ಮೂಲಕವೇ ಲಕ್ಷ ಲಕ್ಷ ಸಂಪಾದಿಸುತ್ತಿವೆ. ಕೆಲ ಕಚೇರಿಗಳ ಮೇಲೆ ಈ ಹಿಂದೆ ದಾಳಿ ಮಾಡಿರುವ ಪೊಲೀಸರು, ಮೂಲ ಬೇರು ಪತ್ತೆ ಹಚ್ಚುವಲ್ಲಿ ವಿಫಲರಾಗಿ ಕೈಚೆಲ್ಲಿದ್ದಾರೆ.

ಬ್ಯಾಂಕ್, ಮೊಬೈಲ್ ವಿವರ ಖರೀದಿಸಿ ಜನರಿಗೆ ಬಲೆ: ಆನ್‌ಲೈನ್ ನೋಂದಣಿ, ಉಡುಗೊರೆ, ಸ್ಪರ್ಧೆ... ಹೀಗೆ ನಾನಾ ರೀತಿಯಲ್ಲಿ ಜನರು ತಮ್ಮ ಬ್ಯಾಂಕ್ ಹಾಗೂ ಮೊಬೈಲ್ ವಿವರಗಳನ್ನು ಅಪರಿಚಿತರೊಂದಿಗೆ ಹಂಚಿಕೊಳ್ಳುತ್ತಾರೆ. ಇಂಥ ವಿವರವನ್ನೇ 'ಡಾರ್ಕ್‌ನೆಟ್' ಮೂಲಕ ಹಣ ಕೊಟ್ಟು ಖರೀದಿಸುವ ವಂಚಕರು, ಅದನ್ನು ಬಳಸಿಕೊಂಡೇ ಜನರಿಗೆ ಬಲೆ ಬೀಸುತ್ತಾರೆ.

ಜನರ ಮೊಬೈಲ್ ಹಾಗೂ ಇ–ಮೇಲ್‌ಗೆ ಸಂದೇಶ ಕಳುಹಿಸುವ ವಂಚಕರು ನಾನಾ ಆಮಿಷವೊಡ್ಡುತ್ತಾರೆ. ಅದಕ್ಕೆ ಯಾರಾದರೂ ಪ್ರತಿಕ್ರಿಯಿಸಿದರೆ ಅವರ ಮೇಲೆ ವಂಚಕರ ಸವಾರಿ ಶುರುವಾಗುತ್ತದೆ. ಹಂತ ಹಂತವಾಗಿ ಹಣ ದೋಚಿ, ಮೊಬೈಲ್ ಸ್ವಿಚ್ ಆಫ್ ಮಾಡುತ್ತಾರೆ. ಜೊತೆಗೆ ಕರೆ ಮಾಡಿ ಆಮಿಷವೊಡ್ಡುವ ತಂಡಗಳೂ ಹೆಚ್ಚಿವೆ. ಬ್ಯಾಂಕ್ ಪ್ರತಿನಿಧಿ, ಕಸ್ಟಮ್ಸ್ ಅಧಿಕಾರಿ, ಬೆಸ್ಕಾಂ ಸಹಾಯವಾಣಿ ಸಿಬ್ಬಂದಿ... ಹೀಗೆ ನಾನಾ ಸೋಗಿನಲ್ಲಿ ಲಕ್ಷಗಟ್ಟಲೆ ಹಣ ದೋಚಿರುವ ಪ್ರಕರಣಗಳೂ ವರದಿಯಾಗಿವೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಗ್ರಾಹಕರಾದ ಮಾಲಾ ಅವರಿಗೆ, 'ಯೊನೊ ಆ್ಯಪ್ ಪ್ರತಿನಿಧಿ ಸೋಗಿನಲ್ಲಿ ಕರೆ ಮಾಡಿದ್ದ ವ್ಯಕ್ತಿಯೊಬ್ಬ, ಖಾತೆ ನವೀಕರಣ ಮಾಡಿಸಿಕೊಳ್ಳಬೇಕೆಂದು ಲಿಂಕ್ ಕಳುಹಿಸಿದ್ದ. ಅದರಲ್ಲಿ ವೈಯಕ್ತಿಕ ಮಾಹಿತಿ ಭರ್ತಿ ಮಾಡುತ್ತಿದ್ದಂತೆ ₹ 1.31 ಲಕ್ಷ ಕಡಿತವಾಯಿತು' ಎಂದು ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರತಿನಿತ್ಯ ರಾಜ್ಯದಲ್ಲಿ 30ಕ್ಕೂ ಹೆಚ್ಚು ಪ್ರಕರಣಗಳು ಇಂಥ ಪ್ರಕರಣಗಳು ದಾಖಲಾಗುತ್ತಿವೆ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

2021ರ ಸೈಬರ್‌ಕ್ರೈಂ ಅಂಕಿ ಅಂಶ (ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೊ (ಎನ್‌ಸಿಆರ್‌ಬಿ) ಪ್ರಕಾರ)

10,303 ತೆಲಂಗಾಣ	4,846 ಅಸ್ಸಾಂ
8,829 ಉತ್ತರ ಪ್ರದೇಶ	356 ದೆಹಲಿ
8,136 ಕರ್ನಾಟಕ	52,974 ದೇಶದಲ್ಲಿ ದಾಖಲಾದ ಒಟ್ಟು ಪ್ರಕರಣ
5,562 ಮಹಾರಾಷ್ಟ್ರ	

ಒಳನೋಟ
ಹೆಚ್ಚುತ್ತಿದೆ ಆನ್‌ಲೈನ್ ವಂಚನೆ
ಪ್ರತಿಕ್ರಿಯಿಸಿ: 9606038256
feedback@prajavani.co.in

> **ಸೈಬರ್ ವಂಚನೆ ಪ್ರಕರಣ ಭೇದಿಸಲು ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಪರಿಣತ ತಂಡವಿದೆ. ಕೃತ್ಯ ನಡೆದ ತಕ್ಷಣ 112ಕ್ಕೆ ಕರೆ ಮಾಡಿ ದೂರು ನೀಡಿದರೆ, ಬ್ಯಾಂಕ್ ಖಾತೆಯಿಂದ ಕಡಿತವಾದ ಹಣ ವಂಚಕರ ಕೈ ಸೇರದಂತೆ ನೋಡಿಕೊಳ್ಳಬಹುದು.**
> **ಕೆ. ರಾಮರಾಜನ್,** ಬೆಂಗಳೂರು ಕಮಾಂಡ್ ಸೆಂಟರ್ ಡಿಸಿಪಿ

'ಮಂತ್ರಿ ಡೆವಲಪರ್ಸ್'ನಿಂದ ವಂಚನೆ: ತಂದೆ–ಮಗ ಬಂಧನ

ಫ್ಲ್ಯಾಟ್ ಹೆಸರಿನಲ್ಲಿ ನೂರಾರು ಕೋಟಿ ಹಣ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಲ್ಯಾಟ್ ಮಾರಾಟದ ಹೆಸರಿನಲ್ಲಿ ಗ್ರಾಹಕರಿಂದ ನೂರಾರು ಕೋಟಿ ರೂಪಾಯಿ ಹಣ ಪಡೆದು ವಂಚಿಸಿದ್ದ ಆರೋಪದಡಿ 'ಮಂತ್ರಿ ಡೆವಲಪರ್ಸ್' ಕಂಪನಿ ಸ್ಥಾಪಕ ಸುಶೀಲ್ ಪಾಂಡುರಂಗ ಮಂತ್ರಿ ಹಾಗೂ ಅವರ ಮಗ ಪ್ರತೀಕ್ ಅವರನ್ನು ಸಿಐಡಿ ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದಾರೆ.

ಕಬ್ಬನ್ ಪಾರ್ಕ್ ಠಾಣೆಯಲ್ಲಿ 2019ರಲ್ಲಿ ದಾಖಲಾಗಿದ್ದ ನಾಲ್ಕು ವಂಚನೆ ಪ್ರಕರಣಗಳ ತನಿಖೆ ಕೈಗೆತ್ತಿಕೊಂಡಿರುವ ಸಿಐಡಿ ಅಧಿಕಾರಿಗಳು, ಕೆಲವು ಪುರಾವೆಗಳನ್ನು ಆಧರಿಸಿ ತಂದೆ–ಮಗನನ್ನು ಶುಕ್ರವಾರ ಬೆಳಿಗ್ಗೆ ವಶಕ್ಕೆ ಪಡೆದಿದ್ದರು. ರಾತ್ರಿ ಇಬ್ಬರನ್ನೂ ಬಂಧಿಸಿದ ಅಧಿಕಾರಿಗಳು, ನ್ಯಾಯಾಧೀಶರ ಎದುರು ಹಾಜರುಪಡಿಸಿದರು. ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಗ್ರಾಹಕರಿಂದ ಸಾವಿರಾರು ಕೋಟಿ ರೂಪಾಯಿ ಸಂಗ್ರಹಿಸಿ ವಂಚಿಸಿದ ಆರೋಪದಡಿ ಸುಶೀಲ್ ಪಾಂಡುರಂಗ ಮಂತ್ರಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಇತ್ತೀಚೆಗಷ್ಟೇ ಬಂಧಿಸಿತ್ತು. ಈ ಪ್ರಕರಣದಲ್ಲಿ ಜಾಮೀನು ಪಡೆದು ಹೊರಬಂದಿದ್ದ ಸುಶೀಲ್ ಇದೀಗ ಸಿಐಡಿ ಬಲೆಗೆ ಬಿದ್ದಿದ್ದಾರೆ.

'ಮಂತ್ರಿ ಡೆವಲಪರ್ಸ್ ಕಂಪನಿ ಕಟ್ಟಿರುವ ಸುಶೀಲ್, ಕಂಪನಿಯ ಚೇರ್ಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕರು (ಎಂ.ಡಿ) ಆಗಿದ್ದಾರೆ. ಇವರ ಮಗ ಪ್ರತೀಕ್, ಕಂಪನಿ ನಿರ್ದೇಶಕರಾಗಿದ್ದಾರೆ. ಇಬ್ಬರೂ ಸೇರಿ ಒಳಸಂಚು ಮಾಡಿ ಗ್ರಾಹಕರನ್ನು ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ನ್ಯಾಯಾಂಗ ಬಂಧನದಲ್ಲಿರುವ ಇಬ್ಬರೂ ಆರೋಪಿಗಳನ್ನು ಕಸ್ಟಡಿಗೆ ಪಡೆದುಕೊಳ್ಳಲು ಸೋಮವಾರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗುವುದು. ಕಸ್ಟಡಿಗೆ ಸಿಕ್ಕ ಬಳಿಕ ಹೆಚ್ಚಿನ ವಿಚಾರಣೆ ನಡೆಸಿ, ಮತ್ತಷ್ಟು ಮಾಹಿತಿ ಕಲೆಹಾಕಲಾಗುವುದು' ಎಂದು ಮೂಲಗಳು ತಿಳಿಸಿವೆ.

25ಕ್ಕೂ ಹೆಚ್ಚು ಪ್ರಕರಣ: '1999ರಲ್ಲಿ ಮಂತ್ರಿ ಡೆವಲಪರ್ಸ್ ಕಂಪನಿ ಸ್ಥಾಪನೆಯಾಗಿದೆ. ಕಂಪನಿ ಹೆಸರಿನಲ್ಲಿ ಫ್ಲ್ಯಾಟ್ ನೀಡುವುದಾಗಿ ಹೇಳಿ ಹಣ ಪಡೆದು ವಂಚಿಸಿರುವ ಆರೋಪದಡಿ ಸುಶೀಲ್ ಹಾಗೂ ಇತರರ ವಿರುದ್ಧ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ 2018ರಿಂದಲೇ ಪ್ರಕರಣಗಳು ದಾಖಲಾಗುತ್ತಿದ್ದವು' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಸುಶೀಲ್ ಹಾಗೂ ಇತರರ ವಿರುದ್ಧ 25ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಕೆಲವು ಪ್ರಕರಣಗಳ ವಿರುದ್ಧ ಆರೋಪಿಗಳು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ಇನ್ನು ಕೆಲವು ಎಫ್‌ಐಆರ್‌ಗಳನ್ನು ನ್ಯಾಯಾಲಯ ರದ್ದುಪಡಿಸಿತ್ತು. ಕಬ್ಬನ್ ಪಾರ್ಕ್‌ನಲ್ಲಿ ದಾಖಲಾಗಿದ್ದ ನಾಲ್ಕು ಪ್ರಕರಣಗಳ ತನಿಖೆ ಮಾತ್ರ ನಡೆಯುತ್ತಿತ್ತು. ಇದೀಗ ಅದೇ ಪ್ರಕರಣಗಳ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ' ಎಂದು ಹೇಳಿವೆ.

'ಸಾವಿರಕ್ಕೂ ಹೆಚ್ಚು ಗ್ರಾಹಕರಿಗೆ ವಂಚನೆ ಆಗಿರುವ ಮಾಹಿತಿ ಇದೆ. ಇದರ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ. ವಂಚನೆ ಮೊತ್ತವೆಷ್ಟು ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ' ಎಂದು ತಿಳಿಸಿವೆ.

ಬ್ಯಾಂಕ್ ಸಿಬ್ಬಂದಿ ಶಾಮೀಲು?

'ಆರೋಪಿಗಳ ವಂಚನೆ ಕೃತ್ಯದಲ್ಲಿ ಕೆಲವು ಬ್ಯಾಂಕ್‌ಗಳ ಸಿಬ್ಬಂದಿಯೂ ಶಾಮೀಲಾಗಿರುವ ಮಾಹಿತಿ ಇದ್ದು, ಅವರೆಲ್ಲರನ್ನೂ ವಿಚಾರಣೆ ನಡೆಸಬೇಕಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ವಿವಿಧ ಯೋಜನೆಗಳಡಿ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಿದ್ದ ಆರೋಪಿಗಳು, ಬಗೆ ಬಗೆಯ ಆಮಿಷವೊಡ್ಡಿ ಫ್ಲ್ಯಾಟ್ ಮಾರಾಟಕ್ಕೆ ಜಾಹೀರಾತುಗಳನ್ನು ನೀಡಿದ್ದರು. ಆರೋಪಿಗಳ ಮಾತು ನಂಬಿದ್ದ ಹಲವು ಗ್ರಾಹಕರು, ಫ್ಲ್ಯಾಟ್ ಖರೀದಿಸಲು ಮುಂದಾಗಿದ್ದರು.'

'ಕಂಪನಿ ಪರವಾಗಿದ್ದ ಕೆಲ ಬ್ಯಾಂಕ್ ಸಿಬ್ಬಂದಿ, ಗ್ರಾಹಕರ ಹೆಸರಿನಲ್ಲಿ ತ್ವರಿತವಾಗಿ ಸಾಲ ಮಂಜೂರು ಮಾಡಿದ್ದರು. ಸಾಲದ ಮೊತ್ತವನ್ನು ಕಂಪನಿ ಖಾತೆಗೆ ಒಂದೇ ಬಾರಿಗೆ ಜಮೆ ಮಾಡಿ ವಂಚನೆಗೆ ಸಹಕರಿಸಿದ್ದರು' ಎಂದು ಮೂಲಗಳು ತಿಳಿಸಿವೆ.


ಸುಶೀಲ್ ಮಂತ್ರಿ

ಪ್ರತೀಕ್ ಮಂತ್ರಿ

ಮುಖ್ಯಾಂಶಗಳು
- ವಂಚನೆಯ ಹಳೇ ಪ್ರಕರಣಗಳಿಗೆ ಮರುಜೀವ
- ಗ್ರಾಹಕರಿಂದ ದಾಖಲೆ ಸಂಗ್ರಹಿಸಲು ಸಿಐಡಿ ಸಿದ್ಧತೆ

ಮೈಸೂರು ದಸರಾ ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ

ಬೆಂಗಳೂರು: 'ಇದೇ 26ರಿಂದ ಆರಂಭವಾಗಲಿರುವ ನಾಡಹಬ್ಬ ಮೈಸೂರು ದಸರಾವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಲಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶನಿವಾರ ಇಲ್ಲಿ ಪ್ರಕಟಿಸಿದರು.

'ದಸರಾ ಸಿದ್ಧತೆ ಕುರಿತು ಪೂರ್ವಭಾವಿ ಸಭೆ ನಡೆಸಲಾಗಿತ್ತು. ಉದ್ಘಾಟಕರ ಆಯ್ಕೆ ನಿರ್ಧಾರವನ್ನು ಮುಖ್ಯಮಂತ್ರಿ ವಿವೇಚನೆಗೆ ಬಿಡಲಾಗಿತ್ತು. ದೇಶದ ಪ್ರಥಮ ಪ್ರಜೆಯನ್ನೇ ಉದ್ಘಾಟನೆಗೆ ಆಹ್ವಾನಿಸಲು ತೀರ್ಮಾನಿಸಿ ಅವರ ಕಚೇರಿಗೆ ಪತ್ರ ಬರೆಯಲಾಗಿತ್ತು. ಚಾಮುಂಡಿ ಬೆಟ್ಟದಲ್ಲಿ ನಡೆಯುವ ದಸರಾ ಉದ್ಘಾಟನೆಗೆ ಬರುವುದಾಗಿ ರಾಷ್ಟ್ರಪತಿ ಸಮ್ಮತಿ ನೀಡಿ ಪತ್ರ ಬರೆದಿದ್ದಾರೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಜನಸ್ಪಂದನ' ಸಮಾವೇಶದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರನ್ನು ಸನ್ಮಾನಿಸಲಾಯಿತು. ಶಾಸಕ ಬಿ.ಎಸ್‌. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಡಾ. ಕೆ.ಸುಧಾಕರ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಮತ್ತು ಪಕ್ಷದ ಕಾರ್ಯಕರ್ತರು ಇದ್ದಾರೆ (ಎಡಚಿತ್ರ) ಸಮಾವೇಶದಲ್ಲಿ ನೆರೆದಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ

ಧಮ್ಮಿದ್ದರೆ ಕೇಸರಿ ದಿಗ್ವಿಜಯ ಯಾತ್ರೆ ತಡೆಯಲಿ– ಕಾಂಗ್ರೆಸ್‌ಗೆ ಬೊಮ್ಮಾಯಿ ಸವಾಲು

ಚುನಾವಣಾ ಕಹಳೆ ಮೊಳಗಿಸಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಬಲಿಷ್ಠ ನೆಲೆಯಿಲ್ಲದ ಪ್ರದೇಶದಲ್ಲಿ 'ಜನಸ್ಪಂದನ' ಸಮಾವೇಶ ನಡೆಸುವ ಮೂಲಕ ಶಕ್ತಿ ಪ್ರದರ್ಶನ ನಡೆಸಿದ ಬಿಜೆಪಿ ನಾಯಕರು, 2023ರ ವಿಧಾನಸಭಾ ಚುನಾವಣೆಯ ಪ್ರಚಾರಕ್ಕೆ ಶನಿವಾರ ಇಲ್ಲಿ ಅಧಿಕೃತವಾಗಿ ಚಾಲನೆ ಕೊಟ್ಟರು. 150 ಸ್ಥಾನಗಳನ್ನು ಗೆದ್ದು ಮರಳಿ ಅಧಿಕಾರ ಹಿಡಿಯುವ ಶಪಥವನ್ನೂ ಮಾಡಿದ ಅವರು, ತಮ್ಮ ಪಕ್ಷ ಆರಂಭಿಸಿರುವ 'ದಿಗ್ವಿಜಯ ಯಾತ್ರೆ'ಗೆ ತಾಕತ್ತಿದ್ದರೆ ತಡೆಯೊಡ್ಡುವಂತೆ ಕಾಂಗ್ರೆಸ್‌ಗೆ ಸವಾಲು ಹಾಕಿದರು.

ಬಿಜೆಪಿ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸಿರುವ ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಒಂದು ವರ್ಷ ಪೂರೈಸಿರುವುದರ ಪ್ರಯುಕ್ತ ಸಮಾವೇಶ ಆಯೋಜಿಸಲಾಗಿತ್ತು. 'ಇಲ್ಲಿಂದಲೇ 2023ರ ಚುನಾವಣಾ ಪ್ರಚಾರ ಆರಂಭವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಘೋಷಿಸಿದರು.

ಭಾಷಣದುದ್ದಕ್ಕೂ ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ ಮೂವರೂ, 'ಕಾಂಗ್ರೆಸ್ ನಾಯಕರು ಹಗಲುಗನಸು ಕಾಣುತ್ತಿದ್ದಾರೆ. ಕೂಸು ಹುಟ್ಟುವ ಮುನ್ನವೇ ಕುಲಾವಿ ಹೊಲಿಸಿದ್ದಾರೆ. ಮುಖ್ಯಮಂತ್ರಿ ಕುರ್ಚಿಗಾಗಿ ಕಿತ್ತಾಟ ಆರಂಭಿಸಿದ್ದಾರೆ. ಅವರ ಕನಸು ನನಸಾಗುವುದಿಲ್ಲ. ಮುಂದಿನ ಚುನಾವಣೆಯಲ್ಲಿ ಕಮಲ ಅರಳಿಸಿ ಮತ್ತೆ ವಿಧಾನಸೌಧದ ಮೂರನೇ ಮಹಡಿ ಏರಿಯೇ ತೀರುತ್ತೇವೆ' ಎಂದು ಉದ್ಘೋಷಿಸಿದರು.

'ನರೇಂದ್ರ ಮೋದಿ ಅವರು ಪ್ರಧಾನಿ ಹುದ್ದೆಯಲ್ಲಿರುವವರೆಗೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ಬರಲು ಬಿಡುವುದಿಲ್ಲ ಎಂದು ವಿಧಾನಸಭೆಯಲ್ಲೇ ಪ್ರತಿಜ್ಞೆ ಮಾಡಿದ್ದೇನೆ. ಇನ್ನೂ ನಾಲ್ಕೈದು ಕಡೆ ಇಂತಹ ಸಮಾವೇಶ ನಡೆಸುತ್ತೇವೆ. 150 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ಸಂಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸುತ್ತೇವೆ' ಎಂದು ಯಡಿಯೂರಪ್ಪ ಹೇಳಿದರು.

8ನೇ ಪುಟ ನೋಡಿ

ಎಲ್ಲರ ಗುರಿ ಸಿದ್ದರಾಮಯ್ಯ!

ಬಿಜೆಪಿಯ ಜನಸ್ಪಂದನ ಸಮಾವೇಶದಲ್ಲಿ ಭಾಷಣ ಮಾಡಿದ ಬಹುತೇಕರು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡೇ ವಾಗ್ದಾಳಿ ನಡೆಸಿದರು. 'ಅವರು ಮತ್ತೆ ಮುಖ್ಯಮಂತ್ರಿ ಹುದ್ದೆಗೇರಲು ಬಿಡುವುದಿಲ್ಲ' ಎಂದು ಹಲವರು ಶಪಥ ಮಾಡಿದ್ದೂ ನಡೆಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವರಾದ ಬಿ. ಶ್ರೀರಾಮುಲು, ಗೋವಿಂದ ಕಾರಜೋಳ ಅವರು, 'ಸಿದ್ದರಾಮಯ್ಯ ಸರ್ಕಾರದಲ್ಲಿ ಭಾರಿ ಭ್ರಷ್ಟಾಚಾರ ನಡೆದಿತ್ತು. ಎಲ್ಲವನ್ನೂ ಮುಚ್ಚಿಹಾಕಿದ್ದರು' ಎಂಬ ಆರೋಪ ಮಾಡಿದರು.

ಸಿದ್ದರಾಮಯ್ಯ ಜತೆಯಲ್ಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಬಿಜೆಪಿ ನಾಯಕರ ವಾಗ್ದಾಳಿಯ ಪ್ರಮುಖ ಗುರಿಯಾಗಿದ್ದರು. ಅವರು ಆರಂಭಿಸಿದ 'ಭಾರತ ಒಗ್ಗೂಡಿಸಿ' ಯಾತ್ರೆಯನ್ನೂ ಉಲ್ಲೇಖಿಸಿ ಟೀಕಾಪ್ರಹಾರ ನಡೆಸಿದರು.

ಪ್ರಮುಖ ನಾಯಕರ ಗೈರು

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ಉಸ್ತುವಾರಿಯಾಗಿರುವ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ ಪಕ್ಷದ ಹಲವು ಪ್ರಮುಖರು ಜನಸ್ಪಂದನ ಸಮಾವೇಶಕ್ಕೆ ಗೈರಾಗಿದ್ದರು.

ಚೀನಾದಲ್ಲಿ ವೈದ್ಯ ವ್ಯಾಸಂಗ ಎಚ್ಚರ ಇರಲಿ ಎಂದ ಭಾರತ

ಬೀಜಿಂಗ್ (ಪಿಟಿಐ): ಚೀನಾದಲ್ಲಿ ವೈದ್ಯಕೀಯ ವ್ಯಾಸಂಗ ಮಾಡಬಯಸುವ ಭಾರತೀಯ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿರುವ ಭಾರತ ಸರ್ಕಾರ, ಅಲ್ಲಿ ನಡೆಯುವ ಮೋಸ, ಉತ್ತೀರ್ಣ ಪ್ರಮಾಣ ಕಡಿಮೆ ಇರುವುದೂ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಎಚ್ಚರದಿಂದ ಇರುವಂತೆ ಸೂಚಿಸಿದೆ.

ಅಲ್ಲದೆ ಚೀನಾದಲ್ಲಿ ಅಧಿಕೃತ ಮಾತನಾಡುವ ಭಾಷೆಯಾದ ಪುಟೊನ್‌ಗುವಾವನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಕಲಿಯಬೇಕಾಗುತ್ತದೆ. ಜತೆಗೆ ಅಲ್ಲಿ ಪದವಿ ಪಡೆದ ಬಳಿಕ ಭಾರತದಲ್ಲಿ ವೃತ್ತಿ ಆರಂಭಿಸಲು ಇರುವ ಕಠಿಣ ನಿಯಮಗಳ ಬಗ್ಗೆಯೂ ತಿಳಿದುಕೊಂಡಿರುವಂತೆ ಬೀಜಿಂಗ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಹಲವು ಸಲಹೆಗಳಿರುವ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಚೀನಾದಲ್ಲಿ ಪ್ರಸ್ತುತ ಸುಮಾರು 23,000 ಭಾರತೀಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅವರಲ್ಲಿ ಬಹುಪಾಲು ವೈದ್ಯಕೀಯ ವಿದ್ಯಾರ್ಥಿಗಳು. ಬೀಜಿಂಗ್‌ನ ಕೋವಿಡ್ ವೀಸಾ ನಿರ್ಬಂಧ ನಿಯಮಗಳಿಂದಾಗಿ ಈ ಎಲ್ಲ ವಿದ್ಯಾರ್ಥಿಗಳು ಎರಡು ವರ್ಷಗಳಿಂದ ಭಾರತದಲ್ಲಿಯೇ ಉಳಿದಿದ್ದಾರೆ.

ಚೀನಾ ಇತ್ತೀಚೆಗೆ ಆಯ್ದ ಸಂಖ್ಯೆಯ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕಾಗಿ ವೀಸಾಗಳನ್ನು ನೀಡಲು ಆರಂಭಿಸಿದೆ. ಇದರ ಬೆನ್ನಲ್ಲೇ ಚೀನಾದ ವೈದ್ಯಕೀಯ ಕಾಲೇಜುಗಳು ಭಾರತ ಮತ್ತು ವಿದೇಶದಿಂದ ಹೊಸ ವಿದ್ಯಾರ್ಥಿಗಳ ದಾಖಲಾತಿಗೆ ಚಾಲನೆ ನೀಡಿವೆ. ಈ ಹಿನ್ನೆಲೆಯಲ್ಲಿ ಭಾರತೀಯ ವಿದ್ಯಾರ್ಥಿಗಳಿಗಾಗಿ ಸಲಹೆಗಳನ್ನು ನೀಡಲಾಗಿದೆ.

ಕೋಲ್ಕತ್ತ: ₹17 ಕೋಟಿ ನಗದು ಜಪ್ತಿ ಮಾಡಿದ ಇ.ಡಿ

ನವದೆಹಲಿ/ಕೋಲ್ಕತ್ತ (ಪಿಟಿಐ): 'ಮೊಬೈಲ್ ಗೇಮಿಂಗ್ ಆ್ಯಪ್ ಪ್ರಚಾರಕರ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಲ್ಕತ್ತದ ಆರು ಕಡೆ ಶೋಧ ಕಾರ್ಯಾಚರಣೆ ನಡೆಸಿ ಒಟ್ಟು ₹17 ಕೋಟಿ ನಗದು ಜಪ್ತಿ ಮಾಡಲಾಗಿದೆ' ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ಇ–ನುಗ್ಗೆಟ್ಸ್' ಗೇಮಿಂಗ್ ಆ್ಯಪ್‌ನ ಪ್ರಚಾರಕನನ್ನು ಅಮೀರ್ ಖಾನ್ ಎಂದು ಗುರುತಿಸಲಾಗಿದೆ ಎಂದು ಇ.ಡಿ ಹೇಳಿಕೆಯಲ್ಲಿ ತಿಳಿಸಿದೆ.

ಹಣ ಅಕ್ರಮ ವರ್ಗಾವಣೆ ಆರೋಪದಲ್ಲಿ 2021ರಲ್ಲಿ ಕೋಲ್ಕತ್ತ ಪೊಲೀಸರು ಈ ಕಂಪನಿಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದರು. ಈ ಆ್ಯಪ್‌ನ ನಿರ್ವಾಹಕರಿಗೆ ಚೀನಾ ನಿಯಂತ್ರಣದಲ್ಲಿರುವ ಆ್ಯಪ್‌ಗಳ ಜೊತೆ ನಂಟಿದೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಐದು ಯಂತ್ರಗಳ ನೆರವಿನಿಂದ ನೋಟುಗಳ ಎಣಿಕೆ ಮಾಡಲಾಗಿದೆ. ಈ ಕಾರ್ಯಕ್ಕೆ ಬ್ಯಾಂಕ್ ಸಿಬ್ಬಂದಿಯನ್ನೂ ಬಳಸಿಕೊಳ್ಳಲಾಗಿದೆ. ದಾಳಿ ವೇಳೆ ₹2,000 ಮುಖಬೆಲೆಯ ನೋಟುಗಳೂ ದೊರೆತಿವೆ' ಎಂದು ತಿಳಿಸಿದ್ದಾರೆ.

ಒಳ ಪುಟ

'ವಸತಿ ಶಾಲೆ ಸಂಖ್ಯೆ 10ಕ್ಕೆ ಏರಿಕೆ' 6

ಕೆಪಿಎಸ್‌ಸಿ: ಮೂರು ಪರೀಕ್ಷಾ ಘಟಕ ಪ್ರಸ್ತಾವ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಖಾಲಿ ಹುದ್ದೆಗಳ ಭರ್ತಿಗೆ ನಡೆಸುವ ನೇಮಕಾತಿಯಲ್ಲಿನ ವಿಳಂಬ ತಡೆಯಲು ಮುಂದಾಗಿರುವ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ), ಮೂರು ಪ್ರತ್ಯೇಕ 'ಪರೀಕ್ಷಾ ನಿಯಂತ್ರಣ ಘಟಕ' ಸ್ಥಾಪಿಸುವ ಪ್ರಸ್ತಾವವನ್ನು ರಾಜ್ಯ ಸರ್ಕಾರದ ಮುಂದಿಟ್ಟಿದೆ.

ಈ ಮೂಲಕ, ಕೆಎಎಸ್ ಹುದ್ದೆಗಳೂ ಸೇರಿದಂತೆ ಯಾವುದೇ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ ಎಂಟೇ ತಿಂಗಳಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ರವಾನಿಸುವ ಯೋಜನೆ ಹೊಂದಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್, 'ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಮೂರು ಪರೀಕ್ಷಾ ಘಟಕಗಳನ್ನು ಸ್ಥಾಪಿಸುವ ದಿಸೆಯಲ್ಲಿ 112 ಹೊಸ ಹುದ್ದೆಗಳನ್ನು ಸೃಜಿಸಲು ಮತ್ತು ಈಗಾಗಲೇ ಮಂಜೂರಾಗಿರುವ 322 ಹುದ್ದೆಗಳ ಪೈಕಿ ಖಾಲಿ ಇರುವ 140 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದರು.

'ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆ ತಯಾರಿ, ಮೌಲ್ಯಮಾಪನ, ಫಲಿತಾಂಶ ಪ್ರಕಟಿಸುವವರೆಗಿನ ಎಲ್ಲ ಕೆಲಸಗಳು ನಿರ್ವಹಿಸಲು ಸದ್ಯ ಒಬ್ಬ ಪರೀಕ್ಷಾ ನಿಯಂತ್ರಕರ ಅಡಿಯಲ್ಲಿ ಒಂದು ಘಟಕ ಮಾತ್ರ ಇದೆ. ಆಯೋಗದಲ್ಲಿ ಜಂಟಿ ಪರೀಕ್ಷಾ ನಿಯಂತ್ರಕರಿದ್ದರೂ ಅವರು ಈ ಪರೀಕ್ಷಾ ನಿಯಂತ್ರಕರ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದರ ಬದಲು, ಇಬ್ಬರು ಜಂಟಿ ಪರೀಕ್ಷಾ ನಿಯಂತ್ರಕರ ಅಡಿಯಲ್ಲಿ ಸ್ವತಂತ್ರ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ವಿವಿಧ ಇಲಾಖೆಗಳಿಂದ ಹುದ್ದೆಗಳ ನೇಮಕಾತಿಗೆ ಬರುವ 15ರಿಂದ 20 ಪ್ರಸ್ತಾವನೆಗಳಿಗೆ ಅಧಿಸೂಚನೆ ಹೊರಡಿಸಿ, ಎಲ್ಲ ಪ್ರಕ್ರಿಯೆ ಮುಗಿಸಿ ಅಂತಿಮ ಆಯ್ಕೆ ಪಟ್ಟಿ ಸಿದ್ಧಪಡಿಸಲು ಒಂದೇ ಪರೀಕ್ಷಾ ಘಟಕ ಇರುವುದರಿಂದ ಹೆಚ್ಚಿನ ಒತ್ತಡ ಬೀಳುತ್ತಿದೆ. ಹೀಗಾಗಿ, ಒಂದು ಅಧಿಸೂಚನೆಯ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ 3 ವರ್ಷ ತಗಲುತ್ತಿದೆ. ಪ್ರತ್ಯೇಕ ಘಟಕಗಳನ್ನು ಸ್ಥಾಪಿಸಿ, ಈ ಘಟಕಗಳಿಗೆ ಹಂಚಿಕೆ ಮಾಡಿದರೆ ನಿಗದಿತ ಅವಧಿಯಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು. 'ನೇಮಕಾತಿಗೆ ಅಧಿಸೂಚನೆಯಿಂದ ಆರಂಭಿಸಿ ಆಯ್ಕೆ ಪ್ರಕ್ರಿಯೆಯ ಎಲ್ಲಾ ಹಂತಗಳನ್ನು ಕೇಂದ್ರ ಲೋಕಸೇವಾ ಆಯೋಗದ ಮಾದರಿಯಲ್ಲಿ ಕೆಪಿಎಸ್‌ಸಿ ಕಾರ್ಯನಿರ್ವಹಿಸಬೇಕೆಂದು ಎಲ್ಲರೂ ಬಯಸುತ್ತಾರೆ. ಆದರೆ, ಸದ್ಯ ಇಲ್ಲಿರುವ ವ್ಯವಸ್ಥೆಯಲ್ಲಿ ಯುಪಿಎಸ್‌ಸಿ ರೀತಿಯಲ್ಲಿ ಕೆಲಸ ನಿರ್ವಹಣೆ ಅಸಾಧ್ಯ. 90ರ ದಶಕದ ವ್ಯವಸ್ಥೆ ಇನ್ನೂ ಇದೆ. ಹಳೆ ಕಂಪ್ಯೂಟರ್ ಬದಲಿಸಿ, ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದೆ' ಎಂದರು.

ವಿವಿಧ ಲೋಕಸೇವಾ ಆಯೋಗಗಳಲ್ಲಿ ಮಂಜೂರಾದ ಹುದ್ದೆ

ಕೇರಳ	ತಮಿಳುನಾಡು	ಕರ್ನಾಟಕ	ಯುಪಿಎಸ್‌ಸಿ
1,641	617	322	2,600

ಅ.13ರಿಂದ ಹಾಸನಾಂಬೆ ದರ್ಶನ

ಪ್ರಜಾವಾಣಿ ವಾರ್ತೆ

ಹಾಸನ: ಹಾಸನಾಂಬೆ ದರ್ಶನ ಈ ಬಾರಿ ಅ.13ರಿಂದ 27ರವರೆಗೆ ಅದ್ದೂರಿಯಾಗಿ ಜರುಗಲಿದೆ.

ಈ ಬಾರಿ ಹಾಸನಾಂಬೆ ದೇಗುಲ 15 ದಿನ ಬಾಗಿಲು ತೆರೆಯಲಿದ್ದು, ಭಕ್ತರಿಗೆ 12 ದಿನ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮೊದಲ, ಕೊನೆಯ ದಿನ ಹಾಗೂ ಗ್ರಹಣ ಇರುವ ಅ.25ರಂದು ಸಾರ್ವಜನಿಕರಿಗೆ ದರ್ಶನಕ್ಕೆ ಅವಕಾಶ ಇರುವುದಿಲ್ಲ ಎಂದು ಶನಿವಾರ ದೇವಸ್ಥಾನಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಜಿಲ್ಲಾಧಿಕಾರಿ ಅರ್ಚನಾ ಎಂ.ಎಸ್. ಹಾಗೂ ಶಾಸಕ ಪ್ರೀತಂ ಗೌಡ ಮಾಹಿತಿ ನೀಡಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



'ವಿದ್ಯಾರ್ಥಿಗಳು ಜೀವನ ಕೌಶಲ ಮೈಗೂಡಿಸಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳ ಕಲಿಕೆಯ ನಂತರ ಬದುಕಿನಲ್ಲಿ ಹೊಂದಾಣಿಕೆ ಎನ್ನುವುದು ಕೂಡ ಸಕಾರಾತ್ಮಕ ನಡವಳಿಕೆಯಾಗಿದೆ. ಕಲಿಕೆಯ ಸಾಮರ್ಥ್ಯ ಹೆಚ್ಚಿಸಿ, ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಇದು ಸಹಾಯಕ ಎಂದು ಗ್ಲೋಬಲ್ ಸ್ಕೂಲ್ ಆಫ್ ಕೌನ್ಸೆಲಿಂಗ್‌ನ ಪ್ರಾಂಶುಪಾಲೆ ಶೋಭಿತಾ ಶಾಂತ ಕುಮಾರಿ ಹೇಳಿದರು.

ನಗರದ ಯುನೈಟೆಡ್ ಇಂಟರ್ ನ್ಯಾಷನಲ್ ಪದವಿ ಕಾಲೇಜಿ ನಲ್ಲಿ ಜೀವನ ಕೌಶಲಗಳ ಕುರಿತು ನಡೆದ ಕಾರ್ಯಾಗಾರದಲ್ಲಿ ಮಾತನಾಡಿದರು.

ರೂಪಾಮಾಲಾ ಕೋನೇರಿ, ಗೌರವ್ ದಲಾಲ್ ಇದ್ದರು.

ಮುನಿರತ್ನ ವಿರುದ್ಧದ ವ್ಯಾಜ್ಯ: ಕಟಕಟೆಯಲ್ಲಿ ಮುನಿರಾಜು ಗೌಡ

'ಚುನಾವಣಾ ತಕರಾರು ಅರ್ಜಿ ವಿಚಾರಣೆ ವಿಳಂಬ ಸಲ್ಲದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣಾ ತಕರಾರು ಅರ್ಜಿಗಳು ಮುಂದಿನ ಚುನಾವಣೆ ಘೋಷಣೆಯಾಗುವ ತನಕ ವಿಚಾರಣೆಯಲ್ಲೇ ಮುಂದುವರಿಯುವ ಚಾಳಿ ಒಳ್ಳೆಯದಲ್ಲ. ಇಂತಹ ಅರ್ಜಿಗಳು ಆರು ತಿಂಗಳ ಒಳಗಾಗಿ ಇತ್ಯರ್ಥಗೊಳ್ಳುವಂತಾಗಬೇಕು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಿಂದ 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮುನಿರತ್ನ ವಿರುದ್ಧ ಪರಾಜಯ ಅನುಭವಿಸಿದ್ದ ಬಿಜೆಪಿ ಅಭ್ಯರ್ಥಿ ಹಾಗೂ ಹಾಲಿ ವಿಧಾನಪರಿಷತ್ ಸದಸ್ಯ ಮುನಿರಾಜು ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರು ಮತ್ತು ಪ್ರತಿವಾದಿಗಳ ಪರ ವಕೀಲರು ದಾಖಲೆಗಳ ದೃಢೀಕರಣ ಪರಿಶೀಲನೆಗೆ ಸಂಬಂಧಿಸಿದಂತೆ ತಕರಾರೆತ್ತಿದ್ದ ವೇಳೆ ಮೌಖಿಕವಾಗಿ ಈ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ, 'ಇಂತಹ ಪ್ರಕರಣಗಳಲ್ಲಿ ಸಮಯ ವ್ಯಯ ಮಾಡುವುದು ಸಲ್ಲದು' ಎಂಬ ಅಭಿಪ್ರಾಯದೊಂದಿಗೆ ದೃಢೀಕೃತ ದಾಖಲೆಗಳನ್ನು ಸಲ್ಲಿಸುವಂತೆ ಅರ್ಜಿದಾರರ ಪರ ವಕೀಲ ಎಂ.ಶಿವಪ್ರಕಾಶ್ ಅವರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

ಅಕ್ರಮಗಳ ಪುನರುಚ್ಚಾರ: 'ಸತ್ಯವನ್ನೇ ನುಡಿಯುತ್ತೇನೆ' ಎಂದು ಕಟಕಟೆಯಲ್ಲಿ ನಿಂತು ಪ್ರಮಾಣ ಸ್ವೀಕರಿಸಿದ ಅರ್ಜಿದಾರ ಮುನಿರಾಜು ಗೌಡ ಅವರನ್ನು ಎಂ.ಶಿವಪ್ರಕಾಶ್ ಮುಖ್ಯ ವಿಚಾರಣೆಗೆ ಅನುಗುಣವಾದ ಪ್ರಶ್ನೆಗಳನ್ನು ಕೇಳಿದರು.

ಈ ವೇಳೆ ಮುನಿರಾಜು ಗೌಡ, 'ಮುನಿರತ್ನ ಅಂದು ಚುನಾವಣೆ ಘೋಷಣೆ ಆಗುವ ಮೊದಲೇ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಎಲ್ಲ ಇಲಾಖೆಗಳ ಅಧಿಕಾರಿಗಳನ್ನು ತಮಗೆ ಬೇಕಾದ ಕಡೆ ನಿಯುಕ್ತಿ ಮಾಡಿಸಿಕೊಂಡು ಅಕ್ರಮ ಎಸಗಿದ್ದಾರೆ' ಎಂದು ಪುನರುಚ್ಚರಿಸಿದರು.

'ಮುನಿರತ್ನ ಅತ್ಯಂತ ಪ್ರಭಾವಿ ವ್ಯಕ್ತಿಯಾಗಿದ್ದು, ಅಂದಿನ ಚುನಾವಣೆಯಲ್ಲಿ ಅವರ ಹಲವು ಅಕ್ರಮಗಳ ವಿರುದ್ಧ ನಾನು ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿದ್ದೇನೆ. ಈ ಸಂಬಂಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಈ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆ ಮುಂದುವರಿದಿದೆ' ಎಂದು ನೂರಾರು ಪುಟಗಳ ಅಂತಿಮ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

'ಮುನಿರತ್ನ ಅವರ ಆಯ್ಕೆಯನ್ನು ಜನತಾ ಪ್ರತಿನಿಧಿ ಕಾಯ್ದೆ -1951ರ ಕಲಂ 123ರ ಅನುಸಾರ ಅನೂರ್ಜಿತ ಎಂದು ಸಾರಬೇಕು' ಎಂದು ಕೋರಿ ಮುನಿರಾಜು ಗೌಡ ಈ ಅರ್ಜಿ ಸಲ್ಲಿಸಿದ್ದಾರೆ.

ಮುನಿರಾಜುಗೆ ಕಟಕಟೆಯಲ್ಲೇ ಕುರ್ಚಿ...!

ಮುನಿರಾಜು ಗೌಡ ಕಟಕಟೆಯಲ್ಲಿ ನಿಂತು ಉತ್ತರಿಸುತ್ತಿದ್ದ ವೇಳೆ ನ್ಯಾಯಮೂರ್ತಿಗಳು, 'ಅರ್ಜಿದಾರರು ನಿಂತುಕೊಂಡು ಯಾಕೆ ಉತ್ತರಿಸಬೇಕು. ಅವರಿಗೊಂದು ಕುರ್ಚಿ ಕೊಡಿ' ಎಂದು ಕೋರ್ಟ್ ಅಧಿಕಾರಿಗೆ ಸೂಚಿಸಿದರು.

ಕೂಡಲೇ ಕೋರ್ಟ್ ಆಫೀಸರ್ ರಾಘವೇಂದ್ರ ಅರ್ಜಿದಾರರಿಗೆ ಕುರ್ಚಿ ನೀಡಿದರು.

ನಂತರ ನ್ಯಾಯಮೂರ್ತಿಗಳು ಮುನಿರಾಜು ಅವರಿಗೆ, 'ವಿಚಾರಣೆ ಮುಗಿದ ಮೇಲೆ ಕುರ್ಚಿಯನ್ನು ಇಲ್ಲೇ ಬಿಟ್ಟು ಹೋಗಿ. ಮನುಷ್ಯರಿಗೆ ಕುರ್ಚಿಯ ಮೇಲೆ ಭಾರಿ ವ್ಯಾಮೋಹ..!' ಎಂದು ಚಟಾಕಿ ಹಾರಿಸಿದರು.

ಏಕಪಕ್ಷೀಯವಾಗಿ ದೇಗುಲ ನಿರ್ಮಾಣ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲರ ಅಭಿಪ್ರಾಯ ಪರಿಗಣಿಸದೆ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ದೇವಸ್ಥಾನ ನಿರ್ಮಿಸುವ ಕಾರ್ಯ ಕೈಗೊಂಡಿರುವುದು ಖಂಡನೀಯ' ಎಂದು ಎಐಡಿಎಸ್‌ಒ ಜಿಲ್ಲಾ ಸಮಿತಿ ತಿಳಿಸಿದೆ.

'ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರಜಾತಾಂತ್ರಿಕ ವಾತಾವರಣವನ್ನು ಕದಡಲು ಬಿಡಬಾರದು. ವಿದ್ಯಾರ್ಥಿಗಳ ಮತ್ತು ಬೋಧಕ ಸಿಬ್ಬಂದಿಯ ಅಭಿಪ್ರಾಯಗಳನ್ನು ಪಡೆಯದೆ ಏಕಪಕ್ಷೀಯವಾಗಿ ವಿವಿಯ ಆಡಳಿತ ಮಂಡಳಿ ನೂತನ ಕಟ್ಟಡ ನಿರ್ಮಿಸಲು ಹೊರಟಿರುವುದು ಖಂಡನೀಯ. ಹೋರಾಟನಿರತ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ನಿಂದಿಸಿರುವುದು ಬೇಸರದ ಸಂಗತಿ. ಕೂಡಲೇ ಕುಲಪತಿಗಳು ಮಧ್ಯಸ್ಥಿಕೆ ವಹಿಸಿ ಈ ವಿವಾದವನ್ನು ಇತ್ಯರ್ಥಗೊಳಿಸುವಂತೆ ನೋಡಿಕೊಳ್ಳಬೇಕು' ಎಂದು ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಕಲ್ಯಾಣ ಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

4 ಎಕರೆ ಒತ್ತುವರಿ: ಕ್ರಮಕ್ಕೆ ಎನ್‌ಜಿಟಿ ನಿರ್ದೇಶನ

ನವದೆಹಲಿ: ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯ ಅಮೃತಹಳ್ಳಿಯಲ್ಲಿ ರಾಜಕಾಲುವೆಯ ದಿಕ್ಕು ಬದಲಿಸಿ 4 ಎಕರೆ ಜಾಗ ಒತ್ತುವರಿ ಮಾಡಿರುವ ಪ್ರಕರಣದ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠ ಶುಕ್ರವಾರ ನಿರ್ದೇಶನ ನೀಡಿದೆ.

ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಆದರ್ಶಕುಮಾರ್ ಗೋಯಲ್, ಸುಧೀರ್ ಅಗರವಾಲ್, ಎ.ಸೆಂಥಿಲ್ ವೆಲ್, ಡಾ.ಅಫ್ರೋಜ್ ಅಹ್ಮದ್ ಅವರನ್ನು ಒಳಗೊಂಡ ನ್ಯಾಯಪೀಠವು ಆದೇಶ ಹೊರಡಿಸಿದ್ದು, ಒಂದು ವೇಳೆ ಈ ಎರಡು ಪ್ರಾಧಿಕಾರಗಳು ಅಗತ್ಯ ಕ್ರಮ ಕೈಗೊಳ್ಳದಿದ್ದರೆ ಮತ್ತೆ ಪೀಠದ ಗಮನಕ್ಕೆ ತರಬಹುದು ಎಂದು ದೂರುದಾರರಿಗೆ ಸೂಚಿಸಿದೆ.

ಗ್ರಾಮದಲ್ಲಿ ಪ್ರೊಸ್ಪೆರೊ ರಿಯಾಲ್ಟಿ ಲಿಮಿಟೆಡ್ ಒತ್ತುವರಿ ಮಾಡಿದೆ ಎಂದು ಆರೋಪಿಸಿ ಸ್ಥಳೀಯರಾದ ಗಿರೀಶ್ ಚಂದಿರಮಣಿ ಹಾಗೂ ಇತರರು ಎನ್‌ಜಿಟಿಗೆ ಅಂಚೆ ಮೂಲಕ ದೂರು ನೀಡಿದ್ದರು. ಸರ್ವೆ ಸಂಖ್ಯೆ 18/1ರಲ್ಲಿ 34 ಗುಂಟೆ, 18/2ರಲ್ಲಿ 26 ಗುಂಟೆ, 18/3ರಲ್ಲಿ 20 ಗುಂಟೆ, 18/4ರಲ್ಲಿ 39 ಗುಂಟೆ, 18/5ರಲ್ಲಿ 17 ಗುಂಟೆ, ಸರ್ವೆ ಸಂಖ್ಯೆ 118/1ರಲ್ಲಿ 23.5 ಗುಂಟೆ ಒತ್ತುವರಿಯಾಗಿದೆ. ಈ ಮೂಲಕ ಪರಿಸರದ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಿದ್ದರು.

ದೇಸಿತನಕ್ಕೆ ಭಾಷೆಯೇ ಭೂಮಿಕೆ: ಕವಿ ವಡ್ಡಗೆರೆ ನಾಗರಾಜಯ್ಯ

ಬೆಂಗಳೂರು: ಕಾದಂಬರಿಯಲ್ಲಿ ದೇಸಿತನ ಉಳಿಸಿಕೊಳ್ಳುವಲ್ಲಿ ಭಾಷೆಯ ಪಾತ್ರ ಮುಖ್ಯ ಎಂದು ಕವಿ ವಡ್ಡಗೆರೆ ನಾಗರಾಜಯ್ಯ ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಜಯನಗರದ ಶಿವಾನಂದ ಶರ್ಮ ಮೆಮೋರಿಯಲ್ ಆರ್‌ವಿ ಪದವಿ ಕಾಲೇಜಿನಲ್ಲಿ 'ಒಡಲಾಳ ಒಂದು ನೋಟ' ಕುರಿತು ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಮಾಜಿಕ ನ್ಯಾಯವನ್ನು ಬಿಂಬಿಸುವುದು ಕನ್ನಡ ಕಾದಂಬರಿಗಳ ಮೂಲಸತ್ವ. ಸರ್ವರಿಗೂ ಸಮಪಾಲು, ಸಮಬಾಳು ಎನ್ನುವ ತತ್ವದ ಅರಿವು ಎಲ್ಲರಲ್ಲೂ ಮೂಡಬೇಕು ಎನ್ನುವುದೇ ಅದರ ಆಶಯ ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸದಸ್ಯೆ ಡಾ.ಪದ್ಮಿನಿ ನಾಗರಾಜು, ಕನ್ನಡ ವಿಭಾಗದ ಮುಖ್ಯಸ್ಥೆ ಜ್ಯೋತಿ ಹೊಸೂರಕರ್ ಸಹ ಪ್ರಾಧ್ಯಾಪಕರಾದ ಡಾ.ಪ್ರತಿಮಾ ವಿಜಯ್, ಮೋಹನರಾವ್ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ.ಅನಿಲ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ವೈ/ಇ.29/2022–23/15
ದಿನಾಂಕ : 02–09–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗ – 3 ಸಂಖ್ಯೆಗಳ ಎಲ್‌ಸಿಗಳ ಇಂಟರ್‌ಲಾಕಿಂಗ್ (ಕೊಡಗನೂರು – ತೋಳಹುಣಸೆ ನಡುವೆ ಎಲ್‌ಸಿ ಸಂ. 190, ಕುಂಸಿ – ಆನಂದಪುರಂ ನಡುವೆ ಎಲ್‌ಸಿ ಸಂ.104 ಮತ್ತು ಎಲಿಯೂರು – ಬ್ಯಾಡರಹಳ್ಳಿ ನಿಲ್ದಾಣಗಳ ನಡುವೆ ಎಲ್‌ಸಿ ಸಂ.81)	ರೂ. 6,99,660/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 26–09–2022 ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಮೈಸೂರು

ಪಿಯುಬಿ/339/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

17 ಮಂದಿ ಬಂಧನ

ಬೆಂಗಳೂರು: ಉಪ್ಪಾರಪೇಟೆಯ ಬಸಂತ್ ರೆಸಿಡೆನ್ಸಿ ವಸತಿಗೃಹ ಹಾಗೂ ವಿ.ವಿ. ಪುರದ ಎಸ್‌ಎಲ್‌ವಿ ಹೋಟೆಲ್ ಮೇಲೆ ಸಿಸಿಬಿ ಅಧಿಕಾರಿಗಳು ದಾಳಿ ಮಾಡಿದ್ದು, ಜೂಜಾಟದಲ್ಲಿ ತೊಡಗಿದ್ದ ಆರೋಪದಡಿ 17 ಮಂದಿಯನ್ನು ಬಂಧಿಸಿದ್ದಾರೆ.

'ವಸತಿಗೃಹ ಹಾಗೂ ಹೋಟೆಲ್‌ನಲ್ಲಿ ಜೂಜು ಆಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಪ್ರತ್ಯೇಕ ತಂಡಗಳು ಶುಕ್ರವಾರ ಏಕಕಾಲದಲ್ಲಿ ದಾಳಿ ಮಾಡಿವೆ. ₹ 1.42 ಲಕ್ಷ ನಗದು ಜಪ್ತಿ ಮಾಡಿವೆ' ಎಂದು ಪೊಲೀಸರು ಹೇಳಿದರು.

ಕೈದಿ ಸಾವು: ₹ 10 ಲಕ್ಷ ಪರಿಹಾರಕ್ಕೆ ಶಿಫಾರಸು

ಬೆಂಗಳೂರು: ಕ್ಷಯರೋಗ ಹಾಗೂ ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದ ವಿಚಾರಣಾಧೀನ ಕೈದಿಯೊಬ್ಬರು ಜೈಲಿನಲ್ಲೇ ಮೃತಪಟ್ಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ, ರಾಜ್ಯ ಮಾನವ ಹಕ್ಕುಗಳ ಆಯೋಗ ಮೃತನ ಪಾಲಕರಿಗೆ ₹ 10 ಲಕ್ಷ ಮಧ್ಯಂತರ ಪರಿಹಾರ ಪಾವತಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಈ ಕುರಿತಂತೆ ಆಯೋಗದ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಡಿ.ಎಚ್.ವಘೇಲಾ, ಸದಸ್ಯರಾದ ಕೆ.ಬಿ. ಚೆಂಗಪ್ಪ ಹಾಗೂ ಆರ್.ಕೆ.ದತ್ತಾ ಅವರಿದ್ದ ಪೀಠ, 'ಸಜಾ ಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳ ಆರೋಗ್ಯ ರಕ್ಷಣೆಗಾಗಿ ಕೆಲವು ಶಿಫಾರಸುಗಳನ್ನು ಮಾಡಿದ್ದು ಅವುಗಳನ್ನು ತಕ್ಷಣವೇ ಜಾರಿಗೆ ತರುವಂತೆ ಸೂಚಿಸಿದೆ.

ಶಿಫಾರಸುಗಳು:

- ಎಲ್ಲ ಕಾರಾಗೃಹ ಅಧಿಕಾರಿಗಳು ಕೈದಿಗಳಿಗೆ ಸ್ಥಳೀಯ ಆರೋಗ್ಯಾಧಿಕಾರಿಗಳಿಂದ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ನಿಯಮಿತ ಆರೋಗ್ಯ ತಪಾಸಣೆ ಮಾಡಿಸಬೇಕು
- ಆರೋಗ್ಯ ಕಾರ್ಡ್ ಸಿದ್ಧಪಡಿಸಬೇಕು.
- ಮನೋವೈದ್ಯರಿಂದ ಆಪ್ತ ಸಮಾಲೋಚನೆ ನಡೆಸಬೇಕು. ಮನರಂಜನಾ ಚಟುವಟಿಕೆ ಹಮ್ಮಿಕೊಳ್ಳಬೇಕು. ಜೈಲಿನ ಬ್ಯಾರಕ್ ಮತ್ತು ಹೊರಭಾಗಗಳಲ್ಲಿ ಕ್ರೀಡೆಗಳನ್ನು ಆಯೋಜಿಸಬೇಕು.
- ಓದುವ ಹಾಗೂ ಬರೆಯುವ ಹವ್ಯಾಸ ಉಳ್ಳವರಿಗೆ ಅಗತ್ಯ ಸಾಮಗ್ರಿ ಒದಗಿಸಬೇಕು. ಯೋಗ ಮತ್ತು ವ್ಯಾಯಾಮಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು.

ಪ್ರಕರಣವೇನು?: ಬಾಲಕಿಯನ್ನು ಪ್ರೀತಿಸುತ್ತಿದ್ದ ಆರೋಪದಡಿ ಅರವಿಂದ್ ಕುಮಾರ್ (21) ಎಂಬುವರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಆರೋಪಿಯನ್ನು 2018 ರ ಜನವರಿಯಲ್ಲಿ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು. 2021ರ ಜನವರಿ 5 ರಂದು ಅರವಿಂದ್ ಕುಮಾರ್‌ಗೆ ಕ್ಷಯರೋಗ ಮತ್ತು ಮೂತ್ರಪಿಂಡದ ಸಮಸ್ಯೆ ಇರುವುದು ದೃಢಪಟ್ಟಿತ್ತು. ಬೌರಿಂಗ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ 2021ರ ಫೆಬ್ರುವರಿ 4 ರಂದು ಮೃತಪಟ್ಟಿದ್ದರು.

ಸ್ಥಾಪನೆ: 1984

ಜನಹಿತ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,

ನೊಂದಣಿ ಸಂಖ್ಯೆ: ಜೆ.ಆರ್.ಬಿ./ಆರ್.ಜಿ.ಎನ್./3/10678/84-85/ದಿ.5.6.1984

ನಂ. 53, 2ನೇ ಮೈನ್, 10ನೇ ಕ್ರಾಸ್, ಪಶ್ಚಿಮ ಕಾರ್ಡ್ ರಸ್ತೆ 2ನೇ ಹಂತ, ಮಹಾಲಕ್ಷ್ಮೀಪುರಂ, ಬೆಂಗಳೂರು-560086. ಫೋ:080-29556762/ 9448826762 ಇ-ಮೇಲ್: janahitha6@gmail.com

ಲಗ್ಗೆರೆ ಶಾಖೆ:	ಬಾಗಲಗುಂಟೆ ಶಾಖೆ:	ಯಲಹಂಕ ಶಾಖೆ:	ಕೆಂಗೇರಿ ಶಾಖೆ:
ದೂ.: 9481101359	ದೂ: 9008679707	ದೂ: 7204604345	ದೂ: 9449710663

2021–22ನೇ ಸಾಲಿನ ಸರ್ವಸದಸ್ಯರ ಸಾಮಾನ್ಯ ಸಭೆಯ ಪ್ರಕಟಣೆ

ಸಂಘದ 2021-22ನೇ ಸಾಲಿನ 38ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ ಭೌತಿಕ ಹಾಜರಾತಿ ಹಾಗೂ ವರ್ಚುಯಲ್ (Online) ಮೀಟಿಂಗ್ ಮುಖಾಂತರ ದಿ: 18-09-2022ರ ಭಾನುವಾರ, ಬೆಳಿಗ್ಗೆ 10 ಗಂಟೆಗೆ "ಬಂಟರ ಸಂಘ" ನಂ. 324, ಅತ್ತಿಗುಪ್ಪೆ ಮೆಟ್ರೋ ನಿಲ್ದಾಣದ ಹತ್ತಿರ, ವಿಜಯನಗರ, ಬೆಂಗಳೂರು-40 ಇಲ್ಲಿ ನಡೆಸಲು ನಿರ್ಣಯಿಸಲಾಗಿದೆ. ವರ್ಚುಯಲ್ (Online) ಸಭೆಯಲ್ಲಿ ಭಾಗವಹಿಸುವವರು ದಿ: 15-09-2022 ರ ಒಳಗೆ ಕೇಂದ್ರ ಹಾಗೂ ಶಾಖಾ ಕಛೇರಿಗಳಲ್ಲಿ ತಮ್ಮ ಮೊಬೈಲ್ ಸಂಖ್ಯೆಯನ್ನು ನೊಂದಾಯಿಸಿಕೊಳ್ಳಿ ಹಾಗೂ ಸಂಘದ E-Mail: janahitha6@gmail.com ಗೆ ಮಾಹಿತಿ ಕಳುಹಿಸಬಹುದು.

ವಿಶೇಷ ಸೂಚನೆ:

1) ಸುಸ್ತಿಸಾಲಗಾರರು ದಿನಾಂಕ:15.9.2022ರೊಳಗೆ ಸುಸ್ತಿಸಾಲವನ್ನು ಪಾವತಿಸಬೇಕಾಗಿರುತ್ತದೆ.
2) ಸದಸ್ಯರು ಬದಲಾದ ತಮ್ಮ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ತಿಳಿಸಲು ಕೋರಿದೆ.
3) ಸದಸ್ಯರು ಸಂಘದ ಗುರುತಿನ ಕಾರ್ಡ್ ಮತ್ತು ಸಭೆಯ ಸೂಚನಾ ಪತ್ರ ತರಲು ಕೋರಿದೆ.

ದಿನಾಂಕ: 11.09.2022
ಸ್ಥಳ: ಬೆಂಗಳೂರು.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ,
ಸಹಿ/- ಕಾರ್ಯದರ್ಶಿ

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಇಲ್ಲಿ ಕೆಳಗೆ ವಿವರಿಸಲಾಗಿರುವ ಸ್ವತ್ತುಗಳನ್ನು ಖರೀದಿಸಲು ಉದ್ದೇಶಿಸಿದ್ದು, ಅವುಗಳ ಎದುರಿನಲ್ಲಿ ನಮೂದಿಸಿರುವ ಹೆಸರಿನವರು ತಾವೇ ಆ ಸ್ವತ್ತುಗಳ ಸಂಪೂರ್ಣ ಮಾಲೀಕರಾಗಿದೇವೆ ಎಂದು ಪ್ರತಿನಿಧಿಸುತ್ತಿದ್ದಾರೆ ಹಾಗೂ ಸದರಿ ಸ್ವತ್ತುಗಳು ಯಾವುದೇ ಪರಕೀಯ ಹಕ್ಕುಗಳ ನಿರ್ಭಂಧಗಳಿಲ್ಲದೆ, ಸಮಗ್ರವಾಗಿ ನಮ್ಮ ಸ್ವಾಧೀನತೆಯಲ್ಲಿವೆ ಎಂದು ತಿಳಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಾಗಲಿ, ಹಿಂದೂ ಅವಿಭಕ್ತ ಕುಟುಂಬವಾಗಲಿ, ಕಂಪನಿಯಾಗಲಿ, ಸರ್ಕಾರಿ ಪ್ರಾಧಿಕಾರವಾಗಲಿ, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ನಾನ್ ಬ್ಯಾಂಕಿಂಗ್ ಹಣಕಾಸು ಸಂಸ್ಥೆಗಳು, ಸಂಸ್ಥೆ, ಸ್ಥಾಪಿತ ಅಥವಾ ಸ್ಥಾಪಿತವಲ್ಲದ ವ್ಯಕ್ತಿಗಳ ಸಂಘಟನೆ ಅಥವಾ ವ್ಯಕ್ತಿಗಳ ಸಂಘ, ಲೇವಾದೇವಿಗಾರರು ಅಥವಾ ಸಾಲಗಾರರು, ಮಾರಾಟ, ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್, ವಿನಿಮಯ, ಅಡಮಾನ, ಈಡು, ಚಾರ್ಜ್, ಉಡುಗೊರೆ, ಟ್ರಸ್ಟ್, ಅನುವಂಶಿಕ, ಸಕ್ಸೆಶನ್, ಸ್ವಾಧೀನ, ಭೋಗ್ಯ, ಬಾಡಿಗೆ, ನಿರ್ವಹಣೆ, ಈಸ್‌ಮೆಂಟ್, ಲೈಸನ್ಸ್, ಬಿಕ್ವೆಥ್, ಪಾಲು, ಅಸೈನ್‌ಮೆಂಟ್, ಲೀನ್, ಅಟ್ಯಾಚ್‌ಮೆಂಟ್, ಅಭಿವೃದ್ಧಿ ಹಕ್ಕುಗಳು, ರಸ್ತೆ ಹಕ್ಕು, ಲಿಸ್ಪೆಂಡೆನ್ಸ್, ಮೀಸಲು, ಒಡಂಬಡಿಕೆ, ಎಫ್‌ಎಸ್‌ಐ ಬಳಕೆ, ಅಥವಾ ಹೊಣೆಗಾರಿಕೆ ಅಥವಾ ಬದ್ಧತೆ ಅಥವಾ ಇನ್ನಾವುದೇ ರೀತಿಯ ಯಾವುದೇ ಸ್ವರೂಪದ ಆಕ್ಷೇಪಣೆ, ಕ್ಲೇಮ್, ಹಕ್ಕು, ಬಾಧ್ಯತೆ ಮತ್ತು/ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ಸದರಿ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ 14 (ಹದಿನಾಲ್ಕು) ದಿನಗಳ ಅವಧಿಯೊಳಗೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಪುರಾವೆ ದಾಖಲಾತಿಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರ ವಿಳಾಸಕ್ಕೆ ಸಲ್ಲಿಸಬೇಕೆಂದು ಕೋರಲಾಗಿದೆ, ಇಲ್ಲವಾದಲ್ಲಿ ಯಾವುದೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಯಾವುದೇ ಕ್ಲೇಮ್ ಅಥವಾ ಕ್ಲೇಮ್‌ಗಳು ಇದ್ದಲ್ಲಿ, ಅಂತಹವುಗಳನ್ನು ಪರಿಗಣಿಸದೆ ಕೈಬಿಡಲಾಗುತ್ತದೆ.

ಷೆಡ್ಯೂಲ್ ಪ್ರಾಪರ್ಟಿ

ಕೆಂಪಾದ್ಯಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಕೆಳಕಂಡ ಜಮೀನುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ.

ಕ್ರ. ಸಂ.	ಸರ್ವೆ ನಂ.	ವಿಸ್ತೀರ್ಣ	ಖರಾಬ್	ಚಕ್ಕುಬಂದಿ	ಜಮೀನು ಮಾಲೀಕರ ಹೆಸರು
1	32/1ಎ1	1 ಎಕರೆ 32 ಗುಂಟೆ	6 ಗುಂಟೆ	ಪೂರ್ವ: ಸರ್ವೆ ನಂ. 32/1A2; ಪಶ್ಚಿಮ: ಸರ್ವೆ ನಂ.32/15 & 32/1B; ಉತ್ತರ: ಸರ್ವೆ ನಂ.16&17; ದಕ್ಷಿಣ: ಸರ್ವೆ ನಂ. 31/1	ಶ್ರೀಮತಿ. ಪುಟ್ಟಲಕ್ಷ್ಮಮ್ಮ ಕೋಂ. ಲೇಟ್ ಭೈರಣ್ಣ @ ಪೂಜಾರಿ ಭೈರಣ್ಣ
2	32/3	1ಎಕರೆ		ಪೂರ್ವ: ಸರ್ವೆ ನಂ.32/4, 32/14; ಪಶ್ಚಿಮ: ಸರ್ವೆ ನಂ.32/2	ಶ್ರೀ ಜಿ ಎನ್ ಶ್ರೀಕಂಠಯ್ಯ ಬಿನ್ ಲೇಟ್‌ನಂಜುಂಡಯ್ಯ
3	32/3	4 ಗುಂಟೆ	4 ಗುಂಟೆ	ಉತ್ತರ: ಸರ್ವೆ ನಂ.17; ದಕ್ಷಿಣ: ಸರ್ವೆ ನಂ.31/1	ಶ್ರೀಮತಿ ಮಾದಮ್ಮ ಕೋಂ. ಲೇಟ್ ಚೆನ್ನಿಗಪ್ಪ
4	32/4	37 ಗುಂಟೆ	12 ಗುಂಟೆ	ಪೂರ್ವ: ಸರ್ವೆ ನಂ. 32/5, 32/16, 32/17, 26; ಪಶ್ಚಿಮ: ಸರ್ವೆ ನಂ.32/3; ಉತ್ತರ: ಸರ್ವೆ ನಂ.17; ದಕ್ಷಿಣ: ಸರ್ವೆ ನಂ.32/14	ಶ್ರೀ ಜಿ ಎಸ್ ಚೇತನ್ ಬಿನ್ ಜಿ ಎನ್ ಶ್ರೀಕಂಠಯ್ಯ
5	32/15 (ಹಳೆ ಸರ್ವೆ ನಂ. 32/1B	39.08	2.04 ಗುಂಟೆ	ಪೂರ್ವ: ಸರ್ವೆ ನಂ.32/18, 32/1B; ಪಶ್ಚಿಮ: ಸರ್ವೆ ನಂ.33; ಉತ್ತರ: ಸರ್ವೆ ನಂ.16; ದಕ್ಷಿಣ: ಸರ್ವೆ ನಂ. 31/2	ಶ್ರೀ ಶಿವಣ್ಣ ಬಿನ್ ಲೇಟ್ ಈರಪ್ಪ @ ಈರಣ್ಣ
6	32/18 (ಹಳೆ ಸರ್ವೆ ನಂ. 32/15)	24.08	2.12 ಗುಂಟೆ	ಪೂರ್ವ: ಸರ್ವೆ ನಂ.32/1A1; ಪಶ್ಚಿಮ: ಸರ್ವೆ ನಂ.32/15; ಉತ್ತರ: ಸರ್ವೆ ನಂ.16; ದಕ್ಷಿಣ: ಸರ್ವೆ ನಂ.32/1B	ಶ್ರೀ ಸಿದ್ದರಾಜು ಬಿನ್ ಲೇಟ್ ಈರಪ್ಪ @ ಈರಣ್ಣ

ದಿನಾಂಕ: 11–09–2022

ಸಹಿ/– ಶಶಿಕಲಾ ಎ. ಎಸ್., ವಕೀಲರು
ನಂ. 97, 11ನೇ ಅಡ್ಡರಸ್ತೆ, ಪವಮಾನ ನಗರ, ಕೆಂಬತ್ತಹಳ್ಳಿ ಮುಖ್ಯರಸ್ತೆ, ಗೊಟ್ಟಿಗೆರೆ, ಬನ್ನೇರಘಟ್ಟ ರಸ್ತೆ, ಬೆಂಗಳೂರು–560083
ಮೊ ನಂ.: 7899788063 ಇ–ಮೇಲ್: shashi.llb@gmail.com

ಸ್ಥಾಪನೆ: 2009–10 | ದೂರವಾಣಿ: 080–23469678

ಮಾಧವನಗರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)

ಕ್ರ.ಸಂ. ಜೆ.ಆರ್.ಬಿ/ಆರ್.ಜಿ.ಎನ್/06/39181/2009
ಕೇಂದ್ರ ಕಛೇರಿ ನಂ. 14, 3ನೇ ಅಡ್ಡ ರಸ್ತೆ, ನೆಹರುನಗರ, ಶೇಷಾದ್ರಿಪುರಂ ಬೆಂಗಳೂರು–560 020

13ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಸಂಘದ 2021–22ನೇ ಸಾಲಿನ 13ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 18–09–2022ನೇ ಭಾನುವಾರ ಬೆಳಿಗ್ಗೆ 10:00 ಗಂಟೆಗೆ 'ಬಿ.ವಿ.ಎಸ್. ಸಂಘ' (ಬ್ರಾಹ್ಮಣ ವಿದ್ಯಾರ್ಥಿ ಸಹಾಯಕ ಸಂಘ) ಶೇಷಾದ್ರಿಪುರಂ ಕಾಲೇಜು ಹಿಂಬಾಗದ ರಸ್ತೆ, ನಂ.35, ಎನ್.ಎಸ್.ಐಯ್ಯಂಗಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020 ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ. ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಮಾನ್ಯ ಸದಸ್ಯರಲ್ಲಿ ವಿನಂತಿ.

ಸ್ಥಳ: ಬೆಂಗಳೂರು
ದಿನಾಂಕ: 11–09–2022

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
(ಗಜೇಂದ್ರ ಬಿ.) ಕಾರ್ಯದರ್ಶಿ

ನೈಋತ್ಯ ರೈಲ್ವೆ

ಅರ್ಜಿ ಪ್ರಕಟಣೆ ಸಂ. 565/ಎಸ್‌ಟಿಬಿಎ/09/2022

ಭಾರತದ ರಾಷ್ಟ್ರಪತಿಗಳ ಪರವಾಗಿ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು ವಿಭಾಗ, ನೈಋತ್ಯ ರೈಲ್ವೆ, ಬೆಂಗಳೂರು – 560023 ಇವರು ಕಮಿಷನ್ ಆಧಾರದ ಮೇಲೆ ಮೂರು ವರ್ಷಗಳ ಅವಧಿಗಾಗಿ ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಕೆಳಕಂಡ ರೈಲು ನಿಲ್ದಾಣಗಳಲ್ಲಿ ಕಾಯ್ದಿರಿಸಿಲ್ಲದ ಟಿಕೆಟ್ ವ್ಯವಸ್ಥೆಯ ಮೂಲಕ ಕಾಯ್ದಿರಿಸಿಲ್ಲದ / ಸಾಮಾನ್ಯ ಟಿಕೆಟ್‌ಗಳನ್ನು ನೀಡಲು ಸ್ಟೇಷನ್ ಟಿಕೆಟ್ ಬುಕ್ಕಿಂಗ್ ಏಜೆಂಟ್‌ಗಳ ನೇಮಕಾತಿಗಾಗಿ ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕ್ರ	ನಿಲ್ದಾಣದ ಹೆಸರು	ನಿಲ್ದಾಣದ ಕೋಡ್	ನಿಲ್ದಾಣದ ವರ್ಗ
1	ಬಿಡದಿ	ಬಿಐಡಿ	ಎನ್‌ಎಸ್‌ಜಿ – 5
2	ಹೀಳಲಿಗೆ	ಹೆಚ್‌ಎಲ್‌ಇ	ಎನ್‌ಎಸ್‌ಜಿ – 6
3	ರಾಜಾನುಕುಂಟೆ	ಆರ್‌ಎನ್‌ಎನ್	ಎನ್‌ಎಸ್‌ಜಿ – 6
4	ಶ್ರವಣಬೆಳಗೊಳ	ಎಸ್‌ಬಿಜಿಎ	ಎನ್‌ಎಸ್‌ಜಿ – 6
5	ಸಂಪಿಗೆ ರಸ್ತೆ	ಎಸ್‌ಪಿಜಿಆರ್	ಎನ್‌ಎಸ್‌ಜಿ – 6
6	ಚನ್ನಸಂದ್ರ	ಸಿಎಸ್‌ಡಿಆರ್	ಎನ್‌ಎಸ್‌ಜಿ – 6

ಅರ್ಜಿ ಫಾರಂ, ಅರ್ಹತಾ ಅಗತ್ಯತೆಗಳು ಮತ್ತು ಇತರ ವಿವರಗಳನ್ನು ವೆಬ್‌ಸೈಟ್ www.swr.indianrailways.gov.in ನಿಂದ ಡೌನ್‌ಲೋಡ್ ಮಾಡಬಹುದು.

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 12–10–2022 ರಂದು 10:00 ಗಂಟೆಗಳಿಂದ 15:00 ಗಂಟೆಗಳವರೆಗೆ. ಅರ್ಜಿಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 12–10–2022 ರಂದು 15.05 ಗಂಟೆ.

ಪಿಯುಬಿ/342/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 | ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

S.W.Railways sw_rly SWRRLY southwesternrailway SWRRLY

ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ ; ನಂ. 14, ಸೌತ್ ಎಂಡ್ ರೋಡ್, ಶೇಷಾದ್ರಿಪುರಂ, ಬೆಂಗಳೂರು - 560 020. ದೂರವಾಣಿ : 23562229

ಸರ್ವ ಸದಸ್ಯರ ಸಭೆ ನೋಟೀಸ್

ಬ್ಯಾಂಕಿನ 44ನೇ ವಾರ್ಷಿಕ ಸರ್ವ ಸದಸ್ಯರ 2021-22ನೇ ಸಾಲಿನ ಮಹಾಸಭೆಯನ್ನು ದಿನಾಂಕ : 18-09-2022 ರಂದು ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸರಿಯಾಗಿ ಬೆಂಗಳೂರು ಮಲ್ಲೇಶ್ವರಂನಲ್ಲಿರುವ ಶ್ರೀರಾಮ ಕಲ್ಯಾಣ ಮಂಟಪ, ತೆಂಗಿನ ಮರದ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003 ಇಲ್ಲಿ ನಡೆಸಲು ಏರ್ಪಾಡು ಮಾಡಲಾಗಿದೆ. ಈಗಾಗಲೇ ಮಾನ್ಯ ಸದಸ್ಯರುಗಳ ವಿಳಾಸಗಳಿಗೆ ಸಭೆಯ ಸೂಚನಾ ಪತ್ರವನ್ನು ಅಂಚೆ ಮೂಲಕ ಸಕಾಲದಲ್ಲಿ ಕಳುಹಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರ ಎಂದು ಪರಿಗಣಿಸಿ ಮಾನ್ಯ ನಿಯತ ಸದಸ್ಯರು (Regular Members) ಮಾತ್ರ ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಸಭೆಯಲ್ಲಿ ಭಾಗವಹಿಸಲು ಗುರುತಿನ ಚೀಟಿಯು ಕಡ್ಡಾಯವಾಗಿರುತ್ತದೆ. ಇದನ್ನು ಪಡೆಯದಿರುವ ಸದಸ್ಯರು ತಮ್ಮ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ನೀಡಿ ಗುರುತಿನ ಚೀಟಿಯನ್ನು ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

ಸ್ಥಳ : ಬೆಂಗಳೂರು
ದಿನಾಂಕ : 30-08-2022

ಸಹಿ/–
(ಯಮುನ .ಪಿ)
ಪ್ರಧಾನ ವ್ಯವಸ್ಥಾಪಕರು

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಪಿಎ/ಟಿಪಿ/ಭೂಉಬ/26/2022–23/1197 | ದಿನಾಂಕ: 08–09–2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಆನಂದರೆಡ್ಡಿ ಎಂ.ಜಿ. ಬಿನ್ ಎಂ. ಗಂಗಿರೆಡ್ಡಿ	ದೇವನಹಳ್ಳಿ	ಕಸಬಾ	ದಾಸರಹಳ್ಳಿ	47/3	1–12	ವ್ಯವಸಾಯ	ವಸತಿ
2		ದೇವನಹಳ್ಳಿ	ಕಸಬಾ	ದಾಸರಹಳ್ಳಿ	48/2	0–38.08	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ವಾಸಾಸಂಇ/ವಾ.ಪ್ರ/2169/ಅಡ್ವಟೋರ್/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ರಾಜ್ಯಪಾಲ ಥಾವರಚಂದ್ ಅಭಿಮತ • ಎನ್‌ಎಸ್‌ಎಸ್ ಪ್ರಶಸ್ತಿ ಪ್ರದಾನ

'ಉತ್ತಮ ವ್ಯಕ್ತಿತ್ವಕ್ಕೆ ಎನ್‌ಎಸ್‌ಎಸ್ ಸಹಕಾರಿ'

ಪ್ರಜಾವಾಣಿ ವಾರ್ತೆ

2020-21ನೇ ಸಾಲಿನ ರಾಜ್ಯ ಮಟ್ಟದ ಎನ್‌ಎಸ್‌ಎಸ್ ಪ್ರಶಸ್ತಿ ಪುರಸ್ಕೃತರೊಂದಿಗೆ ಥಾವರಚಂದ್ ಗೆಹಲೋತ್, ಕ್ರೀಡಾ ಇಲಾಖೆ ಆಯುಕ್ತ ಗೋಪಾಲಕೃಷ್ಣ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಲಿಂಗರಾಜು ಗಾಂಧಿ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗ ಮತ್ತಿತರರು ಇದ್ದಾರೆ.

ಬೆಂಗಳೂರು: 'ರಾಷ್ಟ್ರೀಯ ಸೇವಾ ಯೋಜನೆಗೆ (ಎನ್‌ಎಸ್‌ಎಸ್) ಸಮಾಜ ಬದಲಿಸುವ ಶಕ್ತಿ ಇದೆ. ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವುದರಲ್ಲಿ ಎನ್‌ಎಸ್‌ಎಸ್ ಪಾತ್ರ ಅಪಾರ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನೆ ಕೋಶ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯ ಎನ್‌ಎಸ್‌ಎಸ್ ಕೋಶ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ 2020-21ನೇ ಸಾಲಿನ ರಾಜ್ಯ ಮಟ್ಟದ ಎನ್‌ಎಸ್‌ಎಸ್ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

'ಎನ್‌ಎಸ್‌ಎಸ್ ಭಾರತದಾದ್ಯಂತ 40 ಲಕ್ಷಕ್ಕೂ ಹೆಚ್ಚು ಸ್ವಯಂಸೇವಕರನ್ನು ಹೊಂದಿರುವ, ವಿಶ್ವದ ಅತಿದೊಡ್ಡ ಯುವ ಸ್ವಯಂಸೇವಾ ಸಂಸ್ಥೆಗಳಲ್ಲಿ ಒಂದಾಗಿದೆ. ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ಈ ಘಟಕವನ್ನು ವಿಸ್ತರಿಸಲು ಬದ್ಧವಾಗಿದೆ. ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಸಮಾಜದ ಸೇವೆಯಲ್ಲಿ ಪಾಲ್ಗೊಂಡು, ಶಿಸ್ತು ಮತ್ತು ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕು' ಎಂದರು.

'ಎನ್‌ಎಸ್‌ಎಸ್ ಸ್ವಯಂಸೇವಕರು ರಾಜ್ಯದಲ್ಲಿ ಪ್ರಶಂಸನೀಯ ಕಾರ್ಯಗಳನ್ನು ಮಾಡಿದ್ದಾರೆ. ಈ ಸ್ವಯಂಸೇವಕರು ಶಿಕ್ಷಣ ಮತ್ತು ಸಾಕ್ಷರತೆ, ಆರೋಗ್ಯ, ನೈರ್ಮಲ್ಯ, ಪರಿಸರ ಸಂರಕ್ಷಣೆ ಮುಂತಾದ ಕಾರ್ಯಕ್ರಮಗಳಲ್ಲಿ ಗಮನಾರ್ಹ ಕೆಲಸ ಮಾಡಿದ್ದಾರೆ. ಕೋವಿಡ್ ಕಾಣಿಸಿಕೊಂಡಾಗ ಹಲವರಿಗೆ ನೆರವಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಕೆ.ಸಿ.ನಾರಾಯಣಗೌಡ, 'ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಮೂಲಕ ಎನ್‌ಎಸ್‌ಎಸ್ ಸ್ವಯಂಸೇವಕರಿಗೆ ಕೌನ್ಸೆಲಿಂಗ್ ತರಬೇತಿ ನೀಡಲಾಗುತ್ತದೆ. ರಾಜ್ಯದಲ್ಲಿ ಎನ್‌ಎಸ್‌ಎಸ್ ಮೂಲಕ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಮೃತ ಸಮುದಾಯ ಅಭಿವೃದ್ಧಿ ಯೋಜನೆಯ ಜವಾಬ್ದಾರಿಯನ್ನೂ ಎನ್‌ಎಸ್‌ಎಸ್‌ಗೆ ನೀಡಲಾಗಿದೆ. ಸಮಾಜದ ಏಳ್ಗೆಗೆ ಎನ್‌ಎಸ್‌ಎಸ್ ಕೊಡುಗೆ ದೊಡ್ಡದು' ಎಂದು ಹೇಳಿದರು.

'ದೇಶದಲ್ಲಿಯೇ ಮಾದರಿಯಾಗಿ ರಾಜ್ಯ ಎನ್‌ಎಸ್‌ಎಸ್ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರೀಯ ಸೇವಾ ಯೋಜನೆ ಸದ್ಯ ಐದು ಲಕ್ಷ ಸ್ವಯಂ ಸೇವಕರನ್ನು ಹೊಂದಿದ್ದು, ಈ ವರ್ಷ 10 ಲಕ್ಷಕ್ಕೆ ವಿಸ್ತರಿಸುವ ಗುರಿ ಹೊಂದಲಾಗಿದೆ. ಈ ಗುರಿಯನ್ನು ತಲುಪುವ ವಿಶ್ವಾಸವಿದೆ' ಎಂದು ತಿಳಿಸಿದರು.

'ಬೇರೆ ಕ್ಷೇತ್ರಕ್ಕೆ ಮತದಾರರ ವರ್ಗಾವಣೆ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಹುಳಿಮಾವು ವಾರ್ಡ್‌ನ ಬಡಾವಣೆಗಳ ಮತದಾರರನ್ನು ಪಕ್ಕದ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಸೇರ್ಪಡೆ ಮಾಡಲಾಗಿದೆ ಎಂದು ಶಾಸಕ ಸತೀಶ್ ರೆಡ್ಡಿ ಆರೋಪಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಹುಳಿಮಾವು ವಾರ್ಡ್‌ನ ಅಕ್ಷಯ ಗಾರ್ಡನ್, ಶಿರಡಿ ಸಾಯಿ ನಗರ, ಹಿರಾನಂದಿನಿ ಅಪಾರ್ಟ್‌ಮೆಂಟ್ ಮುಂತಾದ ಪ್ರದೇಶಗಳ ಸುಮಾರು 7,500 ಸಾವಿರ ಮತದಾರರ ಹೆಸರು ದಕ್ಷಿಣ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಕಂಡುಬಂದಿದೆ. ಇದು ಅಕ್ಷಮ್ಯ. ಅಧಿಕಾರಿಗಳ ನಿರ್ಲಕ್ಷ್ಯವೋ ಅಥವಾ ಅನ್ಯ ಉದ್ದೇಶವಿದೆಯೋ ತಿಳಿಯದು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಿವಾಸಿಗಳ ದೂರಿನ ಅನ್ವಯ ಬಿಬಿಎಂಪಿ, ಚುನಾವಣಾ ಆಯೋಗ ಹಾಗೂ ಜಿಲ್ಲಾಧಿಕಾರಿಗೆ ದೂರು ನೀಡಲಾಗಿದೆ. ಆದರೂ ಪರಿಷ್ಕೃತ ಮತದಾರರ ಪಟ್ಟಿಯನ್ನು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ವರ್ಗಾಯಿಸಿಲ್ಲ. ಈ ಸಂಬಂಧ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕೆಂದು ಹೈಕೋರ್ಟ್ ಮೊರೆ ಹೋಗಲಾಗಿದೆ ಎಂದರು.

ವಾರ್ಡ್ ಮರುವಿಂಗಡಣೆ ವೇಳೆ ವಿಧಾನಸಭಾ ಕ್ಷೇತ್ರದ ಗಡಿಗಳನ್ನು ಸರಿಯಾಗಿ ಗುರುತಿಸಲಾಗಿದೆಯಾದರೂ, ಮತದಾರರನ್ನು ಮಾತ್ರವೇ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಬೇಗೂರು ಮತ್ತು ಕಾಳೇನ ಅಗ್ರಹಾರ ವಾರ್ಡ್‌ಗಳಿಗೆ ವರ್ಗಾಯಿಸಿರುವುದು ಏಕೆ ಎಂದು ಪ್ರಶ್ನಿಸಿದರು.

'ಗಡಿರೇಖೆ ಸ್ಪಷ್ಟ, ಗೊಂದಲ ಇಲ್ಲ'

ವಿಧಾನಸಭಾ ಕ್ಷೇತ್ರದ ಗಡಿ ವಿಚಾರದಲ್ಲಿ ಯಾವುದೇ ತಕರಾರು ಇಲ್ಲ. ಈ ಹಿಂದೆ ಬೊಮ್ಮನಹಳ್ಳಿ ನಗರಸಭೆಗೆ ಸೇರ್ಪಡೆ ಆಗಿದ್ದ ಪ್ರದೇಶಗಳು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟಿವೆ.

ಬೇಗೂರು ಪಂಚಾಯಿತಿಗೆ ಒಳಪಟ್ಟಿದ್ದ ಪ್ರದೇಶಗಳು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟಿವೆ. 2008ರಿಂದಲೂ ಈ ಮತದಾರರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಮತ ಚಲಾಯಿಸುತ್ತಾ ಬರುತ್ತಿದ್ದಾರೆ. ಗಡಿರೇಖೆ ಸ್ಪಷ್ಟವಾಗಿದ್ದು, ಯಾವುದೇ ಗೊಂದಲವಿಲ್ಲ. ಆದರೆ, ಸತೀಶ್ ರೆಡ್ಡಿ ಅವರು ಈ ರೀತಿಯ ಹೇಳಿಕೆಗಳನ್ನು ನೀಡಿ ಜನರಲ್ಲಿ ಗೊಂದಲ ಸೃಷ್ಟಿಸುವುದು ಸರಿಯಲ್ಲ ಎಂದು ಶಾಸಕ ಎಂ.ಕೃಷ್ಣಪ್ಪ ಪ್ರತಿಕ್ರಿಯಿಸಿದರು.

ಚಿತ್ರಾವಳಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟ ಜಂಟಿಯಾಗಿ ನಗರದಲ್ಲಿ ಕನ್ನಡ ಜಾಗೃತಿ ಓಟವನ್ನು ಶನಿವಾರ ನಡೆಸಿದವು. ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಬಿಜೆಪಿ ಮುಖಂಡ ಕೆ.ಸಿ. ರಾಮಮೂರ್ತಿ, ಲಹರಿ ಆಡಿಯೋ ಸಂಸ್ಥೆ ಮಾಲೀಕ ಲಹರಿ ವೇಲು ಮತ್ತಿತರರು ಇದ್ದಾರೆ.

ಸಾಹಿತ್ಯಲೋಕ ಪಬ್ಲಿಕೇಷನ್ಸ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆಶಾ ರಘು ಅವರ 'ಆವರ್ತ' ಕಾದಂಬರಿ, 'ಪೂತನಿ ಮತ್ತಿತರ ನಾಟಕಗಳು' ಹಾಗೂ ದೀಪು ಶೆಟ್ಟಿ ದೊಡ್ಡಮನೆ ಅವರ 'ಆವರ್ತ ಮಂಥನ' ಕೃತಿ ಬಿಡುಗಡೆಯಾದವು. (ಎಡದಿಂದ ಬಲಕ್ಕೆ) ರಘುವೀರ ಸಮರ್ಥ, ಲೇಖಕ ದೀಪು ಶೆಟ್ಟಿ ದೊಡ್ಡಮನೆ, ರಂಗಕರ್ಮಿ ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಕವಿ ಬಿ.ಆರ್. ಲಕ್ಷ್ಮಣರಾವ್, ಲೇಖಕರಾದ ಎಚ್.ಎಸ್. ಸತ್ಯನಾರಾಯಣ ಹಾಗೂ ಆಶಾ ರಘು ಇದ್ದಾರೆ.

ಅನುದಾನ ನೀಡದ ರಾಜ್ಯ ಸರ್ಕಾರ; ಕಳೆದ ಐದು ತಿಂಗಳಿಂದ ಬಾರದ ವೇತನ

ಜಾನಪದ ಪರಿಷತ್ತು: ಸಂಬಳಕ್ಕೆ ಪರದಾಟ

• ಆರ್. ಜಿತೇಂದ್ರ

ರಾಮನಗರ: ಕರ್ನಾಟಕ ಜಾನಪದ ಪರಿಷತ್ತು ಸೇರಿದಂತೆ ರಾಜ್ಯದ ವಿವಿಧ ಸಂಘ–ಸಂಸ್ಥೆಗಳಿಗೆ ಈ ವರ್ಷ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನ ಸ್ಥಗಿತವಾಗಿದ್ದು, ಇಲ್ಲಿನ ಸಿಬ್ಬಂದಿ ವೇತನಕ್ಕೆ ಪರದಾಡುವಂತೆ ಆಗಿದೆ.

ರಾಮನಗರದ ಜಾನಪದ ಲೋಕ ಸೇರಿದಂತೆ ವಿವಿಧ ಸಂಸ್ಥೆಗಳಿಗೆ ಸರ್ಕಾರ ವಾರ್ಷಿಕ ಅನುದಾನ ನೀಡುತ್ತ ಬಂದಿದೆ. ಈ ಅನುದಾನದಲ್ಲಿಯೇ ಅಲ್ಲಿನ ಸಿಬ್ಬಂದಿಗೆ ಸಂಬಳ ಪಾವತಿಸಲಾಗುತ್ತಿದೆ. ಆದರೆ ಈ ಹಣಕಾಸು ವರ್ಷದಿಂದ ಎಚ್‌ಆರ್‌ಎಂಎಸ್ ಅಡಿ ಬರುವ ಅನುದಾನಿತ ಸಿಬ್ಬಂದಿಗೆ ಮಾತ್ರವೇ ಸಂಬಳ ನೀಡುವುದಾಗಿ ಸರ್ಕಾರ ಹೇಳಿದ್ದು, ವಾರ್ಷಿಕ ಅನುದಾನವನ್ನು ಕಡಿತ ಮಾಡಿದೆ. ಮತ್ತೊಂದೆಡೆ, ಖಾಲಿ ಇರುವ ಹುದ್ದೆಗಳ ಭರ್ತಿಗೆ ಮನಸ್ಸು ಮಾಡಿಲ್ಲ. ಅನುದಾನ ಕೇಳಿದರೆ ಆರ್ಥಿಕ ಸ್ವಾವಲಂಬನೆಯ ಪಾಠ ಹೇಳುತ್ತಿದೆ. ಕರ್ನಾಟಕ ವಿದ್ಯಾವರ್ಧಕ ಸಂಘ, ನೀನಾಸಂ ಮೊದಲಾದ ಸಂಸ್ಥೆಗಳಲ್ಲೂ ಇದೇ ಪರಿಸ್ಥಿತಿ ಇದೆ ಎನ್ನಲಾಗಿದೆ.

ಜಾನಪದ ಲೋಕದಲ್ಲಿನ ಜನಾಕರ್ಷಣೆಯ ಕಲಾಕೃತಿಗಳು

> **ಜಾನಪದ ಪರಿಷತ್ತಿನ 30 ಸಿಬ್ಬಂದಿಗೆ ಕಳೆದ ನಾಲ್ಕೈದು ತಿಂಗಳಿಂದ ಸಂಬಳ ಆಗಿಲ್ಲ. ಸರ್ಕಾರ ಅನುದಾನ ಕಡಿತ ಮಾಡಿದೆ. ಜಾನಪದ ಲೋಕದ ಆದಾಯವೂ ಕುಸಿದಿದೆ**
>
> **ನಂದಕುಮಾರ್ ಹೆಗಡೆ**
> ಆಡಳಿತಾಧಿಕಾರಿ, ಕರ್ನಾಟಕ ಜಾನಪದ ಪರಿಷತ್ತು

ಕರ್ನಾಟಕ ಜಾನಪದ ಪರಿಷತ್ತಿನ ಅಡಿಯಲ್ಲಿ 30ಕ್ಕೂ ಹೆಚ್ಚು ಸಿಬ್ಬಂದಿ ಇದ್ದಾರೆ. ಅವುಗಳಲ್ಲಿ ಕೇವಲ ಇಬ್ಬರು ಮಾತ್ರ ಸರ್ಕಾರದ ಅನುದಾನದ ಅಡಿ ಬರುತ್ತಾರೆ. ಉಳಿದ ಸಿಬ್ಬಂದಿಗೆ ಸರ್ಕಾರದ ವಾರ್ಷಿಕ ಅನುದಾನ ಹಾಗೂ ಜಾನಪದ ಲೋಕದ ಆದಾಯ ಬಳಸಿಕೊಂಡು ವೇತನ ಪಾವತಿಸಲಾಗುತ್ತಿದೆ. ಈ ಸಿಬ್ಬಂದಿ ಸಂಬಳಕ್ಕೆ ವರ್ಷಕ್ಕೆ ₹90 ಲಕ್ಷದಷ್ಟು ಹಣ ಬೇಕಿದೆ. ಕಳೆದ ನಾಲ್ಕೈದು ತಿಂಗಳಿಂದ ವೇತನ ಪಾವತಿ ಆಗದ ಕಾರಣಕ್ಕೆ ಜಾನಪದ ಲೋಕದ ಸಿಬ್ಬಂದಿ ಬದುಕು ಬೀದಿಗೆ ಬಿದ್ದಿದೆ.

ಮುಚ್ಚುವ ಆತಂಕ: ರಾಮನಗರದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾದ ಜಾನಪದ ಲೋಕವು ಬೆಂಗಳೂರು–ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ ಇದೆ. ಹೊಸ ಬೈಪಾಸ್ ರಸ್ತೆ ನಿರ್ಮಾಣವಾದ ಬಳಿಕ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿದ್ದು, ಪ್ರವೇಶ ಶುಲ್ಕ ಸಂಗ್ರಹವೂ ಕುಸಿದಿದೆ. ಜಾನಪದ ಲೋಕಕ್ಕೆ ಬರಬೇಕಾದ ಹೋಟೆಲ್ ಬಾಡಿಗೆ, ಮಳಿಗೆಗಳ ಬಾಡಿಗೆಯಲ್ಲೂ ಕುಸಿತವಾಗುವ ಸಾಧ್ಯತೆ ಇದೆ. ಇದೇ ಪರಿಸ್ಥಿತಿ ಮುಂದುವರಿದಲ್ಲಿ ಜಾನಪದ ಲೋಕ ಮುಚ್ಚುವ ಹಂತಕ್ಕೆ ಬಂದರೂ ಆಶ್ಚರ್ಯವಿಲ್ಲ ಎಂಬುದು ಇಲ್ಲಿನ ಸಿಬ್ಬಂದಿಯ ಆತಂಕವಾಗಿದೆ.

ಅನುವಾದ ಎರಡನೇ ದರ್ಜೆ ಸಾಹಿತ್ಯವಲ್ಲ: ಕೃಷ್ಣಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನುವಾದ ಎಂಬುದು ಎರಡನೇ ದರ್ಜೆಯ ಸಾಹಿತ್ಯ ಸೃಷ್ಟಿಯಲ್ಲ. ಮೂಲ ಲೇಖಕನಿಗೆ ಮೀರಿದ ಯಶಸ್ಸು ತಂದುಕೊಡುವ ಕಾರ್ಯ' ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ಜಾಲಮಂಗಲದ ಸಾಹಿತ್ಯ ಸಂಗಮ ಟ್ರಸ್ಟ್ ಹಾಗೂ ಕಿರಂ ಪ್ರಕಾಶನದ ವತಿಯಿಂದ ಬಾಲಗಂಗಾಧರನಾಥ ಸ್ವಾಮೀಜಿ ಬುಕ್ ಹೌಸ್‌ನಲ್ಲಿ ಏರ್ಪಡಿಸಿದ್ದ ಕರೀಗೌಡ ಬೀಚನಹಳ್ಳಿ ಅವರ ಭಾಷಾಂತರ ಕಥೆಗಳ ಸಂಕಲನ 'ಮಾಯಾಗನ್ನಡಿ' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

> **ಪುಸ್ತಕ ಪರಿಚಯ**
> **ಪುಸ್ತಕ:** ಮಾಯಾಗನ್ನಡಿ
> **ಲೇಖಕ:** ಕರೀಗೌಡ ಬೀಚನಹಳ್ಳಿ
> **ಪುಟಗಳು:** 584
> **ಬೆಲೆ:** ₹600
> **ಪ್ರಕಾಶಕರು:** ಅಜಂತ ಪ್ರಕಾಶನ

'ಭಾಷಾಂತರ ಎಂದರೆ ಬರಿಯ ಸಂಪರ್ಕ ಸಾಧನ ಅಷ್ಟೇ ಅಲ್ಲ. ಇನ್ನೊಂದು ಸಂಸ್ಕೃತಿಯನ್ನು ಒಳಹೊಕ್ಕು ನೋಡುವ ಬಗೆ. ಮೂಲ ಕೃತಿಗೆ ಕೊಂಚವೂ ಊನವಾಗದಂತೆ ಅನುವಾದ ಮಾಡಬೇಕಾಗುತ್ತದೆ. ಅದು ಸುಲಭದ ಕೆಲಸ ಅಲ್ಲ. ಬೀಚನಹಳ್ಳಿ ಕರೀಗೌಡ ಅವರು ನಿವೃತ್ತ ಜೀವನದಲ್ಲಿ ಕಾಲಹರಣ ಮಾಡದೆ ಸಾಹಿತ್ಯ ಕೃಷಿಯಲ್ಲಿ ತೊಡಗಿರುವುದು ಹೆಮ್ಮೆಯ ವಿಷಯ' ಎಂದರು.

ಕೃತಿ ಬಿಡುಗಡೆ ಮಾಡಿದ ವಿಜಯನಗರ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ, 'ವಿದ್ಯಾರ್ಥಿಗಳಲ್ಲಿ ಓದುವ ಅಭ್ಯಾಸ ಹೆಚ್ಚಿಸುವ ಕೆಲಸ ಮಾಡಬೇಕಿದೆ' ಎಂದರು.

ಕೃತಿಕಾರ ಕರೀಗೌಡ ಬೀಚನಹಳ್ಳಿ ಮಾತನಾಡಿ, '14 ವರ್ಷಗಳ ಕಾಲ ಭಾಷಾಂತರ ವಿಭಾಗದಲ್ಲಿ ಕೆಲಸ ಮಾಡಿದ್ದೇನೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಿದ ಎಲ್ಲಾ ಕಥೆಗಳನ್ನು 'ಮಾಯಾಗನ್ನಡಿ' ಹೆಸರಿನಲ್ಲಿ ಹೊರ ತಂದಿದ್ದೇನೆ' ಎಂದು ಹೇಳಿದರು.

ಡಾ.ಕರೀಗೌಡ ಬೀಚನಹಳ್ಳಿ ಅವರ 'ಮಾಯಾಗನ್ನಡಿ' ಪುಸ್ತಕವನ್ನು ಶಾಸಕ ಎಂ.ಕೃಷ್ಣಪ್ಪ ಬಿಡುಗಡೆ ಮಾಡಿದರು. ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, ಕರೀಗೌಡ ಬೀಚನಹಳ್ಳಿ, ಕುಸುಮಾ, ಸಾಹಿತ್ಯ ಸಂಗಮ ಟ್ರಸ್ಟ್ ಅಧ್ಯಕ್ಷ ಎಸ್. ನಾಗಭೂಷಣ ಇದ್ದರು

ಮಾಂಗಲ್ಯ ಕದ್ದಿದ್ದ ಆರೋಪಿ ಬಂಧನ

ಬೆಂಗಳೂರು: ಶ್ರೀರಾಮಪುರ ಠಾಣೆ ವ್ಯಾಪ್ತಿಯ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ದೇವಿಮೂರ್ತಿ ಮೇಲಿದ್ದ ಚಿನ್ನದ ಮಾಂಗಲ್ಯ ಕದ್ದಿದ್ದ ಆರೋಪಿ ಕಲ್ಲೇಶ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಮಂಡ್ಯದ ಕಲ್ಲೇಶ್, ಭಕ್ತರ ಸೋಗಿನಲ್ಲಿ ಕೃತ್ಯ ಎಸಗಿದ್ದ. ಕಳ್ಳತನ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲವರ ಬಳಿ ಸಾಲ ಮಾಡಿಕೊಂಡಿದ್ದ ಆರೋಪಿ, ಅದನ್ನು ತೀರಿಸಲಾಗದೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ. ಸಾಲಗಾರರ ಕಾಟ ಹೆಚ್ಚಾಗಿತ್ತು. ಸಾಲ ತೀರಿಸಲು ಹಣ ಹೊಂದಿಸಬೇಕೆಂದು ಆರೋಪಿ ಕಳ್ಳತನಕ್ಕೆ ಇಳಿದಿದ್ದ' ಎಂದು ತಿಳಿಸಿವೆ.

ಕರ್ನೂಲ್ ಅರಣ್ಯದಲ್ಲಿ ಕಳವು; ಹಕ್ಕಿ– ಪಿಕ್ಕಿ ಜನಾಂಗದ ನಾಲ್ವರ ಬಂಧನ

ಮಾರಾಟ ಜಾಲ: 1,132 ನಕ್ಷತ್ರ ಆಮೆಗಳ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯಗಳಲ್ಲಿ ದೊರೆಯುವ ನಕ್ಷತ್ರ ಆಮೆಗಳನ್ನು ಕದ್ದು ತಂದು ಮಹಾನಗರಗಳಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ಆರ್.ಎಂ.ಸಿ ಯಾರ್ಡ್ ಠಾಣೆ ಪೊಲೀಸರು ಭೇದಿಸಿದ್ದು, 1,132 ಆಮೆಗಳನ್ನು ರಕ್ಷಿಸಿದ್ದಾರೆ.

'ತುಮಕೂರು ರಸ್ತೆಯ ಗೊರಗುಂಟೆಪಾಳ್ಯ ಬಸ್ ತಂಗುದಾಣ ಬಳಿ ಇತ್ತೀಚೆಗೆ ಸುತ್ತಾಡುತ್ತಿದ್ದ ಆರೋಪಿಗಳು ಬ್ಯಾಗ್‌ಗಳಲ್ಲಿ ನಕ್ಷತ್ರ ಆಮೆಗಳನ್ನು ಇರಿಸಿಕೊಂಡು ಸಾರ್ವಜನಿಕರಿಗೆ ಮಾರಲು ಯತ್ನಿಸುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು. ಇವರ ವಿಚಾರಣೆಯಿಂದ ನಕ್ಷತ್ರ ಆಮೆಗಳ ಮಾರಾಟ ಜಾಲ ಪತ್ತೆಯಾಯಿತು' ಎಂದು ಪೊಲೀಸರು ಹೇಳಿದರು.

ಆರ್.ಎಂ.ಸಿ ಯಾರ್ಡ್ ಠಾಣೆ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ನಕ್ಷತ್ರ ಆಮೆ

'ಜಾಲದ ಆರೋಪಿಗಳಾದ ಕಲ್ಯಾಣ್, ಸಿಂಹಾದ್ರಿ, ಇಶಾಕ್ ಹಾಗೂ ರಾಜಪುತ್ರ ಎಂಬುವವರನ್ನು ಬಂಧಿಸಲಾಗಿದೆ. ಇವರಿಂದ ಜಪ್ತಿ ಮಾಡಿರುವ 1,132 ಆಮೆಗಳನ್ನು ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನದಲ್ಲಿರುವ ಸಂರಕ್ಷಣಾ ಕೇಂದ್ರದ ಸುಪರ್ದಿಗೆ ನೀಡಲಾಗಿದೆ. ಕೃತ್ಯದ ಸಂಬಂಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದರು.

ಅದೃಷ್ಟಕ್ಕೆಂದು ಆಮೆ ಖರೀದಿ: 'ನೀರಿನ ಅಗತ್ಯವಿಲ್ಲದೆ ಅರಣ್ಯದಲ್ಲಿ ಜೀವಿಸುವ ನಕ್ಷತ್ರ ಆಮೆಗಳಿಗೆ ಬೇಡಿಕೆ ಹೆಚ್ಚಿದೆ. ಇಂಥ ಆಮೆಗಳನ್ನು ಖರೀದಿಸುವ ಹಲವರು ತಮ್ಮ ಮನೆಗಳಲ್ಲಿ ಇಟ್ಟುಕೊಳ್ಳುತ್ತಾರೆ. ಕೆಲವರು ನಿತ್ಯವೂ ಪೂಜೆ ಮಾಡುತ್ತಾರೆ. ಇದರಿಂದ ಸಂಪತ್ತು ವೃದ್ಧಿಯಾಗುತ್ತದೆಂಬ ನಂಬಿಕೆ ಹಲವರಲ್ಲಿದೆ' ಎಂದು ಪೊಲೀಸರು ಹೇಳಿದರು.

'ಹಕ್ಕಿ–ಪಿಕ್ಕಿ ಜನಾಂಗದ ಆರೋಪಿಗಳು ನಕ್ಷತ್ರ ಆಮೆಗಳಿಗೆ ಬೇಡಿಕೆ ಇರುವುದನ್ನು ತಿಳಿದುಕೊಂಡಿದ್ದರು. ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಅದೋನಿ ಅರಣ್ಯ ಪ್ರದೇಶದಲ್ಲಿ ಓಡಾಡಿ, ನಕ್ಷತ್ರ ಆಮೆಗಳನ್ನು ಕದಿಯುತ್ತಿದ್ದರು. ಅವುಗಳನ್ನೇ ಬೆಂಗಳೂರು, ಮುಂಬೈ, ಚೆನ್ನೈ ಹಾಗೂ ಇತರೆ ನಗರಗಳಿಗೆ ತೆಗೆದುಕೊಂಡು ಹೋಗಿ ಮಾರುತ್ತಿದ್ದರು' ಎಂದೂ ತಿಳಿಸಿದರು.

ಆರೋಪಿ ಮನೆ ಮೇಲೆ ದಾಳಿ: 'ಗೊರಗುಂಟೆಪಾಳ್ಯ ಬಸ್ ತಂಗುದಾಣ ಬಳಿ ಬಂಧಿಸಲಾಗಿದ್ದ 3 ಆರೋಪಿಗಳ ಪೈಕಿ 960 ಆಮೆಗಳು ಸಿಕ್ಕಿದ್ದವು. ತನಿಖೆ ಮುಂದುವರಿಸಿ ನಾಲ್ಕನೇ ಆರೋಪಿ ಬಂಧಿಸಲಾಯಿತು. ಈತನ ಮನೆ ಮೇಲೆ ದಾಳಿ ನಡೆಸಿದಾಗ, 172 ಆಮೆಗಳು ಪತ್ತೆಯಾದವು' ಎಂದು ಹೇಳಿದರು.

14 ವರ್ಷದ ಬಾಲಕಿ ಮದುವೆ: ಆರೋಪಿ ಬಂಧನ

ಬೆಂಗಳೂರು: ಹಣದ ಆಮಿಷವೊಡ್ಡಿ 14 ವರ್ಷದ ಬಾಲಕಿಯನ್ನು ಮದುವೆಯಾಗಿದ್ದ ಆರೋಪದಡಿ ಗುರುಪ್ರಸಾದ್ (45) ಎಂಬಾತನನ್ನು ಯಲಹಂಕ ನ್ಯೂ ಟೌನ್ ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕಬೆಟ್ಟಹಳ್ಳಿ ನಿವಾಸಿ ಗುರುಪ್ರಸಾದ್, ಜೆಸಿಬಿ ಯಂತ್ರದ ಮಾಲೀಕ. ಬಾಲಕಿಯ ಕುಟುಂಬಕ್ಕೆ ಹಣದ ಆಮಿಷವೊಡ್ಡಿ ವಿವಾಹ ಮಾಡಿಕೊಂಡಿದ್ದ. ಆರೋಪಿಯನ್ನು ಬಂಧಿಸಿದ್ದು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

'ಯಲಹಂಕ ನ್ಯೂ ಟೌನ್ ಠಾಣೆ ವ್ಯಾಪ್ತಿಯಲ್ಲಿ ಬಾಲಕಿಯ ತಂದೆ–ತಾಯಿ ವಾಸವಿದ್ದಾರೆ. ಆರ್ಥಿಕವಾಗಿ ಹಿಂದುಳಿದಿರುವ ದಂಪತಿಗೆ ಬಾಲಕಿ ಸೇರಿ ಮೂವರು ಹೆಣ್ಣುಮಕ್ಕಳಿದ್ದಾರೆ' ಎಂದು ತಿಳಿಸಿದರು.

ಮದುವೆ ಖರ್ಚಿಗೆಂದು ₹ 15 ಸಾವಿರ ನೀಡಿದ್ದ: 'ವಿವಾಹಿತನಾಗಿದ್ದ ಗುರುಪ್ರಸಾದ್ 20 ವರ್ಷಗಳ ಹಿಂದೆಯೇ ಪತ್ನಿಯಿಂದ ದೂರವಾಗಿದ್ದ. ಈತನಿಗೆ 17 ವರ್ಷದ ಮಗನಿದ್ದಾನೆ. ಬಾಲಕಿ ಕುಟುಂಬದ ಬಡತನ ತಿಳಿದುಕೊಂಡಿದ್ದ ಆರೋಪಿ, ಹಣ ನೀಡುವುದಾಗಿ ಹೇಳಿ ಮದುವೆ ಮಾಡಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

'ಬಾಲಕಿ ಮದುವೆಗೆ ಪೋಷಕರು ಆರಂಭದಲ್ಲಿ ಒಪ್ಪಿಗೆ ನೀಡಿರಲಿಲ್ಲ. ಹಲವು ಬಾರಿ ಪೋಷಕರ ಜೊತೆ ಮಾತುಕತೆ ನಡೆಸಿದ್ದ ಆರೋಪಿ, ಅಂತಿಮವಾಗಿ ಮದುವೆಗೆ ಒಪ್ಪಿಸಿದ್ದ. ಮದುವೆ ಖರ್ಚಿಗೆಂದು ₹ 15 ಸಾವಿರ ನೀಡಿದ್ದ. ಸೆ. 7ರಂದು ದೇವಸ್ಥಾನವೊಂದರಲ್ಲಿ ಬಾಲಕಿಯನ್ನು ಮದುವೆಯಾಗಿದ್ದ' ಎಂದು ಅವರು ತಿಳಿಸಿದರು.

MBBS

Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB
Satisfies all requirements of NMC of India

UNIVERSITY - Founded in 1920, 102 years old, Smolensk is 380 km west of Moscow, Very high standards of education, strict disciplinary system. **1650** Indian students (**650** Girls) studying, **183** got degree in **2022,** English Medium in all years, Closed type campus system, **8** attached hospitals (**6000** Beds).
MCI SCREENING TEST – Our graduates of **2008** to **2021** have given **BEST** results among graduates of all foreign medical colleges (Official web sites of Indian Embassy, Moscow and NBE conducting Screening Test confirm this).
SPECIAL HOSTELS ONLY FOR INDIAN STUDENTS WITH INDIAN MESS
Fee (Tuition+Hostel+Med.Ins.) – **USD 6000** (Approx. Rs. 4,80,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.
Scholarship to all Indian students.
Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
Official web site: www.sgmu.info
DM us on insta: @sgmu.info
Admission details: admission.sgmu.live
INFORMATION CENTERS (Parents of Students or Our Graduates):
Bangalore & Manglore: Mrs. Sudha Kamath - 9740622038
Hubli-Dharwad & Belgavi: Dr. Suchita Halli - 9916187559
Gulbarga & Yadgir: Mr. Chowdhry – 9886813741

ಬಿಇಎಂಎಲ್ ನಿವೃತ್ತ ವ್ಯವಸ್ಥಾಪಕ ಅನುಮಾನಾಸ್ಪದ ಸಾವು

ಬೆಂಗಳೂರು: ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್‌ನ (ಬಿಇಎಂಎಲ್) ನಿವೃತ್ತ ಹಿರಿಯ ವ್ಯವಸ್ಥಾಪಕ ಎಸ್. ಮಹಾದೇವಯ್ಯ (85) ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಕೊಲೆ ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

'ರಾಜರಾಜೇಶ್ವರಿನಗರದ ಬಿಇಎಂಎಲ್ 5ನೇ ಹಂತದ ನಿವಾಸಿ ಮಹಾದೇವಯ್ಯ, ಬಿಇಎಂಎಲ್‌ನಿಂದ 15 ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಬಳಿಕ, ಒಂಟಿಯಾಗಿ ವಾಸವಿದ್ದರು. ಪತ್ನಿ ಹಾಗೂ ಕುಟುಂಬಸ್ಥರು ಪ್ರತ್ಯೇಕವಾಗಿ ನೆಲೆಸಿದ್ದರು' ಎಂದು ಪೊಲೀಸರು ಹೇಳಿದರು.

'ಮಹಾದೇವಯ್ಯ ಅವರು ಸೆ. 7ರಂದು ಮನೆಯಿಂದ ಹೊರಗಡೆ ಬಂದಿರಲಿಲ್ಲ. ಅನುಮಾನಗೊಂಡ ಸ್ಥಳೀಯರು ಮನೆ ಬಳಿ ಹೋಗಿ ನೋಡಿದಾಗ ಮೃತದೇಹ ಕಂಡಿತ್ತು. ಮಹಿಳೆಯೊಬ್ಬರು ಮಹಾದೇವಯ್ಯ ಅವರ ಪತ್ನಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಪತ್ನಿ ಮನೆಗೆ ಬಂದು ನೋಡಿದಾಗ ಮೃತಪಟ್ಟಿದ್ದು ಖಾತ್ರಿಯಾಗಿತ್ತು' ಎಂದು ತಿಳಿಸಿದರು.

ಚಿನ್ನಾಭರಣ ದೋಚಿರುವ ಆರೋಪ: 'ಮಹಾದೇವಯ್ಯ ಅವರ ಸಾವಿನ ಬಗ್ಗೆ ದೂರು ನೀಡಿರುವ ಪತ್ನಿ, 'ಚಿನ್ನಾಭರಣ ಹಾಗೂ ನಗದು ದೋಚುವುದಕ್ಕಾಗಿ ಯಾರೋ ದುಷ್ಕರ್ಮಿಗಳು ಪತಿಯನ್ನು ಕೊಲೆ ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಮಹಾದೇವಯ್ಯ

'ಮಹಾದೇವಯ್ಯ ಮನೆಯಲ್ಲಿದ್ದ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸ್ಥಳ ಪರಿಶೀಲನೆ ನಡೆಸಿ ಮಾಹಿತಿ ಕಲೆಹಾಕಲಾಗಿದೆ. ಮೃತ ದೇಹದ ಹೊರಭಾಗದಲ್ಲಿ ಗಾಯಗಳು ಕಂಡುಬಂದಿಲ್ಲ. ಮೃತದೇಹದ ಮರಣೋತ್ತರ ಪರೀಕ್ಷೆ ಮಾಡಿಸಲಾಗಿದ್ದು, ವರದಿ ಬರಬೇಕಿದೆ' ಎಂದು ತಿಳಿಸಿದರು.'

ಒಂಟಿಯಾಗಿ ವಾಸವಿದ್ದ ಮಹಾದೇವಯ್ಯ ಅವರ ಚಲನವಲನದ ಬಗ್ಗೆ ತಿಳಿದುಕೊಂಡು, ದುಷ್ಕರ್ಮಿಗಳು ಕೃತ್ಯ ಎಸಗಿರುವ ಅನುಮಾನವಿದೆ. ಜೊತೆಗೆ, ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆಯೂ ಇದೆ. ತನಿಖೆ ಮುಂದುವರಿಸಲಾಗಿದೆ' ಎಂದರು.

ರಾಜ್ಯಸಭೆಗೆ ಗುಲಾಂ ಅಲಿ ನಾಮನಿರ್ದೇಶನ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಗುರ್ಜಾರ್ ಮುಸ್ಲಿಂ ಸಮುದಾಯದ ಗುಲಾಂ ಅಲಿ ಅವರನ್ನು ರಾಜ್ಯಸಭೆಗೆ ಶನಿವಾರ ನಾಮನಿರ್ದೇಶನ ಮಾಡಲಾಗಿದೆ.

ಮೊದಲ ಬಾರಿಗೆ ಕಾಶ್ಮೀರದಿಂದ ಗುರ್ಜಾರ್ ಮುಸ್ಲಿಮರನ್ನು ಕೇಂದ್ರ ಸರ್ಕಾರ ಮೇಲ್ಮನೆಗೆ ನಾಮನಿರ್ದೇಶನ ಮಾಡಿದೆ.

> **ಪಿವಿ ಬ್ರ್ಯಾಂಡ್ ಸ್ಪಾಟ್**
> ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಹೈದರಾಬಾದ್ ರೇಸ್

ಥಿಯಾನ್ ಗೆಲ್ಲುವ ನಿರೀಕ್ಷೆ

ಪ್ರೆಸಿಡೆಂಟ್ ಆಫ್ ಇಂಡಿಯಾ ಗೋಲ್ಡ್ ಕಪ್ (ಗ್ರೇಡ್-2) ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಥಿಯಾನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕ್ಯಾಶ್ ರೆಜಿಸ್ಟರ್ 4, ಓಕೆ ಬಾಸ್ 1, ರಿಡೀಮ್ ಅವರ್ ಪ್ಲೆಡ್ಜ್ 7
2ನೇ ರೇಸ್: ವಾಯ್ಸ್ ಆಫ್ ಎ ಡ್ರೀಮ್ 10, ಹೀರೋ ಆಫ್ ದಿ ಈಸ್ಟ್ 3, ಸರ್ಜೆಯಂಟ್ ರೆಕ್‌ಲೆಸ್ 5
3ನೇ ರೇಸ್: ಅಮಲ್‌ಫಿಟಾನಾ 5, ಕ್ವೀನ್ ಬ್ಲಾಸಮ್ 2, ಎನ್ ಆರ್ ಐ ರೂಬಿ 3
4ನೇ ರೇಸ್: ಥಿಯಾನ್ 1, ಪಿಸ್ಸಾರೋ 2
5ನೇ ರೇಸ್: ಸ್ಟ್ಯಾಗ್ಸ್ ಪೀಪ್ 4, ಲಾರಸ್ 3, ಕಾರ್ಲಿಸಲ್ 1
6ನೇ ರೇಸ್: ಯೇಲ್‌ಟೌನ್ 15, ಡೈಯಾನೂಶ್ 10, ಸ್ಟಾರ್ ಮೆಡಲ್ 8

ಉತ್ತಮ ಬೆಟ್: ಕ್ಯಾಶ್ ರೆಜಿಸ್ಟರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
1,2,3,4,5,6	1,2,3	4,5,6

'ಪ್ರಸ್ತುತ ಭಯವೇ ಧರ್ಮದ ಮೂಲವಯ್ಯ ವಾತಾವರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದಲ್ಲಿ ದಯವೇ ಧರ್ಮದ ಮೂಲವಯ್ಯ ಎಂಬ ಮಾತು ಇತ್ತು. ಪ್ರಸ್ತುತ ಭಯವೇ ಧರ್ಮದ ಮೂಲವಯ್ಯ ಎಂಬ ವಾತಾವರಣ ನಿರ್ಮಾಣವಾಗಿದೆ' ಎಂದು ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ನಟರಾಜ್ ಹುಳಿಯಾರ್ ಅವರು ಹೇಳಿದರು.

ಅಹಮ್ಮದೀಯ ಮುಸ್ಲಿಂ ಸಮುದಾಯದ ವತಿಯಿಂದ ಶನಿವಾರ ಆಯೋಜಿಸಿದ್ದ 'ಸ್ಥಿರ ಶಾಂತಿ ಸ್ಥಾಪಿಸುವ ಮೂಲತತ್ವಗಳು' ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಟಿಪ್ಪು ಸುಲ್ತಾನ್ ಜಾರಿಗೆ ತಂದ ಕಂದಾಯ ಪದ್ಧತಿ, ಇತರ ಸುಧಾರಣೆ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳೋಣ. ಅವರ ಮೂರ್ತಿ ನಾಶ ವೈಖರಿ ವಿರೋಧಿಸೋಣ' ಎಂದು ಹೇಳಿದರು.

'ಲೋಹಿಯಾ ಅವರು ಹೇಳಿರುವಂತೆ ಕೇಡಿನ ಜೊತೆ ಅಲ್ಪಕಾಲ ಸಂಬಂಧ ಹೊಂದಿರಬೇಕು, ಶಾಂತಿಯ ಜೊತೆ ದೀರ್ಘಕಾಲಿನ ಸಂಬಂಧ ಹೊಂದಿರಬೇಕು' ಎಂದರು.

ಅಹಮ್ಮದೀಯ ಮುಸ್ಲಿಂ ಸಮುದಾಯದ ಕೆ.ಕೆ. ಬದ್ರುದ್ದೀನ್ ಮಾತನಾಡಿ, 'ಕುರಾನಿನ ಯಾವುದೇ ಅಧ್ಯಾಯದಲ್ಲಿ ಹಿಂಸೆ, ಖಡ್ಗ ಕತ್ತಿಯ ಸಂಸ್ಕೃತಿಯನ್ನು ಹೇಳಿಲ್ಲ. ಇಸ್ಲಾಮಿಕ್ ಅಂತರ್ಗತದಲ್ಲಿ ಅಡಗಿರುವ ಶಾಂತಿ, ಕರುಣಾಮಯಿ ಬದುಕಿನ ಬಗ್ಗೆ ಹೇಳಿದೆ. ವಿಶ್ವದಲ್ಲಿ ಯಾವಾಗ ಶಾಂತಿ ಸ್ಥಾಪನೆ ಆಗುವುದಿಲ್ಲವೋ ಅಲ್ಲಿಯವರೆಗೂ ಶಾಂತಿಯುತ ಬದುಕು ಕಾಣಲು ಸಾಧ್ಯವಿಲ್ಲ. ಧರ್ಮಗಳ ನಡುವೆ ಇಟ್ಟಿಗೆಯಿಂದ ಕಟ್ಟಿದ ಗೋಡೆಯ ರೀತಿ ಕಟ್ಟುಪಾಡು ಇರಬಾರದು' ಎಂದರು.

ವಿಧಾನ ಪರಿಷತ್ ಸದಸ್ಯ ನಜೀರ್ ಅಹ್ಮದ್ ಮಾತನಾಡಿ, 'ಕೋಮುಗಳ ಮಧ್ಯೆ ನಡೆಯುವ ಸಂಘರ್ಷದಿಂದ ನಾವು ಅನುಭವಿಸುವ ಯಾತನೆ ಅಷ್ಟಿಷ್ಟಲ್ಲ. ಕರ್ಫ್ಯೂನಂಥ ನಿಬಂಧನೆಗಳಿಂದ ಕುಟುಂಬಗಳು ಅನುಭವವಿಸುವ ನೋವು ಯಾರಿಗೂ ಬೇಕಿಲ್ಲ' ಎಂದು ಹೇಳಿದರು.

ಅಹಮ್ಮದೀಯ ಮುಸ್ಲಿಂ ಯೂತ್ ಅಸೋಸಿಯೇಷನ್ ಅಧ್ಯಕ್ಷ ತಾರಿಖ್ ಅಹಮದ್, ಪತ್ರಕರ್ತೆ ಅನೂಷ ರವಿ ಸೂದ್, ಜಕ್ಕೂರು ಅಹ್ಮದೀಯ ಮುಸ್ಲಿಂ ಸಮುದಾಯದ ಅಧ್ಯಕ್ಷ ಮಹ್ಮದ್ ಇರ್ಫಾನ್ ಸೇರಿ ವಿವಿಧ ಸಮುದಾಯಗಳ ಪ್ರಮುಖರು ಇದ್ದರು.

ಕೈ ನಾಯಕರ ಬಣ್ಣ ಬಯಲು ಬೊಮ್ಮಾಯಿ ಗುಡುಗು

ಜನಸ್ಪಂದನ ಸಮಾವೇಶದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಬ್ಬರ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರಘುನಾಥಪುರ(ದೊಡ್ಡಬಳ್ಳಾಪುರ): 'ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿತ್ತು. ಕೆಲಸ ಮಾಡದೇ ಬಿಲ್ ಮಾಡಿದ ಹಗರಣಗಳೂ ನಡೆದಿವೆ. ಸಿದ್ದರಾಮಯ್ಯ ಅವರದ್ದು ಶೇ 100ರ ಕಮಿಷನ್ ಸರ್ಕಾರವಾಗಿತ್ತು. ಕೆಲವೇ ದಿನಗಳಲ್ಲಿ ಇವರ ಬಣ್ಣ ಬಯಲು ಮಾಡುವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ವತಿಯಿಂದ ಶನಿವಾರ ಆಯೋಜಿಸಿದ್ದ ಜನಸ್ಪಂದನ ಸಮಾವೇಶದಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಮಾತೆತ್ತಿದರೆ ಅನ್ನಭಾಗ್ಯದ ಅಕ್ಕಿ ಕೊಟ್ಟದ್ದು ತಾನೇ ಎಂದು ಹೇಳಿಕೊಳ್ಳುತ್ತಾರೆ. ಅನ್ನಭಾಗ್ಯದ ಅಕ್ಕಿಯಲ್ಲೂ ಅವ್ಯವಹಾರ ನಡೆದಿತ್ತು. ಅಕ್ರಮದ ಕುರಿತು ತನಿಖೆ ನಡೆಸಿದ್ದ ಐಎಎಸ್ ಅಧಿಕಾರಿ ಅನುರಾಗ್ ತಿವಾರಿ ನಿಗೂಢವಾಗಿ ಉತ್ತರಪ್ರದೇಶದಲ್ಲಿ ಮೃತಪಟ್ಟರು. ಇದು ಸ್ವಚ್ಛ ಆಡಳಿತದ ಪರಿಯೆ' ಎಂದು ಪ್ರಶ್ನಿಸಿದರು.

ಅನ್ನಭಾಗ್ಯದ ಅಕ್ಕಿ ಪೂರೈಸಿದ್ದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ. ಅದಕ್ಕೆ ಚೀಲವನ್ನಷ್ಟೇ ಒದಗಿಸಿದ್ದು ಸಿದ್ದರಾಮಯ್ಯ ಸರ್ಕಾರ. ಮೊದಲು ಪ್ರತಿ ಕೆ.ಜಿ. ₹ 3ರ ದರದಲ್ಲಿ 30 ಕೆ.ಜಿವರೆಗೂ ಅಕ್ಕಿ ವಿತರಿಸಲಾಗುತ್ತಿತ್ತು. ಅದನ್ನು 7 ಕೆ.ಜಿ.ಗೆ ಇಳಿಸಿ, ಬಳಿಕ 4 ಕೆ.ಜಿ.ಗೆ ತಂದವರು ಸಿದ್ದರಾಮಯ್ಯ. ಚುನಾವಣೆ ಹೊಸ್ತಿಲಲ್ಲಿ ರಾಜಕೀಯ ಲಾಭಕ್ಕಾಗಿ ಹೆಚ್ಚಿಸಿದರು ಎಂದು ಟೀಕಿಸಿದರು.

ಅವರ ಅವಧಿಯಲ್ಲಿ ಮರಳು ಗಣಿಗಾರಿಕೆ ದೊಡ್ಡ ದಂಧೆಯ ರೂಪ ಪಡೆದಿತ್ತು. ಸಚಿವರ ಮಗನೇ ಅಕ್ರಮದಲ್ಲಿ ಶಾಮೀಲಾಗಿದ್ದ ಆರೋಪದಡಿ ಲೋಕಾಯುಕ್ತರಿಗೆ ದೂರು ಕೂಡ ಹೋಗಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಜಮೀನಿಗೆ ನೀರೊದಗಿಸುವ ನೆಪದಲ್ಲಿ 36,000 ಕೊಳವೆ ಬಾವಿಗಳನ್ನು ಕೊರೆಯಲು ಒಂದೇ ದಿನ ಮಂಜೂರಾತಿ ನೀಡಲಾಗಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳ ಹಾಸ್ಟೆಲ್‌ಗಳಿಗೆ ಹಾಸಿಗೆ, ದಿಂಬು ಪೂರೈಕೆಯಲ್ಲೂ ಹಣ ಲೂಟಿ ಮಾಡಿದ್ದರು ಎಂದು ವಾಗ್ದಾಳಿ ನಡೆಸಿದರು.

ಶೇ 100ರ ಭ್ರಷ್ಟಾಚಾರ: 'ಸಿದ್ದರಾಮಯ್ಯ ಸರ್ಕಾರದಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಕಾಮಗಾರಿ ನಡೆಸದೇ ₹ 40 ಕೋಟಿ ಬಿಲ್ ಮಾಡಿದ್ದರು. ಅದು ಶೇ 100ರಷ್ಟು ಭ್ರಷ್ಟಾಚಾರದ ಸರ್ಕಾರವಾಗಿತ್ತು. ಅಕ್ರಮದಲ್ಲಿ ಶಾಮೀಲಾಗಿದ್ದ ಕೆಲವು ಅಧಿಕಾರಿಗಳನ್ನು ಅಮಾನತು ಮಾಡಲಾಗಿತ್ತು' ಎಂದು ಹಳೆಯ ಪ್ರಕರಣ ಕೆದಕಿದರು.

'ಅವರ ಅವಧಿಯಲ್ಲೂ ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿತ್ತು. ಎಫ್‌ಐಆರ್ ದಾಖಲಾಗಿ, ತನಿಖೆಯೂ ನಡೆದಿತ್ತು. ಅಕ್ರಮದಲ್ಲಿ ಭಾಗಿಯಾಗಿದ್ದ ಡಿಐಜಿ ದರ್ಜೆಯ ಐಪಿಎಸ್ ಅಧಿಕಾರಿ ವಿರುದ್ಧ ಕ್ರಮವನ್ನೇ ಜರುಗಿಸಿರಲಿಲ್ಲ. ನಮ್ಮ ಸರ್ಕಾರ ಬಂದ ಬಳಿಕ ಆರೋಪಪಟ್ಟಿ ಸಲ್ಲಿಸಿದ್ದೇವೆ. ನಮ್ಮ ಅವಧಿಯಲ್ಲಿ ಅಕ್ರಮ ಪತ್ತೆಯಾಗುತ್ತಿದ್ದಂತೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ವಿರುದ್ಧವೂ ಕ್ರಮ ಜರುಗಿಸಿದ್ದೇವೆ. ಈ ವಿಚಾರದಲ್ಲಿ ಮಾತನಾಡಲು ಅವರಿಗೆ ಯಾವ ನೈತಿಕತೆ ಇದೆ' ಎಂದು ಕೇಳಿದರು.

'ನರಕಕ್ಕೆ ತಳ್ಳುತ್ತಿದ್ದರು': ಕೋವಿಡ್ ಸಾಂಕ್ರಾಮಿಕ ಎದುರಿಸಲು ಕಾಂಗ್ರೆಸ್ ಆಡಳಿತದ ರಾಜ್ಯಗಳು ವಿಫಲವಾದವು. ಅಲ್ಲಿ ಸಾವಿನ ಸಂಖ್ಯೆ ಹೆಚ್ಚಾಗಿತ್ತು. ಆದರೆ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಈ ಸಂಕಷ್ಟವನ್ನು ಯಶಸ್ವಿಯಾಗಿ ಎದುರಿಸಿದೆ. ಜನರ ಪ್ರಾಣ ಉಳಿಸಿದ್ದು ಬಿಜೆಪಿ ಸರ್ಕಾರ. ಕಾಂಗ್ರೆಸ್ ಸರ್ಕಾರ ಇದ್ದಿದ್ದರೆ ಜನರನ್ನು ನರಕಕ್ಕೆ ತಳ್ಳುತ್ತಿತ್ತು ಎಂದರು. ❖

'ಬೈರಗೊಂಡ್ಲುವಿಗೆ ಈ ವರ್ಷವೇ ನೀರು'

'ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಕಾಮಗಾರಿಗೆ ವೇಗ ನೀಡಲಾಗಿದೆ. ಬೈರಗೊಂಡ್ಲು ಜಲಾಶಯಕ್ಕೆ ಈ ವರ್ಷವೇ ನೀರು ಹರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

'ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾನು ಜಲ ಸಂಪನ್ಮೂಲ ಸಚಿವನಾಗಿದ್ದಾಗ ಎತ್ತಿನಹೊಳೆ ಯೋಜನೆ ರೂಪಿಸಲಾಯಿತು. ಎತ್ತಿನಹೊಳೆ ಎಲ್ಲಿದೆ ಎಂಬುದೇ ಕಾಂಗ್ರೆಸ್‌ನವರಿಗೆ ಗೊತ್ತಿರಲಿಲ್ಲ. ಅಲ್ಲಿಂದ ನೀರು ಹರಿಯುವುದೂ ಇಲ್ಲ ಎಂದು ಅನುಮಾನ ವ್ಯಕ್ತಪಡಿಸಿದ್ದರು. ಈಗ ಯೋಜನೆಯನ್ನು ತಾವೇ ರೂಪಿಸಿದವರು, ಅನುಷ್ಠಾನಕ್ಕೆ ತಂದವರು ಎಂದು ಹೇಳಿಕೊಳ್ಳುತ್ತಿದ್ದಾರೆ' ಎಂದರು.

'ಈ ವರ್ಷ ಎತ್ತಿನಹೊಳೆ ಯೋಜನೆಗೆ ₹ 3,000 ಕೋಟಿ ಅನುದಾನ ಒದಗಿಸಲಾಗಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಫೀಡರ್ ಕಾಲುವೆಗಳ ಕಾಮಗಾರಿಗಳನ್ನು ವರ್ಷಾಂತ್ಯದೊಳಗೆ ಆರಂಭಿಸಲಾಗುವುದು. ಬೈರಗೊಂಡ್ಲು ಜಲಾಶಯಕ್ಕೆ ನಮ್ಮ ಸರ್ಕಾರವೇ ನೀರು ಹರಿಸಲಿದೆ' ಎಂದು ಹೇಳಿದರು. ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಪಟ್ಟಣಗಳನ್ನು ಬೆಂಗಳೂರಿನ ಉಪ ನಗರಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು ಎಂದರು.

ಪ್ರವೀಣ್ ನೆಟ್ಟಾರು ಕುಟುಂಬಕ್ಕೆ ಉದ್ಯೋಗ

ಪ್ರವೀಣ್ ನೆಟ್ಟಾರು

ದೊಡ್ಡಬಳ್ಳಾಪುರ : ಇತ್ತೀಚೆಗೆ ಕೊಲೆಯಾದ ಬಿಜೆಪಿ ಯುವ ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಮುಖಂಡ ಪ್ರವೀಣ್ ನೆಟ್ಟಾರು ಕುಟುಂಬದ ಸದಸ್ಯರೊಬ್ಬರಿಗೆ ತಮ್ಮ ಸಚಿವಾಲಯದಲ್ಲೇ ಉದ್ಯೋಗ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಜುಲೈ 26ರಂದು ಪ್ರವೀಣ್ ಕೊಲೆ ನಡೆದಿತ್ತು. ಬೊಮ್ಮಾಯಿ ಅವರ ಸರ್ಕಾರ ವರ್ಷ ಪೂರೈಸಿದ ಪ್ರಯುಕ್ತ ಜುಲೈ 27ರಂದು ಜನೋತ್ಸವದ ಹೆಸರಿನಲ್ಲಿ ದೊಡ್ಡಬಳ್ಳಾಪುರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪಕ್ಷದ ಕಾರ್ಯಕರ್ತರ ತೀವ್ರ ವಿರೋಧದ ಕಾರಣದಿಂದ ಕಾರ್ಯಕ್ರಮ ರದ್ದಾಗಿತ್ತು. ಪ್ರವೀಣ್ ಕುಟುಂಬಕ್ಕೆ ಉದ್ಯೋಗ ನೀಡುವುದಾಗಿ ಘೋಷಿಸುವ ಮೂಲಕ ಕಾರ್ಯಕರ್ತರ ಸಿಟ್ಟು ಶಮನಗೊಳಿಸುವ ಪ್ರಯತ್ನವನ್ನು ಮುಖ್ಯಮಂತ್ರಿ ಮಾಡಿದರು.

ಕತ್ತಿ, ಪ್ರವೀಣ್‌ಗೆ ಶ್ರದ್ಧಾಂಜಲಿ

ಇತ್ತೀಚೆಗೆ ನಿಧನರಾದ ಸಚಿವ ಉಮೇಶ್ ಕತ್ತಿ ಮತ್ತು ಪಕ್ಷದ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಅವರಿಗೆ ಜನಸ್ಪಂದನ ಸಮಾವೇಶದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ವೇದಿಕೆಯಲ್ಲಿ ಇಬ್ಬರ ಭಾವಚಿತ್ರಗಳನ್ನು ಇರಿಸಲಾಗಿತ್ತು. ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿ ಗೌರವ ಅರ್ಪಿಸಲಾಯಿತು.

ವೇದಿಕೆಯಲ್ಲಿ ಕೈಮಗ್ಗ

ಜನಸ್ಪಂದನ ಸಮಾವೇಶದ ವೇದಿಕೆಯ ಮೇಲೆಯೇ ಕೈಮಗ್ಗ ಮತ್ತು ಚರಕಗಳನ್ನು ಇರಿಸಲಾಗಿತ್ತು. ದೊಡ್ಡಬಳ್ಳಾಪುರ ಮತ್ತು ಸುತ್ತಮುತ್ತಲಿನ ಕ್ಷೇತ್ರಗಳಲ್ಲಿ ನೇಕಾರ ಸಮುದಾಯದವರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಈ ಕಾರಣಕ್ಕಾಗಿಯೇ ಮಗ್ಗ ಇರಿಸಲಾಗಿತ್ತು.

ಶನಿವಾರ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿಯೂ ಇತ್ತು. ಈ ಕಾರಣಕ್ಕಾಗಿ ವೇದಿಕೆಯಲ್ಲಿ ಬಿಜೆಪಿ ಸಂಸ್ಥಾಪಕರಾದ ದೀನದಯಾಳ್ ಉಪಾಧ್ಯಾಯ, ಶಾಮ್‌ಪ್ರಸಾದ್ ಮುಖರ್ಜಿಯವರ ಭಾವಚಿತ್ರದ ಜತೆಗೆ ನಾರಾಯಣ ಗುರುಗಳ ಭಾವಚಿತ್ರವನ್ನೂ ಇರಿಸಲಾಗಿತ್ತು. ❖

'ನೈತಿಕತೆ ಎಲ್ಲಿತ್ತು?'

2018ರ ಚುನಾವಣೆಯಲ್ಲಿ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ, ಕಾಂಗ್ರೆಸ್‌ನವರ ಅಧಿಕಾರ ಲಾಲಸೆಯಿಂದ ಸಮ್ಮಿಶ್ರ ಸರ್ಕಾರ ರಚನೆಯಾಯಿತು. ಈಗ ಸಂವಿಧಾನದ ಬಗ್ಗೆ ಮಾತನಾಡುವ ಕಾಂಗ್ರೆಸ್ ನಾಯಕರ ನೈತಿಕತೆ ಆಗ ಎಲ್ಲಿತ್ತು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರೇ ನಿಮ್ಮಿಂದ ನೈತಿಕತೆಯ ಪಾಠವನ್ನು ನಾವು ಕಲಿಯಬೇಕಿಲ್ಲ. ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡುತ್ತೀರಿ. ಐದು ವರ್ಷವೂ ಈ ರಾಜ್ಯ ಹಾಳಾಗಬಾರದು ಎಂಬ ಕಾರಣದಿಂದ 17 ಮಂದಿ ವೀರರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬಂದು ಬಿಜೆಪಿಯನ್ನು ಬೆಂಬಲಿಸಿದರು' ಎಂದು ವೇದಿಕೆಯಲ್ಲಿದ್ದ ಸಚಿವರಾದ ಡಾ.ಕೆ. ಸುಧಾಕರ್, ಎಂ.ಟಿ.ಬಿ. ನಾಗರಾಜ್, ಮುನಿರತ್ನ, ಬೈರತಿ ಬಸವರಾಜ, ಬಿ.ಸಿ. ಪಾಟೀಲ ಅವರತ್ತ ನೋಡಿದರು.

'ಕುಲದಲ್ಲಿ ಮೇಲಾವುದೋ ಹುಚ್ಚಪ್ಪ' ಹಾಡಿಗೆ ನೃತ್ಯ

ವೇದಿಕೆಯಲ್ಲಿ ನೃತ್ಯ ಮಾಡಿದ ಸಚಿವ ಎಂಟಿಬಿ ನಾಗರಾಜ್, ಶಾಸಕ ಎಸ್.ಆರ್.ವಿಶ್ವನಾಥ್

ದೊಡ್ಡಬಳ್ಳಾಪುರ: ದೇವನಹಳ್ಳಿ ರಸ್ತೆಯ ರಘುನಾಥಪುರ ಸಮೀಪ ಶನಿವಾರ ನಡೆದ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ಸಾಧನೆಯ 'ಜನಸ್ಪಂದನ' ಕಾರ್ಯಕ್ರಮದಲ್ಲಿ ಹಲವು ವಿಶೇಷಗಳು ಗಮನ ಸೆಳೆದವು.

ಜನಸ್ಪಂದನ ವೇದಿಕೆ ಸಮಾರಂಭ ಪ್ರಾರಂಭಕ್ಕೂ ಮುನ್ನ ಗಾಯಕ ವಿಜಯಪ್ರಕಾಶ್ ಅವರ ತಂಡ ನಡೆಸಿಕೊಡ್ಡ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಜಕುಮಾರ' ಚಿತ್ರದ 'ಗೊಂಬೆ ಹೇಳುತ್ತೈತೆ ಮತ್ತೆ ಹೇಳುತ್ತೈತೆ' ಹಾಡು ಪ್ರಕ್ಷೇಕರ ಒತ್ತಾಯದ ಮೇರೆಗೆ ಪದೇ ಪದೇ ಹೇಳುವ ಮೂಲಕ ಸಮಾರಂಭದಲ್ಲಿ ಭಾಗವಹಿಸಿದ್ದ ಜನರು ಚಪ್ಪಾಳೆಗಳ ಮೂಲಕ ಗಾಯಕ ವಿಜಯಪ್ರಕಾಶ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ವಿಜಯಪ್ರಕಾಶ್ ಅವರು ಸತ್ಯಹರಿಶ್ಚಂದ್ರ ಚಿತ್ರದ 'ಕುಲದಲ್ಲಿ ಮೇಲಾವುದೋ ಹುಚ್ಚಪ್ಪ...' ಹಾಡಿಗೆ ವೇದಿಕೆಯಲ್ಲಿ ಹಾಜರಿದ್ದ ಪೌರಾಡಳಿತ ಸಚಿವ ಎಂಟಿಬಿ ನಾಗಾರಾಜ್, ಶಾಸಕ ಎಸ್.ಆರ್.ವಿಶ್ವನಾಥ್ ಅವರು ಕುಣಿಯುವ ಮೂಲಕ ಸಮಾವೇಶದಲ್ಲಿ ನೆರೆದಿದ್ದ ಜನರಿಂದ ಚಪ್ಪಾಳೆ, ಶಿಳ್ಳೆ ಗಿಟ್ಟಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾತನಾಡುವಾಗ 'ಬಿ.ಎಸ್. ಯಡಿಯೂರಪ್ಪ ಅವರನ್ನು 'ರಾಜಾಹುಲಿ' ನಮ್ಮ ಪಕ್ಷದ ನಾಯಕರು' ಎಂದು ಹೇಳುತ್ತಿದ್ದಂತೆ ಜನರು ಕಿವಿಗಡಚಿಕ್ಕುವಂತೆ ಚಪ್ಪಾಳೆ,ಶಿಳ್ಳೆ ಸುರಿಮಳೆಗರೆದರು. ವೇದಿಕೆಗೆ ಆಗಮಿಸಿದ್ದ ಸಚಿವರು ಹಾಗೂ ಗಣ್ಯರನ್ನು ಮಹಿಳೆಯರು ಆರತಿ ಬೆಳಗಿ, ತಿಲಕ ಇಟ್ಟು ಕುಂಬಗಳ ಮೂಲಕ ಸ್ವಾಗತಿಸಿದರು. ❖

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್

ಸುಧಾಕರ್ ಸಾಧನೆಗೆ ಮೆಚ್ಚುಗೆ

ದೊಡ್ಡಬಳ್ಳಾಪುರದಲ್ಲಿ ನಡೆದ ಜನಸ್ಪಂದನದ ಯಶಸ್ಸಿಗೆ ಆರೋಗ್ಯ ಸಚಿವ ಕೆ.ಸುಧಾಕರ್ ಎನ್ನುವುದು ಸಮಾವೇಶದಲ್ಲಿ ಮಾತನಾಡಿದ ಎಲ್ಲ ನಾಯಕರ ಮಾತಿನಲ್ಲೂ ಪ್ರತಿಧ್ವನಿಸಿತು.

ಬಿಜೆಪಿ ರಾಜ್ಯದ ಅಧಿಕಾರ ಚುಕ್ಕಾಣಿ ಹಿಡಿದ ನಂತರ ತನ್ನ ಮೂರು ವರ್ಷಗಳ ಸಾಧನೆ ಬಿಂಬಿಸಲು ರೂಪಿಸಿದ ಜನಸ್ಪಂದನ ಆಯೋಜನೆಗೆ ದೊಡ್ಡಬಳ್ಳಾಪುರವನ್ನೇ ಆಯ್ಕೆಮಾಡಿಕೊಳ್ಳಲು ಆ ಭಾಗದಲ್ಲಿ ಬಿಜೆಪಿ ಶಕ್ತಿ ವೃದ್ಧಿಸುವುದು ಮೂಲ ಉದ್ದೇಶ. ಆ ಕಾರ್ಯ ಸಾಧನೆಗೆ ಸೂಕ್ತ ನಾಯಕ ಸುಧಾಕರ್ ಎಂದು ಶ್ಲಾಘಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸುಧಾಕರ್ ಅವರ ಸಂಘಟನಾ ಶಕ್ತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಮಾವೇಶದ ಯಶಸ್ಸಿನ ಪರಿಶ್ರಮ ಸಂಪೂರ್ಣವಾಗಿ ಸುಧಾಕರ್ ಅವರದ್ದೇ ಎಂದು ಮುಕ್ತಕಂಠದಿಂದ ಹೊಗಳಿದರು. ಜನೋತ್ಸವ ಕಾರ್ಯಕ್ರಮ ಎರಡು ಬಾರಿ ಮುಂದೆ ಹೋದರೂ, ಅದಸನ್ನು ಲೆಕ್ಕಿಸದೇ 'ಜನಸ್ಪಂದನೆ'ಯನ್ನು ಯಶಸ್ಸಿಗೆ ಸುಧಾಕರ್ ಅವರ ಪರಿಶ್ರಮ ಕಾರಣ ಎಂದು ನಾಯಕರು ಬಣ್ಣಿಸಿದರು.

ಡಬ್ಬಲ್ ಎಂಜಿನ್ ಬೇಕೆ? ಡಬ್ಬಲ್ ಸ್ಟೀರಿಂಗ್ ಬೇಕೆ?

ರಘುನಾಥಪುರ (ದೊಡ್ಡಬಳ್ಳಾಪುರ): 'ರಾಜ್ಯಕ್ಕೆ ಡಬ್ಬಲ್ ಎಂಜಿನ್ ಸರ್ಕಾರ (ಬಿಜೆಪಿ) ಬೇಕೆ? ಅಥವಾ ಡಬ್ಬಲ್ ಸ್ಟೀರಿಂಗ್ ಸರ್ಕಾರ (ಕಾಂಗ್ರೆಸ್) ಬೇಕೆ? ಎಂಬುದನ್ನು ಜನರು ತೀರ್ಮಾನಿಸುತ್ತಾರೆ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

'ಜನಸ್ಪಂದನ' ಸಮಾವೇಶದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಅವರು, 'ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿಯಾಗಿಲ್ಲ. ಈಗಲೇ ಮುಖ್ಯಮಂತ್ರಿ ಹುದ್ದೆಗಾಗಿ ಕಾಂಗ್ರೆಸ್ ನಾಯಕರು ಜಗಳಕ್ಕೆ ಬಿದ್ದಿದ್ದಾರೆ. ನಮ್ಮದು ಡಬ್ಬಲ್ ಎಂಜಿನ್ ಸರ್ಕಾರ. ಅವರದ್ದು ಡಬ್ಬಲ್ ಸ್ಟೀರಿಂಗ್. ಯಾರು ಬೇಕು ಎಂಬುದನ್ನು ಜನರು ನಿರ್ಧರಿಸುತ್ತಾರೆ' ಎಂದರು.

ರಾಜ್ಯದಲ್ಲಿ ಅತ್ಯಂತ ಸಂಕಷ್ಟದ ಅವಧಿಯಲ್ಲೂ ದಿಟ್ಟ ನಾಯಕತ್ವದ ಮೂಲಕ ಜನರನ್ನು ರಕ್ಷಿಸಿದ ಕೀರ್ತಿ ಬಿಜೆಪಿಗೆ ಸಲ್ಲುತ್ತದೆ. ಜನರು ಬಿಜೆಪಿ ಆಡಳಿತದ ಪರವಾಗಿ ಇದ್ದಾರೆ. ಕೋವಿಡ್‌ನಿಂದ ಇತರ ರಾಜ್ಯಗಳ ಜನರು ಸಂಕಷ್ಟ ಅನುಭವಿಸಿದ್ದರು. ಆದರೆ, ರಾಜ್ಯದ ಜನರಿಗೆ ಸರ್ಕಾರ ರಕ್ಷಣೆ ನೀಡಿತು. ಇದರಿಂದಾಗಿ ಜನರು ಬಿಜೆಪಿಯ ಬೆಂಬಲಕ್ಕೆ ನಿಲ್ಲುವುದು ನಿಶ್ಚಿತ ಎಂದು ಹೇಳಿದರು.

'ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಕುರಿತು ಪ್ರಶ್ನೆ ಮಾಡುವವರಿಗೆ ದಿಟ್ಟ ಉತ್ತರ ಸಿಕ್ಕಿದೆ. ಸಮಾವೇಶಕ್ಕೆ ಹರಿದುಬಂದಿರುವ ಜನಸ್ತೋಮವೇ ಇದಕ್ಕೆ ಸಾಕ್ಷಿ. ಇದು ಯಾರೊಬ್ಬರ ವೈಯಕ್ತಿಕ ವೈಭವೀಕರಣವೂ ಅಲ್ಲ. ಸರ್ಕಾರದ ಉತ್ಸವ, ಜನರ ಉತ್ಸವ' ಎಂದರು.

ಬಿಜೆಪಿಯು ಸರ್ಕಾರದ ಸಾಧನೆಗಳು, ಮಾಡಿದ ಕೆಲಸವನ್ನು ಮುಂದಿಟ್ಟು ಮತ ಕೇಳಲಿದೆ. ಹತ್ತು ಲಕ್ಷ ವಿದ್ಯಾರ್ಥಿಗಳಿಗೆ ರೈತ ವಿದ್ಯಾನಿಧಿಯಿಂದ ಅನುಕೂಲ ಆಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ದೇಶಕ್ಕೆ ಹರಿದುಬಂದ ವಿದೇಶಿ ನೇರ ಬಂಡವಾಳದಲ್ಲಿ ಶೇಕಡ 38ರಷ್ಟು ಕರ್ನಾಟಕಕ್ಕೆ ದೊರಕಿದೆ. ಇದು ಸರ್ಕಾರದ ಮೇಲೆ ಜನರು ಇಟ್ಟಿರುವ ನಂಬಿಕೆಗೆ ಸಾಕ್ಷಿ ಎಂದು ಸುಧಾಕರ್ ಹೇಳಿದರು. ❖

ಹಾಡು ಹೇಳಿದ ಸುಧಾಕರ್

ಭಾಷಣದ ಕೊನೆಯಲ್ಲಿ ಡಾ.ರಾಜ್‌ಕುಮಾರ್ ನಟನೆಯ 'ಪ್ರೇಮದ ಕಾಣಿಕೆ' ಚಿತ್ರದ 'ಬಾನಿಗೊಂದು ಎಲ್ಲೆ ಎಲ್ಲಿದೆ...' ಹಾಡು ಹಾಡಿದ ಸುಧಾಕರ್, 'ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರೇ ನೀವು ನೆನೆಸಿದಂತೆ ಏನೂ ಆಗದು' ಎಂದು ವ್ಯಂಗ್ಯವಾಡಿದರು.

ಕೇಂದ್ರ ಸಚಿವೆ ಸ್ಮೃತಿ ಇರಾನಿ ಆರೋಪ

'ಭಾರತ ವಿಭಜನೆಗೆ ರಾಹುಲ್ ಯಾತ್ರೆ'

ರಘುನಾಥಪುರ (ದೊಡ್ಡಬಳ್ಳಾಪುರ): 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರಂಭಿಸಿರುವ 'ಭಾರತ ಒಗ್ಗೂಡಿಸಿ' ಯಾತ್ರೆಯ ಅಂತಿಮ ಗುರಿಯೇ ದೇಶ ವಿಭಜಿಸುವುದು. ದೇಶದ್ರೋಹಿಗಳೇ ಅವರ ಸುತ್ತ ತುಂಬಿಕೊಂಡಿರುವುದು ಇದಕ್ಕೆ ಸಾಕ್ಷಿ' ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಆರೋಪಿಸಿದರು.

ಜನಸ್ಪಂದನ ಸಮಾವೇಶದಲ್ಲಿ ಮಾತನಾಡಿದ ಅವರು, 'ಗಾಂಧಿ ಪರಿವಾರದ ರಾಜಕುಮಾರ ಈಗ ಹೊಸ ಅವತಾರದಲ್ಲಿ 'ಭಾರತ್ ಜೋಡೋ' ಎಂಬ ಹೊಸ ನಾಟಕ ಆರಂಭಿಸಿದ್ದಾರೆ. ದೇಶವನ್ನು ತುಂಡರಿಸುವ ಘೋಷಣೆ ಕೂಗುವ 'ತುಕ್ಡೇ ತುಕ್ಡೇ ಗ್ಯಾಂಗ್' ಸದಸ್ಯರು, 'ಭಾರತ್ ಮಾತಾ ಕಿ ಜೈ ಎಂಬುದು ಅತ್ಯಂತ ಗಂಭೀರ ಕಾಯಿಲೆ' ಎಂದವರೂ ರಾಜಕುಮಾರನ ಜತೆಗಿದ್ದಾರೆ' ಎಂದು ಟೀಕಿಸಿದರು.

'ಭಾರತದ ರಾಜ್ಯ ವ್ಯವಸ್ಥೆ ವಿರುದ್ಧ ಹೋರಾಟ ಆರಂಭಿಸಿರುವುದಾಗಿ ರಾಹುಲ್ ಹೇಳಿದ್ದಾರೆ. ಅವರು ಒಕ್ಕೂಟ ವ್ಯವಸ್ಥೆಯ ವಿರುದ್ಧ ಸಮರ ಸಾರಿದ್ದಾರೆ. ದೇಶ ಒಡೆಯಲು ಹೊರಟಿದ್ದಾರೆ. ಇಂತಹ ದೇಶದ್ರೋಹಿ ನಡೆಯನ್ನು ಸಹಿಸಲಾಗದು. ರಾಹುಲ್ ಕರ್ನಾಟಕಕ್ಕೆ ಬಂದಾಗ ಯಾತ್ರೆಯ ಉದ್ದೇಶವನ್ನು ಪ್ರಶ್ನಿಸಬೇಕು. ನೇರವಾಗಿ ಪ್ರಶ್ನಿಸುವಂತೆ ಕಾಂಗ್ರೆಸ್ ಕಾರ್ಯಕರ್ತರನ್ನು ಆಗ್ರಹಿಸಬೇಕು' ಎಂದು ಬಿಜೆಪಿ ಕಾರ್ಯಕರ್ತರಿಗೆ ಸಲಹೆ ನೀಡಿದರು.

'ಕನ್ಯಾಕುಮಾರಿಯಿಂದ ಯಾತ್ರೆ ಹೊರಟಿರುವ ರಾಹುಲ್, ರಾಷ್ಟ್ರಸಂತ ಸ್ವಾಮಿ ವಿವೇಕಾನಂದರ ಪ್ರತಿಮೆಗೆ ನಮಿಸದೇ ಇರುವುದು ನಿರ್ಲಜ್ಜತನದ ಪರಮಾವಧಿ. ಅದೇ ವ್ಯಕ್ತಿ ಭಾರತ ಮಾತೆಯನ್ನು ಅವಮಾನಿಸಿದವರನ್ನು ಭೇಟಿ ಮಾಡಿದ್ದಾರೆ. ಭಾರತವನ್ನು ತುಂಡರಿಸುತ್ತೇನೆ ಎಂಬ ಘೋಷಣೆ ಕೂಗಿದವರನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತಂದು ಸದಸ್ಯತ್ವವನ್ನೂ ನೀಡಿದ್ದಾರೆ' ಎಂದರು.

'ಭಾರತವನ್ನು ಒಡೆದವರು ಯಾರು ಎಂಬ ಪ್ರಶ್ನೆಗೆ ಗಾಂಧಿ ಪರಿವಾರ ಉತ್ತರಿಸಬೇಕು. ಪ್ರಧಾನಿ ನರೇಂದ್ರ ಮೋದಿಯವರು ರಾಜಪಥದ ಹೆಸರು ಬದಲಿಸಿ ಕರ್ತವ್ಯಪಥ ಎಂಬ ನಾಮಕರಣ ಮಾಡಿದರು. ಅಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಪ್ರತಿಮೆ ಸ್ಥಾಪಿಸಿದ್ದಾರೆ. ಈ ಕುರಿತು ಗಾಂಧಿ ಪರಿವಾರ ಈವರೆಗೆ ತುಟಿ ಬಿಚ್ಚಿಲ್ಲ. ದೇಶವನ್ನು ಒಗ್ಗೂಡಿಸಿದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಫೋಟೊ ಈಗ ಕಾಂಗ್ರೆಸ್‌ನ ಬ್ಯಾನರ್‌ನಲ್ಲೂ ಇಲ್ಲ' ಎಂದು ಸ್ಮೃತಿ ದೂರಿದರು. ❖

ಕನ್ನಡದಲ್ಲೇ ಮಾತು ಆರಂಭ

ಕನ್ನಡದಲ್ಲೇ ಮಾತು ಆರಂಭಿಸಿದ ಸ್ಮೃತಿ ಇರಾನಿ, ಘಾಟಿ ಸುಬ್ರಹ್ಮಣ್ಯ ಸೇರಿದಂತೆ ದೊಡ್ಡಬಳ್ಳಾಪುರ ಸುತ್ತಮುತ್ತಲಿನ ಹಲವು ದೇವಾಲಯಗಳು, ಸರ್. ಎಂ. ವಿಶ್ವೇಶ್ವರಯ್ಯ ಸೇರಿದಂತೆ ಆ ಭಾಗದ ಖ್ಯಾತನಾಮರನ್ನು ಸ್ಮರಿಸಿದರು.

ದೊಡ್ಡಬಳ್ಳಾಪುರದಲ್ಲಿ 'ರಾಜ್ಯ ಬಿಜೆಪಿ ಸರ್ಕಾರದ 3 ವರ್ಷಗಳ ಸಾಧನೆಯ ಸಂಬಂಧ ಶನಿವಾರ ಆಯೋಜಿಸಿದ್ದ "ಜನಸ್ಪಂದನ" ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನಸಾಗರ

ಜನಸ್ಪಂದನಕ್ಕೆ ಜನೋತ್ಸಾಹ

ರಾಜ್ಯದ 6 ಕಡೆ ಸಮಾವೇಶ

ದೊಡ್ಡಬಳ್ಳಾಪುರದಲ್ಲಿ ನಡೆಯುತ್ತಿರುವ ಸಮಾವೇಶಕ್ಕೆ ಜನ ಸಾಗರವೇ ಹರಿದು ಬಂದಿದೆ. ಈ ಭಾಗದಲ್ಲಿ ಪಕ್ಷಕ್ಕೆ ಅಂತಹ ಬಲ ಇರಲಿಲ್ಲ. ಸಚಿವರಾದ ಕೆ.ಸುಧಾಕರ್, ಎಂಟಿಬಿ ನಾಗರಾಜ್, ಮುನಿತ್ನ ಅವರ ಶ್ರಮವಿದೆ. ಈ ಭಾಗದಲ್ಲೂ ಪಕ್ಷದ ಸಂಘಟನೆ ಬಲಗೊಳ್ಳುತ್ತಿದೆ. 3 ಲಕ್ಷದಿಂದ 4 ಲಕ್ಷ ಜನರು ಸೇರಿದ್ದಾರೆ. ಸಭಾಂಗಣದ ಹೊರಗೂ ಅಷ್ಟೇ ಸಂಖ್ಯೆಯ ಜನರು ಇದ್ದಾರೆ. ಸ್ಥಳವಿಲ್ಲದೇ ವಾಹನಗಳಲ್ಲೇ ಕುಳಿತು ಮಾತು ಆಲಿಸುತ್ತಿದ್ದಾರೆ. ನೇಕಾರರು, ರೈತರ ನೆರವಿಗೆ ಸರ್ಕಾರ ಸಿದ್ಧವಿದೆ. ಮುಂದಿನ ಚುನಾವಣೆಯಲ್ಲಿ ಪ್ರತಿ ಕ್ಷೇತ್ರದಲ್ಲೂ ಬಿಜೆಪಿಯನ್ನು ಜನರು ಗೆಲ್ಲಿಸಬೇಕು. ಇಂತಹದ್ದೇ ಸಮಾವೇಶಗಳನ್ನು ರಾಜ್ಯದ 6 ಕಡೆ ಶೀಘ್ರ ಹಮ್ಮಿಕೊಳ್ಳಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಹೇಳಿದರು.

ದೊಡ್ಡಬಳ್ಳಾಪುರದಲ್ಲಿ ರಾಜ್ಯ ಬಿಜೆಪಿ ಸರ್ಕಾರದ 3 ವರ್ಷಗಳ ಸಾಧನೆಯ ಸಂಬಂಧ ಶನಿವಾರ ಆಯೋಜಿಸಿದ್ದ "ಜನಸ್ಪಂದನ" ಹಿನ್ನೆಲೆ (ಎಡದಿಂದ) ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ ರವಿ, ಕಂದಾಯ ಸಚಿವ ಆರ್ ಅಶೋಕ, ಪೌರಾಡಳಿತ ಸಚಿವ ಎಂ.ಟಿ.ಬಿ ನಾಗರಾಜ್, ಬಿ.ಎಸ್ ಯಡಿಯೂರಪ್ಪ, ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಸಂಸದ ತೇಜಸ್ವಿ ಸೂರ್ಯ, ಸಂಸದ ಮುನಿಸ್ವಾಮಿ, ಮುಖಂಡ ಲಕ್ಷ್ಮಣ ಸವದಿ, ಸಚಿವ ಸಿ.ಸಿ ಪಾಟೀಲ್ ಕಾರ್ಯಕರ್ತರತ್ತ ಕೈ ಬೀಸಿದರು

'ಸಿದ್ದರಾಮಯ್ಯ–ಶಿವಕುಮಾರ್‌ಗೆ ಅಧಿಕಾರದ ಭ್ರಮೆ'

ಕಾಂಗ್ರೆಸ್ ಅಧಿಕಾರಕ್ಕೆ ಬರಲು ಬಿಡುವುದಿಲ್ಲ: ಯಡಿಯೂರಪ್ಪ

ಬೆಂಗಳೂರು: ಕೂಸು ಹುಟ್ಟುವ ಮೊದಲೇ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಕುಲಾವಿ ಹೊಲಿಸಿಕೊಂಡು ಕುಳಿತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಯಾವ ಕಾರಣಕ್ಕೂ ಬಿಡುವುದಿಲ್ಲ. ಅವರ ಆಸೆ ಈಡೇರುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿಯೂ ಆಗಿರುವ ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಪುನರುಚ್ಚರಿಸಿದರು.

ದೊಡ್ಡಬಳ್ಳಾಪುರದಲ್ಲಿ ಶನಿವಾರ ಬಿಜೆಪಿ ಹಮ್ಮಿಕೊಂಡಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನರೇಂದ್ರ ಮೋದಿ ಅವರ ಆಶೀರ್ವಾದದಿಂದ ಉತ್ತಮ ಕೆಲಸ ಮಾಡುತ್ತಿದ್ದೇವೆ. ಕೇಂದ್ರ, ರಾಜ್ಯ ಸರ್ಕಾರಗಳ ಅಭಿವೃದ್ಧಿ ಯೋಜನೆಗಳು ಜನಮನ ತಲುಪಿವೆ. ಜನರು ಬಿಜೆಪಿ ಸರ್ಕಾರ ಮೆಚ್ಚಿದ್ದಾರೆ. ಸಿದ್ದರಾಮಯ್ಯ, ಶಿವಕುಮಾರ್ ಭ್ರಮೆಯಲ್ಲಿ ಇದ್ದಾರೆ. ಅವರು ಭ್ರಮೆಯಲ್ಲೇ ಇರಲಿ. ಬಿಜೆಪಿ ಜನರ ನಂಬಿಕೆ, ವಿಶ್ವಶಾಸಕ್ಕೆ ಧಕ್ಕೆ ತರುವ ಕೆಲಸ ಮಾಡುವುದಿಲ್ಲ. ಈ ಬಾರಿಯ ಚುನಾವಣೆಯಲ್ಲಿ ಪಕ್ಷ 150 ಸ್ಥಾನಗಳನ್ನು ಪಡೆದು ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಈಚೆಗೆ ಬಡತನದ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ಮನೆಯಲ್ಲೇ ಮೂವರು ಈ ದೇಶದ ಪ್ರಧಾನಿಗಳಾಗಿದ್ದರು. 70 ವರ್ಷಗಳು ಅವರದೇ ಪಕ್ಷ ದೇಶವನ್ನಾಳಿದೆ. ಬಡತನ ಏಕೆ ನಿರ್ಮೂಲನೆಯಾಗಲಿಲ್ಲ ಎಂದು ಪ್ರಶ್ನಿಸಿದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರಾಜ್ಯದಲ್ಲಿ ಮೂರು ವರ್ಷಗಳಲ್ಲಿ ನೀರಾವರಿ ಯೋಜನೆಗಳಿಗೆ ಸಾಕಷ್ಟು ಆದ್ಯತೆ ನೀಡಲಾಗಿದೆ. ರೈತರ ಅಭ್ಯುದಯಕ್ಕಾಗಿ ಪ್ರತ್ಯೇಕ ಯೋಜನೆಗಳನ್ನು ರೂಪಿಸಲಾಗಿದೆ. ರೈತರ ಸಾಲ ಮನ್ನಾ ಮಾಡಿದ್ದೆವು. ಕಿಸಾನ್ ಸಮ್ಮಾನ್ ಯೋಜನೆಗೆ ರಾಜ್ಯವೂ ನೆರವಾಗಿದೆ. ಕೇಂದ್ರ ಸರ್ಕಾರ ₹ 6 ಸಾವಿರ ನೀಡಿದರೆ, ರಾಜ್ಯ ₹ 4 ಸಾವಿರ ನೀಡುತ್ತಿದೆ.

ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಭಾಗದ ನೇಕಾರರು, ರೈತರು ದೊಡ್ಡ ಸಂಖ್ಯೆಯಲ್ಲಿ ಬಿಜೆಪಿ ಬೆಂಬಲಿಸುತ್ತಿದ್ದಾರೆ. ಅವರು ಎರಡು ಕಣ್ಣುಗಳಿದ್ದಂತೆ. ಸರ್ಕಾರ, ಪಕ್ಷ ಸದಾ ಅವರ ನೆರವಿಗೆ ನಿಲ್ಲಲಿದೆ. ಅವರ ನಂಬಿಕೆ, ವಿಶ್ವಾಸಕ್ಕೆ ಧಕ್ಕೆ ತರುವುದಿಲ್ಲ ಎಂದು ಯಡಿಯೂರಪ್ಪ ಅವರು ಭರವಸೆ ನೀಡಿದರು.

ದೊಡ್ಡಬಳ್ಳಾಪುರದಲ್ಲಿ 'ರಾಜ್ಯ ಬಿಜೆಪಿ ಸರ್ಕಾರದ 3 ವರ್ಷಗಳ ಸಾಧನೆಯ ಸಂಬಂಧ ಶನಿವಾರ ಆಯೋಜಿಸಿದ್ದ "ಜನಸ್ಪಂದನ" ಕಾರ್ಯಕ್ರಮದಲ್ಲಿ (ಎಡದಿಂದ) ಕೇಂದ್ರ ಸಚಿವೆ ಸ್ಮೃತಿ ಇರಾನಿ, ಬಿ.ಎಸ್ ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಮಾತುಕತೆಯಲ್ಲಿ ತೊಡಗಿದ್ದರು

ದೊಡ್ಡಬಳ್ಳಾಪುರದಲ್ಲಿ 'ರಾಜ್ಯ ಬಿಜೆಪಿ ಸರ್ಕಾರದ 3 ವರ್ಷಗಳ ಸಾಧನೆಯ ಸಂಬಂಧ ಶನಿವಾರ ಆಯೋಜಿಸಿದ್ದ "ಜನಸ್ಪಂದನ" ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ ರವಿ ಮಾತನಾಡಿದರು

'ಬಾಲ ಬಿಚ್ಚುವವರಿಗೆ ಬುಲ್ಡೋಜರ್ ಟ್ರೀಟ್‌ಮೆಂಟ್'

ಬೆಂಗಳೂರು: 'ಬಾಲ ಬಿಚ್ಚುವವರಿಗೆ ನಾವೂ ಬುಲ್ಡೋಜರ್ ಟ್ರೀಟ್‌ಮೆಂಟ್ ಕೊಡಬೇಕಾಗುತ್ತದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಎಚ್ಚರಿಸಿದರು.

ದೊಡ್ಡಬಳ್ಳಾಪುರದಲ್ಲಿ ಶನಿವಾರ ಬಿಜೆಪಿ ಹಮ್ಮಿಕೊಂಡಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಅವರು ಮಾತನಡಿದರು.

ಬಿಜೆಪಿ ಅಧಿಕಾರಕ್ಕೆ ಬಂದಾಗ ಉತ್ತಮ ಮಳೆಯಾಗಿ ಕೆರೆ, ಕಟ್ಟೆಗಳು ತುಂಬುತ್ತದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಹಾಗೂ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದಾಗ ಬರಗಾಲ ಆವರಿಸಿ, ಕೆರೆಗಳು ಖಾಲಿ ಬೀಳುತ್ತದೆ. ಬಿಜೆಪಿ ಕಾಲ್ಗುಣ ಒಳ್ಳೆಯದಿದೆ. ಈ ಬಾರಿ ಗ್ರಾಮಾಂತರ ಭಾಗದ 18 ಶಾಸಕರ ಸ್ಥಾನದಲ್ಲಿ 10ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಿಸಿಕೊಡಬೇಕು ಎಂದು ಮನವಿ ಮಾಡಿದರು.

ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದು ಶತಸ್ಸಿದ್ಧ. ಇದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ನರೇಂದ್ರ ಮೋದಿ ಅವರ ಸರ್ಕಾರ ಸಾಧನೆಗಳ ಮೂಲಕ ಭಾರತೀಯರನ್ನು ಜೋಡಿಸುವ ಕಾರ್ಯ ಮಾಡಿದೆ. ತುಕಡೇ ಗ್ಯಾಂಗಿನ ಮುಖಂಡರು ಮತ್ತು ಅವರಿಗೆ ಆಶ್ರಯ ಕೊಡುವ ಕಾಂಗ್ರೆಸ್ 'ಜೋಡೋ' ನಾಟಕ ಮಾಡುತ್ತಿದ್ದಾರೆ ಎಂದು ಕುಟಕಿದರು.

ಅರ್ಕಾವತಿ 'ರೀ-ಡೂ' ಹಗರಣದ ಪಿತಾಮಹ ಯಾರು ಎಂದು ಸಿದ್ದರಾಮಯ್ಯ ಉತ್ತರ ಕೊಡುವರೇ? ಸೋಲಾರ್ ಹಂಚಿಕೆ ಖದೀಮ ಯಾರೆಂದು ಉತ್ತರಿಸುವರೇ? ಕಲ್ಲಿದ್ದಲು ಹಗರಣ ಮಾಡಿದವರು ಯಾರು? ರೀ-ಡೂ ಹಗರಣ ಮಾಡಿದವರು ಯಾರೆಂದು ಶೀಘ್ರ ಬಯಲಿಗೆ ಬರಲಿದೆ ಎಂದು ಛೇಡಿಸಿದರು.

ಜನರ ಸರ್ವತೋಮುಖ ಅಭಿವೃದ್ಧಿಗೆ ಬಿಜೆಪಿ ಬದ್ಧತೆಯೊಂದಿಗೆ ಕೆಲಸ ಮಾಡುತ್ತಿದೆ. ಕೇಂದ್ರ, ರಾಜ್ಯ ಸರ್ಕಾರಗಳೂ ಡಬಲ್ ಎಂಜಿನ್ ಮಾದರಿಯಲ್ಲಿ ಕೆಲಸ ಮಾಡುತ್ತಿವೆ. ಹಾಗಾಗಿ, ರಾಜ್ಯದಲ್ಲಿ ಬಿಜೆಪಿ ಮೇಲೆ ಜನರ ವಿಶ್ವಾಸ ಹೆಚ್ಚಿದೆ. ಇದು ಮುಂದಿನ ಚುನಾವಣಾ ಫಲಿತಾಂಶದಲ್ಲಿ ಪ್ರತಿಫಲಿಸಲಿದೆ ಎಂದರು.

ರಾಜ್ಯ ಬಿಜೆಪಿ ಸರ್ಕಾರದ 3 ವರ್ಷಗಳ ಸಾಧನೆಯ ಸಂಬಂಧ ಶನಿವಾರ ದೊಡ್ಡಬಳ್ಳಾಪುರದ ಬಳಿ ನಡೆದ "ಜನಸ್ಪಂದನ" ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೈಮಗ್ಗದಲ್ಲಿ ಬಟ್ಟೆ ನೇಯ್ದರು. ಸಚಿವ ಡಾ. ಕೆ.ಸುಧಾಕರ್, ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ, ನಳಿನ್‌ಕುಮಾರ್ ಕಟೀಲ್, ಸಿ.ಟಿ.ರವಿ ಇದ್ದಾರೆ

ಹರಿದು ಬಂದ ಜನಸಾಗರ

ದೊಡ್ಡಬಳ್ಳಾಪುರ: ನಗರದ ಹೊರಭಾಗದ ರಘುನಾಥಪುರ ಸಮೀಪ ಶನಿವಾರ ನಡೆದ ಬಿಜೆಪಿ ಸರ್ಕಾರದ ಮೂರು ವರ್ಷಗಳ ಸಾಧನೆಯ 'ಜನಸ್ಪಂದನ' ಕಾರ್ಯಕ್ರಮಕ್ಕೆ ಮೂರು ಜಿಲ್ಲೆಗಳಿಂದ ಲಕ್ಷಾಂತರ ಕಾರ್ಯಕರ್ತರು ಬಂದಿದ್ದರು.

ವೇದಿಕೆಗೆ ಹೋಗುವ ರಸ್ತೆಗಳ ಎರಡೂ ಬದಿಯಲ್ಲೂ ಸಹ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಚಿವರು, ಮುಖಂಡರ ಭಾವ ಚಿತ್ರಗಳನ್ನು ಒಳಗೊಂಡ ಬೃಹತ್ ಬ್ಯಾನರ್‌ಗಳು ರಾರಾಜಿಸುತಿದ್ದವು. ಇಡೀ ನಗರ ಶನಿವಾರ ಬಿಜೆಪಿ ಭಾವುಟಗಳಿಂದ ಕೇಸರಿ ಮಯವಾಗಿತ್ತು. ಅದರಲ್ಲೂ ನಗರದ ಮೂಲಕ ಹಾದು ಹೋಗಿರುವ ಹಿಂದೂಪುರ-ಬೆಂಗಳೂರು ರಾಜ್ಯ ಹೆದ್ದಾರಿಯ ಎರಡೂ ಬದಿಯಲ್ಲೂ ಬ್ಯಾನರ್, ಭಾವುಟಗಳ ಹಾರಾಟ ಎಲ್ಲರನ್ನು ನಿಂತು ನೋಡುವಂತೆ ಮಾಡಿದ್ದವು.

ಬೆಳಿಗ್ಗೆಯಿಂದಲೇ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬಸ್‌ಗಳಲ್ಲಿ ಜನರು ಬಂದರು. ನಗರದ ಡಿ.ಕ್ರಾಸ್ ಸಮೀಪದ ಪಿ.ಎಸ್.ಐ.ಜಗದೀಶ್ ವೃತ್ತದಿಂದಲೇ ಜನರನ್ನು ಕರೆತಂದಿದ್ದ ಅನೇಕ ಬಸ್ ಸಾಲುಗಟ್ಟಿ ನಿಂತಿದ್ದವು. ಸಭೆ ನಡೆಯುವ ಸಮೀಪದ ವಾಹನಗಳ ಪಾರ್ಕಿಂಗ್ ಜಾಗ ಬೆಳಿಗ್ಗೆ 11.30ರ ಸುಮಾರಿಗೆ ಭರ್ತಿಯಾಗಿದ್ದವು. ಹೀಗಾಗಿ ಮಧ್ಯಾಹ್ನ 12 ಗಂಟೆಯ ನಂತರ ಜನರನ್ನು ಕರೆತಂದ ಬಸ್‌ಗಳು ಸಮಾರಂಭ ನಡೆಯುವ ವೇದಿಕೆಯ ಸಮೀಪಕ್ಕೆ ಹೋಗಲು ಸಾಧ್ಯವಾಗದೇ ರಸ್ತೆಯುದ್ದಕ್ಕೂ ಸಾಲುಗಟ್ಟಿ ನಿಂತಿದ್ದವು.

ಸಮಾವೇಶದ ವೇದಿಕೆ ಸಮೀಪದಲ್ಲೇ 21 ಕಡೆ ವಾಹನಗಳ ನಿಲುಗಡೆಗಾಗಿ ಗುರುತಿಸಲಾಗಿದ್ದ ಪಾರ್ಕಿಂಗ್ ಭರ್ತಿಯಾಗಿ ಮುಖ್ಯ ವೇದಿಕೆಯಿಂದ ದೊಡ್ಡಬಳ್ಳಾಪುರ ನಗರದ ಕಡೆಗೆ ಹಾಗೂ ದೇವನಹಳ್ಳಿ ಕಡೆಗೆ ಹೋಗುವ ಸುಮಾರು 7 ಕಿ.ಮೀ ಉದ್ದಕ್ಕೂ ರಸ್ತೆಯಲ್ಲಿ ಜನರು ಸಾಲಾಗಿ ನಡೆದುಕೊಂಡು ಹೋಗುವಂತಾಯಿತು.

ಕಾಂಗ್ರೆಸ್ ಭ್ರಷ್ಟಾಚಾರದ ಮಹಾವೃಕ್ಷ: ನಳಿನ್‌ಕುಮಾರ್ ಕಟೀಲ್

ದೊಡ್ಡಬಳ್ಳಾಪುರದಲ್ಲಿ 'ರಾಜ್ಯ ಬಿಜೆಪಿ ಸರ್ಕಾರದ 3 ವರ್ಷಗಳ ಸಾಧನೆಯ ಸಂಬಂಧ ಶನಿವಾರ ಆಯೋಜಿಸಿದ್ದ "ಜನಸ್ಪಂದನ" ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿದರು

ಬೆಂಗಳೂರು: ಕಾಂಗ್ರೆಸ್ ಭ್ರಷ್ಟಾಚಾರದ ಮಹಾವೃಕ್ಷ. ಸೋನಿಯಾ ಗಾಂಧಿ, ರಾಹುಲ್, ಡಿ.ಕೆ.ಶಿವಕುಮಾರ್ ಸೇರಿ ಎಲ್ಲರೂ ಜಾಮೀನಿನ ಮೇಲೆ ಇದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯ ಬಿಜೆಪಿ ಸರ್ಕಾರದ ಮೂರು ವರ್ಷಗಳ ಸಾಧನೆಯ ಸಂಬಂಧ ಶನಿವಾರ ದೊಡ್ಡಬಳ್ಳಾಪುರದಲ್ಲಿ ಹಮ್ಮಿಕೊಂಡಿದ್ದ 'ಜನಸ್ಪಂದನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಿದ್ದರಾಮಯ್ಯ ಅವರದು ಹಿಂದೂ ವಿರೋಧಿ ನಿಲುವು. ಅವರ ಆಡಳಿತದ ಅವಧಿಯಲ್ಲೇ ಅತಿಹೆಚ್ಚು ಭ್ರಷ್ಟಾಚಾರ ಪ್ರಕರಣಗಳು ವರದಿಯಾಗಿವೆ. ರಾಜ್ಯದ ವಿವಿಧೆಡೆ 24 ಹಿಂದೂ ಕಾರ್ಯಕರ್ತರ ಹತ್ಯೆಯಾಗಿವೆ. ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಗೋಹತ್ಯೆ ನಿರಂತರವಾಗಿತ್ತು. ಆದರೆ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಗೋಹತ್ಯಾ ನಿಷೇಧ, ಮತಾಂತರ ನಿಷೇಧವನ್ನು ಜಾರಿಗೊಳಿಸಲಾಗಿದೆ. ಗೋವುಗಳ ಸಂರಕ್ಷಣೆಗೆ ಒತ್ತು ನೀಡಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜೆಪಿ ರೈತರ ಪರ ಪಕ್ಷ. ಅಭಿವೃದ್ಧಿಗೆ ಹೆಸರಾಗಿ ಮೋದಿ, ಯಡಿಯೂರಪ್ಪ, ಬೊಮ್ಮಾಯಿ ಇದ್ದಾರೆ. ಬಿಜೆಪಿ ಸಶಕ್ತವಾಗುತ್ತಿದೆ. ಮುಂದಿನ ಬಾರಿ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ 2023ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ 150ಕ್ಕೂ ಹೆಚ್ಚು ಸ್ಥಾನಗಳನ್ನು ಬಿಜೆಪಿ ಗೆಲ್ಲುವುದು ಖಚಿತ. ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರ ಅವಧಿಯ ಅಭಿವೃದ್ಧಿ ಕಾರ್ಯಗಳು ಇದಕ್ಕೆ ಪೂರಕ ಎನಿಸಲಿವೆ. ಯಡಿಯೂರಪ್ಪ, ಬೊಮ್ಮಾಯಿ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಪರಿವರ್ತನೆಯ ಯುಗ ಆರಂಭವಾಗಿದೆ. ಸರ್ಕಾರ ವಿದ್ಯಾನಿಧಿ ಆರಂಭಿಸಿದೆ. ಕಿಸಾನ್ ಸಮ್ಮಾನ್‌ಗೆ ಹೆಚ್ಚುವರಿ ಮೊತ್ತ ಸೇರಿಸಿ ಕೊಡಲಾಗುತ್ತಿದೆ ಎಂದರು.

ಕೋವಿಡ್ ನಿರ್ವಹಣೆಯನ್ನು ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರ್ಕಾರ ಸಮರ್ಥವಾಗಿ ನಿರ್ವಹಿಸಿದೆ. 60 ವರ್ಷಗಳು ಆಡಳಿತ ಮಾಡಿದ್ದ ಕಾಂಗ್ರೆಸ್ ಆರೋಗ್ಯ ಕ್ಷೇತ್ರ ಕಡೆಗಣಿಸಿತ್ತು. ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಎಲ್ಲರಿಗೂ ಉಚಿತವಾಗಿ ಕೋವಿಡ್ ಲಸಿಕೆ ನೀಡಿದೆ. ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ದೊಡ್ಡಬಳ್ಳಾಪುರದಲ್ಲಿ ಶನಿವಾರ ನಡೆದ ಜನಸ್ಪಂದನ ಕಾರ್ಯಕ್ರಮಕ್ಕೆ ಆಗಮಿಸಿದ್ದ ಜನರು ಗುಂಪು ಗುಂಪಾಗಿ ನಿಂತು ಊಟ ಮಾಡುತ್ತಿರುವುದು

ಕಾರ್ಯಕರ್ತರ ಹಸಿವು ತಣಿಸಿದ ರುಚಿಕರ ಖಾದ್ಯ

ದೊಡ್ಡಬಳ್ಳಾಪುರ: ಜನಸ್ಪಂದನಕ್ಕೆ ಆಗಮಿಸಿದ್ದ ಲಕ್ಷಾಂತರ ಕಾರ್ಯಕರ್ತರಿಗೆ ತಿಂಡಿ, ಊಟಕ್ಕೆ ಯಾವುದೇ ಕೊರತೆಯಾಗದಂತೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿತ್ತು.

ತರಕಾರಿ ಪಲಾವ್, ಬಾತ್, ಮೊಸರು ಅನ್ನ, ಚಿತ್ರಾನ್ನ, ಲಾಡು, ಬಾದುಷಾ ಸೇರಿದಂತೆ ವೈವಿಧ್ಯಮಯ ಭಕ್ಷ್ಯ, ಭೋಜನಗಳು ಸಿದ್ಧವಾಗಿದ್ದವು. ಮಳೆ ಬಂದರೂ ಊಟಕ್ಕೆ ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗಿತ್ತು.

ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬಂದಿದ್ದ ಸಾವಿರಾರು ಕಾರ್ಯಕರ್ತರು ಬಗೆ, ಬಗೆಯ ರಚಿಕಟ್ಟಾದ ಖಾದ್ಯಗಳನ್ನು ಸವಿದರು.

ಊಟದ ಕೌಂಟರ್ ಬಳಿ ನೂಕುನುಗ್ಗಲು ಉಂಟಾಗದಂತೆ ವೇದಿಕೆ ಬಳಿ ಸುಮಾರು 30ಕ್ಕೂ ಹೆಚ್ಚಿನ ಕೌಂಟರ್ ತೆರೆಯಲಾಗಿತ್ತು. ಎಲ್ಲರಿಗೂ ಯಥೇಚ್ಛವಾಗಿ ನೀರು ಸಿಗುವಂತೆ ವ್ಯವಸ್ಥೆ ಮಾಡಲಾಗಿತ್ತು.

ಸೈಬರ್ ವಂಚನೆ ಪ್ರಕಾರಗಳು

1. ಒಟಿಪಿ ವಂಚನೆ

ಬ್ಯಾಂಕ್ ಪ್ರತಿನಿಧಿಗಳ ಸೋಗಿನಲ್ಲಿ ಸಾರ್ವಜನಿಕರಿಗೆ ಕರೆ ಮಾಡುವ ವಂಚಕರು, ಕೈವೈಸಿ ನವೀಕರಣ ಮಾಡಬೇಕೆಂದು ಹೇಳಿ ಆಧಾರ್ ಹಾಗೂ ಖಾತೆ ವಿವರ ಪಡೆಯುತ್ತಾರೆ. ಮೊಬೈಲ್‌ಗೆ ಬರುವ ಒನ್ ಟೈಂ ಪಾಸ್‌ವರ್ಡ್ (ಒಟಿಪಿ) ಪಡೆದು ವಂಚಿಸುತ್ತಾರೆ. ಜನರು, ಒಟಿಪಿಯನ್ನು ಅಪರಿಚಿತರ ಜೊತೆ ಹಂಚಿಕೊಳ್ಳಬಾರದು.

2. ಒಎಲ್‌ಎಕ್ಸ್,ಇತರೆ ವಸ್ತುಗಳ ಮಾರಾಟ ಜಾಲತಾಣ

ಬಳಸಿದ ವಸ್ತುಗಳ ಮಾರಾಟ ವೇದಿಕೆಯಾದ ಒಎಲ್‌ಎಕ್ಸ್ ಜಾಲತಾಣದ ಮೂಲಕವೂ ವಂಚನೆ ಆಗುತ್ತಿದೆ. ಅದರಲ್ಲೂ ಸೇನೆ ಅಧಿಕಾರಿಗಳ ಹೆಸರಿನಲ್ಲಿ ಪೋಸ್ಟ್ ಪ್ರಕಟಿಸುವ ವಂಚಕರು, ಕಾರು ಹಾಗೂ ಇತರೆ ವಸ್ತುಗಳ ಮಾರಾಟ ಮಾಡುವುದಾಗಿ ಹೇಳಿ ಹಣ ಪಡೆದು ನಾಪತ್ತೆಯಾಗುತ್ತಿದ್ದಾರೆ.

3. ಫೇಸ್‌ಬುಕ್ ಹಾಗೂ ವಾಟ್ಸ್‌ಆ್ಯಪ್ ವಿಡಿಯೊ ಕರೆ

ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸ್‌ಆ್ಯಪ್, ಮೆಸೆಂಜರ್, ಡೇಟಿಂಗ್ ಆ್ಯಪ್‌ಗಳ ಮೂಲಕ ಪರಿಚಯ ಮಾಡಿಕೊಳ್ಳುವ ವಂಚಕರು, ನಿತ್ಯವೂ ಚಾಟಿಂಗ್ ಮಾಡುತ್ತಾರೆ. ಸಲುಗೆಯಿಂದ ಮಾತನಾಡಿ, ವಿಡಿಯೊ ಕರೆ ಮಾಡಿ ಲೈಂಗಿಕವಾಗಿ ಪ್ರಚೋದಿಸುತ್ತಾರೆ. ನಗ್ನ ವಿಡಿಯೊವನ್ನು ಚಿತ್ರೀಕರಿಸಿಕೊಳ್ಳುತ್ತಾರೆ. ಅದೇ ವಿಡಿಯೊ ಬಳಸಿ ಬ್ಲ್ಯಾಕ್‌ಮೇಲ್ ಮಾಡಿ ಹಣ ವಸೂಲಿ ಮಾಡುತ್ತಾರೆ.

4. ಡೆಬಿಟ್, ಕ್ರೆಡಿಟ್ ಕಾರ್ಡ್ ಸ್ಕಿಮ್ಮಿಂಗ್

ಬ್ಯಾಂಕ್‌ಗಳ ಎಟಿಎಂ ಘಟಕಗಳ ಯಂತ್ರಗಳಲ್ಲಿ ಕೀ ಪ್ಯಾಡ್ ಹಾಗೂ ರಹಸ್ಯ ಕ್ಯಾಮೆರಾ ಇರುವ ಉಪಕರಣವನ್ನು ಅಳವಡಿಸುವ ವಂಚಕರು, ಗ್ರಾಹಕರ ಕಾರ್ಡ್‌ಗಳ ಮಾಹಿತಿಯನ್ನು ಕದಿಯುತ್ತಾರೆ. ಅದರ ಮೂಲಕ ನಕಲಿ ಕಾರ್ಡ್ ತಯಾರಿಸಿ ಗ್ರಾಹಕರ ಖಾತೆಯಲ್ಲಿರುವ ಹಣ ದೋಚುತ್ತಾರೆ.

5.ಲಿಂಕ್ ಕಳುಹಿಸಿ ವಂಚನೆ

ಬಹುಮಾನ, ಉಡುಗೊರೆ... ಹೀಗೆ ನಾನಾ ಹೆಸರಿನಲ್ಲಿ ಲಿಂಕ್ (ಎಂಬೇಡೆಡ್) ಸಂದೇಶ ಕಳುಹಿಸುತ್ತಾರೆ. ಇದನ್ನು ಕ್ಲಿಕ್ ಮಾಡಿ ವೈಯಕ್ತಿಕ ಮಾಹಿತಿ ದಾಖಲಿಸಿದರೆ, ಖಾತೆಯಲ್ಲಿರುವ ಹಣವನ್ನು ವಂಚಕರು ವರ್ಗಾಯಿಸಿಕೊಳ್ಳುತ್ತಾರೆ.

6. ಉಡುಗೊರೆ ಆಮಿಷವೊಡ್ಡಿ ವಂಚನೆ

ಸಾಮಾಜಿಕ ಮಾಧ್ಯಮಗಳ ಮೂಲಕ ಪರಿಚಯ ಮಾಡಿಕೊಳ್ಳುವ ವಂಚಕರು, ಸ್ನೇಹ ಬೆಳೆಸುತ್ತಾರೆ. ಉಡುಗೊರೆ ಕಳುಹಿಸುವುದಾಗಿ ಹೇಳುತ್ತಾರೆ. ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿ, ವಿಮಾನ ನಿಲ್ದಾಣದಲ್ಲಿರುವ ಉಡುಗೊರೆಯನ್ನು ಮನೆಗೆ ಕಳುಹಿಸಲು ಹಣ ಪಡೆದು ನಾಪತ್ತೆಯಾಗುತ್ತಾರೆ.

7. ಹೂಡಿಕೆ, ಟ್ರೇಡಿಂಗ್ ಆ್ಯಪ್ ವಂಚನೆ

ಷೇರು ಮಾರುಕಟ್ಟೆ, ಕ್ರಿಪ್ಟೊ ಕರೆನ್ಸಿ ಹಾಗೂ ಇತರೆ ವಲಯಗಳಲ್ಲಿ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭವೆಂದು ವಂಚಕರು ಆಮಿಷವೊಡ್ಡುತ್ತಾರೆ. ಇದನ್ನು ನಂಬಿ ಯಾರಾದರೂ ಹಣ ಹೂಡಿದರೆ, ಅದನ್ನು ದೋಚಿಕೊಂಡು ಆರೋಪಿಗಳು ಪರಾರಿಯಾಗುತ್ತಾರೆ.

8. ವೈವಾಹಿಕ ಜಾಲತಾಣ ವಂಚನೆ

ಮದುವೆಗೆ ವರ–ವಧು ಹುಡುಕಲು ಇಂದು ನಾನಾ ಜಾಲತಾಣಗಳಿವೆ. ಇಂಥ ಜಾಲತಾಣಗಳಲ್ಲಿ ನಕಲಿ ಖಾತೆ ತೆರೆಯುವ ವಂಚಕರು, ಮದುವೆ ಸೋಗಿನಲ್ಲಿ ಜನರ ಸ್ನೇಹ ಬೆಳೆಸುತ್ತಾರೆ. ಉಡುಗೊರೆ, ಭೇಟಿ... ಹೀಗೆ ನಾನಾ ಹೆಸರಿನಲ್ಲಿ ಹಣ ಪಡೆದುಕೊಂಡು ನಾಪತ್ತೆಯಾಗುತ್ತಾರೆ.

9. ಎನಿ ಡೆಸ್ಕ್, ಟೀಮ್ ವ್ಹೀವರ್, ಕ್ವಿಕ್ ಸಪೋರ್ಟ್

ಇತ್ತೀಚಿನ ದಿನಗಳಲ್ಲಿ ವಂಚನೆಗೆಂದು ಆರೋಪಿಗಳು, ನಾನಾ ಆ್ಯಪ್ ಬಳಕೆ ಮಾಡುತ್ತಿದ್ದಾರೆ. ಎನಿ ಡೆಸ್ಕ್, ಟೀಮ್ ವ್ಹೀವರ್, ಕ್ವಿಕ್ ಸಪೋರ್ಟ್ ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳುವಂತೆ ಹೇಳುವ ವಂಚಕರು, ಜನರ ಮೊಬೈಲ್ ವಿಂಡೊದ ಕಾರ್ಯಾಚರಣೆ ತಿಳಿದುಕೊಂಡು ಕ್ಷಣಮಾತ್ರದಲ್ಲಿ ಬ್ಯಾಂಕ್ ಖಾತೆಯಿಂದ ಹಣ ದೋಚುತ್ತಾರೆ

10. ಉದ್ಯೋಗದ ಹೆಸರಿನಲ್ಲಿ ವಂಚನೆ

ಪ್ರತಿಷ್ಠಿತ ಕಂಪನಿಗಳಲ್ಲಿ 'ನೌಕರಿ ಇದೆ' ಎಂದು ಅಭ್ಯರ್ಥಿಗಳಿಗೆ ಸಂದೇಶ ಕಳುಹಿಸುವ ಹಾಗೂ ಕರೆ ಮಾಡುವ ವಂಚಕರು, ನೋಂದಣಿ ಹಾಗೂ ಸಂದರ್ಶನ ಶುಲ್ಕವೆಂದು ಹೇಳಿ ಹಣ ಪಡೆದು ವಂಚಿಸುತ್ತಾರೆ.

11. ಸಿಮ್ ಕಾರ್ಡ್ ಬ್ಲಾಕ್ ಆಗಿದೆ ಎಂದು ವಂಚನೆ

ಏರ್‌ಟೆಲ್, ಬಿಎಸ್‌ಎನ್‌ಎಲ್ ಹಾಗೂ ಇತರೆ ಮೊಬೈಲ್ ಸೇವಾ ಕಂಪನಿಗಳ ಹೆಸರಿನಲ್ಲಿ ಸಂದೇಶ ಹಾಗೂ ಕರೆ ಮಾಡಿ ವಂಚಿಸುವ ತಂಡಗಳಿವೆ. ಮೊಬೈಲ್ ನಂಬರ್ ನವೀಕರಣ ಹಾಗೂ ಆಧಾರ್ ಕಾರ್ಡ್ ಜೋಡಣೆ ಮಾಡಬೇಕು ಎಂಬುದಾಗಿ ಹೇಳಿ ಖಾತೆಯಲ್ಲಿರುವ ಹಣ ದೋಚುತ್ತಾರೆ.

ತಕ್ಷಣ ದೂರು ನೀಡಿ

ಸೈಬರ್ ಜಾಲದೊಳಗೆ ಸಿಲುಕಿ ಹಣ ಕಳೆದುಕೊಳ್ಳುವವರು ತಕ್ಷಣ ಪೊಲೀಸರ ಸಹಾಯವಾಣಿಗೆ ಕರೆ ಮಾಡಿ ದೂರು ನೀಡಬೇಕು. ಇಂಥ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಲಿರುವ ಪೊಲೀಸರು, ಖಾತೆಯಿಂದ ಕಡಿತವಾದ ಹಣವನ್ನು ಆರೋಪಿಗಳ ಕೈಗೆ ಸಿಗದಂತೆ ತಡೆಯುತ್ತಾರೆ.

ಬೆಂಗಳೂರು ಸಹಾಯವಾಣಿ
112
ರಾಜ್ಯದ ಇತರೆ ಜಿಲ್ಲೆಗಳ ಸಹಾಯವಾಣಿ
1930
ಹೆಚ್ಚಿನ ಮಾಹಿತಿಗೆ ಕೇಂದ್ರ ಗೃಹ ಇಲಾಖೆ ಜಾಲತಾಣ:
https://www.cybercrime.gov.in

12. ನಕಲಿ ಖಾತೆ ಸೃಷ್ಟಿಸಿ ವಂಚನೆ

ಸಿನಿಮಾ ತಾರೆಯರು, ಉದ್ಯಮಿಗಳು, ಕ್ರೀಡಾಪಟುಗಳು, ರಾಜಕಾರಣಿಗಳು, ಪೊಲೀಸರು, ಪತ್ರಕರ್ತರು.... ಸೇರಿದಂತೆ ಹಲವರ ಹೆಸರಿನಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆ ಸೃಷ್ಟಿ. ಆರೋಗ್ಯ ಸಮಸ್ಯೆ ಹಾಗೂ ಆರ್ಥಿಕ ಸಂಕಷ್ಟವೆಂದು ಹೇಳಿಕೊಂಡು ಖಾತೆದಾರರ ಹೆಸರಿನಲ್ಲಿ ಸ್ನೇಹಿತರಿಂದ ಹಣ ವಸೂಲಿ ಮಾಡುವ ಜಾಲವಿದೆ.

ಸೈಬರ್ ಜಾಲ: ವಂಚಕರ ಗಾಳ

ಒಂದನೇ ಪುಟದಿಂದ

ಬೆಂಗಳೂರು ಸೈಬರ್ ಕ್ರೈಂ ಠಾಣೆಯೊಂದರ ಇನ್‌ಸ್ಪೆಕ್ಟರ್, 'ಅಂತರ್ಜಾಲ ಬಳಸುವಾಗ ಮೈ ತುಂಬಾ ಕಣ್ಣಾಗಿರಬೇಕು. ಆನ್‌ಲೈನ್ ಬ್ಯಾಂಕಿಂಗ್, ಒನ್ ಟೈಂ ಪಾಸ್‌ವರ್ಡ್ ವ್ಯವಹಾರ, ಅಪರಿಚಿತ ಲಿಂಕ್ ಕ್ಲಿಕ್ ಮಾಡುವಾಗ ಹುಷಾರಿರಬೇಕು. ಸೈಬರ್ ಅಪರಾಧ ತಡೆಗೆ ಎಚ್ಚರಿಕೆಯೊಂದೇ ಪರಿಹಾರ' ಎಂದರು.

'ನೂರು ರೂಪಾಯಿಯಿಂದ ಲಕ್ಷ ಲಕ್ಷ ರೂಪಾಯಿವರೆಗೂ ವಂಚನೆಯಾದ ಬಗ್ಗೆ ದೂರುಗಳು ದಾಖಲಾಗುತ್ತಿವೆ. ಪ್ರತಿಯೊಂದು ಪ್ರಕರಣದಲ್ಲೂ ದೂರುದಾರರ ನಿರ್ಲಕ್ಷ್ಯವೇ ಎದ್ದು ಕಾಣುತ್ತದೆ. ಕೆಲ ಪ್ರಕರಣಗಳಲ್ಲಿ ಮಾತ್ರ ಆರೋಪಿಗಳ ಪತ್ತೆ ಸುಲಭ. ಬಹುತೇಕ ಆರೋಪಿಗಳು ನಕಲಿ ಸಿಮ್‌ಕಾರ್ಡ್ ಹಾಗೂ ಐಪಿ (ಇಂಟರ್‌ನೆಟ್ ಪ್ರೋಟೊಕಾಲ್) ಅಡ್ರೆಸ್ ಬದಲಿಸಿ ಕೃತ್ಯ ಎಸಗುತ್ತಿರುವುದರಿಂದ ಅವರ ಪತ್ತೆ ಕಷ್ಟ. ಮಾಹಿತಿ ತಂತ್ರಜ್ಞಾನ ಕಾಯ್ದೆಯೂ ಮತ್ತಷ್ಟು ಬಿಗಿಯಾಗಬೇಕಿದೆ' ಎಂದೂ ಹೇಳಿದರು.

ಸೈಬರ್ ಅಪರಾಧಗಳ ಹಬ್ 'ಜಾಮತಾರಾ, ಕರಮಾಟಾಂಡ್'

ಜಾರ್ಖಂಡ್ ರಾಜ್ಯದ ಜಾಮತಾರ್ ಹಾಗೂ ಕರಮಾಟಾಂಡ್ ಎಂಬ ಗ್ರಾಮಗಳು, ಸೈಬರ್ ವಂಚನೆ ಹಬ್ ಎನಿಸಿಕೊಂಡಿವೆ. ಇಲ್ಲಿಯ ಬಹುತೇಕ ಗ್ರಾಮಸ್ಥರೇ ಸೈಬರ್ ವಂಚಕರಾಗಿ ಮಾರ್ಪಟ್ಟು, ದೇಶದೆಲ್ಲೆಡೆ ಅಪರಾಧ ಎಸಗುತ್ತಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಸೈಬರ್ ಅಪರಾಧಗಳ ತನಿಖೆ ಕೈಗೊಂಡ ಪ್ರತಿಯೊಂದು ರಾಜ್ಯದ ಪೊಲೀಸರ ತಂಡಗಳು, ಎರಡೂ ಗ್ರಾಮಗಳಿಗೂ ಭೇಟಿ ನೀಡುತ್ತಾರೆ. ಸ್ಥಳೀಯರೇ ಸೈಬರ್ ವಂಚಕರೆಂಬುದು ಹಲವು ಬಾರಿ ನ್ಯಾಯಾಲಯದಲ್ಲೂ ಸಾಬೀತು ಆಗಿದೆ. ಇದೇ ಕಾರಣಕ್ಕೆ 5 ಸಾವಿರ ಜನಸಂಖ್ಯೆಯೂ ಇಲ್ಲದ ಜಾಮತಾರಾದಲ್ಲಿ ಪ್ರತ್ಯೇಕವಾಗಿ ಸೈಬರ್ ಕ್ರೈಂ ಠಾಣೆ ತೆರೆಯಲಾಗಿದೆ. ಡಿವೈಎಸ್ಪಿ ದರ್ಜೆ ಅಧಿಕಾರಿ ಠಾಣೆ ನಿರ್ವಹಣೆ ಜವಾಬ್ದಾರಿ ವಹಿಸಿಕೊಂಡಿದ್ದು, ಹೊರರಾಜ್ಯಗಳಿಂದ ಬರುವ ಪೊಲೀಸರ ತನಿಖೆಗೆ ಸಹಕರಿಸುತ್ತಿದ್ದಾರೆ.

'ಜಾಮತಾರಾ, ಕರಮಾಟಾಂಡ್ ಗ್ರಾಮದಲ್ಲಿ ಅರ್ಧಕ್ಕೆ ಶಾಲೆ ಬಿಟ್ಟವರು ಹೆಚ್ಚಿದ್ದಾರೆ. ಅವರೆಲ್ಲ ಬಡವರು. ಹಣದ ಆಮಿಷವೊಡ್ಡಿ ಅವರಿಗೆ ಸೈಬರ್ ಅಪರಾಧಗಳ ತರಬೇತಿ ನೀಡಲಾಗುತ್ತದೆ. ನಂತರ ವಂಚನೆಗೆ ಬಳಸಿಕೊಳ್ಳಲಾಗುತ್ತದೆ. ದಿನ ಕಳೆದಂತೆ ಗ್ರಾಮಸ್ಥರೇ ಸ್ವತಂತ್ರವಾಗಿ ವಂಚನೆಗೆ ಇಳಿಯುತ್ತಿದ್ದಾರೆ. ದೇಶದಲ್ಲಿ ನಡೆಯುತ್ತಿರುವ ಸೈಬರ್ ವಂಚನೆಗೂ ಜಾಮತಾರಾ, ಕರಮಾಟಾಂಡ್ ಗ್ರಾಮಗಳಿಗೂ ನಂಟು ಇದ್ದೇ ಇದೆ' ಎಂದು ಸೈಬರ್ ಕ್ರೈಂ ವಿಭಾಗದ ಅಧಿಕಾರಿಯೊಬ್ಬರು ಹೇಳುತ್ತಾರೆ.

'ಎರಡೂ ಗ್ರಾಮಗಳಲ್ಲಿ ಎಲ್ಲ ರಾಷ್ಟ್ರೀಕೃತ ಬ್ಯಾಂಕ್ ಶಾಖೆಗಳು, 25ಕ್ಕೂ ಹೆಚ್ಚು ಎಟಿಎಂಗಳು, 15ಕ್ಕೂ ಹೆಚ್ಚು ಮೊಬೈಲ್ ಟವರ್‌ಗಳು, 25ಕ್ಕೂ ಹೆಚ್ಚು ಸೈಬರ್ ಸೆಂಟರ್‌ಗಳಿವೆ. ಇವೆಲ್ಲವೂ ವಂಚನೆಗೆ ಸಹಕಾರಿಯಾಗಿವೆ. ಸ್ಥಳೀಯ ಕೆಲ ಪೊಲೀಸರೂ ಆರೋಪಿಗಳ ಜೊತೆ ಕೈ ಜೋಡಿಸಿದ್ದಾರೆ. ಹೊರ ರಾಜ್ಯಗಳಿಂದ ಬಂಧಿಸಲು ಬರುವ ಪೊಲೀಸರ ಮೇಲೆ ದಾಳಿ ಮಾಡುವ ಪ್ರವೃತ್ತಿ ಬೆಳೆದಿದೆ. ಹೀಗಾಗಿ, ಗ್ರಾಮದಲ್ಲಿರುವ ವಂಚಕರನ್ನು ಸಂಪೂರ್ಣವಾಗಿ ಸದೆಬಡಿಯಲು ಸಾಧ್ಯವಾಗುತ್ತಿಲ್ಲ' ಎಂದು ವಸ್ತುಸ್ಥಿತಿ ತೆರೆದಿಡುತ್ತಾರೆ.

ಜಾರ್ಖಂಡ್‌ನ ಜಾಮತಾರಾ ಗ್ರಾಮದಲ್ಲಿರುವ ಸೈಬರ್ ಕ್ರೈಂ ಠಾಣೆ ಹೊರನೋಟ

ಕೆಲ ಪ್ರಕರಣಗಳು

ಬಿಟ್ ಕಾಯಿನ್ ಹೂಡಿಕೆ– ₹ 65.84 ಲಕ್ಷ ವಂಚನೆ: ಬೆಂಗಳೂರಿನ ಶಾಲಿನಿ ಅವರನ್ನು 'ಬಿಟಿಸಿ ಡೈಮಂಡ್ ವಿಐಪಿ 11–5' ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಸಿದ್ದ ವಂಚಕರು, ಬಿಟ್ ಕಾಯಿನ್ ಮೇಲೆ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುವುದಾಗಿ ಆಮಿಷವೊಡ್ಡಿದ್ದರು. ಅದನ್ನು ನಂಬಿದ್ದ ಶಾಲಿನಿ, ಹಂತ ಹಂತವಾಗಿ ₹ 65.84 ಲಕ್ಷ ಹೂಡಿಕೆ ಮಾಡಿದ್ದರು. ಆರೋಪಿಗಳು ಯಾವುದೇ ಲಾಭವನ್ನೂ ನೀಡದೇ ನಾಪತ್ತೆಯಾಗಿದ್ದಾರೆ.

'ಕಾಲ್ ಗರ್ಲ್' ಸೋಗಿನಲ್ಲಿ ₹ 30 ಲಕ್ಷ ವಂಚನೆ: ಕಾಲ್ ಗರ್ಲ್ ಸೋಗಿನಲ್ಲಿ ಬೆಂಗಳೂರಿನ ಯುವಕನನ್ನು ಪರಿಚಯ ಮಾಡಿಕೊಂಡಿದ್ದ ವಂಚಕರಿಬ್ಬರು, ಹಂತ ಹಂತವಾಗಿ ₹ 30 ಲಕ್ಷ ಕಿತ್ತಿದ್ದಾರೆ. ಪುನಃ ಹಣ ಕೇಳುತ್ತಿದ್ದಂತೆ ಯುವಕ, ಪೊಲೀಸರಿಗೆ ದೂರು ನೀಡಿದ್ದಾರೆ.

ನಾರಾಯಣ ಗುರು ಜಯಂತಿ: ಸಚಿವ ಶ್ರೀನಿವಾಸ ಪೂಜಾರಿ ಭರವಸೆ

'ವಸತಿ ಶಾಲೆ ಸಂಖ್ಯೆ 10ಕ್ಕೆ ಏರಿಕೆ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಒಂದನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಇಂಗ್ಲಿಷ್ ಮಾಧ್ಯಮದಲ್ಲಿ ಉಚಿತ ಶಿಕ್ಷಣ ನೀಡುವ ಬ್ರಹ್ಮಶ್ರೀ ನಾರಾಯಣಗುರು ವಸತಿ ಶಾಲೆಗಳನ್ನು ಸರ್ಕಾರ ನಾಲ್ಕು ಕಡೆ ಆರಂಭಿಸಿದೆ. ಈ ಶಾಲೆಗಳ ಸಂಖ್ಯೆಯನ್ನು 10ಕ್ಕೆ ಹೆಚ್ಚಿಸಲಾಗುವುದು' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ನಾರಾಯಣ ಗುರು ಜಯಂತಿ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಇಲ್ಲಿ ಶನಿವಾರ ಏರ್ಪಡಿಸಿದ್ದ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈ ವಸತಿ ಶಾಲೆಗಳಿಗೆ ತಲಾ ₹ 30 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿದೆ. ಇದರ ಮುಂದುವರಿದ ಭಾಗವಾಗಿ ಮತ್ತೆ 6 ಶಾಲೆಗಳನ್ನು ಆರಂಭಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮತಿಸಿದ್ದಾರೆ' ಎಂದರು. ಕಾರ್ಯಕ್ರಮ ಉದ್ಘಾಟಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, 'ಧರ್ಮವು ವಾದದ ವಸ್ತುವಲ್ಲ; ಜಯದ ವಸ್ತುವೂ ಅಲ್ಲ. ಯಾವುದೇ ಧರ್ಮವು ಇನ್ನೊಂದು ಧರ್ಮವನ್ನು ಹೀಯಾಳಿಸುವುದಿಲ್ಲ ಎಂಬ ಸಂದೇಶ ಸಾರಿದವರು ನಾರಾಯಣಗುರುಗಳು. ಅವರ ಚಿಂತನೆಗಳು ಒಂದು ಜಾತಿಗೆ ಸೀಮಿತವಾಗಿಲ್ಲ. ಮಹಾಪುರುಷರನ್ನು ಪೂಜೆಗೆ ಸೀಮಿತಗೊಳಿಸದೇ ಅವರ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದೇ ಅವರಿಗೆ ಸಲ್ಲಿಸುವ ಗೌರವ' ಎಂದರು.

'ಇಲಾಖೆಯು 50ಕ್ಕೂ ಹೆಚ್ಚು ದಾರ್ಶನಿಕರ ಜಯಂತಿಗಳನ್ನು ಬೆಂಗಳೂರಿನಲ್ಲೇ ಆಚರಿಸುತ್ತಿತ್ತು. ಇಂತಹ ಜಯಂತಿ ಜನರ ನಡುವೆ ಆಚರಣೆಯಾಗಬೇಕು ಎಂಬ ಉದ್ದೇಶದಿಂದ ಬೇರೆ ಬೇರೆ ಜಿಲ್ಲೆಗಳಲ್ಲಿ ಆಚರಿಸಲು ಕ್ರಮವಹಿಸಲಾಗಿದೆ' ಎಂದು ಹೇಳಿದರು.

ಸಂಸದ ನಳಿನ್ ಕುಮಾರ್ ಕಟೀಲ್, 'ಕೇರಳದಲ್ಲಿ ಸನಾತನ ಹಿಂದೂ ಸಮಾಜ, ಸಂಸ್ಕೃತಿ, ಪರಂಪರೆ ಈಗಲೂ ಉಳಿದಿದ್ದರೆ, ಅದಕ್ಕೆ ನಾರಾಯಣ ಗುರುಗಳು ಕಾರಣ. ಮೂಢನಂಬಿಕೆ ಹಾಗೂ ಅಸ್ಪೃಶ್ಯತೆ ವಿರುದ್ಧ ಹೋರಾಡುವ ಮೂಲಕ ಅವರು ಆಧ್ಯಾತ್ಮಿಕ ಕ್ರಾಂತಿಯನ್ನೇ ಮಾಡಿದರು' ಎಂದರು.

ಶಾಸಕ ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮಕ್ಕೂ ಮುನ್ನ ಅದ್ದೂರಿ ಶೋಭಾಯಾತ್ರೆ ನಡೆಯಿತು.

ಕಾರ್ಯಕ್ರಮದಲ್ಲಿ ಸಚಿವ ವಿ.ಸುನಿಲ್ ಕುಮಾರ್ ಅವರು ಬ್ರಹ್ಮಶ್ರೀ ನಾರಾಯಣಗುರು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಶಾಸಕ ವೈ.ಭರತ್ ಶೆಟ್ಟಿ ಇದ್ದಾರೆ

ಪಂಚಮಸಾಲಿ, ಕುರುಬರಿಗೆ ಮೀಸಲಾತಿ ಅಗತ್ಯವಿದೆಯೇ: ಈಶ್ವರಪ್ಪ ಪ್ರಶ್ನೆ

ಶಿವಮೊಗ್ಗ: 'ಮೀಸಲಾತಿ ಇಂದು ದುರುಪಯೋಗವಾಗುತ್ತಿದೆ. ಪಂಚಮಸಾಲಿ ಸಮಾಜದವರು 2ಎ ಮೀಸಲಾತಿ ಬೇಕು ಎಂದು, ಕುರುಬರು ಎಸ್.ಟಿಗೆ ಸೇರಿಸಬೇಕು ಎಂದು, ಕೆಲವರು ಒಳಮೀಸಲಾತಿ ಬೇಕೆಂದು ಕೇಳುತ್ತಲೇ ಇದ್ದಾರೆ. ನಿಜವಾಗಿಯೂ ಪಂಚಮಸಾಲಿ ಸಮಾಜದವರಿಗೆ, ಕುರುಬರಿಗೆ ಮೀಸಲಾತಿ ಅಗತ್ಯ ಇದೆಯೇ' ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಪ್ರಶ್ನಿಸಿದರು.

ಇಲ್ಲಿನ ಜಿಲ್ಲಾಡಳಿತ ಶನಿವಾರ ಹಮ್ಮಿಕೊಂಡಿದ್ದ ನಾರಾಯಣಗುರು ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಮೀಸಲಾತಿ ಎಂಬುದು ಇಂದು ರಾಜಕೀಯ ಅಸ್ತ್ರವಾಗಿದೆ. ಮೀಸಲಾತಿ ಸಿಗುವುದಿಲ್ಲ ಎಂದು ಗೊತ್ತಿದ್ದರೂ ಕೆಲವು ಸಮುದಾಯದವರು ಪ್ರತಿಭಟನೆ ಮಾಡುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಮತ ಬ್ಯಾಂಕ್ ಗಮನದಲ್ಲಿಟ್ಟುಕೊಂಡು ಈಗ ಮೀಸಲಾತಿಯ ಪ್ರಶ್ನೆ ಏಳುತ್ತಿದೆ. ನನಗೂ ಬೇಕು, ನನ್ನ ಜಾತಿಗೂ ಬೇಕು ಎಂದು ಮೀಸಲಾತಿ ಕೇಳುವವರು ಹೆಚ್ಚುತ್ತಲೇ ಇದ್ದಾರೆ. ಯಾರಿಗೆ? ಎಷ್ಟು? ಯಾವಾಗ? ಮೀಸಲಾತಿ ಕೊಡಬೇಕು ಎಂಬುದೇ ಇಂದಿನ ಸಮಸ್ಯೆಯಾಗಿದೆ. ಡಾ.ಅಂಬೇಡ್ಕರ್ ಅವರು 10 ವರ್ಷದವರೆಗೆ ಮೀಸಲಾತಿ ಕೊಡಬೇಕು ಎಂದಿದ್ದರು. ಆದರೆ, 75 ವರ್ಷಗಳಾದರೂ ಮೀಸಲಾತಿಗಾಗಿ ಎಲ್ಲಾ ಸಮಾಜದವರು ಪಟ್ಟು ಹಿಡಿಯುತ್ತಿದ್ದಾರೆ. ಇದನ್ನು ನೋಡಿದರೆ ಆಶ್ಚರ್ಯವಾಗುತ್ತದೆ' ಎಂದರು.

'ಮೀಸಲಾತಿ ಸಿಗಬೇಕಾಗಿರುವುದು ಬಡವರಿಗೆ, ದೀನ ದಲಿತರಿಗೆ, ತುಳಿತಕ್ಕೆ ಒಳಗಾದವರಿಗೆ. ಹೀಗಾಗಿ ಮೀಸಲಾತಿ ಜಾತಿ ಸೂಚಕವಾಗಬಾರದು' ಎಂದು ಈಶ್ವರಪ್ಪ ಅಭಿಪ್ರಾಯಪಟ್ಟರು.

ಮಳೆ: ಸಿಡಿಲು ಬಡಿದು ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶನಿವಾರ ಬಿರುಸಿನ ಮಳೆಯಾಗಿದೆ. ತಗ್ಗು ಪ್ರದೇಶದ ಮನೆಗಳು ಹಾಗೂ ಜಮೀನುಗಳಿಗೆ ನೀರು ನುಗ್ಗಿ ಹಾನಿಯಾಗಿದೆ.

ಜಮೀನಿನಲ್ಲಿ ಕೆಲಸ ಮಾಡುವಾಗ ಸಿಡಿಲು ಬಡಿದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿ ಚಿಕ್ಕನಹಳ್ಳಿ ಗ್ರಾಮದ ನಂದಮ್ಮ ನಿಂಗಪ್ಪ ಸಂಗವಾರ (44) ಮತ್ತು ದೇವತ್ಕಲ್ ಗ್ರಾಮದ ರಾಜು ಮಲ್ಲಿಕಾರ್ಜುನ (33) ಮೃತಪಟ್ಟಿದ್ದಾರೆ.

ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಗಂಡೋರಿ ನಾಲಾ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದ ದಾನೇಶ್ವರಿ ಸಿದ್ದಪ್ಪ ಕ್ಯಾಸರ್ (18) ಎಂಬುವರ ಮೃತದೇಹ ಬೆಳಕೋಟಾ ಜಲಾಶಯದ ಬಳಿ ಪತ್ತೆಯಾಗಿದೆ.

ಸಿಡಿಲಿಗೆ ಬೆನಕನಹಳ್ಳಿ ಗ್ರಾಮದಲ್ಲಿ ಎರಡು ಮೇಕೆ ಹಾಗೂ ಔರಾದ್ ತಾಲ್ಲೂಕಿನ ಮಾನುರ ಗ್ರಾಮದಲ್ಲಿ ಎತ್ತು ಸಾವಿಗೀಡಾಗಿವೆ.

ಕಲಬುರಗಿ, ಯಾದಗಿರಿ, ಬೀದರ್ ಮತ್ತು ರಾಯಚೂರು ಜಿಲ್ಲೆಯಲ್ಲಿ ಮಳೆಯಾಗಿದೆ. ಬೀದರ್‌ನಲ್ಲಿ ಒಂದು ಮತ್ತು ಹುಮನಾಬಾದ್ ತಾಲ್ಲೂಕಿನಲ್ಲಿ ಮೂರು ಮನೆಗಳು ಭಾಗಶಃ ಕುಸಿದಿವೆ.

ಭಾಲ್ಕಿ ತಾಲ್ಲೂಕಿನ ಖಟಕ ಚಿಂಚೋಳಿ ಸಮೀಪದ ದಾಡಗಿ ಗ್ರಾಮದಲ್ಲಿ ಕಾರಂಜಾ ಜಲಾಶಯದ ಚಿಕ್ಕಕಾಲುವೆ ಒಡೆದು ಹೊಲಗಳಿಗೆ ನೀರು ನುಗ್ಗಿ, ಬೆಳೆ ಹಾನಿಯಾಗಿದೆ. ಬೀದರ್ ತಾಲ್ಲೂಕಿನ ಮರಕಲ್ ಹಾಗೂ ಚಿಕ್ಕಪೇಟೆಯಲ್ಲಿ ತಗ್ಗು ಪ್ರದೇಶದಲ್ಲಿನ ಮನೆಗಳಿಗೆ ನೀರು ನುಗ್ಗಿ, ಆಹಾರಧಾನ್ಯಗಳು ನೀರು ಪಾಲಾಗಿವೆ.

ಕೊಡಗು ಜಿಲ್ಲೆಯ ಗೋಣಿ ಕೊಪ್ಪಲು ಭಾಗದಲ್ಲಿ ತೊರೆ ತೋಡುಗಳು ತುಂಬಿ ಹರಿಯುತ್ತಿವೆ. ವಿಜಯಪುರ ಜಿಲ್ಲೆಯಲ್ಲಿ ರಸ್ತೆಗಳು ಜಲಾವೃತವಾಗಿದ್ದು, ಸಂಚಾರಕ್ಕೆ ಅಡಚಣೆಯಾಯಿತು. ಶಿಖಾರಖಾನೆ ಪ್ರದೇಶದಲ್ಲಿ ಗಟಾರ ಉಕ್ಕಿ ಹರಿಯಿತು. ಹಲವು ಮನೆಗಳಿಗೂ ನೀರು ನುಗ್ಗಿ ದವಸಧಾನ್ಯ, ಪೀಠೋಪಕರಣಗಳು ಮುಳುಗಿವೆ. ಹತ್ತಾರು ವಾಹನಗಳು ನೀರಿನಲ್ಲಿ ಸಿಲುಕಿಕೊಂಡಿದ್ದವು.

ಕೆಲವು ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸೆ.11ರಂದು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಹಾವೇರಿ, ಧಾರವಾಡ, ಗದಗ, ಕೊಪ್ಪಳ, ಬೆಳಗಾವಿ, ಬಾಗಲಕೋಟೆ, ಕಲಬುರಗಿ ಜಿಲ್ಲೆಗಳಿಗೆ ಹಾಗೂ ಸೆ.12ರಂದು ಬೆಳಗಾವಿ, ಗದಗ, ಧಾರವಾಡ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.15	17,247	14,455
ಹಾರಂಗಿ	2,859	2,856.74	2,170	1,700
ಕಬಿನಿ	2284.00	2,283.32	7,896	5,000
ಹೇಮಾವತಿ	2,922	2,921.75	8,379	9,100
ಲಿಂಗನಮಕ್ಕಿ	1,819	1814.85	8551	6102
ಸೂಪಾ (ಮೀ)	564	551.15	6,166	1,387
ಮಾಣಿ	594	589.14	1127	-
ತುಂಗಭದ್ರಾ	1,633	1,632.44	46,263	34,617
ಮಲಪ್ರಭಾ	2079.5	2,079.50	1,694	1,694
ಘಟಪ್ರಭಾ	2175	2,175	3,848	3,848
ಭದ್ರಾ	186	184.10;	9307	12015
ಆಲಮಟ್ಟಿ (ಮೀ)	519.6	519.60	29,617	40,000
ನಾರಾಯಣಪುರ (ಮೀ)	492.25	491.51	61,000	56,850

* ನೆಲಮಟ್ಟದಿಂದ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 11-9-1997

● ಆರ್‌ಜೆಡಿ ಜತೆ ಕಾಂಗ್ರೆಸ್ ಮೈತ್ರಿ ಸಂಭವ

ಪಟ್ನಾ, ಸೆಪ್ಟೆಂಬರ್ 10 (ಪಿಟಿಐ, ಯುಎನ್‌ಐ)– ಬಿಹಾರ ರಾಜ್ಯ ಹಾಗೂ ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷವು ಅಧಿಕಾರಕ್ಕೆ ಬರುವುದನ್ನು ತಪ್ಪಿಸುವ ಉದ್ದೇಶದಿಂದ ಲಾಲೂ ಪ್ರಸಾದ್ ಯಾದವ್ ನೇತೃತ್ವದ ರಾಷ್ಟ್ರೀಯ ಜನತಾದಳದ ಜತೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವ ಸುಳಿವನ್ನು ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಇಂದು ನೀಡಿದರು.

'ಮತೀಯವಾದಿಗಳ ವಿರುದ್ಧ ಹೋರಾಡಲು ನಾವು ಬದ್ಧರಾಗಿದ್ದು, ಅದಕ್ಕಾಗಿ ರಾಷ್ಟ್ರೀಯ ಜನತಾದಳದ ಜತೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಲೂಬಹುದು' ಎಂದು ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 11-9-1972

● ಪಾಕ್ ಏಕತೆ ಭಗ್ನಕ್ಕೆ ಲಂಡನ್‌ನಲ್ಲಿ ವಿರೋಧಿ ನಾಯಕರ ಯತ್ನ

ನವದೆಹಲಿ, ಸೆಪ್ಟೆಂಬರ್ 10– ಈಗ ಲಂಡನ್‌ನಲ್ಲಿರುವ ಪಾಕಿಸ್ತಾನದ ಕೆಲವರು ವಿರೋಧ ಪಕ್ಷಗಳ ನಾಯಕರು ತಮ್ಮ ರಾಷ್ಟ್ರದ ವಿರುದ್ಧ ಒಳಸಂಚು ನಡೆಸುತ್ತಿದ್ದಾರೆಂದು ಪಾಕಿಸ್ತಾನದ ವಾರ್ತಾ ಸಚಿವ ಮೌಲಾನಾ ಕಾಸಾರ್ ನಿಯಾಜಿ ಅವರು ಇಂದು ಆರೋಪಿಸಿದರು.

ಈ ನಾಯಕರು ನಾಲ್ಕು ಬೇರೆ ಬೇರೆ ರಾಜ್ಯಗಳಿಗಾಗಿ ಒತ್ತಾಯಿಸುತ್ತಿದ್ದಾರೆಂದೂ, ಅವರು ಒಂದು ಪಾಕಿಸ್ತಾನಕ್ಕೆ ವಿರೋಧಿಗಳೆಂದೂ ಸಚಿವರು ಹೇಳಿದುದಾಗಿ ರೇಡಿಯೋ ಪಾಕಿಸ್ತಾನ ವರದಿ ಮಾಡಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಸೆಪ್ಟೆಂಬರ್ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣಪ್ರತಿಪದ್ ಗಂ. 13-15 **ನಕ್ಷತ್ರ:** ಪೂರ್ವಾಭಾದ್ರಾ ಗಂ. 08-02 **ಯೋಗ:** ಶೂಲ ಗಂ. 11-59, **ಕರಣ:** ಕೌಲವ ಗಂ. 13-15, ಸಿಂಹ ಮಾಸದ 25 ನೇ ದಿನ.
ರಾಹುಕಾಲ : ಸಾಯಂಕಾಲ 04:30 - 06:00 ಸೂರ್ಯೋದಯ : 06-23 ಸೂರ್ಯಾಸ್ತ : 06-32 ಮುಸ್ಲಿಂ ದಿನಾಂಕ : 14 ಸಫರ್
ದಿನ ವಿಶೇಷ : ಪಿತೃಪಕ್ಷ ತರ್ಪಣ ಪ್ರಾರಂಭ ಅಥವಾ ಮಹಾಲಯ ಪಕ್ಷ ಪ್ರಾರಂಭ (ದ.ಭಾರತ)
ಅದೃಷ್ಟ ಸಂಖ್ಯೆ : 7, 13

ಮೇಷ: ನಿಮ್ಮ ಪರಿಶ್ರಮಕ್ಕೆ ಹಾಗೂ ನಿಮ್ಮ ಪರೋಪಕಾರದ ವ್ಯಕ್ತಿತ್ವಕ್ಕೆ ಈ ದಿನ ನೀವು ತಕ್ಕ ಪ್ರತಿಫಲ ಹೊಂದುವಿರಿ. ನಿಮ್ಮ ಯೋಜನೆಗಳು ಯಾವುದೇ ಲೋಪ ದೋಷಗಳಿಲ್ಲದೇ ಸರಾಗವಾಗಿ ಮತ್ತು ನಿರಾತಂಕವಾಗಿ ಸಾಗುವುದು.

ವೃಷಭ: ನಿಮ್ಮ ಭಾವನೆಗಳಿಗೆ ಗೆಳೆಯರಿಂದ ಸೂಕ್ತ ಪ್ರತಿಕ್ರಿಯೆ. ನಿಮ್ಮ ಆತ್ಮ ವಿಶ್ವಾಸವೇ ನಿಮಗೆ ಶ್ರೀರಕ್ಷೆಯಾಗಿರುತ್ತದೆ. ನಿಮ್ಮ ಸಂಸಾರಿಕ ಜೀವನವು ನೆಮ್ಮದಿಯನ್ನು ಕಾಣುತ್ತದೆ. ಇಂದು ಎಲ್ಲಾ ರೀತಿಯ ಯಶಸ್ಸು ನಿಮ್ಮದಾಗಲಿದೆ.

ಮಿಥುನ: ಯಾವುದೇ ಲೆಕ್ಕಾಚಾರವಿಲ್ಲದ ನಿಮ್ಮ ಆರ್ಥಿಕ ಜೀವನ ಸಮಸ್ಯೆಯನ್ನು ಸೃಷ್ಟಿ ಮಾಡುವುದು. ಈ ದಿನವಾಗುವ ವಿಶೇಷ ವ್ಯಕ್ತಿಗಳ ಭೇಟಿಯು ಸಂತೋಷ ತರುವುದಲ್ಲದೆ, ನಿಮ್ಮ ಹೊಸ ಯೋಜನೆಗಳಿಗೆ ಚೈತನ್ಯ ತುಂಬುವುದು.

ಕರ್ಕಾಟಕ: ಲೇವಾದೇವಿ ವ್ಯವಹಾರ ನಡೆಸುವವರಿಗೆ ಸಂಕಷ್ಟದ ಪರಿಸ್ಥಿತಿ. ತಂತ್ರಜ್ಞಾನವನ್ನು ಬಳಸುವುದರಿಂದ ನಿಮ್ಮ ವ್ಯಾಪಾರದಲ್ಲಿ ಬಹಳಷ್ಟು ಪ್ರಗತಿ. ಜೀವನ ನಿರ್ವಹಣೆಗೆ ಆರ್ಥಿಕ ಅಡಚಣೆಗಳು ಇರುವುದಿಲ್ಲ.

ಸಿಂಹ: ರೇಷ್ಮೆ ವ್ಯಾಪಾರಿಗಳು ತಮ್ಮ ಉತ್ಪನ್ನಗಳನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು. ಯಾವುದೇ ರೀತಿಯ ದಿಟ್ಟ ನಿಲುವನ್ನು ತೆಗೆದುಕೊಳ್ಳಲು ಈ ದಿನ ಸಮಂಜಸವಲ್ಲ. ಅತ್ತೆ-ಸೊಸೆ ಬಾಂಧವ್ಯಗಳಲ್ಲಿ ಅಭಿಪ್ರಾಯ ಭೇದ ಸಾಧ್ಯತೆ.

ಕನ್ಯಾ: ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ವರ್ತಿಸಿ. ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಯಲ್ಲಿ ಹೆಚ್ಚಿನ ಗಮನವಿರಲಿ. ಬಳಕೆಯ ಜ್ಞಾನದ ಕೊರತೆ ಅಥವಾ ಅತಿಯಾದ ಬಳಕೆಯಿಂದಾಗಿ ವಸ್ತು ನಷ್ಟವಾಗಬಹುದು.

ತುಲಾ: ದಿನವಿಡೀ ಇತರರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ವ್ಯಸ್ತರಾಗಿರುವಿರಿ. ಇತರರ ಸಂತೋಷದಲ್ಲಿ ನೆಮ್ಮದಿ ಹಾಗೂ ಸಂತೋಷವನ್ನು ಪಡೆಯುವಿರಿ. ಈಶ್ವರನ ಸೇವೆಯಿಂದ ಹೆಚ್ಚಿನ ಕೆಲಸಕಾರ್ಯಗಳು ಕೂಡಿ ಬರುವುವು.

ವೃಶ್ಚಿಕ: ರಾಜಕೀಯ ವಿಷಯಗಳಲ್ಲಿ ಮೌನ ವಹಿಸುವುದು ಅತ್ಯಂತ ಲೇಸು. ಈ ದಿನ ತೆಗೆದುಕೊಳ್ಳುವ ಮೌನವೆಂಬ ಅಸ್ತ್ರವು ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಯಾವುದೇ ಕಾರಣಕ್ಕೂ ಉದ್ವೇಗಕ್ಕೆ ಒಳಗಾಗದಿರಿ.

ಧನು: ಅವಶ್ಯಕತೆಗೆ ಮೀರಿ ಕೆಲಸ ಮಾಡಬೇಕಾದ ಸಮಸ್ಯೆ ನಿಮಗಿಲ್ಲ. ನಿಮ್ಮ ನಿಯಮಿತ ಕೆಲಸಕ್ಕೆ ಸೂಕ್ತ ಪ್ರಶಂಸೆ ಹಾಗೂ ಉತ್ತೇಜನ ದೊರೆಯಲಿದೆ. ಯಾವುದೇ ಕಾರಣಕ್ಕೂ ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ.

ಮಕರ: ಹಿಂತಿರುಗಿ ಬರಬೇಕಾಗಿದ್ದ ಹಣಕ್ಕೆ ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳುವ ಬಗ್ಗೆ ಗಮನಹರಿಸಿ. ಕಬ್ಬಿಣ ಕೆಲಸದವರಿಗೆ ಶುಭ. ವಾಹನದಲ್ಲಿ ಚಲಿಸುವಾಗ ಜಾಗ್ರತೆ ಇರಲಿ. ಉದರ ವೇದನೆಯಿಂದ ಬಳಲುವ ಸಾಧ್ಯತೆ.

ಕುಂಭ: ನಿಮ್ಮ ಜವಾಬ್ದಾರಿಯನ್ನು ನಿಭಾಯಿಸಲು ಹೆಚ್ಚಿನ ಶ್ರಮಪಡಬೇಕಾಗಿಲ್ಲ. ಸ್ನೇಹಿತರ ಸಹಾಯ, ಸಹಕಾರ ಹಾಗೂ ಸಲಹೆಯಿಂದ ಎಲ್ಲವೂ ಸರಾಗವಾಗಿ ನಡೆಯಲಿದೆ. ನಿಮಗೆ ಅವಶ್ಯಕತೆ ಇರುವ ಧನ ಪ್ರಾಪ್ತಿಯಾಗಲಿದೆ.

ಮೀನ: ವೃತ್ತಿಪರವಾದ ಕೆಲಸ ಕಾರ್ಯದಲ್ಲಿ ನಿರ್ದಾಕ್ಷಿಣ್ಯವಾಗಿ ವ್ಯವಹರಿಸುವುದನ್ನು ಅಭ್ಯಸಿಸಿಕೊಳ್ಳಿರಿ. ಹಿರಿಯರ ಮಾರ್ಗದರ್ಶನದಂತೆ ಧಾರ್ಮಿಕ ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ.

ಪದಬಂಧ 5076

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ನೀರಿನ ಹಬೆ (2)
3. ಸಂಪೂರ್ಣ ಹಾನಿಯಿದು (4)
5. ನೆರವಿಗೊಂದು ಪರ್ಯಾಯ ಪದ (3)
6. ವನದಲ್ಲಿ ತಿಳಿಸಿರುವ ಸುದ್ದಿ (4)
8. ನರಕಾಧಿಪತಿ ಹೊತ್ತಿರುವ ಅಧಿಕ ಒಜ್ಜೆ! (4)
12.ಭೂಮಿಗೂ ಆಕಾಶಕ್ಕೂ ನಡುವಣ ಪ್ರದೇಶ (4)
14.ಒಪ್ಪವಾಗಿ ರಾಗದೊಡನೆ ಮೂಡಿದ ಪ್ರೀತಿ (4)
15.ಉತ್ತರದ ಕಡೆಯವನು ಪಡೆದಿರುವ ಸಂಬಳ (3)
16.ಸಭೆಯನ್ನು ವಿಸರ್ಜಿಸುವುದು (4)
17.ಜಾಗರಣೆ ಮಾಡಿದ ಬುದ್ಧಿವಂತೆ! (2)

ಮೇಲಿಂದ ಕೆಳಕ್ಕೆ
1.ಒಳ್ಳೆಯ ನಡತೆಯಿಲ್ಲದಿರುವಿಕೆ (5)
2.ಆದಾಯ ಮತ್ತು ಖರ್ಚು (4)
3.ಸರ ಬಿದ್ದಿರುವ ಕೊಳ (4)
4.ರೋಗ ಮೊದಲಾದವನ್ನು ಗುಣಪಡಿಸುವಿಕೆ (3)
7.ಕಾಫಿ ಕುಡಿದ ನಂತರ ತಪ್ಪನ್ನು ಮನ್ನಿಸುವುದು! (2)
9.ಒಜ್ಜೆ ಹೊತ್ತಿರುವ ನಮ್ಮ ದೇಶ! (3)
10.ಕೆಲಸಕ್ಕೆ ಬಾರದ ಮಾತಿದು (5)
11.ಜೇಬನ್ನು ತಡವಿಕೊಂಡಾಗ ಮಧು ಸಿಕ್ಕೀತೇ? (2)
12.ಅಂಗಾಗಗಳಿಗೆಲ್ಲಾ ಸುಗಂಧ ಲೇಪನ (4)
13.ಕ್ಷಮೆಯನ್ನು ಯಾಚಿಸುವುದು (4)
14.ಆಗಸದತ್ತ ಮುಖ ಮಾಡಿರು ಮಡಿವಾಳ! (3)



5075ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವರಕವಿ 3.ನಿವಾರಣೆ
5.ಸತತ 8.ವಿಲೋಮ
10.ಪಾಯಸ 12.ಸಹಗಮನ
13.ಮರಣ 15.ಕಲಹ
17.ತಕಲಿ 19.ತತ್ವಜ್ಞಾನಿ
20.ತಲೆನೋವು

ಮೇಲಿಂದ ಕೆಳಕ್ಕೆ:
2.ವಿಲಾಸಿ 3.ನಿಶ್ಚಿತ
4.ಭಿಲೋ 6.ತಲೆಗಡಿಕ
7.ಕ್ಷಯ 8.ವಿರಾಮ
9.ಮಸಣ 10.ಪಾನಕ
11.ಸನ್ನಾಹ 14.ರಥ16.ಲಜ್ಜೆ
17.ತರ್ಜನಿ 18.ಲಿಖಿತ

ಸುಡೊಕು 5462

7	5			1			8	
		6			9			7
4			7				9	6
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5461 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯುವ ಕಾಂಗ್ರೆಸ್ಸಿನ 'ಉದ್ಯೋಗ ಸೃಷ್ಟಿ' ವೆಬ್‌ಗೆ ಚಾಲನೆ

ಯುವಧ್ವನಿ ನಮ್ಮ ಧ್ವನಿ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುವಧ್ವನಿ ನಮ್ಮ ಧ್ವನಿಯಾಗಬೇಕು ಎಂಬ ಧ್ಯೇಯ ಇಟ್ಟುಕೊಂಡು ಯುವ ಕಾಂಗ್ರೆಸ್ಸಿನ ಉದ್ಯೋಗ ಸೃಷ್ಟಿ ವೆಬ್‌ಸೈಟ್ ಆರಂಭಿಸಿದ್ದೇವೆ. ಯುವಕರ ನಿರುದ್ಯೋಗ ಸಮಸ್ಯೆ ಬಗ್ಗೆ ಕೇವಲ ಟೀಕೆ ಮಾಡದೆ, ಅವರ ಅಭಿಪ್ರಾಯ ಸಂಗ್ರಹಿಸಲು ಮುಂದಾಗಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಯುವ ಕಾಂಗ್ರೆಸ್ಸಿನ ಉದ್ಯೋಗ ಸೃಷ್ಟಿ ವೆಬ್‌ಸೈಟ್ ಅನ್ನು (www.udyogasrishti.in) ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, 'ಇಡೀ ರಾಜ್ಯದಲ್ಲಿ ನಿರುದ್ಯೋಗಿ ಯುವಕರಿಗೆ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಈಗಾಗಲೇ ಯುವ ಕಾಂಗ್ರೆಸ್ ಕಾರ್ಯಕರ್ತರು ಮನೆ ಮನೆಗೆ ಹೋಗಿ 40 ಸಾವಿರ ನಿರುದ್ಯೋಗಿಗಳ ಹೆಸರು ನೋಂದಣಿ ಮಾಡಿಸಿದ್ದಾರೆ' ಎಂದರು.

> **ನಾವು ಯುವ ದೃಷ್ಟಿ, ಉದ್ಯೋಗ ಸೃಷ್ಟಿ ಎಂಬ ಕಾರ್ಯಕ್ರಮ ಆಯೋಜಿಸಿದ್ದೇವೆ. ಈಗ ಉದ್ಯೋಗ ಸೃಷ್ಟಿ ವೆಬ್‌ಸೈಟ್ ಮೂಲಕ ಯುವಕರು ಹೆಸರು ನೋಂದಣಿ ಮಾಡಿಕೊಳ್ಳಬಹುದು**
> **ಮೊಹಮ್ಮದ್ ನಲಪಾಡ್,** ಯುವ ಕಾಂಗ್ರೆಸ್ ಅಧ್ಯಕ್ಷ

'ನೇಮಕಾತಿಯಲ್ಲಿನ ಭ್ರಷ್ಟಾಚಾರ ದೊಡ್ಡ ಕಳಂಕ. ಇತ್ತೀಚೆಗೆ ಯುವಕರು ಯಾವುದೇ ಪಕ್ಷದ ಕರೆ ಇಲ್ಲದೆ ತಾವಾಗಿಯೇ ಉದ್ಯೋಗಸೌಧದ ಮುಂದೆ ಪ್ರತಿಭಟನೆ ಮಾಡಿದ್ದನ್ನು ನಾವು ನೋಡಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಯುವಕರ ಬದುಕಿನಲ್ಲಿ ಆಶಾಕಿರಣ ಮೂಡಿಸಿ, ಖಾಸಗಿ ಉದ್ಯೋಗ ಸೃಷ್ಟಿಸುವುದರ ಜತೆಗೆ ಸರ್ಕಾರಿ ಉದ್ಯೋಗ ತುಂಬಬೇಕು ಎಂದು ಧ್ವನಿ ಎತ್ತಲು ಅವರು ಹೆಸರು ನೋಂದಣಿ ಮಾಡಿಕೊಳ್ಳಬೇಕು' ಎಂದು ಮನವಿ ಮಾಡಿದರು.

'ರಾಹುಲ್ ಗಾಂಧಿ ನೇತೃತ್ವದಲ್ಲಿ ಪಕ್ಷ ಹಮ್ಮಿಕೊಂಡಿರುವ 'ಭಾರತ ಒಗ್ಗೂಡಿಸಿ' ಅವರ ಜತೆ ಹೆಜ್ಜೆ ಹಾಕಲು ಬಯಸುವವರು ವೆಬ್‌ಸೈಟ್‌ನಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬಹುದು. ರಾಜ್ಯದಲ್ಲಿ 21 ದಿನ ಯಾತ್ರೆ ಸಾಗಲಿದ್ದು, ಎರಡು ಕಡೆಗಳಲ್ಲಿ ರಾಹುಲ್ ಗಾಂಧಿ ಜೊತೆ ನಿರುದ್ಯೋಗಿ ಯುವಕರಿಗೆ ಚರ್ಚೆಗೆ ಅವಕಾಶ ನೀಡುತ್ತೇವೆ' ಎಂದರು.

'ಎಲ್ಲರಿಗೂ ಸರ್ಕಾರ ಉದ್ಯೋಗ ನೀಡಲು ಸಾಧ್ಯವಿಲ್ಲ ಎಂಬುದನ್ನು ಒಪ್ಪುತ್ತೇವೆ. ಆದರೆ, ಖಾಸಗಿ ಉದ್ಯೋಗ ಸೃಷ್ಟಿಯ ಬಗ್ಗೆ ಹೆಚ್ಚು ಗಮನಹರಿಸಬೇಕು. ಕೇವಲ ಬೆಂಗಳೂರು ಮಾತ್ರವಲ್ಲ, ಎಲ್ಲ ಕಡೆಗಳಲ್ಲೂ ಉದ್ಯೋಗ ಸೃಷ್ಟಿಗೆ ಅವಕಾಶ ನೀಡಿ ಯುವಕರ ಬದುಕಿನಲ್ಲಿ ಬೆಳಕು ತರಬೇಕು. ಅದಕ್ಕಾಗಿ ನೀತಿ ರೂಪಿಸಬೇಕು' ಎಂದರು.

ಚಿತ್ರದುರ್ಗ: 'ಮಕ್ಕಳೊಂದಿಗೆ ನಾವು' ಜಾಥಾ

ಲೈಂಗಿಕ ದೌರ್ಜನ್ಯ ಪ್ರಕರಣದ ಉನ್ನತ ತನಿಖೆಗೆ ವಿವಿಧ ಸಂಘಟನೆಗಳ ಒತ್ತಾಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗದಲ್ಲಿ ಶನಿವಾರ ನಡೆದ 'ಮಕ್ಕಳೊಂದಿಗೆ ನಾವು' ಜಾಥಾದಲ್ಲಿ ನೂರಾರು ಜನರು ಹೆಜ್ಜೆಹಾಕಿದರು.

ಚಿತ್ರದುರ್ಗ: ಪ್ರೌಢಶಾಲಾ ವಿದ್ಯಾರ್ಥಿನಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಉನ್ನತ ತನಿಖೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಶನಿವಾರ 'ಮಕ್ಕಳೊಂದಿಗೆ ನಾವು' ಎಂಬ ಜಾಥಾ ನಡೆಸಿದರು.

ನಗರದ ಕನಕ ವೃತ್ತದಿಂದ ಆರಂಭವಾದ ಜಾಥಾ ಸಂಗೊಳ್ಳಿ ರಾಯಣ್ಣ ವೃತ್ತ, ಗಾಂಧಿ ವೃತ್ತ, ಬಿ.ಡಿ. ರಸ್ತೆ, ಪ್ರವಾಸಿ ಮಂದಿರದ ಮೂಲಕ ಒನಕೆ ಓಬವ್ವ ವೃತ್ತ ತಲುಪಿತು. ಬಹಿರಂಗ ಸಭೆ ನಡೆಸಿ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

'ಬಾಲನ್ಯಾಯ ಕಾಯ್ದೆ ಹಾಗೂ ಪೋಕ್ಸೊ ಕಾಯ್ದೆಗಳು ಸಮರ್ಪಕವಾಗಿ ಪಾಲನೆಯಾಗುತ್ತಿಲ್ಲ. ಸಂತ್ರಸ್ತರಿಗೆ ಸುರಕ್ಷಿತ ಮನೋಭಾವ ಉಂಟು ಮಾಡಿಲ್ಲ. ಮಕ್ಕಳ ಸ್ನೇಹಿ ವಾತಾವರಣ ನಿರ್ಮಾಣವಾಗಿಲ್ಲ. ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ವಿಳಂಬ ಧೋರಣೆ ಅನುಸರಿಸಿದ್ದಾರೆ. ಸಾಕ್ಷ್ಯ ನಾಶ ಮಾಡಲು ಅವಕಾಶ ನೀಡಿದ್ದಾರೆ' ಎಂದು ಆರೋಪಿಸಿದರು.

'ಸಂತ್ರಸ್ತ ಬಾಲಕಿಯರ ಪರ ನಿಲ್ಲಬೇಕಾದ ಸರ್ಕಾರ ಆರೋಪಿಗಳ ಪರವಾಗಿದೆ. ಮಂತ್ರಿಗಳು ಆರೋಪಿಗಳನ್ನು ಬೆಂಬಲಿಸಿ ಹೇಳಿಕೆ ನೀಡುತ್ತಿದ್ದಾರೆ. ಇದು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರ ಬಗೆಗೆ ವಿಶ್ವಾಸ ಉಳಿದಿಲ್ಲ. ನ್ಯಾಯಾಂಗದ ಮೂಲಕ ಮಾತ್ರವೇ ನ್ಯಾಯ ಸಿಗಲು ಸಾಧ್ಯ' ಎಂದು ಒತ್ತಾಯಿಸಿದರು.

'ಮಾನವೀಯತೆ ನೆಲೆಯ ಮೇಲೆ ಅನೇಕರು ಈ ಹೋರಾಟವನ್ನು ಬೆಂಬಲಿಸಿದ್ದಾರೆ. ಮಕ್ಕಳ ಪರವಾಗಿ ನಾವಿದ್ದೇವೆ ಎಂಬ ಸಂದೇಶವನ್ನು ರವಾನಿಸುವ ಉದ್ದೇಶದಿಂದ ಈ ಜಾಥಾ ನಡೆಸಲಾಗಿದೆ. ನೊಂದ ವಿದ್ಯಾರ್ಥಿನಿಯರಿಗೆ ನ್ಯಾಯ ಸಿಗಬೇಕು. ಇದರಲ್ಲಿ ಸ್ವಜನಪಕ್ಷಪಾತಕ್ಕೆ ಅವಕಾಶ ಇಲ್ಲದೇ ತನಿಖೆ ನಡೆಸಬೇಕು. ಪೊಲೀಸ್ ತನಿಖೆಯಲ್ಲಿ ಹಲವು ಲೋಪಗಳು ಬೆಳಕಿಗೆ ಬಂದಿವೆ' ಎಂದು ಒಡನಾಡಿ ಸೇವಾ ಸಂಸ್ಥೆಯ ಸ್ಟ್ಯಾನ್ಲಿ ದೂರಿದರು.

> **ನ್ಯಾಯಾಲಯದ ಕಣ್ಗಾವಲಿನಲ್ಲಿ ಪ್ರಕರಣದ ತನಿಖೆ ನಡೆದರೆ ಮಾತ್ರ ನ್ಯಾಯ ಸಿಗಲು ಸಾಧ್ಯ. ಸಂತ್ರಸ್ತೆಯರಿಗೆ ನ್ಯಾಯ ಸಿಗುವವರೆಗೆ ಈ ಹೋರಾಟ ಮುಂದುವರಿಯಲಿದೆ.**
> **ಪರಶುರಾಮ್,** ಒಡನಾಡಿ ಸೇವಾ ಸಂಸ್ಥೆ

ಬೆಂಗಳೂರಿನ ನೈಜ ಹೋರಾಟಗಾರರ ಸಂಘದ ವೆಂಕಟೇಶ ಮಾತನಾಡಿ, 'ದೌರ್ಜನ್ಯಕ್ಕೀಡಾದ ಮಕ್ಕಳಿಗೆ ನೈತಿಕ ಸ್ಥೈರ್ಯ ತುಂಬುವ ಉದ್ದೇಶದಿಂದ ಈ ಜಾಥಾ ನಡೆಸಲಾಗಿದೆ. ಇದು ಯಾರ ವಿರುದ್ಧವೂ ಅಲ್ಲ, ಪರವೂ ಅಲ್ಲ. ಪೊಲೀಸ್ ವ್ಯವಸ್ಥೆ ಆರೋಪಿ ಪರ ಇದೆ. ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಯಬೇಕು' ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ ಸ್ಥಳಕ್ಕೆ ಧಾವಿಸಿ ಮನವಿ ಸ್ವೀಕರಿಸಬೇಕು ಎಂದು ಪಟ್ಟುಹಿಡಿದು ಒನಕೆ ಓಬವ್ವ ವೃತ್ತದಲ್ಲಿ ಧರಣಿ ನಡೆಸಿದರು. ಜಿಲ್ಲಾಧಿಕಾರಿ ಕಚೇರಿಯ ಪ್ರತಿನಿಧಿಯೊಬ್ಬರು ಬಂದು ಮನವಿ ಸ್ವೀಕರಿಸಿದರು.

ಶಿವಮೊಗ್ಗದ ರಂಗಕರ್ಮಿ ಪ್ರತಿಭಾ ಸಾಗರ, ಮೈಸೂರಿನ ಆರ್‌ಎಲ್‌ಎಚ್‌ಪಿ ಸಂಸ್ಥೆಯ ಸರಸ್ವತಿ, 'ವಿ ಕೇರ್' ಸಂಸ್ಥೆಯ ಕುಮುದಿನಿ, ಕರ್ನಾಟಕ ರಕ್ಷಣಾ ವೇದಿಕೆಯ ಪುರುಷೋತ್ತಮ, ಪಿಯುಸಿಎಲ್‌ನ ಡಾ.ಲಕ್ಷ್ಮೀನಾರಾಯಣ, ರತಿ ರಾವ್, ಅಪರ್ಣಾ, ಪ್ರೊ.ಸಿ.ಕೆ.ಮಹೇಶ್, ದುರುಗೇಶ್ ಇದ್ದರು.

ವಿಕ್ರಮ ವಿಸಾಜಿ ಕೃತಿಗೆ 'ಡಾ. ಗಿರಡ್ಡಿ ಪ್ರತಿಷ್ಠಾನ'ದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಡಾ.ಗಿರಡ್ಡಿ ಗೋವಿಂದರಾಜ ಅವರ ಹೆಸರಿನಲ್ಲಿ, ನಗರದ ಗಿರಡ್ಡಿ ಗೋವಿಂದರಾಜ ಫೌಂಡೇಷನ್ ಪ್ರಸಕ್ತ ಸಾಲಿನಿಂದ ನೀಡುತ್ತಿರುವ ರಾಜ್ಯ ಮಟ್ಟದ 'ಅತ್ಯುತ್ತಮ ವಿಮರ್ಶಾ ಕೃತಿ' ಪ್ರಶಸ್ತಿಗೆ ಬೆಂಗಳೂರಿನ ಅಭಿನವ ಪ್ರಕಾಶನ ಪ್ರಕಟಿಸಿರುವ, ಕಲಬುರಗಿಯ ಡಾ.ವಿಕ್ರಮ ವಿಸಾಜಿ ಅವರ 'ಪಠ್ಯದ ಭವಾವಳಿ' ಕೃತಿ ಆಯ್ಕೆಯಾಗಿದೆ.

ಈ ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಇದು ಗಿರಡ್ಡಿ ಗೋವಿಂದರಾಜ ಫೌಂಡೇಷನ್ ವಿಮರ್ಶಾ ಕೃತಿಗೆ ನೀಡುತ್ತಿರುವ ಮೊದಲ ಪ್ರಶಸ್ತಿಯಾಗಿದೆ.

'ಪ್ರಶಸ್ತಿಗಾಗಿ ರಾಜ್ಯದ ವಿವಿಧ ಭಾಗಗಳಿಂದ ಕೃತಿಗಳನ್ನು ಆಹ್ವಾನಿಸಲಾಗಿತ್ತು. ಡಾ.ರಾಜೇಂದ್ರ ಚೆನ್ನಿ, ಪ್ರೊ.ಟಿ.ಪಿ.ಅಶೋಕ ಮತ್ತು ಪ್ರೊ. ರಾಘವೇಂದ್ರ ಪಾಟೀಲ ಅವರಿದ್ದ ಆಯ್ಕೆ ಸಮಿತಿ ಡಾ.ವಿಕ್ರಮ ವಿಸಾಜಿ ಅವರ ವಿಮರ್ಶಾ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ' ಎಂದು ಪ್ರತಿಷ್ಠಾನದ ಅಧ್ಯಕ್ಷ ವೆಂಕಟೇಶ ಮಾಚಕನೂರ ತಿಳಿಸಿದ್ದಾರೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ

'ಜನಸ್ಪಂದನ'ಅಲ್ಲ, 'ಜನಮರ್ದನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವರಾಜ ಬೊಮ್ಮಾಯಿ ಸರ್ಕಾರದ 'ಜನಸ್ಪಂದನ' ಅಲ್ಲ, 'ಜನ ಮರ್ದನ ಎಂದು ಹೆಸರಿಡಬೇಕಾಗಿತ್ತು. ಮೂರು ವರ್ಷಗಳ ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ ಮತ್ತು ಸುಳ್ಳು ಹೇಳಿಕೆಗಳಿಂದಾಗಿ ಜನ ನಲುಗಿಹೋಗಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸ್ಪಂದನ ಮಾಡಲು ಜನರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲಿದೆ? ವಿರೋಧ ಪಕ್ಷಗಳು ಅವರನ್ನು ಪ್ರಶ್ನೆ ಮಾಡಿದರೆ ಸಿಬಿಐ, ಇ.ಡಿ, ಐಟಿ ದಾಳಿ ನಡೆಸಿ ಬೆದರಿಸುತ್ತಾರೆ. ನಾಗರಿಕರು ಪ್ರಶ್ನೆ ಮಾಡಿದರೆ ಸುಳ್ಳು ಕೇಸ್‌ಗಳನ್ನು ಹಾಕಿ ಜೈಲಿಗೆ ಹಾಕುತ್ತಾರೆ. ಹೀಗಾದರೆ ಜನ ಸ್ಪಂದಿಸುವುದಾದರೂ ಹೇಗೆ' ಎಂದು ಪ್ರಶ್ನಿಸಿದರು.

'ಜನತೆಗೆ ಮುಕ್ತವಾಗಿ ಮಾತನಾಡಲು ಅವಕಾಶ ಕೊಟ್ಟರೆ ಜನಾಕ್ರೋಶದಲ್ಲಿ ಅವರ ಜನಸ್ಪಂದನ ಕೊಚ್ಚಿಹೋಗಬಹುದು. ಸರ್ಕಾರದಲ್ಲಿ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ ಎಂದು ಅವರ ಪಕ್ಷದ ಸಚಿವರು ಮತ್ತು ಶಾಸಕರೇ ಹೇಳುತ್ತಿದ್ದಾರೆ. ಇನ್ನೊಂದೆಡೆ ಗುತ್ತಿಗೆದಾರರ ಸಂಘ, ಶಿಕ್ಷಣ ಸಂಸ್ಥೆಗಳ ಒಕ್ಕೂಟ ನೇರವಾಗಿ ಪ್ರಧಾನಿ ಮೋದಿಗೆ ಪತ್ರ ಬರೆಯುತ್ತಿದೆ. ರಾಜ್ಯ ಹೈಕೋರ್ಟ್ ಒಂದಲ್ಲ, ಎರಡಲ್ಲ ಹಲವು ಬಾರಿ ನೇರವಾಗಿ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ' ಎಂದಿದ್ದಾರೆ.

'ಆದಷ್ಟು ಬೇಗ ಚುನಾವಣೆ ನಡೆದು ಈ ಸರ್ಕಾರ ತೊಲಗಿ ಹೋದರೆ ಸಾಕು ಎಂದು ಜನ ಕಾಯುತ್ತಿದ್ದಾರೆ. ನಮ್ಮ (ಕಾಂಗ್ರೆಸ್) ಅಧಿಕಾರ ಅವಧಿಯ ಹಗರಣಗಳನ್ನು ಬಯಲುಗೊಳಿಸುತ್ತಾರೆ ಎಂದು ಬ್ಲಾಕ್ ಮೇಲ್ ಮಾಡುತ್ತಿದ್ದಾರೆ. ಇವರ ಹುಸಿ ಬೆದರಿಕೆಗೆ ನಾವು ಹೆದರುವುದಿಲ್ಲ. ಕಳೆದ ಹದಿನಾರು ವರ್ಷಗಳಲ್ಲಿ ಹನ್ನೊಂದು ವರ್ಷ ಇವರೇ ಅಧಿಕಾರದಲ್ಲಿದದ್ದು. ಧೈರ್ಯ ಇದ್ದರೆ ಅದನ್ನೂ ಸೇರಿಸಿ ತನಿಖೆ ಮಾಡಲಿ. ನಾವು ತನಿಖೆ ಎದುರಿಸಲು ಸಿದ್ಧ' ಎಂದು ಸವಾಲು ಹಾಕಿದ್ದಾರೆ.

'ಹೈಕಮಾಂಡ್‌ಗೆ ₹ 2000 ಕೋಟಿ ಕೊಟ್ಟು ಮುಖ್ಯಮಂತ್ರಿಯಾಗಿದ್ದಾರೆ. ಮಾಜಿ ಮುಖ್ಯಮಂತ್ರಿಯ ಮಗ ಲಂಚ ಹೊಡೆಯುತ್ತಿದ್ದಾರೆ ಎಂದು ಹೇಳುತ್ತಿರುವುದು ಬಿಜೆಪಿ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್. ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ₹ 2 ಸಾವಿರ ಕೋಟಿ ಕಿಕ್ ಬ್ಯಾಕ್ ಪಡೆಯಲಾಗಿದೆ ಎಂದು ಮೊದಲ ಬಾರಿಗೆ ಹೇಳಿದವರು ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್' ಎಂದು ಸಿದ್ದರಾಮಯ್ಯ ಅವರು ಕುಟುಕಿದ್ದಾರೆ.

'ಖಾಲಿ ಕುರ್ಚಿಗಳ ಉತ್ಸವ'

ಬಿಜೆಪಿ ಸರ್ಕಾರದ 'ಜನ ಸ್ಪಂದನ' ಕಾರ್ಯಕ್ರಮವನ್ನು ಟೀಕಿಸಿ ಸರಣಿ ಟ್ವೀಟ್ ಮಾಡಿರುವ ರಾಜ್ಯ ಕಾಂಗ್ರೆಸ್ ಘಟಕ, 'ಇನ್ನೂ ಸಂಪುಟ ಸಚಿವರೊಬ್ಬರ ಸಾವಿನ ಸೂತಕವೇ ಕಳೆದಿಲ್ಲ. ಜೀವ ಬಿಟ್ಟ ತಮ್ಮದೇ ಪಕ್ಷದ ನಿಷ್ಠಾವಂತ ಕಾರ್ಯಕರ್ತನ ಕುಟುಂಬದ ಕಣ್ಣೀರು ಆರಿಲ್ಲ. ತಮ್ಮವರ ಸಾವುಗಳೇ ಬಿಜೆಪಿಗೆ ಕೊಂಚವೂ ಬೇಸರ ಮೂಡಿಸಿಲ್ಲ ಎಂದಾದರೆ ಜನರ ನೋವಿಗೆ ಮರುಕಪಡುವರೆ? ರಾಜ್ಯ ಬಿಜೆಪಿ ಸರ್ಕಾರಕ್ಕೆ ಕನಿಷ್ಠ ಅಂತಃಕರಣವಿಲ್ಲ. ಬಿಜೆಪಿಯ ಭ್ರಷ್ಟೋತ್ಸವದ ಮುಂದೆ ಮಾನವೀಯತೆ ಕಳೆದುಹೋಗಿದೆ' ಎಂದು ವ್ಯಂಗ್ಯವಾಡಿದೆ.

'ಬಿಜೆಪಿ ಸರ್ಕಾರ ಸಮಾವೇಶಗಳಿಗೆ ಹೆಚ್ಚು ಖರ್ಚು ಮಾಡುವ ಅಗತ್ಯವಿಲ್ಲ. ಕೇವಲ ಶೇ 40 ಕುರ್ಚಿಗಳನ್ನು ತರಿಸಿದರೆ ಸಾಕು. ಶೇ 40 ಶಾಮಿಯಾನ ಮಾತ್ರ ಹಾಕಿದರೆ ಸಾಕು. ಏಕೆಂದರೆ, ಕುರ್ಚಿಗಳು ತುಂಬುವುದು ಶೇ 40ರಷ್ಟು ಮಾತ್ರ. ಲೂಟಿ ಹಣವನ್ನು ಅನಗತ್ಯ ಖರ್ಚು ಮಾಡುವುದಕ್ಕಿಂತ ಕಾರ್ಯಕ್ರಮದ ಗುತ್ತಿಗೆದಾರರಿಗೆ ಶೇ 40 ಹಣ ನೀಡಿದರೆ ಸಾಕು. ಇದು ಜನಸ್ಪಂದನೆಯಲ್ಲ, ಖಾಲಿ ಕುರ್ಚಿಗಳ ಸ್ಪಂದನೆ. ಜನೋತ್ಸವವಲ್ಲ, ಖಾಲಿ ಕುರ್ಚಿಗಳ ಉತ್ಸವ' ಎಂದೂ ಟೀಕಿಸಿದೆ.

ಬಿಸಿನೀರಿನಿಂದ ವಿದ್ಯಾರ್ಥಿಗೆ ಗಾಯ: ಹಲವರ ವಿಚಾರಣೆ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಖಾಸಗಿ ಶಾಲೆಯೊಂದರಲ್ಲಿ ಬಿಸಿ ನೀರು ಬಿದ್ದು ಎರಡನೇ ತರಗತಿ ವಿದ್ಯಾರ್ಥಿಗೆ ಸುಟ್ಟ ಗಾಯಗಳಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಸ್ಕಿ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

'ಬಿಸಿನೀರಿನಿಂದ ವಿದ್ಯಾರ್ಥಿ ಗಾಯಗೊಂಡ ಪ್ರಕರಣದ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದ್ದು, ಬಹುತೇಕ ಮಂದಿ ವಿದ್ಯಾರ್ಥಿಯಿಂದಲೇ ತಪ್ಪಾಗಿದೆ ಎನ್ನುತ್ತಿದ್ದಾರೆ. ತನಿಖೆ ಮುಂದುವರಿದಿದ್ದು, ಇನ್ನೂ ಕೆಲವರನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ' ಎಂದು ಠಾಣೆಯ ಪಿಎಸ್‌ಐ ಸಿದ್ಧರಾಮ ಬಿದರಾಣಿ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜಿ ಸಂಧಾನ: ಪೋಕ್ಸೊ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಒಂದೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು
- ಪ್ರಕರಣ ಇತ್ಯರ್ಥಕ್ಕೆ ಪೋಷಕರ ನಿರ್ಧಾರ

ಬೆಂಗಳೂರು: ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿದ್ದ ಬಾಲಕನೊಬ್ಬನ ವಿರುದ್ಧದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ ಅಡಿ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದು ಕೋರಿ ಆರೋಪಿ ಬಾಲಕನ ಪರವಾಗಿ ಆತನ ತಂದೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

'ಆರೋಪಿ ಹಾಗೂ ಸಂತ್ರಸ್ತೆ ಒಂದೇ ತರಗತಿಯಲ್ಲಿ ಓದುತ್ತಿದ್ದು ಸ್ನೇಹಿತರಾಗಿದ್ದಾರೆ. ಪರಸ್ಪರರ ಮೇಲೆ ಮೂಡಿದ್ದ ಆಕರ್ಷಣೆಯಿಂದ ಈ ಕೃತ್ಯ ನಡೆದಿದೆ. ವಿಶೇಷವಾಗಿ ಬಾಲಕ–ಬಾಲಕಿಯರ 10ರಿಂದ 19 ವರ್ಷಗಳ ಮಧ್ಯದ ಅವಧಿಯು ಯೌವ್ವನಕ್ಕೆ ಕಾಲಿಡುವ ಹಂತ. ಈ ಹಂತದಲ್ಲಿ ಮಕ್ಕಳು ತಮ್ಮ ನಡವಳಿಕೆಯಿಂದ ಮುಂದಾಗುವ ಪರಿಣಾಮಗಳನ್ನು ನಿರ್ಲಕ್ಷಿಸುತ್ತಾರೆ. ಹೀಗಾಗಿ, ಪೋಕ್ಸೊ ಪ್ರಕರಣಗಳಲ್ಲಿ ಸಿಲುಕಿ, ಗಂಭೀರ ಪರಿಣಾಮ ಎದುರಿಸುತ್ತಾರೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

'ಆರೋಪಿ ಬಾಲಕನ ಅಂಕಪಟ್ಟಿ ಪರಿಶೀಲಿಸಿದರೆ, ಆತ ಪ್ರತಿಭಾವಂತ ವಿದ್ಯಾರ್ಥಿಯಾಗಿರುವುದು ಕಂಡುಬರುತ್ತಿದೆ. ಇದೇ ವೇಳೆ ಸಂತ್ರಸ್ತೆ ಹಾಗೂ ಆರೋಪಿಯ ಪಾಲಕರು ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳಲು ನಿರ್ಧರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜಿ ನಿರ್ಧಾರವನ್ನು ಒಪ್ಪಿಕೊಂಡು ಆರೋಪಿಯನ್ನು ಪ್ರಕರಣದಿಂದ ಮುಕ್ತಿಗೊಳಿಸುವುದು ಸೂಕ್ತ' ಎಂದು ನ್ಯಾಯಪೀಠ ಹೇಳಿದೆ.

ಕಲುಷಿತ ನೀರು ಕುಡಿದು ವೃದ್ಧ ಸಾವು

ಜೇವರ್ಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮಂದೇವಾಲ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ತಾಯಪ್ಪ ಯಂಕಪ್ಪ ಬೇಲೂರ (80) ಎಂಬುವರು ಮೃತಪಟ್ಟು, ವಾಂತಿ–ಭೇದಿಯಿಂದ ಅಸ್ವಸ್ಥಗೊಂಡಿರುವ 46 ಮಂದಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ಅಸ್ವಸ್ಥರು ಮಂದೇವಾಲದ ಪ್ರಾಥಮಿಕ ಆರೋಗ್ಯ ಕೇಂದ್ರ, ಜೇವರ್ಗಿಯ ತಾಲ್ಲೂಕು ಆಸ್ಪತ್ರೆ ಮತ್ತು ಕಲಬುರಗಿಯ ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿದ್ದಾರೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ (ಪ್ರಭಾರ) ಡಾ. ಶರಣಬಸಪ್ಪ ಕ್ಯಾತನಾಳ ತಿಳಿಸಿದರು.

'ಗ್ರಾಮದಲ್ಲಿ ಪೂರೈಕೆಯಾಗುವ ಕೊಳವೆಬಾವಿ ನೀರು ಜೊತೆ ಕಲುಷಿತ ನೀರು ಮಿಶ್ರಣಗೊಂಡಿದೆ. ಅದೇ ನೀರನ್ನು ಕುಡಿದ ಗ್ರಾಮಸ್ಥರು ವಾಂತಿ–ಭೇದಿಯಿಂದ ನರಳುತ್ತಿದ್ದಾರೆ' ಎಂದು ಅವರು ತಿಳಿಸಿದರು.

'ಅಸ್ವಸ್ಥರನ್ನು ಭೇಟಿಯಾಗಿ, ಮಾಹಿತಿ ಪಡೆದಿದ್ದೇನೆ. ಕಲುಷಿತ ನೀರು ಹೇಗೆ ಪೂರೈಕೆಯಾಯಿತು ಎಂಬುದರ ಬಗ್ಗೆ ಮಾಹಿತಿ ಪಡೆದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ತಾಯಪ್ಪ ಬೇಲೂರ ಕುಟುಂಬಕ್ಕೆ ₹ 1 ಲಕ್ಷ ಪರಿಹಾರ ಧನದ ಚೆಕ್ ನೀಡಿದ್ದೇನೆ' ಎಂದು ಜೇವರ್ಗಿ ಶಾಸಕ ಡಾ. ಅಜಯ ಸಿಂಗ್ ತಿಳಿಸಿದರು.

'ಮೂರು ದಿನಗಳ ಹಿಂದೆ ಚಂದಮ್ಮ (90) ಎಂಬುವರು ಮೃತಪಟ್ಟಿದ್ದು, ಅವರ ಸಾವಿಗೆ ಕಲುಷಿತ ನೀರು ಕಾರಣವೇ ಅಥವಾ ಬೇರೆ ಸಮಸ್ಯೆಯಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಮೃತ ತಾಯಪ್ಪ ಅವರ ಮನೆಯಿಂದ ನೀರಿನ ಮಾದರಿ ಸಂಗ್ರಹಿಸಲಾಗಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಸಿದ್ದು ಪಾಟೀಲ ತಿಳಿಸಿದರು.

ಕೆಎಸ್‌ಆರ್‌ಟಿಸಿ 30ಗಳ ಮೊದಲ ದಿನವೇ ಸಂಬಳ

ಬೆಂಗಳೂರು: ಎಲ್ಲಾ ನೌಕರರಿಗೆ ಇನ್ನು ಪ್ರತಿ ತಿಂಗಳ ಮೊದಲ ದಿನವೇ ವೇತನ ಪಾವತಿ ಮಾಡಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ.

ಅಕ್ಟೋಬರ್‌ನಿಂದ ಈ ಹೊಸ ಪದ್ಧತಿ ಜಾರಿಗೆ ಬರಲಿದೆ. ವೇತನದ ಬಿಲ್ಲುಗಳನ್ನು ತಯಾರಿಸಲು ಪ್ರತಿ ತಿಂಗಳ 20ರಿಂದ 30ರವರೆಗೆ ಊಹಾತ್ಮಕ ಹಾಜರಾತಿ ಪರಿಗಣಿಸಲಾಗುತ್ತದೆ. ಆದ್ದರಿಂದ ಈ ಅವಧಿಯಲ್ಲಿ ನೌಕರರು ಅನಧಿಕೃತ ಗೈರು ಹಾಜರಿ ಆಗದೆ ಹಾಗೂ ರಜೆ ಪಡೆಯದೆ (ಅತಿ ಅನಿವಾರ್ಯ ಕಾರಣ ಹೊರತುಪಡಿಸಿ), ಕರ್ತವ್ಯಕ್ಕೆ ಹಾಜರಾಗಬೇಕು. ಪೂರ್ಣ ಪ್ರಮಾಣದ ಸಂಬಳ ಪಡೆಯಲು ಇದರಿಂದ ಸಾಧ್ಯವಾಗಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ತಿಳಿಸಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಆರ್ಥಿಕ ಸ್ಥಿತಿ ಹದಗೆಟ್ಟಿದ್ದರಿಂದ ನಿಗದಿತ ಸಮಯಕ್ಕೆ ವೇತನ ಪಾವತಿ ಆಗದಂತಾಗಿತ್ತು.

ಅಕ್ರಮ: ನಾಲ್ವರು ಸಹ ಶಿಕ್ಷಕರ ವಿಚಾರಣೆ

ಬೆಂಗಳೂರು: 2014–15ನೇ ಸಾಲಿನ ಪ್ರೌಢಶಾಲೆಗಳ ಗ್ರೇಡ್–2 ಸಹಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣ ಸಂಬಂಧ ನಾಲ್ವರು ಸಹ ಶಿಕ್ಷಕರನ್ನು ಸಿಐಡಿ ಅಧಿಕಾರಿಗಳು ಶನಿವಾರ ವಿಚಾರಣೆ ನಡೆಸಿದ್ದು, ಸೋಮವಾರ ಪುನಃ ಬರುವಂತೆ ಸೂಚಿಸಿದ್ದಾರೆ.

ವಿಧಾನಸೌಧ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಈಗಾಗಲೇ 12 ಸಹಶಿಕ್ಷಕರನ್ನು ಬಂಧಿಸಿರುವ ಸಿಐಡಿ ಅಧಿಕಾರಿಗಳು, ಹೆಚ್ಚಿನ ವಿಚಾರಣೆಗಾಗಿ ಎಲ್ಲರನ್ನೂ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಜೊತೆಗೆ, ಮತ್ತಷ್ಟು ಸಹ ಶಿಕ್ಷಕರು ಹಾಗೂ ಇತರರಿಗೆ ನೋಟಿಸ್ ನೀಡಿದ್ದಾರೆ.

ತೆಲಂಗಾಣ ಸಿ.ಎಂ- ಎಚ್‌ಡಿಕೆ ಚರ್ಚೆ ಇಂದು

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ತೆಲಂಗಾಣ ಪ್ರವಾಸ ಹಮ್ಮಿಕೊಂಡಿದ್ದು, ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರನ್ನು ಭಾನುವಾರ ಹೈದರಾಬಾದ್‌ನಲ್ಲಿ ಭೇಟಿಯಾಗುವರು.

ಹೈದರಾಬಾದ್‌ನ ಮುಖ್ಯಮಂತ್ರಿ ನಿವಾಸದಲ್ಲಿ ನಾಳೆ ಮಧ್ಯಾಹ್ನ 1ರಿಂದ 3ರವರೆಗೆ ಭೇಟಿ ನಡೆಯಲಿದೆ. ಸೆ.10 ರಂದು ಹೈದರಾಬಾದ್‌ಗೆ ತೆರಳಿದ ಅವರನ್ನು ಮುಖ್ಯಮಂತ್ರಿ ಕಚೇರಿಯ ಅಧಿಕಾರಿಗಳು ಬರಮಾಡಿಕೊಂಡರು.

ಸಭೆಯಲ್ಲಿ ಉಭಯ ನಾಯಕರು, ಕರ್ನಾಟಕ, ತೆಲಂಗಾಣ ರಾಜಕೀಯ ಮತ್ತು ರಾಷ್ಟ್ರಮಟ್ಟದ ರಾಜಕಾರಣದ ಕುರಿತು ಚರ್ಚಿಸುವರು. ಈ ಹಿಂದೆ ನಡೆದಿದ್ದ ಮಾತುಕತೆಯಂತೆ ವಿಜಯದಶಮಿ ವೇಳೆಗೆ ರಾಷ್ಟ್ರಮಟ್ಟದಲ್ಲಿ ಪರ್ಯಾಯ ರಾಜಕೀಯ ಶಕ್ತಿ ಹುಟ್ಟುಹಾಕುವ ಕುರಿತು ಮಹತ್ವದ ಮಾತುಕತೆ ನಡೆಯಲಿದೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಜನಸ್ಪಂದನ: ಬಿಜೆಪಿ ಕಾರ್ಯಕರ್ತ ಸಾವು

ಸಿದ್ದಲಿಂಗಯ್ಯ

ಕೋರ (ತುಮಕೂರು): ದೊಡ್ಡಬಳ್ಳಾಪುರದಲ್ಲಿ ಶನಿವಾರ ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ಕೋರ ಹೋಬಳಿ ಹಿರೇತೊಟ್ಲುಕೆರೆ ಗ್ರಾಮದ ಬಿಜೆಪಿ ಕಾರ್ಯಕರ್ತ ಸಿದ್ದಲಿಂಗಯ್ಯ (60) ಎಂಬುವವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಜನಸ್ಪಂದನ ಕಾರ್ಯಕ್ರಮಕ್ಕೆ ಹಿರೇತೊಟ್ಲುಕೆರೆ ಗ್ರಾಮದಿಂದಲೂ ಕಾರ್ಯಕರ್ತರು ತೆರಳಿದ್ದರು. ಸಮಾವೇಶದ ಸ್ಥಳಕ್ಕೆ ನಡೆದು ಕೊಂಡು ಹೋಗುವಾಗ ಸಿದ್ದಲಿಂಗಯ್ಯ ಕುಸಿದು ಬಿದ್ದಿದ್ದಾರೆ. ತಕ್ಷಣ ದೊಡ್ಡಬಳ್ಳಾಪುರ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರೂ ಸ್ಪಂದಿಸದೆ ಸಾವನ್ನಪ್ಪಿದ್ದಾರೆ.

ನಿಧನ ವಾರ್ತೆ

ಎಚ್.ಎಂ.ವೀರಭದ್ರಯ್ಯ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ, ಶತಾಯುಷಿ ಎಚ್.ಎಂ. ವೀರಭದ್ರಯ್ಯ ಶನಿವಾರ ನಿಧನರಾದರು.

ಅವರಿಗೆ ನಿವೃತ್ತ ನ್ಯಾಯಾಧೀಶ ಎಚ್.ಎಂ.ಭರತೇಶ್ ಸೇರಿದಂತೆ ನಾಲ್ವರು ಪುತ್ರರು, ಮೂವರು ಪುತ್ರಿಯರಿದ್ದಾರೆ.

1923ರ ಜು.1ರಂದು ಚೋರನೂರು ಗ್ರಾಮದಲ್ಲಿ ಜನಿಸಿದ ಅವರು, 1945ರಲ್ಲಿ ಮದ್ರಾಸ್ ಪ್ರಾಂತ್ಯದ ಹೈಕೋರ್ಟ್‌ನಲ್ಲಿ ವಕೀಲ ವೃತ್ತಿ ಆರಂಭಿಸಿದ್ದರು. ಮಹಾತ್ಮ ಗಾಂಧಿ ಅವರ ಹೋರಾಟಗಳಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದರು.

'ಹರಪನಹಳ್ಳಿ ತಾಲ್ಲೂಕು ಸ್ವಾತಂತ್ರ್ಯ ಹೋರಾಟಗಾರರು', 'ಕರ್ನಾಟಕ ಪೊಲೀಸ್ ಮ್ಯಾನುವಲ್', 'ಪಾಟೀ ಸವಾಲು' 'ಶಿವಭಕ್ತ ರಾವಣ', 'ಆದರ್ಶವಾದಿ' ಮತ್ತು 'ಸಮಾಜ ಸುಧಾರಕ', ಸೇರಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಕಾನೂನು ಪುಸ್ತಕಗಳನ್ನು ಕನ್ನಡದಲ್ಲೇ ಬರೆದಿರುವ ಹಿರಿಮೆ ಇವರದು. 1958ರಲ್ಲಿ ಸಂಡೂರು ವಿಧಾನಸಭಾ ಕ್ಷೇತ್ರದಿಂದ ಪ್ರಜಾ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಎಂ.ವೈ. ಘೋರ್ಪಡೆ ಅವರ ವಿರುದ್ಧ ಸ್ಪರ್ಧಿಸಿ ಸೋತಿದ್ದರು.

ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದ ವೀರಭದ್ರಯ್ಯ ಅವರ ಪಾರ್ಥಿವ ಶರೀರ ಪಟ್ಟಣದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಲಾಗಿತ್ತು. ಅನಂತರ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ಚೋರನೂರು ಗ್ರಾಮದ ಅವರ ತೋಟದಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೊ.ಬಿ.ಗಂಗಾಧರಮೂರ್ತಿ

ಗೌರಿಬಿದನೂರು: ದಲಿತ ಸಂಘರ್ಷ ಸಮಿತಿ (ದಸಂಸ) ಸಂಸ್ಥಾಪಕ ಸದಸ್ಯರಾಗಿದ್ದ ಪ್ರೊ.ಬಿ.ಗಂಗಾಧರ ಮೂರ್ತಿ (78) ಶನಿವಾರ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಭಾನುವಾರ ಗೌರಿಬಿದನೂರಿನ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುತ್ತದೆ. ನಂತರ ದೇಹವನ್ನು ಬೆಂಗಳೂರು ವೈದ್ಯಕೀಯ ಶಿಕ್ಷಣ ಕಾಲೇಜು ಮತ್ತು ಸಂಶೋಧನಾ ಕೇಂದ್ರಕ್ಕೆ ದಾನ ಮಾಡಲಾಗುತ್ತದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ದಲಿತ ಚಳವಳಿ ಮತ್ತು ದಲಿತ ಸಂಘರ್ಷ ಸಮಿತಿಯ ಆರಂಭದ ದಿನಗಳಲ್ಲಿ ಚಳವಳಿ ಹಾಗೂ ಸಂಘಟನೆಯನ್ನು ಸೈದ್ಧಾಂತಿಕವಾಗಿ ರೂಪಿಸುವಲ್ಲಿ ಗಂಗಾಧರ ಮೂರ್ತಿ ಅವರ ಪಾತ್ರ ದೊಡ್ಡದು. ದಸಂಸ ಸದಸ್ಯರಿಗೆ ಮಾರ್ಗದರ್ಶಕರಾಗಿಯೂ ಅವರು ಕೆಲಸ ಮಾಡಿದ್ದರು.

ಮೂಲತಃ ಹಾಸನ ಜಿಲ್ಲೆಯ ಹೊಳೆನರಸೀಪುರದ ಗಂಗಾಧರ ಮೂರ್ತಿ ಅವರು ಗೌರಿಬಿದನೂರಿನ ನ್ಯಾಷನಲ್ ಪದವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು.

ನಿವೃತ್ತಿಯ ನಂತರ ಗೌರಿಬಿದನೂರಿನಲ್ಲಿ ನೆಲೆಸಿದ್ದ ಅವರು ಕರ್ನಾಟಕದ ಜಲಿಯನ್ ವಾಲಾಬಾಗ್ ಖ್ಯಾತಿಯ ಐತಿಹಾಸಿಕ ವಿದುರಾಶ್ವತ್ಥದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದರು. ವಿದುರಾಶ್ವತ್ಥದ ವೀರಸೌಧದಲ್ಲಿ ಚಿತ್ರಪಟ ಗ್ಯಾಲರಿ ನಿರ್ಮಿಸಿದರು.

ಅಲ್ಲಿನ ಸ್ವಾತಂತ್ರ್ಯ ಸ್ಮಾರಕ ಸಮಿತಿಯ ನಿರ್ದೇಶಕರೂ ಆಗಿದ್ದರು.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ

ದೂರವಾಣಿ: 08354– 235042, ಇ–ಮೇಲ್: bgkeezpe@yahoo.com, ಫ್ಯಾಕ್ಸ್: 08354–235043

ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–3/ಟೆಂಡರ್/2022–23/1931 ದಿನಾಂಕ:30.08.2022

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಏಕ–ಲಕೋಟೆ ಟೆಂಡರ್ ಪ್ರಕಟಣೆ: ಕೆ.ಡಬ್ಲ್ಯೂ–1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಅನುಸೂಚಿತ ಜಾತಿ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ: **ಗ್ರಾಅಪ/38/ಸುಗ್ರಾಯೋ/2021 (ಇ–690858)** ಬೆಂಗಳೂರು ದಿನಾಂಕ: **08.03.2022** ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂ ಬಾ ಇವರ ಪತ್ರ ಸಂಖ್ಯೆ:**ಜಿಪಂಬಾ/ಯೋವಿ/ಎಸ್.ಸಿ–ಎಸ್.ಟಿ/ಕ್ರಿಯೋ/ಸಿಆರ್–2021–22/ದಿನಾಂಕ:10.02.2022** ಸರ್ಕಾರದ ಆದೇಶ ಸಂಖ್ಯೆ: **ಗ್ರಾಅಪ/389–11–1 ಆರ್‌ಆರ್‌ಸಿ 2021 (ಇ–791857)** ಬೆಂಗಳೂರು **ದಿನಾಂಕ:15.06.2022** ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿ ಪಂ ಬಾ ಇವರ ಅ ಪತ್ರ ಸಂಖ್ಯೆ:**ಜಿಪಂಬಾ/ಯೋವಿ/ಎಸ್.ಸಿ–ಎಸ್.ಟಿ/ಕ್ರಿಯೋ/ಸಿಆರ್–/2022–23 ದಿನಾಂಕ:30.06.2022** ಬಾಗಲಕೋಟೆ ಜಿಲ್ಲೆಯ ಬೀಳಗಿ ಮತಕ್ಷೇತ್ರ ವ್ಯಾಪ್ತಿಯ ಬಾದಾಮಿ ತಾಲ್ಲೂಕಿನ ಈ ಕೆಳಗಿನ ಕಾಮಗಾರಿಗಳಿಗೆ Standard Tender Document KW-1&2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆಧ್ಯಾದೇಶ **1999–2000ರ ಪ್ರಕಾರ ಆ್ಯಕ್ಟ್ 2000ರ** ನಿಯಮದಂತೆ ಏಕ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ:: **92469, 92466** ಇದ್ದು, ಮತ್ತು ಪರಿಶಿಷ್ಟ ಜಾತಿ ವರ್ಗದ ಕಾಮಗಾರಿಗಳ ಇಂಡೆಂಟ್ ಸಂಖ್ಯೆ: **92472, 92473** ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (**ರೂ.10.00 ರಿಂದ 37.00 ಲಕ್ಷಗಳ ಮಿತಿಗೊಳಪಟ್ಟು**) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ ಮತ್ತು ಸಮಯ: 17.09.2022 ರ ಸಾಯಂಕಾಲ 5.30 ಗಂಟೆವರೆಗೆ.**

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ಸಾಧ್ಯವಾದಲ್ಲಿ ತೆರೆಯುವ **ದಿನಾಂಕ ಮತ್ತು ಸಮಯ: 19.09.2022 ರಂದು ಮುಂಜಾನೆ 11.00 ಗಂಟೆಯ ನಂತರ.**

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ **http://www.eprocurment.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ.

ವಾಸಾಸಂಇ/ಬಾಗಲಕೋಟೆ/ಶಿರಡಿ ಸಾಯಿ/388/2022–23

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರ ಕಛೇರಿ

ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು

ಸಂ. ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/ಜೆಜೆಎಂ–2022–23/ಇ–ಟೆಂಡರ/2022–23/ ದಿನಾಂಕ: 08–09–2022

ಇ–ಪ್ರೋಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-1,2, 3 & 4 (Standard Bid Document) ನಿಬಂಧನೆಗಳೊಪಟ್ಟಂತೆ ಪಂಚಾಯತರಾಜ ಇಂಜನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2021-22 & 2022-23 ನೇ ಸಾಲಿನ Jal Jeevan Mission(JJM) ಯೋಜನೆ ಅಡಿಯ ಕೇಂದ್ರ & ರಾಜ್ಯ (85%), ಗ್ರಾಮ ಪಂಚಾಯಿತಿ (5%) ಮತ್ತು ಸಮುಧಾಯ ವಂತಿಕೆ (10%) ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ ಆಹ್ವಾನಿಸಲಾಗಿದೆ.

1] E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ : **09–09–2022,** 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ : **09–09–2022,** 3] ಪ್ರಿ ಬಿಡ್ ಸಭೆ ದಿನಾಂಕ, ಸಮಯ ಮತ್ತು ಸ್ಥಳ : **13–09–2022 ಸಮಯ : ಬೆಳಿಗ್ಗೆ 11 : 00 ಗಂಟೆಗೆ,** ಸ್ಥಳ : ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ನೀ.ಸ & ನೈ ವಿಭಾಗ, ರಾಯಚೂರು ರವರ ಕಛೇರಿ, 2ನೇ ಮಹಡಿ, ಜಿಲ್ಲಾ ಪಂಚಾಯತ ರಾಯಚೂರು. 4] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **24–09–2022 ಸಂಜೆ 5:30 ಗಂಟೆವರೆಗೆ,** 5] ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **26–09–2022 ಮುಂಜಾನೆ 11:00 ಗಂಟೆ ಸಾಧ್ಯವಿದ್ದಲ್ಲಿ,** 6] ಆರ್ಥಿಕ ಬಿಡ್ ತೆರೆಯುವ ದಿನಾಂಕ : **27–09–2022 ಮುಂಜಾನೆ 11:00 ಗಂಟೆ ಸಾಧ್ಯವಿದ್ದಲ್ಲಿ**

Indent Nos.: Raichur : 46313, 46314, 46315, 46316, 46317, 46318, 46319, 46320ST Reserved, 46321, 46322, 46323, 46324, Manvi : 46529, 46530, 46531, 46532, 46533, 46534, 46535, 46536, 46537, 46538, 46539,46540 SC Reserved, 46541, 46542, 46543, 46544

ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ http://eproc.karnataka.gov.in ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕಅಭಿಯಂತರರು., ಗ್ರಾ.ನೀ.ಸ & ನೈ ವಿಭಾಗ, ರಾಯಚೂರು

ವಾ.ಸಾ.ಸಂ.ಇ/ರಾಯಚೂರು/293/ಎಂ.ಸಿ.ಎ/2022–23

ಕರ್ನಾಟಕ ಸರ್ಕಾರ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಸುರಪುರ

(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

ಸಂಖ್ಯೆ:ಶಿಅಯೋಗು/ಮಮಅಇ/ಐಸಿಡಿಎಸ್/ಮೊಟ್ಟೆ/ಟೆಂಡರ್/02/2022–23 ದಿನಾಂಕ:09–09–2022

ಸುರಪುರ ತಾಲೂಕಿನ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಅಗತ್ಯ ಇರುವ ಕೋಳಿ ಮೊಟ್ಟೆ ಸರಬರಾಜುಗಾಗಿ ಇ – ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ : ಮಮಇ 169 ಐಸಿಡಿ 2021, ದಿನಾಂಕ : 22.03.2022 ರಂತೆ ಸುರಪುರ ತಾಲೂಕಿನ 474 ಅಂಗನವಾಡಿ ಕೇಂದ್ರದ ಫಲಾನುಭವಿಗಳಾದ 06 ತಿಂಗಳಿಂದ 06 ವರ್ಷದೊಳಗಿನ ಮಕ್ಕಳಿಗೆ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ವಿತರಿಸಲು ಅಗತ್ಯ ಇರುವ ಕೋಳಿ ಮೊಟ್ಟೆಗಳ ಸರಬರಾಜು ಮಾಡಲು ದ್ವಿ–ಲಕೋಟೆ ಪದ್ಧತಿ ಪ್ರಕಾರ ನಿಬಂಧನೆಗಳಿಗೆ ಒಳಪಟ್ಟು ಅನುಬಂಧ–2ರಲ್ಲಿ ನಿಗಧಿಪಡಿಸಿರುವ ವೇಳಾಪಟ್ಟಿಯಂತೆ ಕರ್ನಾಟಕ ಸರ್ಕಾರದ e–Procurement Portal ಪದ್ಧತಿಯಂತೆ http//eproc.karnataka.gov.in Online ಮುಖಾಂತರ ಅನುಬಂಧ–1 ರಲ್ಲಿ ತಿಳಿಸದಂತೆ ಅಲ್ಪಾವಧಿ ಮರು–ಟೆಂಡರ್ ಆಹ್ವಾನಿಸಲಾಗಿದೆ.

ಅನುಬಂಧ–1 :ವಸ್ತುಗಳು/ಸರಕುಗಳು: ಮೊಟ್ಟೆಗಳು, ಸಾರಿಗೆಸಹಿತ, ಪ್ರಮಾಣ ಮಾಸಿಕ: 5,27,019/– ವಾರ್ಷಿಕ 63,24,228/–, ಘಟಕ: ಸಂಖ್ಯೆಗಳು, ವರ್ಷಕ್ಕೆ ಅಂದಾಜು ವೆಚ್ಚ (ರೂ.): 3,79,45,368/–, EMD (ರೂ.):5,69,181–, ವಿತರಣಾ ವೇಳಾಪಟ್ಟಿ: ಪ್ರತಿ ತಿಂಗಳ 5ನೇ, 15ನೇ ಮತ್ತು 25ನೇ ದಿನ.

ಅನುಬಂಧ–2:ಟೆಂಡರ್ ವೇಳಾಪಟ್ಟಿ 1.ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ :ಪ್ರಾರಂಭ ದಿನಾಂಕ:09.09.2022 2.ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: 23.09.2022 ಬೆಳಗ್ಗೆ 11:00 ಗಂಟೆಗೆ ಈ ಕೆಳಗಿನ ಸ್ಥಳದಲ್ಲಿ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಳೆ ಕೋರ್ಟಕಟ್ಟಡ, ಜೈಲ್ ಹತ್ತಿರ, ಸುರಪುರ–585216, 3. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ1:27.09.2022ರಿಂದ 03:00 PM ವರೆಗೆ 4.ಇ–ಟೆಂಡರ್‌ಅನ್ನು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಅಪ್‌ಲೋಡ್ ಮಾಡಲುಕೊನೆಯ ದಿನಾಂಕ ಮತ್ತು ಸಮಯ:28.09.2022ರಿಂದ 4:30 PMರವರೆಗೆ, 5.ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿತೆರೆಯುವ ದಿನಾಂಕ ಮತ್ತು ಸಮಯ:29.09.2022,5:30 PM ಅನಂತರ 6. ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:30.09.2022, 7.ಟೆಂಡರ್‌ಗಳನ್ನು ತೆರೆಯುವ ಸ್ಥಳ:ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್ 8. ಸಂವಹನಕ್ಕಾಗಿ ವಿಳಾಸ:ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಳೆ ಕೋರ್ಟಕಟ್ಟಡ, ಜೈಲ್ ಹತ್ತಿರ, ಸುರಪುರ– 585216 ದೂರವಾಣಿ: 08443–256808 ಇಮೇಲ್: cdposhorapur1@gmail.com

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸುರಪುರ

ವಾ.ಸಾ.ಸಂ.ಇ/ಯಾದಗಿರಿ/235/ಎಂ.ಸಿ.ಎ/2022–23

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಸವಿ ನೆನಪು



ಜಿ.ಸಿ. ಶಿವರುದ್ರಪ್ಪ
ಪ್ರೊ. ಮೆ|| ಜಿ.ಸಿ. ಟ್ರಾನ್ಸ್‌ಪೋರ್ಟ್ & ಕಂಟ್ರಾಕ್ಟರ್ಸ್
(ಜನನ: 25.05.1938 - ಮರಣ: 11.09.2002)
ನಮ್ಮ ಜೀವನದ ಪ್ರತಿ ಕ್ಷಣವೂ ನಿಮ್ಮನ್ನು ನೆನಪಿಸಿಕೊಳ್ಳುತ್ತೇವೆ.
ಇಂತಿ ದುಃಖತಪ್ತ ಕುಟುಂಬ ಮತ್ತು ಸ್ನೇಹವೃಂದ

ಚಿರಸ್ಮರಣೆ



ಟಿ. ಶ್ರೀನಿವಾಸ
14-04-1942 23-09-2002
ವರದಾ ಶ್ರೀನಿವಾಸ ಕುಟುಂಬ, ಬಂಧುವರ್ಗ ಮತ್ತು ಶ್ರೀ ವೆಂಕಟೇಶ್ವರ ವಿದ್ಯಾಪೀಠ

ರಾಹುಲ್ ಭೇಟಿ ಮಾಡಿದ ಪಾದ್ರಿಯಿಂದ ಹೇಳಿಕೆ: ಬಿಜೆಪಿ ಆರೋಪಕ್ಕೆ ಕಾಂಗ್ರೆಸ್ ತಿರುಗೇಟು

‘ಜೀಸಸ್ ಮಾತ್ರ ದೇವರು’: ವಾಕ್ಸಮರ

ನವದೆಹಲಿ (ಪಿಟಿಐ): ಹಿಂದೂ ದೇವತೆ ‘ಶಕ್ತಿ’ ಹಾಗೂ ‘ಜೀಸಸ್’ ಕುರಿತಾಗಿ ಕ್ರೈಸ್ತ ಪಾದ್ರಿ ಜೊತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಡೆಸಿದ್ದಾರೆ ಎನ್ನಲಾದ ಸಂಭಾಷಣೆಯ ವಿಡಿಯೊ ಬಿಜೆಪಿ–ಕಾಂಗ್ರೆಸ್ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

‘ಜೀಸಸ್ ಮಾತ್ರ ದೇವರು’ ಎಂಬುದಾಗಿ ಪಾದ್ರಿ ಹೇಳಿದ್ದಾರೆ ಎಂದು ಆರೋಪಿಸಿರುವ ಬಿಜೆಪಿ, ಕಾಂಗ್ರೆಸ್ ಪಕ್ಷವು ಹಿಂದೂ ವಿರೋಧಿ ಧೋರಣೆ ತಳೆದಿದೆ ಎಂದಿದೆ. ಆದರೆ, ಭಾರತ್ ಜೋಡೊ ಯಾತ್ರೆಯ ಯಶಸ್ಸು ಅರಗಿಸಿಕೊಳ್ಳದೆ ಕಂಗೆಟ್ಟಿರುವ ಬಿಜೆಪಿ, ದ್ವೇಷ ಹರಡಿಸಲು ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ತಿರುಗೇಟು ನೀಡಿದೆ.

ಭಾರತ್ ಜೊಡೊ ಯಾತ್ರೆಯ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕ್ರೈಸ್ತ ಪಾದ್ರಿ ಜಾರ್ಜ್ ಪೊನ್ನಯ್ಯ ಅವರನ್ನು ಭೇಟಿ ಮಾಡಿದ ವಿಡಿಯೊವನ್ನು ಬಿಜೆಪಿಯ ಹಲವು ಮುಖಂಡರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ‘ಜೀಸಸ್ ನಿಜವಾದ ದೇವರು. ಶಕ್ತಿ ದೇವತೆಯ ರೀತಿ ಅಲ್ಲ’ ಎಂಬುದಾಗಿ ಪೊನ್ನಯ್ಯ ಅವರು ಹೇಳಿದ್ದಾರೆ ಎಂಬುದು ಆರೋಪ. ಜೀಸಸ್ ಅವರನ್ನು ದೇವರೆಂದು ಪರಿಗಣಿಸಬೇಕೇ ಎಂಬುದಾಗಿ ರಾಹುಲ್ ಗಾಂಧಿ ಕೇಳಿದ ಪ್ರಶ್ನೆಗೆ ಪಾದ್ರಿ ಈ ರೀತಿ ಉತ್ತರಿಸಿದರು ಎಂದು ಆರೋಪಿಸಲಾಗಿದೆ.

ನವರಾತ್ರಿ ಆರಂಭಕ್ಕೂ ಮುನ್ನ ಕಾಂಗ್ರೆಸ್‌ನಿಂದ ಶಕ್ತಿ ದೇವತೆಗೆ ಅವಮಾನವಾಗಿದೆ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಕಿಡಿಕಾರಿದ್ದಾರೆ. ವಿಡಿಯೊ ಮೂಲಕ ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆಯ ನೈಜತೆ ಬಯಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ‘ಕಾಂಗ್ರೆಸ್ ಈ ರೀತಿ ಮಾಡುತ್ತಿರುವುದು ಇದು ಮೊದಲಲ್ಲ. ರಾಮನ ಅಸ್ತಿತ್ವವನ್ನು ಪ್ರಶ್ನೆ ಮಾಡುವ ಮೂಲಕ ಹಿಂದೂಗಳ ಅವಮಾನ ಮಾಡಿತ್ತು’ ಎಂದು ಅವರು ನೆನಪಿಸಿದ್ದಾರೆ.

‘ಒಂದು ಧರ್ಮದವರನ್ನು ಓಲೈಸಲು ಮತ್ತೊಂದು ಧರ್ಮಕ್ಕೆ ಅವಮಾನ. ಇದೇನಾ ಭಾರತ್ ಜೋಡೊ? ಕಾಂಗ್ರೆಸ್ ಹಾಗೂ ಅದರ ನಾಯಕ ರಾಹುಲ್ ಅವರ ಹಿಂದೂ ವಿರೋಧಿ ಧೋರಣೆ ರಹಸ್ಯವಾಗಿ ಉಳಿದಿಲ್ಲ’ ಎಂದು ಪಾತ್ರಾ ಆರೋಪಿಸಿದ್ದಾರೆ.

ಬಿಜೆಪಿ ಆರೋಪಕ್ಕೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ತಿರುಗೇಟು ನೀಡಿದ್ದಾರೆ. ‘ಮಹಾತ್ಮ ಗಾಂಧಿ ಹಾಗೂ ನರೇಂದ್ರ ಧಾಬೋಲ್ಕರ್, ಗೋವಿಂದ ಪಾನ್ಸರೆ, ಎಂ.ಎಂ. ಕಲಬುರ್ಗಿ, ಗೌರಿ ಲಂಕೇಶ್ ಅವರ ಹತ್ಯೆಗೆ ಕಾರಣರಾದ ಜನರು ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. ಇದೊಂದು ರೋಗಗ್ರಸ್ತ ಮನಸ್ಥಿತಿ. ಭಾರತ್ ಜೋಡೊ ಯಾತ್ರೆಯ ಹುರುಪನ್ನು ತಗ್ಗಿಸಲು ಮಾಡುತ್ತಿರುವ ಈ ಯತ್ನಗಳಲ್ಲಿ ಬಿಜೆಪಿ ಯಶ ಕಾಣುವುದಿಲ್ಲ’ ಎಂದು ಹೇಳಿದ್ದಾರೆ.

‘ಜೀಸಸ್ ಮಾತ್ರ ದೇವರು ಎಂಬುದಾಗಿ ರಾಹುಲ್ ಭೇಟಿಯ ವೇಳೆ ಪಾದ್ರಿ ಜಾರ್ಜ್ ಪೊನ್ನಯ್ಯ ಅವರು ಹೇಳಿದ್ದಾರೆ. ಹಿಂದೂದ್ವೇಷದ ಕಾರಣಕ್ಕೆ ಪಾದ್ರಿ ಈ ಹಿಂದೆ ಬಂಧಿತರಾಗಿದ್ದರು. ಕಾಂಗ್ರೆಸ್‌ನ ದ್ವೇಷದ ಧೋರಣೆಯಿಂದಾಗಿಯೇ 1984ರ ಸಿಖ್ ಗಲಭೆ ನಡೆದಿತ್ತು’ ಎಂದು ಬಿಜೆಪಿ ವಕ್ತಾರ ಶಹಜಾದ್ ಪೂನಾವಾಲಾ ಅವರು ಹೇಳಿದ್ದಾರೆ.

> ವಿಡಿಯೊದಲ್ಲಿ ಕೇಳಿಬರುವ ಧ್ವನಿಯು ರಾಹುಲ್ ಗಾಂಧಿ ಅವರದ್ದಲ್ಲ. ಆದರೂ, ಬಿಜೆಪಿಯ ದ್ವೇಷದ ಕಾರ್ಖಾನೆಯು ಟ್ವೀಟ್ ಹಂಚಿಕೊಳ್ಳುತ್ತಿದೆ
> **ಜೈರಾಮ್ ರಮೇಶ್**, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಚುನಾವಣೆಗಳು ಬಂದಾಗ ರಾಹುಲ್ ಗಾಂಧಿ ದೇವಸ್ಥಾನಗಳಿಗೆ ಹೋಗುತ್ತಾರೆ. ಆದರೆ ಚುನಾವಣೆ ಮುಗಿದಾಗ ಅವರ ‘ಹಿಂದೂ ವಿರೋಧಿ’ ಮುಖ ಹೊರಬರುತ್ತದೆ
> **ಸಂಬಿತ್ ಪಾತ್ರಾ**, ಬಿಜೆಪಿ ವಕ್ತಾರ

ರಾಹುಲ್ ಇತಿಹಾಸ ಓದಲಿ: ಶಾ

ಜೈಪುರ (ಪಿಟಿಐ): ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆಯನ್ನು ಗೃಹಸಚಿವ ಅಮಿತ್ ಶಾ ಟೀಕಿಸಿದ್ದಾರೆ. ‘ಭಾರತವು ಒಂದು ದೇಶವೇ ಅಲ್ಲ ಎಂದು ಹೇಳಿದ್ದ ರಾಹುಲ್ ಗಾಂಧಿ, ಈಗ ದೇಶವನ್ನು ಒಗ್ಗೂಡಿಸಲು ನಡೆದಿದ್ದಾರೆ. ವಿದೇಶಿ ಟಿ-ಶರ್ಟ್ ಧರಿಸಿ ಯಾತ್ರೆ ಮಾಡುತ್ತಿದ್ದಾರೆ’ ಎಂದು ಲೇವಡಿ ಮಾಡಿದ್ದಾರೆ.

ರಾಜಸ್ಥಾನದ ಬೂತ್ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ಶನಿವಾರ ಮಾತನಾಡಿದ ಶಾ, ಮತಬ್ಯಾಂಕ್ ಹಾಗೂ ಸಮುದಾಯ ಓಲೈಕೆಯನ್ನು ಕಾಂಗ್ರೆಸ್ ರೂಢಿಸಿಕೊಂಡಿದೆ ಎಂದು ಆರೋಪಿಸಿದ್ದಾರೆ.

‘ಭಾರತ ಒಂದು ದೇಶವಲ್ಲ ಎಂದು ರಾಹುಲ್ ಅವರು ಸಂಸತ್ತಿನಲ್ಲಿ ಹೇಳಿದ್ದರು. ಯಾವ ಪುಸ್ತಕ ಓದಿ ಅವರು ಇದನ್ನು ತಿಳಿದುಕೊಂಡಿದ್ದಾರೆ? ಈ ದೇಶಕ್ಕಾಗಿ ಲಕ್ಷ ಲಕ್ಷ ಜನರು ತಮ್ಮ ಜೀವನ ತ್ಯಾಗ ಮಾಡಿದ್ದಾರೆ. ಭಾರತವನ್ನು ಜೋಡಿಸಲು ಹೊರಟಿರುವ ರಾಹುಲ್, ಅದಕ್ಕೂ ಮುನ್ನ ಭಾರತದ ಇತಿಹಾಸ ಅಧ್ಯಯನ ಮಾಡಲಿ’ ಎಂದು ಶಾ ಸಲಹೆ ನೀಡಿದ್ದಾರೆ.

ದುಬಾರಿ ದಿರಿಸು: ‘ರಾಹುಲ್ ಧರಿಸಿದ್ದ ಟಿ–ಶರ್ಟ್ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ ಪ್ರಧಾನಿ ಮೋದಿ ಅವರು ₹10 ಲಕ್ಷ ಮೌಲ್ಯದ ಸೂಟ್, ₹1.5 ಲಕ್ಷ ಬೆಲೆಯ ಕನ್ನಡಕ ಧರಿಸಬಹುದೇ’ ಎಂದು ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಪ್ರಶ್ನಿಸಿದ್ದಾರೆ.

ಪಾದಯಾತ್ರಿಗಳು ಉಳಿದುಕೊಳ್ಳುವ ಕಂಟೇನರ್‌ಗಳನ್ನು ಟ್ರಕ್‌ಗಳ ಮೇಲೆ ಅಳವಡಿಸಲಾಗಿದ್ದು, ತಮಿಳುನಾಡಿನ ನಾಗರ್‌ಕೋಯಿಲ್ ಸಮೀಪದ ತಾತ್ಕಾಲಿಕ ಶಿಬಿರದಲ್ಲಿ ಶುಕ್ರವಾರ ನಿಲ್ಲಿಸಲಾಗಿತ್ತು —ಪಿಟಿಐ ಚಿತ್ರ

ಯಾತ್ರೆ: 60 ಕಂಟೇನರ್‌ಗಳಲ್ಲಿ ವಾಸ್ತವ್ಯ

ರಾಹುಲ್ ಗಾಂಧಿ ಸೇರಿ 230 ಪಾದಯಾತ್ರಿಗಳು ಪ್ರತಿದಿನ ಉಳಿದುಕೊಳ್ಳಲು 60 ಕಂಟೇನರ್‌ಗಳನ್ನು ಸಿದ್ಧಪಡಿಸಲಾಗಿದೆ. ಈ ಕಂಟೇನರ್‌ಗಳನ್ನು ನಿತ್ಯವೂ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಟ್ರಕ್‌ಗಳಲ್ಲಿ ಸಾಗಿಸಲಾಗುತ್ತದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ 3,570 ಕಿಲೋಮೀಟರ್ ಉದ್ದದ ಭಾರತ್ ಜೋಡೊ ಯಾತ್ರೆಯ ಮಾರ್ಗದುದ್ದಕ್ಕೂ ಇವು ಬಳಕೆಯಾಗಲಿವೆ.

ಪ್ರತಿದಿನ ಒಂದು ಸ್ಥಳದಲ್ಲಿ ಶಿಬಿರ ಹೂಡಿದಾಗ, ಕಂಟೇನರ್‌ಗಳನ್ನು ಆ ಜಾಗದಲ್ಲಿ ಇರಿಸಲಾಗುತ್ತದೆ. ಇವುಗಳ ಒಳಗೆ ಟಿ.ವಿ ಸೌಲಭ್ಯ ಇಲ್ಲ. ಇವುಗಳಲ್ಲಿ ಸಭೆಗಳನ್ನು ನಡೆಸುವುದಿಲ್ಲ. ರಾತ್ರಿಯ ವೇಳೆ ಇವುಗಳಲ್ಲಿ ತಂಗಲು ವ್ಯವಸ್ಥೆಯಿದೆ. ಎರಡು, ನಾಲ್ಕು, ಆರು ಹಾಗೂ 12 ಹಾಸಿಗೆಗಳನ್ನು ಇವು ಒಳಗೊಂಡಿವೆ. ರಾಹುಲ್ ಗಾಂಧಿ ಅವರು ಬುಧವಾರ ರಾತ್ರಿಯಿಂದ ಇವೇ ಕಂಟೇನರ್‌ನಲ್ಲಿ ಉಳಿದುಕೊಳ್ಳುತ್ತಿದ್ದಾರೆ. ಈ ಕಂಟೇನರ್‌ಗಳು ರೈಲ್ವೆ ಸ್ಲೀಪರ್ ಕಂಪಾರ್ಟ್‌ಮೆಂಟ್ ರೀತಿ ಇವೆ ಎಂದು ಯಾತ್ರಾ ಸಮಿತಿಯ ಮುಖ್ಯಸ್ಥ ದಿಗ್ವಿಜಯ ಸಿಂಗ್ ಹೇಳಿದ್ದಾರೆ. ತಮಿಳುನಾಡಿನ ನಾಲ್ಕು ದಿನಗಳ ಭಾರತ್ ಜೋಡೊ ಯಾತ್ರೆ ಶನಿವಾರ ಪೂರ್ಣಗೊಂಡಿದ್ದು, ಕಾಂಗ್ರೆಸ್ ಕಾರ್ಯಕರ್ತರು ರಾಜ್ಯದ ಕಳಿಯಿಕಾವಿಳ ಎಂಬಲ್ಲಿ ಕೇರಳ ಗಡಿ ಪ್ರವೇಶಿಸಿದರು. ಭಾನುವಾರದಿಂದ ಕೇರಳದಲ್ಲಿ ಯಾತ್ರೆ ಆರಂಭವಾಗಲಿದೆ.

ಪಾರದರ್ಶಕತೆ ಕುರಿತು ಕಳವಳ

‘ಕೈ’ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ; ಐವರು ಕಾಂಗ್ರೆಸ್ ಸಂಸದರಿಂದ ಮಿಸ್ತ್ರಿಗೆ ಪತ್ರ

ನವದೆಹಲಿ (ಪಿಟಿಐ): ಪಕ್ಷದ ಅಧ್ಯಕ್ಷರ ಆಯ್ಕೆಗಾಗಿ ನಡೆಯುವ ಚುನಾವಣೆಯು ಪಾರದರ್ಶಕ ಹಾಗೂ ನ್ಯಾಯಯುತವಾಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಕಾಂಗ್ರೆಸ್‌ನ ಐವರು ಸಂಸದರು, ಈ ಬಗ್ಗೆ ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ್ ಮಿಸ್ತ್ರಿ ಅವರಿಗೆ ಪತ್ರ ಬರೆದಿದ್ದಾರೆ.



ಮಧುಸೂದನ್ ಮಿಸ್ತ್ರಿ

‘ಪ್ರದೇಶ ಕಾಂಗ್ರೆಸ್ ಪ್ರತಿನಿಧಿಗಳ ಹೆಸರುಗಳನ್ನು ಒಳಗೊಂಡಿರುವ ಪಕ್ಷದ ಮತದಾರರ ಪಟ್ಟಿ ಹಾಗೂ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಗಳ ಹೆಸರುಗಳನ್ನು ಒದಗಿಸಬೇಕು’ ಎಂದು ಕೋರಿದ್ದಾರೆ.

ಲೋಕಸಭಾ ಸದಸ್ಯರಾದ ಶಶಿ ತರೂರ್, ಮನೀಷ್ ತಿವಾರಿ, ಕಾರ್ತಿ ಚಿದಂಬರಂ, ಪ್ರದ್ಯುತ್ ಬೋರ್ದೊಲೊಯಿ ಹಾಗೂ ಅಬ್ದುಲ್ ಖಾಲಿಕ್ ಅವರು ಸೆ.6ರಂದು ಈ ಪತ್ರ ಬರೆದಿದ್ದಾರೆ.

‘ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಯಾರು ಅರ್ಹರಿದ್ದಾರೆ ಹಾಗೂ ಮತ ಚಲಾಯಿಸಲು ಯಾರು ಅರ್ಹತೆ ಹೊಂದಿದ್ದಾರೆ ಎಂಬುದನ್ನು ಪರಿಶೀಲಿಸುವ ಸಲುವಾಗಿ ಈ ಪಟ್ಟಿಯನ್ನು ಒದಗಿಸುವುದು ಅಗತ್ಯ’ ಎಂದು ಈ ಐವರು ಸಂಸದರು ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

‘ಮತದಾರರ ಪಟ್ಟಿಯನ್ನು ಬಹಿರಂಗಪಡಿಸುವುದಕ್ಕೆ ಸಂಬಂಧಿಸಿ ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರಕ್ಕೆ ಏನಾದರೂ ಆತಂಕವಿದ್ದಲ್ಲಿ, ಈ ಪಟ್ಟಿಯನ್ನು ಒದಗಿಸುವ ಸುರಕ್ಷಿತ ವ್ಯವಸ್ಥೆಯೊಂದನ್ನು ರೂಪಿಸಬೇಕು’ ಎಂದೂ ವಿವರಿಸಿದ್ದಾರೆ.

‘ಈ ವಿವರಗಳನ್ನು ಪರಿಶೀಲಿಸುವ ಸಲುವಾಗಿ ಎಲ್ಲ 28 ಪ್ರದೇಶ ಕಾಂಗ್ರೆಸ್ ಸಮಿತಿಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಘಟಕಗಳಿಗೆ ಮತದಾರರು ಹಾಗೂ ಅಭ್ಯರ್ಥಿಗಳು ಭೇಟಿ ನೀಡಬೇಕು ಎಂದು ನಿರೀಕ್ಷಿಸಲಾಗದು. ಮತದಾರರ ಹಾಗೂ ಅಭ್ಯರ್ಥಿಗಳ ಪಟ್ಟಿಯನ್ನು ಒದಗಿಸಬೇಕು ಎಂಬ ನಮ್ಮ ಬೇಡಿಕೆಯನ್ನು ತಪ್ಪಾಗಿ ಅರ್ಥೈಸಿರುವುದು ದುರದೃಷ್ಟಕರ. ದುರುಪಯೋಗಕ್ಕೆ ಆಸ್ಪದ ನೀಡುವಂತಹ, ಪಕ್ಷದ ಯಾವುದೇ ಆಂತರಿಕ ವಿಷಯವನ್ನು ನೀಡಬೇಕು ಎಂಬುದು ಸಹ ನಮ್ಮ ಬೇಡಿಕೆಯಲ್ಲ’ ಎಂದು ಸಂಸದರು ಸ್ಪಷ್ಟಪಡಿಸಿದ್ದಾರೆ.

ಮರ್ಮಾಂಗಕ್ಕೆ ಕಚ್ಚಿದ ನಾಯಿ: ಮಾಲೀಕ ಬಂಧನ

ಲಖನೌ (ಪಿಟಿಐ): ನಾಯಿಯೊಂದು ನೆರೆಮನೆಯ ವ್ಯಕ್ತಿಯೊಬ್ಬರ ಮರ್ಮಾಂಗಕ್ಕೆ ಕಚ್ಚಿದ್ದು, ಈ ಸಂಬಂಧ ಶ್ವಾನದ ಮಾಲೀಕನನ್ನು ಪೊಲೀಸರು ಬಂಧಿಸಿದ್ದಾರೆ.

‘ನಾಯಿಯ ಮಾಲೀಕ ಶಂಕರ ಪಾಂಡೆ ಎಂಬುವರ ವಿರುದ್ಧ ಐಪಿಸಿ ಸೆಕ್ಷನ್ 289ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಕೃಷ್ಣನಗರ ಪೊಲೀಸ್ ಠಾಣೆಯ ಠಾಣಾಧಿಕಾರಿ ಅಲೋಕ್ ಕುಮಾರ್ ರಾಯ್ ಶನಿವಾರ ಹೇಳಿದ್ದಾರೆ.

‘ಸಂಕಲ್ಪ್ ನಿಗಂ ಎಂಬುವವರು ಸೆಪ್ಟೆಂಬರ್ 3 ರಂದು ರಾತ್ರಿ 10.30ರ ಸುಮಾರಿಗೆ ಮನೆಗೆ ಬರುತ್ತಿದ್ದರು. ಶಂಕರ್ ಅವರ ನಿವಾಸದ ಬಳಿ ಬಂದಾಗ ನಾಯಿಯು ಸಂಕಲ್ಪ್ ಮೇಲೆ ದಾಳಿ ನಡೆಸಿದೆ. ಅವರ ಮರ್ಮಾಂಗಕ್ಕೆ ಕಚ್ಚಿ ಗಾಯಗೊಳಿಸಿದೆ. ಅವರು ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ನಾಯಿ ಕಚ್ಚುತ್ತಿದ್ದುದನ್ನು ಕಂಡರೂ ಶಂಕರ್ ನನಗೆ ಸಹಾಯ ಮಾಡಲಿಲ್ಲ. ಗಂಭೀರವಾಗಿ ಗಾಯಗೊಂಡಿದ್ದ ನಾನು ಲೋಕ ಬಂಧು ಆಸ್ಪತ್ರೆಗೆ ತೆರಳಿದೆ. ನನ್ನ ಸ್ಥಿತಿ ಕಂಡ ಅಲ್ಲಿನ ವೈದ್ಯರು ಕೆಜಿಎಂಯು ಆಸ್ಪತ್ರೆಗೆ ದಾಖಲಾಗುವಂತೆ ಸಲಹೆ ನೀಡಿದರು. ಎರಡು ದಿನ ಅಲ್ಲಿ ಚಿಕಿತ್ಸೆ ಪಡೆದೆ. ಸುದೀರ್ಘ ಅವಧಿವರೆಗೂ ಚಿಕಿತ್ಸೆ ನೀಡಬೇಕಾಗುತ್ತದೆ ಎಂದು ವೈದ್ಯರು ಸೂಚಿಸಿದ್ದಾರೆ ಎಂದು ಸಂಕಲ್ಪ್ ದೂರಿನಲ್ಲಿ ಹೇಳಿದ್ದಾರೆ. ಶಂಕರ್ ಅವರು ತಮ್ಮನ್ನು ನಾಯಿ ದಾಳಿಯಿಂದ ಪಾರು ಮಾಡಲಿಲ್ಲ ಎಂದೂ ದೂರಿನಲ್ಲಿ ವಿವರಿಸಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ. ‘ಸಂಕಲ್ಪ್ ಮತ್ತು ಶಂಕರ್ ನೆರೆಹೊರೆಯವರು. ಸಂಕಲ್ಪ್ ಆಗಾಗ ಶಂಕರ್ ಮನೆಗೆ ಭೇಟಿ ನೀಡುತ್ತಿದ್ದರು’ ಎಂದಿದ್ದಾರೆ.

ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊ

ನೈವೇದ್ಯಕ್ಕಿರಿಸಿದ್ದ ಬಾದಾಮಿ ಕದ್ದ ಆರೋಪದಲ್ಲಿ 11 ವರ್ಷದ ಬಾಲಕನನ್ನು ಜೈನ ಮಂದಿರದ ಅರ್ಚಕರೊಬ್ಬರು ಮರಕ್ಕೆ ಕಟ್ಟಿಹಾಕಿ ಥಳಿಸಿದ್ದಾರೆ

ಬಾಲಕನನ್ನು ಮರಕ್ಕೆ ಕಟ್ಟಿ ಹಾಕಿ ಥಳಿತ

ಸಾಗರ್ (ಪಿಟಿಐ): ನೈವೇದ್ಯಕ್ಕಿಟ್ಟಿದ್ದ ಬಾದಾಮಿ ಕದ್ದ ಆರೋಪದಲ್ಲಿ 11 ವರ್ಷದ ಬಾಲಕನನ್ನು ಮಧ್ಯಪ್ರದೇಶದ ಸಾಗರ್‌ನ ಜೈನ ಮಂದಿರದ ಅರ್ಚಕರೊಬ್ಬರು ಮರಕ್ಕೆ ಕಟ್ಟಿಹಾಕಿ ಥಳಿಸಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಬಾಲಕನ ತಂದೆ ನೀಡಿರುವ ದೂರಿನ ಅನ್ವಯ ಸಿದ್ದಾಯ್ತನ್ ಜೈನ ಮಂದಿರದ ಅರ್ಚಕ ರಾಕೇಶ್ ಜೈನ್ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.

ಬಾಲಕನನ್ನು ಮರಕ್ಕೆ ಕಟ್ಟಿಹಾಕಿರುವ ಮತ್ತು ಆತ ಸಹಾಯಕ್ಕಾಗಿ ಗೋಗರೆಯುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಬಾಲಕನನ್ನು ಮರಕ್ಕೆ ಕಟ್ಟಿಹಾಕಲು ಇನ್ನೊಬ್ಬ ವ್ಯಕ್ತಿ ಕೂಡ ಸಹಾಯ ಮಾಡಿದ್ದಾನೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಅರ್ಚಕನ ವಿರುದ್ಧ ಜಾತಿನಿಂದನೆ ಪ್ರಕರಣವೂ ದಾಖಲಾಗಿದೆ.

ನಾಲಿಗೆ ಕತ್ತರಿಸಿ ದೇವಿಗೆ ಅರ್ಪಿಸಿದ ಭಕ್ತ

ಕೌಶಾಂಬಿ, ಉತ್ತರ ಪ್ರದೇಶ (ಪಿಟಿಐ): ‘ಇಲ್ಲಿನ ಶೀತ್ಲಾ ಮಾತಾ ದೇವಸ್ಥಾನದಲ್ಲಿರುವ ದೇವಿಗೆ ಭಕ್ತನೊಬ್ಬ ತನ್ನ ನಾಲಿಗೆಯನ್ನೇ ಕತ್ತರಿಸಿ ಅರ್ಪಿಸಿದ್ದಾನೆ’ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

‘ಭಕ್ತನನ್ನು ಸಂಪತ್ (38) ಎಂದು ಗುರುತಿಸಲಾಗಿದೆ. ಕೌಶಾಂಬಿ ನಿವಾಸಿಯಾಗಿರುವ ಆತನನ್ನು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಆತನ ಸ್ಥಿತಿ ಗಂಭೀರವಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಸಂಪತ್ ಮತ್ತು ಆತನ ಪತ್ನಿ ಬನ್ನೊ ದೇವಿ ಶನಿವಾರ ದೇವಾಲಯಕ್ಕೆ ಭೇಟಿ ನೀಡಿದ್ದರು. ಗಂಗಾ ನದಿಯಲ್ಲಿ ಸ್ನಾನ ಮುಗಿಸಿ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿದ್ದರು. ಬಳಿಕ ಸಂಪತ್ ಬ್ಲೇಡ್‌ನಿಂದ ನಾಲಿಗೆ ಕತ್ತರಿಸಿ ಅದನ್ನು ದೇಗುಲದ ದ್ವಾರದ ಚೌಕಟ್ಟಿನ ಮೇಲಿಟ್ಟು ದೇವಿಗೆ ಅರ್ಪಣೆ ಮಾಡಿದ್ದಾನೆ’ ಎಂದು ಖರ್ಹಾ ಧಾಮ್ ಪೊಲೀಸ್ ಠಾಣೆಯ ಠಾಣಾಧಿಕಾರಿ ಅಭಿಲಾಷ್ ತಿವಾರಿ ತಿಳಿಸಿದ್ದಾರೆ. ‘ನನ್ನ ಪತಿ ಶುಕ್ರವಾರ ರಾತ್ರಿ ದೇವಸ್ಥಾನಕ್ಕೆ ಹೋಗುವ ಅಭಿಲಾಷೆ ವ್ಯಕ್ತಪಡಿಸಿದ್ದರು’ ಎಂದು ಬನ್ನೊ ದೇವಿ ಹೇಳಿದ್ದಾರೆ.

ಮೂಸೆವಾಲಾ ಹತ್ಯೆ: 6ನೇ ಶೂಟರ್ ಬಂಧನ

ಚಂಡೀಗಡ (ಪಿಟಿಐ): ಗಾಯಕ ಸಿಧು ಮೂಸೆವಾಲಾ ಹತ್ಯೆಯಲ್ಲಿ ಭಾಗಿಯಾಗಿದ್ದನೆಂದು ಶಂಕಿಸಲಾದ ಆರನೇ ಮತ್ತು ಕೊನೆಯ ಶೂಟರ್‌ನನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಪೊಲೀಸರು ಶನಿವಾರ ತಿಳಿಸಿದ್ದಾರೆ.

ಚುನಾವಣಾ ಕಹಳೆ ಮೊಳಗಿಸಿದ ಬಿಜೆಪಿ

ಒಂದನೇ ಪುಟದಿಂದ...

ಧಮ್ಮಿದ್ದರೆ ತಡೆಯಲಿ: ‘ರಾಜ್ಯದಲ್ಲಿ ಅಧಿಕಾರ ಹಿಡಿಯಲು ದುಷ್ಟ ಕೂಟ ನಾಟಕ ಆರಂಭಿಸಿದೆ. 2023ರ ಮೇ ತಿಂಗಳಲ್ಲಿ ಈ ದುಷ್ಟ ನಾಟಕಕ್ಕೆ ಅಂತ್ಯ ಹಾಡಬೇಕು. ಅದಕ್ಕೆ ಇಲ್ಲಿಂದಲೇ ಸಂಕಲ್ಪ ಮಾಡೋಣ. ದೊಡ್ಡಬಳ್ಳಾಪುರದಲ್ಲಿ ಆರಂಭವಾದ ಜನಸ್ಪಂದನ ಸಮಾವೇಶ ರಾಜ್ಯದ ಹಳ್ಳಿ ಹಳ್ಳಿಗಳನ್ನೂ ತಲುಪಲಿದೆ. 2023ರ ಚುನಾವಣೆಯಲ್ಲಿ ಗೆಲುವಿನೊಂದಿಗೆ ಈ ಯಾತ್ರೆ ಮುಕ್ತಾಯವಾಗಲಿದೆ. ಕಾಂಗ್ರೆಸ್‌ನವರಿಗೆ ಧಮ್ಮಿದ್ದರೆ, ತಾಕತ್ತಿದ್ದರೆ ನಮ್ಮ ದಿಗ್ವಿಜಯ ಯಾತ್ರೆಯನ್ನು ತಡೆಯಲಿ ನೋಡೋಣ’ ಎಂದು ಬೊಮ್ಮಾಯಿ ಸವಾಲು ಹಾಕಿದರು.

‘ಜಾತಿ, ಧರ್ಮಗಳನ್ನು ಒಡೆದು ಚುನಾವಣೆ ಗೆಲ್ಲುವ ಪ್ರಯತ್ನ ನಿಲ್ಲಿಸಿ. ಭ್ರಷ್ಟಾಚಾರದಿಂದ ಸಂಪಾದಿಸಿದ ಹಣವನ್ನು ಎಲ್ಲೆಲ್ಲಿ ಇಟ್ಟಿದ್ದೀರಿ ಎಂಬುದೂ ಗೊತ್ತಿದೆ. ಶೀಘ್ರದಲ್ಲಿ ನಿಮ್ಮ ಬಂಡವಾಳ ಬಯಲಾಗುತ್ತದೆ. 2018ರಲ್ಲಿ ಹೆಚ್ಚಿನ ಸ್ಥಾನ ಗಳಿಸಿದ್ದರೂ ಕಾಂಗ್ರೆಸ್‌ನ ಅಧಿಕಾರ ಲಾಲಸೆಯಿಂದ ಅವಕಾಶ ಕೈತಪ್ಪಿತ್ತು. ಮುಂದಿನ ಚುನಾವಣೆಯಲ್ಲಿ ಡಬ್ಬಲ್ ಎಂಜಿನ್ ಸರ್ಕಾರವನ್ನು ಜನ ಮತ್ತೆ ಬೆಂಬಲಿಸುತ್ತಾರೆ. ನಿಚ್ಚಳ ಬಹುಮತದೊಂದಿಗೆ ಅಧಿಕಾರಕ್ಕೆ ಮರಳುತ್ತೇವೆ’ ಎಂದು ಹೇಳಿದರು.

‘ದೊಡ್ಡಬಳ್ಳಾಪುರದಲ್ಲಿ ಕೇಸರಿ ಸುನಾಮಿ ಎದ್ದಿದೆ. ಅದು ಇಡೀ ರಾಜ್ಯವನ್ನು ವ್ಯಾಪಿಸಿಕೊಂಡಿದೆ. ಬೊಮ್ಮಾಯಿ ಮತ್ತು ಯಡಿಯೂರಪ್ಪ ನೇತೃತ್ವದಲ್ಲಿ ದಿಗ್ವಿಜಯ ಆರಂಭವಾಗಿದೆ. 150 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬರುವುದು ಖಚಿತ’ ಎಂದು ನಳಿನ್ ಕುಮಾರ್ ಕಟೀಲ್ ಅವರು ಹೇಳಿದರು.

‘ಎಎಪಿ ಅಧಿಕಾರಕ್ಕೇರುವ ರಾಜ್ಯಗಳಲ್ಲಿ ಗುತ್ತಿಗೆ ನೌಕರರ ಸೇವೆ ಕಾಯಂ’

ನವದೆಹಲಿ (ಪಿಟಿಐ): ‘ಎಎಪಿ ಅಧಿಕಾರಕ್ಕೆ ಬರುವ ರಾಜ್ಯಗಳಲ್ಲಿ ಸರ್ಕಾರಿ ಇಲಾಖೆಗಳಲ್ಲಿರುವ ಎಲ್ಲಾ ಗುತ್ತಿಗೆ ನೌಕರರನ್ನು ಕಾಯಂಗೊಳಿಸಲಾಗುವುದು’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಶನಿವಾರ ಭರವಸೆ ನೀಡಿದ್ದಾರೆ.

8,736 ಶಿಕ್ಷರ ಸೇವೆಯನ್ನು ಕಾಯಂಗೊಳಿಸಿರುವ ಪಂಜಾಬ್‌ನ ಎಎಪಿ ಸರ್ಕಾರವನ್ನು ಪ್ರಶಂಸಿಸಿದ ಅವರು, ಎಲ್ಲಾ ರಾಜ್ಯ ಸರ್ಕಾರಗಳು ಇದೇ ರೀತಿ ಮಾಡಬೇಕು ಎಂದು ಆಶಿಸಿದ್ದಾರೆ.

ದೆಹಲಿ ಸರ್ಕಾರ ಕೂಡ ಅತಿಥಿ ಶಿಕ್ಷರನ್ನು ಕಾಯಂಗೊಳಿಸುವ ಸಲುವಾಗಿ ವಿಧಾನಸಭೆಯಲ್ಲಿ ಮಸೂದೆ ಮಂಡಿಸಿತ್ತು ಆದರೆ ಕೇಂದ್ರ ಸರ್ಕಾರವು ಇದಕ್ಕೆ ಅನುಮೋದನೆ ನೀಡಿಲ್ಲ ಎಂದು ಆರೋಪಿಸಿದರು.

‘ಕಾಯಂ ಸರ್ಕಾರಿ ಉದ್ಯೋಗಿಗಳ ಸಂಖ್ಯೆಯನ್ನು ಕಡಿಮೆಗೊಳಿಸಿ, ಹೆಚ್ಚು ಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ ನಡೆ ಮಾದರಿಯಾಗಿದೆ’ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಅತಿಥಿ, ಕಾಯಂ ಶಿಕ್ಷಕರ ಪ್ರಯತ್ನದಿಂದ ದೆಹಲಿಯಲ್ಲಿ ಶಿಕ್ಷಣ ಕ್ರಾಂತಿ ಸಾಧ್ಯವಾಗಿದೆ. ಒಪ್ಪಂದದ ಉದ್ಯೋಗ ವ್ಯವಸ್ಥೆಯು ಅತ್ಯಂತ ಶೋಷಣೆಯಿಂದ ಕೂಡಿದೆ ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಪುರಾತತ್ವಶಾಸ್ತ್ರಜ್ಞ ಬಿ.ಬಿ.ಲಾಲ್ ನಿಧನ

ನವದೆಹಲಿ (ಪಿಟಿಐ): ಪದ್ಮವಿಭೂಷಣ ಪುರಸ್ಕೃತ ಹಿರಿಯ ಪುರಾತತ್ವ ಶಾಸ್ತ್ರಜ್ಞ ಬ್ರಜ್‌ಬಾಸಿ ಲಾಲ್ (101) ಶನಿವಾರ ಇಲ್ಲಿ ನಿಧನರಾದರು.



ಬಿ.ಬಿ.ಲಾಲ್ ಅವರು ಭಾರತೀಯ ಪುರಾತತ್ವ ಇಲಾಖೆಯ ಮಹಾ ನಿರ್ದೇಶಕರಾಗಿದ್ದರು. ರಾಮ ಮಂದಿರ ನಿರ್ಮಾಣವಾಗುತ್ತಿರುವ ಅಯೋಧ್ಯೆಯಲ್ಲಿ ಉತ್ಖನನ ವೇಳೆ ದೇವಸ್ಥಾನ ಮಾದರಿಯ ನಾಲ್ಕು ಕಂಬಗಳನ್ನು ಗುರುತಿಸಿದ್ದರು. ಅಯೋಧ್ಯೆಯಲ್ಲಿ ಮಂದಿರ ಇತ್ತು ಎಂಬ ವಾದಕ್ಕೆ ಇದುವೇ ಪ್ರಮುಖ ಸಾಕ್ಷ್ಯವಾಗಿ ಬದಲಾಗಿತ್ತು.

ಲಾಲ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಂಸ್ಕೃತಿ ಸಚಿವ ಕೃಷ್ಣಾ ರೆಡ್ಡಿ ಕಂಬನಿ ಮಿಡಿದಿದ್ದಾರೆ. ‘ಸಂಸ್ಕೃತಿ ಮತ್ತು ಪುರಾತತ್ವ ಶಾಸ್ತ್ರಕ್ಕೆ ಲಾಲ್ ಅಪಾರ ಕೊಡುಗೆ ನೀಡಿದ್ದಾರೆ. ಶ್ರೀಮಂತ ಗತಕಾಲದೊಂದಿಗಿನ ನಮ್ಮ ಸಂಪರ್ಕವನ್ನು ಆಳಗೊಳಿಸಿದ ಮಹಾನ್ ಬುದ್ಧಿಜೀವಿ. ಅವರ ನಿಧನದಿಂದ ನೋವಾಗಿದೆ’ ಎಂದು ಪ್ರಧಾನಿ ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೆಂಗಳೂರಿನ ನಾಗಸಂದ್ರ ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆಕೆಲಸ ಮಾಡಲು ಗಂಡ-ಹೆಂಡತಿ ಬೇಕಾಗಿದ್ದಾರೆ. ವಸತಿ ಉಚಿತ. ಸಂಪರ್ಕಿಸಿ: 98450 26475, 98455 10722

ವ್ಯಾಪಾರ

Business Offers

Finance

FINANCE AGAINST PROPERTY /BUSINESS /PROJECTS : +918610936362 / +917708215904

Grooms Wanted

Hindu

VISWAKARMA COMMUNITY seeking for the groom (Preferably Vegetarian) for a divorced girl aged 31 with fair, height: 5.7", resident of town Hindupur, AP. Contact: 8106657018

TECHNOART CONSTRUCTIONS PVT. LTD.
REQUIRE

A reputed Civil Engineering Construction Company. Requires candidates for the following positions to be placed in their projects in and around Bangalore.

1. Project Manager:	BE / DCE, Experience – 15+ years
2. Sr. Project Engineer:	BE /DCE, Experience: 10 – 15 years
3. Site Engineer:	BE / DCE, Experience: 5 – 10 years
4. Jr. Engineer:	BE /DCE, Experience: 2 – 4 years
5. Foreman:	ITI or Equivalent, Experience: 15+ years
6. Quantity Surveyor:	BE / DCE, Experience: 5 – 10 years
7. Billing Engineer:	BE / DCE, Experience: 5 – 10 years
8. Store Keeper:	Graduate, Experience: 3 – 6 years
9. Safety Officer:	Graduate / Diploma with Certificate in Fire & Safety, Experience: 5 – 10 years

Candidates having mandatorily worked in large construction companies well versed in latest technologies & various operations methods for – construction of large multistoried apartments, villa projects, commercial complexes, industrial projects, etc. Exposure in project planning, scheduling, labour mobilisation & allocation, project accounting & control, providing technical direction & ensuring compliance with quality standards.

Interested candidates please attach resumes as word document and mail it within a week from release of this advertisement to: hr@technoartconstructions.com or courier / post their resumes to the following address: Technoart Constructions Pvt. Ltd.#68/A, 3rd Floor, 32nd Cross, 7th BlockJayanagar, Bangalore - 560 070. Email- hr@technoartconstructions.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Situation Required

SAHARA EXPRESS Courier Pvt Ltd S.R Nagar, Bengaluru - 560027 Branch Wanted Field Executive Male, Bike Delivery Staff Male, Customer care Female Call: 9789340307/ 7305748555

Business to Business

Hotel & Restaurant

REQUIRED HOTEL General Manager for Hassan The position is available for a prominent PUB in Hassan for candidate having 10 years experience in Hotel Industry with relevant exposure in conducting Event Management and well-versed in Social Media Platforms to interact with customers to build Brands as well as to increase Sales. Salary: 20,000 to 35,000 PM. The Eligible Candidates can Contact On 08172-233466/94487 05674

ವೈವಾಹಿಕ

Brides Wanted

Kannada

1995 BORN boy from Bangalore M.Tech Working as a Software Engineer father Retired Govt Employee Mother Retired Professor seeks a educated girl for early marriage (080-69103046)

SUITABLE MATCH is required for early marriage of divorced boy '75 born (MBA) Govt Employee (CNB) Please connect :(080-69074916)

Kannada

BEAUTIFUL GIRL Educated from a very cultured family seeks a boy for Early marriage (080-6910 3046)

ವೈಯಕ್ತಿಕ

Change of Name

I, SULOCHANAK.C, residing at: Plot No.6, Rani Chennamma Nagar, Dharwad, Karnataka havechanged my name to Kokila Basavaraj vide Affidavit dated: 25.06.2014 beforenotary N. R. Nagaraj, Tiptur, Karnataka. Henceforth I shall be called Kokila Basavaraj only.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಚಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

27-9-2022, 3ದಿನಗಳು, ಸಿಗಂದೂರು, ಕೊಲ್ಲೂರು, ಜೋಗಜಲಪಾತ, ಬಂಗಾರಮಕ್ಕಿ ವೀರಾಂಜನೇಯ, ಕಮಲಶಿಲೆ, ಹೊಂಬುಜಪದ್ಮಾವತಿ, ಉಡುತಡಿ ಅಕ್ಕಮಹಾದೇವಿ ಜನ್ಮಸ್ಥಳ, ಶ್ರೀಧರಾಶ್ರಮ, ವಡನಬೈಲುಪದ್ಮಾವತಿ ಇತ್ಯಾದಿ.9481433157

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 10.10.2022,ದೆಹಲಿ, ವೈಷ್ಣೋದೇವಿ,ಅಮೃತ್‌ಸರ್, 01.11.2022 ದೆಹಲಿ, ಆಗ್ರಾ,ಕಾಶಿ, ಗಯಾ, 10.11.2022ನೇಪಾಳ, ಮುಕ್ತಿನಾಥ, 21.11.2022 ಗುಜರಾತ್, ನಾಗನಾಥ, ಸೋಮನಾಥ. 9591017782

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಹೈಬ್ರಿಡ್ ಮೈಕ್ರೋ ಡಿವೈಸಸ್ ಲಿಮಿಟೆಡ್
ಸಿ. ಐ. ಎನ್ (CIN) ಸಂಖ್ಯೆ : U85110KA1992PLC012851
ನೋಂದಾಯಿತ ಕಚೇರಿ : # 103, 4ನೇ ಕ್ರಾಸ್, ಎಲೆಕ್ಟ್ರಾನಿಕ್ಸ್ ಸಿಟಿ, ಬೆಂಗಳೂರು – 560 100
ದೂರವಾಣಿ : 080–28521520‌6 / 1507,
ಈ–ಮೇಲ್ : cs@khmdl.com, ವೆಬ್ ಸೈಟ್ : www.khmdl.com
ದೃಶ್ಯ ಸಮ್ಮೇಳನ (ವಿಡಿಯೋ ಕಾನ್ಫರೆನ್ಸಿಂಗ್) ಹಾಗೂ ಇನ್ನಿತರೇ ಶ್ರವಣ –ದೃಶ್ಯ (ಆಡಿಯೋ –ವಿಶುಯಲ್ಸ್) ಮಾಧ್ಯಮಗಳ ಮೂಲಕ ನಡೆಸಲಿಚ್ಛಿಸಿರುವ ಕಂಪನಿಯ

‘30ನೇ ವಾರ್ಷಿಕ ಸಾಮಾನ್ಯ ಸಭೆಯ‘ (AGM) ಕುರಿತು ಸದಸ್ಯರಿಗೆ ತಿಳುವಳಿಕೆ

ಈ ಮೂಲಕ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ : 30ನೇ ಸೆಪ್ಟೆಂಬರ್, 2022ರ ಸಂಜೆ 5:30 ಕ್ಕೆ (ಭಾರತೀಯ ಕಾಲಮಾನ), ಕರ್ನಾಟಕ ಹೈಬ್ರಿಡ್ ಮೈಕ್ರೋ ಡಿವೈಸಸ್ ಲಿಮಿಟೆಡ್ ("ಕಂಪನಿ") ಯ "30ನೇ ವಾರ್ಷಿಕ ಸಾಮಾನ್ಯ ಸಭೆ" ಯನ್ನು, ದೃಶ್ಯ ಸಮ್ಮೇಳನ ('ವಿಡಿಯೋ ಕಾನ್ಫರೆನ್ಸ್') ಹಾಗೂ ಇನ್ನಿತರೇ ಶ್ರವಣ –ದೃಶ್ಯ (ಆಡಿಯೋ –ವಿಶುಯಲ್ಸ್) ಮೂಲಕ, ಸದಸ್ಯರ ದೈಹಿಕ ಹಾಜರಿಲ್ಲದೆ, ಒಂದು ಸಾಮಾನ್ಯ ನಿಗದಿತ ಸ್ಥಳದಿಂದ ನಡೆಸಲು ನಿರ್ಧರಿಸಲಾಗಿದೆ. ಕಂಪನಿ ಕಾಯ್ದೆ, 2013 ಹಾಗೂ ಅದರ ನಿಯಮಾನುಸಾರವಾಗಿ, ವಹಿವಾಟಿನ ಸಂಬಂಧ "ವಾರ್ಷಿಕ ಸಾಮಾನ್ಯ ಸಭೆ" ಯನ್ನು ನಡೆಸಲು ಸದಸ್ಯರಿಗೆ ತಿಳುವಳಿಕೆ ನೀಡುವಂತೆ, "ಕಂಪನಿ ವ್ಯವಹಾರಗಳ ಸಚಿವಾಲಯ" ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ : 20/2020, ದಿನಾಂಕ: 5.5.2020, ಮತ್ತು ಸಂಖ್ಯೆ : 14/2020, ದಿನಾಂಕ: 8.4.2020 ಮತ್ತು 13.4.2020, ಮತ್ತು 13.1.2021, ಮತ್ತು ಸುತ್ತೋಲೆ ಸಂಖ್ಯೆ : 02/2022, ದಿನಾಂಕ : 5.5.2022 ರ ಅನ್ವಯದಂತೆ, ಈ ತಿಳುವಳಿಕೆಯನ್ನು ಸದಸ್ಯರಿಗೆ ನೀಡಲಾಗಿದೆ.
ಈ ಮೇಲ್ಕಂಡ ಸುತ್ತೋಲೆ / ನಿರ್ದೇಶನಗಳ ಅನುಸಾರವಾಗಿ, "ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ" ಹಾಗೂ "ವಾರ್ಷಿಕ ವರದಿ 2021–2022" ರ ವಿದ್ಯುನ್ಮಾನ (Electronic) ಪ್ರತಿಯನ್ನು, ಕಂಪನಿಯಲ್ಲಿ ನೋಂದಾಯಿಸಿರುವ ಸದಸ್ಯರ ಈ –ಮೇಲ್ ಖಾತೆಗೆ "ವಿದ್ಯುನ್ಮಾನ ರೂಪ" ದಲ್ಲಿ ಸೂಕ್ತ ಸಮಯದಲ್ಲಿ ಸದಸ್ಯರಿಗೆ ಕಳುಹಿಸಲಾಗುವುದು.
ಈ ಮೇಲ್ಕಂಡ ದಾಖಲೆಗಳು ಕಂಪನಿಯ ವೆಬ್ ಸೈಟ್ : www.khmdl.com ನಲ್ಲಿ ಕೂಡ ಲಭ್ಯವಿದೆ.
ಆದೇಶದ ಮೇರೆಗೆ, ನಿರ್ದೇಶಕರುಗಳ ಮಂಡಳಿ, ಕರ್ನಾಟಕ ಹೈಬ್ರಿಡ್ ಮೈಕ್ರೋ ಡಿವೈಸಸ್ ಲಿಮಿಟೆಡ್,
ಸ್ಥಳ : ಬೆಂಗಳೂರು
ದಿನಾಂಕ: 08.9.2022
ಸಹಿ /–
ಗೋಪಾಲ್ ಪುರಂದರ್ ದಾಸ್
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು (CMD)

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

07.11.2022 11 ದಿನಗಳ ಕಾಶಿ.ಗಯಾ,ಅಯೋಧ್ಯ ನೈಮೀಶಾರಣ್ಯ ಬೈದ್ಯನಾಥ್ ಜ್ಯೋತಿರ್ಲಿಂಗ. Multi excel semi Sleeper coach Bus/ flightನಲ್ಲಿ 10.11.2022 16 ದಿನಗಳ ಅಷ್ಟ ಜ್ಯೋತಿರ್ಲಿಂಗಗಳು ನಾಸಿಕ್,ಶಿರಡಿ ಓಂಕಾರೇಶ್ವರ್ ಮಹಾಕಾಲೇಶ್ವರ (ಉಜ್ಜಯಿನಿ) ದ್ವಾರಕಾ,ಸೋಮನಾಥ್ ಮಾತ್ರಗಯಾ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ 9342287551 8050629305

★ಶ್ರೇಯಸ್ ಟೂರ್ಸ್★ ಹಾರ್ನ್‌ಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

ಸುಸಜ್ಜಿತ ವ್ಯವಸ್ಥೆಯೊಂದಿಗೆ: 02.10.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 06.10.2022 ರಿಂದ 12/9 ದಿನಗಳ ಕಾಶಿ,ಗಯಾ,ದೆಹಲಿ. 07.11.2022 13.11.2022 ರಿಂದ 8/10/16 ದಿನಗಳ ಜಗನ್ನಾಥ್‌ಪುರಿ ಕೊನಾರ್ಕ್, ಕೊಲ್ಕತ್ತ,ಕಾಶಿ,ನೇಪಾಳ ಮುಕ್ತಿನಾಥ್ 18.11.2022 ರಿಂದ 11 ದಿನಗಳ ಮಧ್ಯಪ್ರದೇಶ. 11.11.2022 ರಿಂದ 8/11/17 ದಿನಗಳ ಗುಜರಾತ್,ರಾಜಸ್ಥಾನ್ 02.11.2022 04.12.2022 ರಿಂದ 11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 11.12.2022 30.12.2022 ರಿಂದ 5 ದಿನಗಳ ದುಬೈ,ಅಬುಧಾಬಿ. 02.12.2022 ರಿಂದ 8 ದಿನಗಳ ಕಾಂಬೋಡಿಯಾ ವಿಯಟ್ನಂ ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/13 ದಿನಗಳು. 29.09.2022 ನವಗ್ರಹ ದರ್ಶನಸೇರಿ 18 ಕ್ಷೇತ್ರಗಳು. 06.10.2022 ರಾಮೇಶ್ವರ ಕನ್ಯಾಕುಮಾರಿ ಇತ್ಯಾದಿ. 27.10.2022 ಕಾರ್ತಿಕ ಮಾಸದಲ್ಲಿ ಶ್ರೀಶೈಲಾ,ಮಹಾನಂದಿ, ಅಹೋಬಲ,ಮಂತ್ರಾಲಯಾ. 07.11.2022 ವೈಷ್ಣೋದೇವಿ ಇತ್ಯಾದಿ. 22.11.2022 ಕಾಶಿ,ಅಯೋಧ್ಯ ಇತ್ಯಾದಿ. 9448390735 9449721678 9731159966

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
100	150	120	190	600

For More Details Contact:
Ph:080- 45557160 | 163 | 164 |
M: 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಸಂಕ್ಷಿಪ್ತ ಸುದ್ದಿ

ಟೇಬಲ್ ಟೆನಿಸ್: ಯಶಸ್ವಿನಿಗೆ ಚಿನ್ನ

ಯಶಸ್ವಿನಿ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ನಾರ್ತ್ ಮೆಸಿಡೋನಿಯಾದಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಪ್ಯೋರ್ಟರಿಕೊ ದೇಶದ ಅರ್ಜುನ್ ಜೊತೆಗೂಡಿ ಆಡಿದ ಯಶಸ್ವಿನಿ ಫೈನಲ್ ಪಂದ್ಯದಲ್ಲಿ 7-11,7-11, 11-9,11-9, 11-9ರಿಂದ ಕ್ರೊವೇಷ್ಯಾದ ಬಾರ್ನಾ ಮತ್ತು ಚೀನಾ ತೈಪೆಯ ಚೆಂಗ್ ಎದುರು ಗೆದ್ದರು.

ಕಾಡಿದ ಮಳೆ: ದಿನದಾಟ ರದ್ದು

ಹುಬ್ಬಳ್ಳಿ: ಭಾರತ 'ಎ' ಹಾಗೂ ನ್ಯೂಜಿಲೆಂಡ್ 'ಎ' ತಂಡಗಳ ನಡುವಣ 'ಟೆಸ್ಟ್' ಪಂದ್ಯದ ಮೂರನೇ ದಿನದಾಟವೂ ಮಳೆಯಿಂದ ರದ್ದಾಯಿತು.

ಪಂದ್ಯದ ಮೊದಲ ದಿನದಾಟ ಮಳೆಯಿಂದ ರದ್ದುಗೊಂಡಿದ್ದರೆ, ಎರಡನೇ ದಿನವಾದ ಶುಕ್ರವಾರ 66 ಓವರ್‌ಗಳ ಆಟ ನಡೆದಿತ್ತು. ಶುಕ್ರವಾರ ತಡರಾತ್ರಿ ಮಳೆ ಸುರಿಯಿತಲ್ಲದೆ ಶನಿವಾರ ದಿನವಿಡೀ ದಟ್ಟ ಮೋಡಕವಿದ ವಾತಾವರಣ, ತುಂತುರು ಮಳೆ ಮುಂದುವರಿಯಿತು.

ಅಂಪೈರ್‌ಗಳಾದ ಎ.ನಂದಕಿಶೋರ್, ಸಂಜಯಕುಮಾರ್ ಸಿಂಗ್ ಮತ್ತು ರೆಫರಿ ಸಜ್ಜನ್ ಸತ್‌ಭಾಯಿ ಅವರು ಶನಿವಾರ ಬೆಳಿಗ್ಗೆ 8.30ಕ್ಕೆ, 11, ಮಧ್ಯಾಹ್ನ 12.40, 2 ಹಾಗೂ 3 ಗಂಟೆಗೆ ಮೈದಾನವನ್ನು ಪರಿಶೀಲಿಸಿದರು. ಆ ಬಳಿಕ ದಿನದಾಟ ರದ್ದುಗೊಳಿಸಲು ನಿರ್ಧರಿಸಿದರು.

ಭಾನುವಾರದ ಒಂದು ದಿನದ ಆಟ ಮಾತ್ರ ಬಾಕಿಯಿದೆ. ಭಾರತ 'ಎ' ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 229 ರನ್ ಗಳಿಸಿದೆ.

ಏಕದಿನ ಕ್ರಿಕೆಟ್‌ಗೆ ಫಿಂಚ್ ವಿದಾಯ


ಆ್ಯರನ್ ಫಿಂಚ್

ಕೇರ್ನ್ಸ್ (ಎಪಿ): ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್ ಅವರು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಿಂದ ನಿವೃತ್ತಿಯಾಗುವುದಾಗಿ ತಿಳಿಸಿದ್ದಾರೆ. ಭಾನುವಾರ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಪಂದ್ಯವು ಅವರ ಕೊನೆಯ ಪಂದ್ಯವಾಗಲಿದೆ.

'ಅದ್ಭುತ ನೆನಪುಗಳ ಉತ್ತಮ ಪಯಣವಿದು. ನೆರವಾದ ಎಲ್ಲರಿಗೂ ಧನ್ಯವಾದಗಳು' ಎಂದು ಫಿಂಚ್ ಹೇಳಿದ್ದಾರೆ. 145 ಏಕದಿನ ಪಂದ್ಯಗಳನ್ನು ಆಡಿರುವ ಆರಂಭಿಕ ಬ್ಯಾಟರ್ ಫಿಂಚ್ 5,401 ರನ್ ಗಳಿಸಿದ್ದಾರೆ. ಅದರಲ್ಲಿ 17 ಶತಕಗಳು ಸೇರಿವೆ.

ಡುರಾಂಡ್ ಕಪ್ ಫುಟ್‌ಬಾಲ್: ಸೆಮಿಫೈನಲ್‌ಗೆ ಬಿಎಫ್‌ಸಿ

ಕೋಲ್ಕತ್ತ: ಹೆಚ್ಚುವರಿ ಅವಧಿಯ ಕೊನೆಯ ನಿಮಿಷದಲ್ಲಿ ರಾಯ್‌ಕೃಷ್ಣ ತಂದಿತ್ತ ಗೋಲಿನ ನೆರವಿನಿಂದ ಬೆಂಗಳೂರು ಎಫ್‌ಸಿ ತಂಡ, ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಶನಿವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬಿಎಫ್‌ಸಿ ತಂಡ, ಒಡಿಶಾ ಎಫ್‌ಸಿ ವಿರುದ್ಧ 2–1 ಗೋಲುಗಳ ರೋಚಕ ಜಯ ದಾಖಲಿಸಿತು.

ತುರುಸಿನ ಪೈಪೋಟಿ ನಡೆದ ಪಂದ್ಯದ ನಿಗದಿತ 90 ನಿಮಿಷಗಳ ಆಟದಲ್ಲಿ ಯಾವುದೇ ಗೋಲುಗಳು ಬರಲಿಲ್ಲ. ಇದರಿಂದ ಹೆಚ್ಚುವರಿ ಅವಧಿಯ ಮೊರೆ ಹೋಗಲಾಯಿತು.

ಶಿವಶಕ್ತಿ ನಾರಾಯಣನ್ (98ನೇ ನಿ.) ಹೆಚ್ಚುವರಿ ಅವಧಿಯಲ್ಲಿ ಗೋಲು ಗಳಿಸಿ ಬಿಎಫ್‌ಸಿಗೆ ಮುನ್ನಡೆ ತಂದಿತ್ತರು. ಅಲ್ಪ ಸಮಯದ ಬಳಿಕ ಒಡಿಶಾ ತಂಡದ ಡಿಯಾಗೊ ಮೌರಿಸಿಯೊ (115ನೇ ನಿ.) ಚೆಂಡನ್ನು ಗುರಿಸೇರಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು.

ಪಂದ್ಯ ಕೊನೆಗೊಳ್ಳಲು ಕೆಲವೇ ಸೆಕುಂಡುಗಳು ಇರುವಾಗ ರಾಯ್‌ಕೃಷ್ಣ (120ನೇ ನಿ.) ಅವರು 25 ಯಾರ್ಡ್ ದೂರದಿಂದ ಚೆಂಡನ್ನು ನಿಖರವಾಗಿ ಗುರಿಸೇರಿಸಿ ಬಿಎಫ್‌ಸಿ ಗೆಲುವಿಗೆ ಕಾರಣರಾದರು.

ಬಿಎಫ್‌ಸಿ ತಂಡ ಡುರಾಂಡ್ ಕಪ್‌ನಲ್ಲಿ ಸತತ ನಾಲ್ಕನೇ ಬಾರಿ ಸೆಮಿಫೈನಲ್ ಪ್ರವೇಶಿಸಿದ ಸಾಧನೆ ಮಾಡಿದೆ. ಬೆಂಗಳೂರಿನ ತಂಡ ಸೆಮಿಫೈನಲ್‌ನಲ್ಲಿ ರಾಜಸ್ತಾನ ಎಫ್‌ಸಿ ಅಥವಾ ಹೈದರಾಬಾದ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಅಮೆರಿಕ ಓಪನ್ ಟೆನಿಸ್ ಟೂರ್ನಿ: ಟೈಫೊ ಗೆಲುವಿನ ಓಟಕ್ಕೆ ತೆರೆ

ಫೈನಲ್‌ಗೆ ಅಲ್ಕರಾಜ್, ರೂಡ್

ಕಾರ್ಲೋಸ್ ಅಲ್ಕರಾಜ್


ಕ್ಯಾಸ್ಪರ್ ರೂಡ್ –ಎಎಫ್‌ಪಿ ಚಿತ್ರಗಳು

ನ್ಯೂಯಾರ್ಕ್ (ರಾಯಿಟರ್ಸ್/ಎಎಫ್‌ಪಿ): ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ನಾರ್ವೆಯ ಕ್ಯಾಸ್ಪರ್ ರೂಡ್ ಅವರು ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿಗೆ ಪೈಪೋಟಿ ನಡೆಸಲಿದ್ದಾರೆ.

ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ 19 ವರ್ಷದ ಅಲ್ಕರಾಜ್ 6-7(6), 6-3, 6-1, 6-7(5), 6-3 ರಲ್ಲಿ ಆತಿಥೇಯ ದೇಶದ ಭರವಸೆಯಾಗಿದ್ದ ಫ್ರಾನ್ಸಿಸ್ ಟೈಫೊ ಅವರನ್ನು ಮಣಿಸಿದರು. ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ರೂಡ್ 7-6(5), 6-2, 5-7, 6-2 ರಲ್ಲಿ ರಷ್ಯಾದ ಕರೆನ್ ಕಚನೊವ್ ವಿರುದ್ಧ ಗೆದ್ದರು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಅಲ್ಕರಾಜ್ ಅವರು ರೂಡ್ ವಿರುದ್ಧ ಗೆದ್ದರೆ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಲಿರುವ ಅತಿಕಿರಿಯ ಆಟಗಾರ ಎನಿಸಲಿದ್ದಾರೆ. ಆಸ್ಟ್ರೇಲಿಯದ ಲೇಟನ್ ಹೆವಿಟ್ ಹೆಸರಿನಲ್ಲಿದ್ದ ದಾಖಲೆ ಮುರಿಯಲಿದೆ. ಹೆವಿಟ್ 2003 ರಲ್ಲಿ ತಮ್ಮ 20ನೇ ವಯಸ್ಸಿನಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅಮೆರಿಕಕ್ಕೆ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಬರ ನೀಗಿಸುವ ನಿರೀಕ್ಷೆ ಮೂಡಿಸಿದ್ದ ಟೈಫೊ ಅವರ ಗೆಲುವಿನ ಓಟಕ್ಕೆ ತೆರೆಬಿತ್ತು. ಆ್ಯಂಡಿ ರಾಡಿಕ್ 2003 ರಲ್ಲಿ ಗೆದ್ದ ಬಳಿಕ ಅಮೆರಿಕದ ಯಾರೂ ಪುರುಷರ ಸಿಂಗಲ್ ವಿಭಾಗದಲ್ಲಿ ಚಾಂಪಿಯನ್ ಆಗಿಲ್ಲ.

ಮೊದಲ ಸೆಟ್ ಟೈಬ್ರೇಕರ್‌ನಲ್ಲಿ ಗೆದ್ದ ಟೈಫೊ, ಎರಡು ಮತ್ತು ಮೂರನೇ ಸೆಟ್‌ಗಳನ್ನು ಸುಲಭವಾಗಿ ಎದುರಾಳಿಗೆ ಒಪ್ಪಿಸಿದರು.

ನಾಲ್ಕನೇ ಸೆಟ್‌ನಲ್ಲಿ ಮತ್ತೆ ಲಯ ಕಂಡುಕೊಂಡು ಟೈಬ್ರೇಕರ್‌ನಲ್ಲಿ ಗೆದ್ದು, 2-2ರಲ್ಲಿ ಸಮಬಲ ಸಾಧಿಸಿದರು. ಆದರೆ ನಿರ್ಣಾಯಕ ಸೆಟ್‌ನಲ್ಲಿ ಸ್ಪೇನ್ ಆಟಗಾರನ ಕೈಮೇಲಾಯಿತು. ಅಮೆರಿಕದ ಪೀಟ್ ಸಾಂಪ್ರಾಸ್ (1990) ಬಳಿಕ ಇಲ್ಲಿ ಫೈನಲ್‌ಗೇರಿದ ಅತಿಕಿರಿಯ ಆಟಗಾರ ಎಂಬ ಗೌರವ ಅವರಿಗೆ ಒಲಿಯಿತು.

55 ಶಾಟ್‌ಗಳ ರ‍್ಯಾಲಿ: ಕಚನೊವ್ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಐದನೇ ಶ್ರೇಯಾಂಕದ ರೂಡ್ ಸೊಗಸಾದ ಆಟವಾಡಿದರು. ಪ್ರಬಲ ಪೈಪೋಟಿ ನಡೆದ ಮೊದಲ ಸೆಟ್‌ಅನ್ನು ಅವರು ಟೈಬ್ರೇಕರ್‌ನಲ್ಲಿ ಗೆದ್ದು 1-0 ಮುನ್ನಡೆ ಪಡೆದರು. ಟೈಬ್ರೇಕರ್‌ನಲ್ಲಿ ಇಬ್ಬರೂ 55 ಶಾಟ್‌ಗಳ ಸುದೀರ್ಘ ರ‍್ಯಾಲಿ ಆಡಿ, ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿಕೊಂಡರು.

ಎರಡನೇ ಸೆಟ್ ಸುಲಭವಾಗಿ ಗೆದ್ದ ರೂಡ್, ಮೂರನೇ ಸೆಟ್‌ಅನ್ನು ಎದುರಾಳಿಗೆ ಒಪ್ಪಿಸಿದರು. ಆದರೆ 4ನೇ ಸೆಟ್‌ನಲ್ಲಿ ಶಿಸ್ತಿನ ಆಟವಾಡಿದರು.

ರೂಡ್ ಮತ್ತು ಅಲ್ಕರಾಜ್ ಅವರು ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದಾರೆ.

ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ಶನಿವಾರ ಭಾರತ ಹಾಕಿ ತಂಡದ ಪುರುಷ, ಮಹಿಳಾ ತಂಡಗಳು ಮತ್ತು ಅಥ್ಲೀಟ್‌ಗಳಾದ ಎಲ್ದೋಸ್ ಪೌಲ್, ಅವಿನಾಶ್ ಸಬ್ಳೆ, ಅಬ್ದುಲ್ಲ ಅಬೂಬಕರ್, ಪ್ರಿಯಾಂಕಾ ಗೋಸ್ವಾಮಿ ಮತ್ತು ಸಂದೀಪ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು– ಪ್ರಜಾವಾಣಿ ಚಿತ್ರ

ರೇಸಿಂಗ್: ಶ್ರೇಯಸ್ ಹರೀಶ್ ಮಿಂಚು


ಶ್ರೇಯಸ್

ಚೆನ್ನೈ (ಪಿಟಿಐ): ಬೆಂಗಳೂರಿನ, ರಾಕರ್ಸ್ ರೇಸಿಂಗ್ ತಂಡದ ಶ್ರೇಯಸ್ ಹರೀಶ್ ಎಂಆರ್‌ಎಫ್ ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ನ್ಯಾಷನಲ್ ಮೋಟರ್‌ಸೈಕಲ್ ರೇಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮೊದಲ ಜಯ ಸಂಪಾದಿಸಿದರು.

ಇಲ್ಲಿಯ ಮದ್ರಾಸ್ ಇಂಟರ್‌ನ್ಯಾಷನಲ್ ಸರ್ಕೀಟ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಶಿಪ್‌ನ ನೊವೈಸ್ (ಸ್ಟಾಕ್ 165 ಸಿಸಿ) ವಿಭಾಗದ ನಾಲ್ಕನೇ ಸುತ್ತಿನಲ್ಲಿ ಶನಿವಾರ ಶ್ರೇಯಸ್ ಅಗ್ರಸ್ಥಾನ ಗಳಿಸಿದರು. ಕೊಯಮತ್ತೂರಿನ ರೋಹನ್ ಆರ್. ಅವರನ್ನು 12 ವರ್ಷದ ಶ್ರೇಯಸ್ ಹಿಂದಿಕ್ಕಿದರು.

ಡೇವಿಸ್ ಕಪ್: ಹಿಂದೆ ಸರಿದ ಬೋಪಣ್ಣ

ನವದೆಹಲಿ (ಪಿಟಿಐ): ಮೊಣಕಾಲು ನೋವಿನಿಂದ ಬಳಲುತ್ತಿರುವ ಭಾರತದ ರೋಹನ್ ಬೋಪಣ್ಣ ಅವರು ಮುಂಬರುವ ನಾರ್ವೆ ವಿರುದ್ಧದ ಡೇವಿಸ್ ಕಪ್ ಟೆನಿಸ್ ಪಂದ್ಯದಿಂದ ಹಿಂದೆ ಸರಿದಿದ್ದಾರೆ.

ಸೆಪ್ಟೆಂಬರ್ 16 ಮತ್ತು 17ರಂದು ಈ ಪಂದ್ಯ ನಿಗದಿಯಾಗಿದೆ.

ಸುಮಿತ್ ನಗಾಲ್, ರಾಮಕುಮಾರ್ ರಾಮನಾಥನ್, ಪ್ರಜ್ಞೇಶ್ ಗುಣೇಶ್ವರನ್, ಯೂಕಿ ಭಾಂಬ್ರಿ ಮತ್ತು ಮುಕುಂದ್ ಶಶಿಕುಮಾರ್ ತಂಡದಲ್ಲಿರುವ ಇನ್ನುಳಿದ ಆಟಗಾರರು. ಬೋಪಣ್ಣ ಅವರ ಸ್ಥಾನಕ್ಕೆ ಡಬಲ್ಸ್‌ನಲ್ಲಿ ಸಾಕೇತ್ ಮೈನೇನಿ ಅವರನ್ನು ತಂಡಕ್ಕೆ ಸೇರಿಸಿಕೊಳ್ಳುವ ಸಾಧ್ಯತೆಯಿದೆ.

ಅಂಕಿತಾಗೆ ಕಠಿಣ ಸವಾಲು: ಸೋಮವಾರದಿಂದ ಚೆನ್ನೈನಲ್ಲಿ ನಡೆಯಲಿರುವ ಚೆನ್ನೈ ಓಪನ್ ಡಬ್ಲ್ಯುಟಿಎ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಭಾರತದ ಅಂಕಿತಾ ರೈನಾ ಅವರಿಗೆ ಜರ್ಮನಿಯ ತತಿಯಾನ ಮರಿಯಾ ಸವಾಲು ಎದುರಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ನವೀನ್ ಡಿ. ಪಡೀಲ್
ರಂಗಭೂಮಿ, ಚಲನಚಿತ್ರ, ಕಿರುತೆರೆ ನಟ
ಕುಸೆಲ್ದರಸನ ಕುಶಲೋಪರಿ
ಸೆಲೆಬ್ರಿಟಿ LIVE ಬೆಳಿಗ್ಗೆ 11 ಗಂಟೆಗೆ
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಇಲ್ಲದ ಮಾಲಿನ್ಯ ಪ್ರಮಾಣಪತ್ರ ಎಲೆಕ್ಟ್ರಿಕ್ ಸ್ಕೂಟರ್‌ಗೆ ದಂಡ!

ಪ್ರಜಾವಾಣಿ ವಾರ್ತೆ

ತಿರುವನಂತಪುರ: ವಾಹನ ತಪಾಸಣೆ ವೇಳೆ ಮಾಲಿನ್ಯ ಪ್ರಮಾಣಪತ್ರ (ಪಿಯುಸಿ) ಕೊಟ್ಟಿಲ್ಲ ಎಂಬ ಕಾರಣ ನೀಡಿ ಎಲೆಕ್ಟ್ರಿಕ್ ಸ್ಕೂಟರ್ ಸವಾರನಿಗೆ ದಂಡ ಹಾಕಿರುವ ಪ್ರಸಂಗ ಕೇರಳದಲ್ಲಿ ನಡೆದಿದೆ.

ಎಲೆಕ್ಟ್ರಿಕ್ ವಾಹನಗಳಿಗೆ ಪ್ರಮಾಣಪತ್ರ ಅಗತ್ಯ ಇಲ್ಲ. ಆದರೆ, ಕೇರಳದ ಮಲಪ್ಪುರಂ ಜಿಲ್ಲೆಯ ನೀಲಾಂಚೇರಿಯಲ್ಲಿ ಯುವಕನೊಬ್ಬ 'ಏಥರ್' ಕಂಪನಿಯ ಎಲೆಕ್ಟ್ರಿಕ್ ಸ್ಕೂಟರ್ ಅನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಸ್ಥಳೀಯ ಟ್ರಾಫಿಕ್ ಪೊಲೀಸರು ತಡೆದು ಪರಿಶೀಲನೆ ನಡೆಸಿದ್ದಾರೆ. ಪರಿಶೀಲನೆ ನಡೆಸಿದ ಬಳಿಕ ₹250 ದಂಡ ವಿಧಿಸಿ ರಶೀದಿ ಕೊಟ್ಟಿದ್ದಾರೆ.

ಯುವಕ ಇದೇ ರಶೀದಿಯನ್ನು ಟ್ವಿಟರ್‌ನಲ್ಲಿ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಟ್ಯಾಗ್ ಮಾಡಿ, 'ಸ್ವಾಮಿ, ಎಲೆಕ್ಟ್ರಿಕ್ ವಾಹನಗಳಿಗೆ ಪ್ರಮಾಣಪತ್ರ ಕಡ್ಡಾಯ ಮಾಡಿರುವಿರಾ ಹೇಗೆ?' ಎಂದು ಪ್ರಶ್ನಿಸಿದ್ದಾನೆ. ಬಳಿಕ ಸ್ಪಷ್ಟನೆ ನೀಡಿರುವ ಮಲಪ್ಪುರಂ ಜಿಲ್ಲೆಯ ಪೊಲೀಸರು, ಯುವಕನಿಗೆ ಡಿಎಲ್ ತೋರಿಸದ್ದಕ್ಕೆ ದಂಡ ವಿಧಿಸಲಾಗಿತ್ತು. ದಂಡ ನೀಡುವಾಗ ಮಷಿನ್‌ನಲ್ಲಿ ಆದ ಎಡವಟ್ಟಿನಿಂದ ಹೀಗೆ ಆಗಿದೆ' ಎಂದಿದ್ದಾರೆ.

ಅಕ್ಟೋಬರ್‌ನಲ್ಲಿ ದಕ್ಷಿಣ ಆಫ್ರಿಕಾದಿಂದ 12 ಚೀತಾಗಳು ಭಾರತಕ್ಕೆ

ಜೊಹಾನ್ಸ್‌ಬರ್ಗ್: ದಕ್ಷಿಣ ಆಫ್ರಿಕಾದಿಂದ 12 ಚೀತಾಗಳ ಮೊದಲ ಬ್ಯಾಚ್ ಮುಂದಿನ ತಿಂಗಳು ಭಾರತಕ್ಕೆ ಬರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಆಫ್ರಿಕಾದ ವನ್ಯಜೀವಿ ತಜ್ಞರು ಭಾರತಕ್ಕೆ ಬಂದು ಚೀತಾಗಳನ್ನು ಬಿಡುವ ಪ್ರದೇಶಗಳನ್ನು ಪರಿಶೀಲಿಸಿ ಮರಳಿದ್ದಾರೆ ಎಂದು ಹೇಳಿದ್ದಾರೆ.

9 ಚೀತಾಗಳನ್ನು ರೂಯಿಬರ್ಗ್‌ನಲ್ಲಿ ಹಾಗೂ ಮೂರು ಚಿರತೆಗಳನ್ನು ಕ್ವಾಝುಲು–ನಟಾಲ್ ಪ್ರಾಂತ್ಯದ ಫಿಂಡಾದಲ್ಲಿ ಪ್ರತ್ಯೇಕವಾಗಿರಿಸಲಾಗಿದೆ ಎಂದಿದ್ದಾರೆ. ಮುಂದಿನ ವಾರ ನಮೀಬಿಯಾದಿಂದ ಎಂಟು ಚೀತಾಗಳನ್ನು ಭಾರತಕ್ಕೆ ಬರುವ ನಿರೀಕ್ಷೆಯೂ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಖಾರ್ಕೀವ್ ಪ್ರದೇಶದಿಂದ ರಷ್ಯಾ ಸೇನೆ ಹಿಂದಕ್ಕೆ

ಕೀವ್ (ಎಪಿ): 'ಉಕ್ರೇನ್‌ನ ಖಾರ್ಕೀವ್ ಪ್ರದೇಶದ ಎರಡು ಸ್ಥಳಗಳಿಂದ ಸೇನಾ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಲಾಗುತ್ತಿದೆ' ಎಂದು ರಷ್ಯಾದ ರಕ್ಷಣಾ ಸಚಿವಾಲಯ ಶನಿವಾರ ಹೇಳಿದೆ.

'ಬಲಾಕ್ಲಿಯಾ ಹಾಗೂ ಇಜ್ಯುಮ್ ಪ್ರದೇಶದಿಂದ ವಾಪಾಸಾಗಲಿರುವ ಸೇನಾ ಪಡೆಯ ಸಿಬ್ಬಂದಿ ಡೊನೆಸ್ಕ್ ಪ್ರದೇಶದಲ್ಲಿ ಸೇರಿಕೊಳ್ಳಲಿದ್ದಾರೆ' ಎಂದು ರಕ್ಷಣಾ ಸಚಿವಾಲಯದ ವಕ್ತಾರ ಇಗರ್ ಕೊನಾಶೆಂಕೊವ್ ತಿಳಿಸಿದ್ದಾರೆ.

'ಡಾನ್‌ಬಾಸ್ ಪ್ರದೇಶವನ್ನು ಉಕ್ರೇನ್ ಹಿಡಿತದಿಂದ ಬಿಡುಗಡೆಗೊಳಿಸುವ ಗುರಿ ಹೊಂದಿದ್ದೇವೆ. ಇದಕ್ಕಾಗಿ ವಿಶೇಷ ಸೇನಾ ಕಾರ್ಯಾಚರಣೆ ನಡೆಸಲಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು ಖಾರ್ಕೀವ್‌ನಿಂದ ಸೇನಾ ಪಡೆಗಳನ್ನು ಹಿಂದಕ್ಕೆ ಕರೆಸಿಕೊಂಡಿದ್ದೇವೆ' ಎಂದಿದ್ದಾರೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1640)
ಸೋಯಾ (ರಿಫೈನ್ಡ್)	₹1190 (1185)
ಸೂರ್ಯಕಾಂತಿ (ರಿಫೈನ್ಡ್)	₹1380 (1385)
ಪಾಮೋಲಿನ್	₹940 (950)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹452

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹130

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹333-680
ದ್ವಿತಳಿ (ಬಿ.ವಿ)	₹402-856

ಷೇರುಪೇಟೆ ವಾರದ ವಹಿವಾಟು ಚೇತರಿಕೆ: ಬಂಡವಾಳ ಮೌಲ್ಯ ವೃದ್ಧಿ

7 ಕಂಪನಿಗಳ ಗಳಿಕೆ ₹1.33 ಲಕ್ಷ ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳು ಎರಡು ವಾರಗಳ ಬಳಿಕ ಸೆಪ್ಟೆಂಬರ್ 9ಕ್ಕೆ ಕೊನೆಗೊಂಡ ವಾರದಲ್ಲಿ ಸಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿದವು. ಇದರಿಂದಾಗಿ ಷೇರುಪೇಟೆ ಯಲ್ಲಿ ನೋಂದಾಯಿತ ಪ್ರಮುಖ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ಹೆಚ್ಚಾಗಿದೆ.

ಪ್ರಮುಖ 10 ಕಂಪನಿಗಳ ಪೈಕಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್), ಟಿಸಿಎಸ್ ಒಳಗೊಂಡು ಏಳು ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ₹1.33 ಲಕ್ಷ ಕೋಟಿಯಷ್ಟು ಏರಿಕೆ ಆಗಿದೆ.

ಇನ್ನುಳಿದ ಮೂರು ಕಂಪನಿಗಳಾದ ಹಿಂದುಸ್ತಾನ್ ಯೂನಿಲಿವರ್, ಎಸ್‌ಬಿಐ ಮತ್ತು ಬಜಾಜ್ ಫೈನಾನ್ಸ್ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯದಲ್ಲಿ ಇಳಿಕೆ ಕಂಡುಬಂದಿದೆ.

ಟಿಸಿಎಸ್ ಕಂಪನಿಯ ಬಂಡವಾಳ ಮೌಲ್ಯವು ₹32,072 ಕೋಟಿಯಷ್ಟು ಗರಿಷ್ಠ ಏರಿಕೆ ಕಂಡಿದೆ. ರಿಲಯನ್ಸ್ ಮಾರುಕಟ್ಟೆ ಮೌಲ್ಯ ₹26,249 ಕೋಟಿಯಷ್ಟು ಏರಿಕೆ ಆಗಿದೆ.

ಕಂಪನಿಗಳ ಬಂಡವಾಳ ಮೌಲ್ಯ (₹ ಕೋಟಿಗಳಲ್ಲಿ)

ಕಂಪನಿ	ಬಂಡವಾಳ ಮೌಲ್ಯ	ಇಳಿಕೆ/ಏರಿಕೆ
ರಿಲಯನ್ಸ್	17,37,718	26,249 ▲
ಟಿಸಿಎಸ್	11,77,227	32,072 ▲
ಎಚ್‌ಡಿಎಫ್‌ಸಿ ಬ್ಯಾಂಕ್	8,33,854	7,248 ▲
ಐಸಿಐಸಿಐ ಬ್ಯಾಂಕ್	6,36,144	24,804 ▲
ಇನ್ಫೊಸಿಸ್	6,27,824	20,471 ▲
ಹಿಂದುಸ್ತಾನ್ ಯೂನಿಲಿವರ್	6,08,074	3,618 ▼
ಎಸ್‌ಬಿಐ	4,93,933	15,172 ▲
ಎಚ್‌ಡಿಎಫ್‌ಸಿ	4,41,502	2,551 ▼
ಅದಾನಿ ಟ್ರಾನ್ಸ್‌ಮಿಷನ್	4,38,573	7,730 ▲
ಬಜಾಜ್ ಫೈನಾನ್ಸ್	4,34,913	433 ▼

ಮಾಹಿತಿ: ಬಿಎಸ್‌ಇ

ಬಂಡವಾಳ ಮೌಲ್ಯ ವೃದ್ಧಿ: ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ವಾರದ ವಹಿವಾಟಿನಲ್ಲಿ 990 ಅಂಶ ಏರಿಕೆ ಕಂಡಿದೆ. ಮಾರುಕಟ್ಟೆಯ ಬಂಡವಾಳ ಮೌಲ್ಯವು ವಾರದ ವಹಿವಾಟಿನಲ್ಲಿ ₹4.57 ಲಕ್ಷ ಕೋಟಿಯಷ್ಟು ಹೆಚ್ಚಾಗಿದ್ದು ಒಟ್ಟು ಮೌಲ್ಯವು ಸಾರ್ವಕಾಲಿಕ ದಾಖಲೆ ಮಟ್ಟವಾದ ₹283.03 ಲಕ್ಷ ಕೋಟಿಗೆ ಏರಿಕೆ ಆಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 294 ಅಂಶ ಹೆಚ್ಚಾಗಿದೆ. ಇದಕ್ಕೂ ಹಿಂದಿನ ಎರಡು ವಾರಗಳಲ್ಲಿ ನಕಾರಾತ್ಮಕ ವಹಿವಾಟು ನಡೆದಿತ್ತು.

ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಮುಖವಾಗಿದೆ. ಬ್ರೆಂಟ್ ತೈಲ ದರವು ವಾರದ ವಹಿವಾಟಿನಲ್ಲಿ ಪ್ರತಿ ಬ್ಯಾರಲ್‌ಗೆ 5.81 ಡಾಲರ್‌ನಷ್ಟು ಇಳಿಕೆ ಕಂಡಿದ್ದು, ಒಂದು ಬ್ಯಾರಲ್‌ಗೆ 90.69 ಡಾಲರ್‌ಗೆ ತಲುಪಿದೆ.

ಎಫ್‌ಐಐ ಒಳಹರಿವು

ಬೆಂಗಳೂರು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ದೇಶದ ಷೇರು ಪೇಟೆಗಳಲ್ಲಿ ಸೆಪ್ಟೆಂಬರ್ 9ಕ್ಕೆ ಕೊನೆಗೊಂಡ ವಾರದಲ್ಲಿ ₹6,136 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಇದರಿಂದಾಗಿ ಸೆ. 1 ರಿಂದ 9ರವರೆಗಿನ ಅವಧಿಯಲ್ಲಿ ಒಟ್ಟಾರೆ ಹೂಡಿಕೆಯು ₹7,450 ಕೋಟಿಯಷ್ಟು ಆಗಿದೆ.

ಮುಂಬೈ ಧಾರಣೆ

ಶೇಂಗಾ

10–9-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11000-11050
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1650)
ಒಂದು ವಾರದ ಡೆಲಿವರಿ	1655 (1645)
ಸೋಯಾ ಕಚ್ಚಾ	1100 (1105)
ಪಾಮ್ ವಾರದ ಡೆಲಿವರಿ	938 (948)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1325)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,550 (50,600)
ಬೆಳ್ಳಿ ಕೆ.ಜಿ 54,600 (54,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚೆನ್ನೈ–ಬೆಂಗಳೂರು ಮಾರ್ಗದಲ್ಲಿ ಆಕಾಸಾ ಸೇವೆ ಆರಂಭ

ಚೆನ್ನೈ (ಪಿಟಿಐ): ಆಕಾಸಾ ಏರ್ ವಿಮಾನಯಾನ ಕಂಪನಿಯ ಚೆನ್ನೈ–ಬೆಂಗಳೂರು ಮಾರ್ಗದಲ್ಲಿ ಶನಿವಾರದಿಂದ ವಿಮಾನ ಸೇವೆಯನ್ನು ಆರಂಭಿಸಿದೆ.

'ಚೆನ್ನೈನಿಂದ ವಾಣಿಜ್ಯ ಸೇವೆ ಆರಂಭಿಸುವ ಮೂಲಕ ಮತ್ತೊಂದು ಮೈಲಿಗಲ್ಲು ಸಾಧಿಸಿದ್ದೇವೆ. ನಮ್ಮ ನೆಟ್‌ವರ್ಕ್ ವ್ಯಾಪ್ತಿಗೆ ಐದನೇ ನಗರ ಸೇರ್ಪಡೆಯಾಗಿದೆ' ಎಂದು ಕಂಪನಿಯ ಸಹ ಸ್ಥಾಪಕ ಪ್ರವೀಣ್ ಅಯ್ಯರ್ ಹೇಳಿದ್ದಾರೆ. 'ಈ ಹೊಸ ಮಾರ್ಗದಲ್ಲಿ ಎರಡೂ ಕಡೆಗಳಿಂದ ನಿತ್ಯವೂ ಎರಡು ಬಾರಿ ವಿಮಾನ ಸೇವೆ ಲಭ್ಯವಾಗಿದೆ' ಎಂದು ಅವರು ತಿಳಿಸಿದ್ದಾರೆ.

ಸೆಪ್ಟೆಂಬರ್ 26ರಿಂದ ಚೆನ್ನೈ ಮತ್ತು ಕೊಚ್ಚಿ ಮಾರ್ಗದಲ್ಲಿಯೂ ವಿಮಾನ ಸಂಚಾರ ಆರಂಭಿಸಲಾಗುವುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250

ಕಾಳು ಮೆಣಸು 490

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16250	15800	16250	223.25 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9900	9800	9850	ಲಂಡನ್
ಆರ್‌ಸಿ	4800	4500	4700	2238 ಡಾಲರ್ಸ್

ರಿಲಯನ್ಸ್ ತೆಕ್ಕೆಗೆ ಶುಭಲಕ್ಷ್ಮಿ ಪಾಲಿಸ್ಟರ್ಸ್

ನವದೆಹಲಿ (ಪಿಟಿಐ): ಶುಭಲಕ್ಷ್ಮಿ ಪಾಲಿಸ್ಟರ್ಸ್ ಲಿಮಿಟೆಡ್ ಕಂಪನಿಯನ್ನು ₹1,592 ಕೋಟಿಗೆ ಸ್ವಾಧೀನಪಡಿಸಿಕೊಂಡಿರುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ತಿಳಿಸಿದೆ.

ಶುಭಲಕ್ಷ್ಮಿ ಪಾಲಿಸ್ಟರ್ಸ್ ಲಿಮಿಟೆಡ್ ಅನ್ನು ₹1,522 ಕೋಟಿ ಮತ್ತು ಶುಭಲಕ್ಷ್ಮಿ ಪಾಲಿಟೆಕ್ಸ್ ಲಿಮಿಟೆಡ್ ಅನ್ನು ₹70 ಕೋಟಿ ನಗದು ಪಾವತಿಸಿ ಸ್ವಾಧೀನಪಡಿಸಿಕೊಳ್ಳಲು ರಿಲಯನ್ಸ್ ಪೆಟ್ರೋಲಿಯಂ ರಿಟೇಲ್ ಲಿಮಿಟೆಡ್ ಅಗತ್ಯ ದಾಖಲೆಗಳನ್ನು ಸಲ್ಲಿಸಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಈ ಸ್ವಾಧೀನ ಒಪ್ಪಂದಕ್ಕೆ ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ಒಪ್ಪಿಗೆಯ ಅಗತ್ಯ ಇದೆ. ಅಲ್ಲದೆ, ಎರಡೂ ಕಂಪನಿಗಳಿಗೆ ಸಾಲ ನೀಡಿರುವವರೂ ಒಪ್ಪಿಗೆ ನೀಡಬೇಕಿದೆ.

ಈ ಸ್ವಾಧೀನದಿಂದ ಜವಳಿ ತಯಾರಿಕಾ ವಹಿವಾಟು ಇನ್ನಷ್ಟು ಬಲಗೊಳ್ಳಲಿದೆ ಎಂದು ರಿಲಯನ್ಸ್ ತಿಳಿಸಿದೆ.

ಸೇಂಟ್ ಜೇಮ್ಸ್ ಅರಮನೆಯಲ್ಲಿ ಸಂಪ್ರದಾಯದಂತೆ ಅಧಿಕಾರ ಸ್ವೀಕಾರ

3ನೇ ಚಾರ್ಲ್ಸ್ ಇನ್ನು ಬ್ರಿಟನ್ ರಾಜ

ಲಂಡನ್ (ಪಿಟಿಐ): ಇಲ್ಲಿನ ಸೇಂಟ್ ಜೇಮ್ಸ್ ಅರಮನೆಯಲ್ಲಿ ಜರುಗಿದ ಸಮಾರಂಭದಲ್ಲಿ ನೂತನ ರಾಜರಾಗಿ 3ನೇ ಚಾರ್ಲ್ಸ್ ಶನಿವಾರ ಪದಗ್ರಹಣ ಮಾಡಿದರು. ಇದಕ್ಕೂ ಮುನ್ನ ನಡೆದ ಕೌನ್ಸಿಲ್ ಸಭೆಯಲ್ಲಿ ಅವರನ್ನು ಬ್ರಿಟನ್‌ನ ನೂತನ ರಾಜರನ್ನಾಗಿ ಘೋಷಿಸಲಾಯಿತು.

'ದೇವರೆ ದೊರೆಯನ್ನು ಕಾಪಾಡು' ಎಂದು ಕೌನ್ಸಿಲ್‌ನ 'ಕ್ಲರ್ಕ್' ಹೇಳಿದರು. ಸಮಾರಂಭದಲ್ಲಿ ಪಾಲ್ಗೊಂಡಿದ್ದ ಗಣ್ಯರೆಲ್ಲರೂ ಇದನ್ನು ಪುನರುಚ್ಚರಿಸಿದರು. ಬಳಿಕ 73 ವರ್ಷದ ಚಾರ್ಲ್ಸ್ ಸಂಪ್ರದಾಯದಂತೆ ಅಧಿಕಾರ ಸ್ವೀಕರಿಸಿದರು. ಚಾರ್ಲ್ಸ್ ಅವರ ಪತ್ನಿ ರಾಣಿ ಕ್ಯಾಮಿಲಾ, ಪುತ್ರ ಪ್ರಿನ್ಸ್ ವಿಲಿಯಂ ಅವರೂ ಈ ಸಮಾರಂಭಕ್ಕೆ ಸಾಕ್ಷಿಯಾದರು.

ಅರಮನೆಯಲ್ಲಿ ಜರುಗಿದ ಈ ಕಾರ್ಯಕ್ರಮವನ್ನು ಇದೇ ಮೊದಲ ಬಾರಿಗೆ ಟಿ.ವಿಯಲ್ಲಿ ನೇರ ಪ್ರಸಾರ ಮಾಡಲಾಯಿತು.

ಚಾರ್ಲ್ಸ್ ಅವರನ್ನು ನೂತನ ರಾಜರನ್ನಾಗಿ ಘೋಷಿಸಿದ ಬಳಿಕ ಅರಮನೆ ಮೇಲಿದ್ದ ಧ್ವಜವನ್ನು ಪೂರ್ಣ ಪ್ರಮಾಣದಲ್ಲಿ ಹಾರಿಸಲಾಯಿತು. ರಾಣಿ ಎರಡನೇ ಎಲಿಜಬೆತ್ ನಿಧನದ ಹಿನ್ನೆಲೆಯಲ್ಲಿ ಈ ಮೊದಲು ಧ್ವಜವನ್ನು ಅರ್ಧಕ್ಕೆ ಇಳಿಸಲಾಗಿತ್ತು.

ಸಶಸ್ತ್ರ ಪಡೆಯ ಗಾರ್ಟರ್ ಕಿಂಗ್, ಡೇವಿಡ್ ವಿನೆಸ್ ವೈಟ್ ಅವರು ಅರಮನೆಯ ಫ್ರೈಯರಿ ಕೋರ್ಟ್‌ನ ಬಾಲ್ಕನಿಯಲ್ಲಿ ನಿಂತು ನೂತನ ದೊರೆಯ ಘೋಷಣೆ ಕುರಿತಾದ ಪತ್ರವನ್ನು ವಾಚಿಸಿದರು. ಇದೇ ವೇಳೆ ರಾಯಲ್ ಹಾರ್ಸ್ ಫಿರಂಗಿ ದಳದವರು 41 ಬಾರಿ ಗಾಳಿಯಲ್ಲಿ ಗುಂಡು ಹಾರಿಸಿ ನೂತನ ದೊರೆಗೆ ಗೌರವ ಸೂಚಿಸಿದರು.

ಕಿಂಗ್ ಚಾರ್ಲ್ಸ್ ಅವರು ಪ್ರಮಾಣ ವಚನ ಸ್ವೀಕರಿಸಿದರು. ಅವರ ಪತ್ನಿ ರಾಣಿ ಕ್ಯಾಮಿಲಾ ಇದ್ದಾರೆ –ಎಎಫ್‌ಪಿ ಚಿತ್ರ

ಮೋದಿಗೆ ಕರೆ ಮಾಡಿದ ಟ್ರಸ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶನಿವಾರ ದೂರವಾಣಿ ಕರೆ ಮಾಡಿ ಮಾತನಾಡಿದ್ದಾರೆ.

'ಭಾರತ– ಬ್ರಿಟನ್ ದ್ವಿಪಕ್ಷೀಯ ಬಾಂಧವ್ಯದ ಪ್ರಾಮುಖ್ಯತೆ ಕುರಿತು ಇಬ್ಬರೂ ಚರ್ಚಿಸಿದ್ದಾರೆ. ಈ ವೇಳೆ ಮೋದಿ ಅವರು ರಾಣಿ ಎರಡನೇ ಎಲಿಜಬೆತ್ ಸಾವಿಗೆ ಕಂಬನಿ ಮಿಡಿದಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

'ಶೀಘ್ರವೇ ಮುಖಾಮುಖಿ ಭೇಟಿಯಾಗುವ ಇಂಗಿತವನ್ನೂ ಉಭಯ ನಾಯಕರು ವ್ಯಕ್ತಪಡಿಸಿದ್ದಾರೆ' ಎಂದೂ ಹೇಳಿದೆ.

ಚಾರ್ಲ್ಸ್‌ಗೆ ನಿಷ್ಠೆ: ಟ್ರಸ್

ಬ್ರಿಟನ್‌ನ ನೂತನ ಪ್ರಧಾನಿ ಲಿಜ್ ಟ್ರಸ್ ಹಾಗೂ ಅವರ ಸರ್ಕಾರದ ಹಿರಿಯ ಸದಸ್ಯರು 3ನೇ ಚಾರ್ಲ್ಸ್ ಅವರಿಗೆ ನಿಷ್ಠರಾಗಿರುವುದಾಗಿ ಶನಿವಾರ ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಮೊದಲು ಪ್ರಮಾಣ ವಚನ ಸ್ವೀಕರಿಸಿದ ಸ್ಪೀಕರ್ ಲಿಂಡ್ಸೆ ಹೋಯ್ಲೆ, 'ನೂತನ ದೊರೆ ಹಾಗೂ ಅವರ ಉತ್ತರಾಧಿಕಾರಿಗಳಿಗೆ ನಿಷ್ಠರಾಗಿರುತ್ತೇನೆ' ಎಂದರು. ಬಳಿಕ ಎಲ್ಲಾ ಜನಪ್ರತಿನಿಧಿಗಳು ರಾಜನಿಷ್ಠೆಗೆ ಬದ್ಧರಾಗಿರುವುದಾಗಿ ಹೇಳಿದರು.

14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನದಲ್ಲಿ ನಿರ್ಣಯ

'ಮೌಢ್ಯ ನಿಷೇಧ ಕಾನೂನು ಕಟ್ಟುನಿಟ್ಟಾಗಿ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದಲ್ಲಿ ಮೌಢ್ಯ ನಿಷೇಧ ಕಾನೂನನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು ಸೇರಿದಂತೆ 10 ನಿರ್ಣಯಗಳನ್ನು 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ ತೆಗೆದುಕೊಂಡಿತು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಇಲ್ಲಿನ ಕೆಎಸ್‌ಒಯು ಘಟಿಕೋತ್ಸವದಲ್ಲಿ ಶನಿವಾರ ಆಯೋಜಿಸಿದ್ದ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪರಿಷತ್ತಿನ ಖಜಾಂಚಿ ಈ.ಬಸವರಾಜು ನಿರ್ಣಯಗಳನ್ನು ಮಂಡಿಸಿದರು.

ನಿರ್ಣಯಗಳು: ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯಗಳನ್ನು ಸ್ಥಾಪಿಸಿ ವಿಜ್ಞಾನ ಶಿಕ್ಷಕರಿಗೆ ತರಬೇತಿ ನೀಡಬೇಕು. ಏಕ ಬಳಕೆ ಪ್ಲಾಸ್ಟಿಕ್ ಮಾರಾಟಗಾರರು ಹಾಗೂ ತಯಾರಕರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಪಶ್ಚಿಮ ಘಟ್ಟಗಳ ಅರಣ್ಯ ರಕ್ಷಣೆಗೆ, ಅಲ್ಲಿ ಅರಣ್ಯೀಕರಣಕ್ಕೆ ವಿಶೇಷ ಯೋಜನೆ ಜಾರಿಗೊಳಿಸಬೇಕು. ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಕೆರೆ ಸಮೀಕ್ಷೆ–ಅಧ್ಯಯನ ನಡೆಸಲು ವಿಶೇಷ ಕಾರ್ಯಕ್ರಮ ರೂಪಿಸಬೇಕು. ಕೆರೆಗಳ ಅತಿಕ್ರಮಣ ತೆರವುಗೊಳಿಸಬೇಕು.

ಮಹಿಳೆಯರು ವಿಜ್ಞಾನ ಕ್ಷೇತ್ರದ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಪೂರಕ ವಾತಾವರಣ ನಿರ್ಮಿಸಬೇಕು. ವಿದ್ಯಾರ್ಥಿಗಳನ್ನು ಖಗೋಳ ವಿಜ್ಞಾನದೆಡೆಗೆ ಆಕರ್ಷಿಸಲು ಸಂಚಾರಿ ತಾರಾಲಯ ಯೋಜನೆ ಬಲಪಡಿಸಬೇಕು. ವಿಜ್ಞಾನ ಪರಿಷತ್ತನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯೆಂದು ಪರಿಗಣಿಸಿ, ವಾರ್ಷಿಕ ಅನುದಾನ ಒದಗಿಸಬೇಕು. ಕನ್ನಡ ವಿಜ್ಞಾನ ಸಮ್ಮೇಳನವನ್ನು ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಆಯೋಜಿಸಲು ಕನ್ನಡ ಸಾಹಿತ್ಯ ಸಮ್ಮೇಳನದ ಮಾದರಿಯಲ್ಲಿ ಅನುದಾನ ನೀಡಬೇಕು. 'ಜೇಮ್ಸ್ ವೆಬ್ ದೂರದರ್ಶಕ' ಮಾದರಿಯಂತೆ ಇಸ್ರೊನಿಂದಲೂ ಬಾಹ್ಯಾಕಾಶ ದೂರದರ್ಶಕ ಉಡಾವಣೆಗೆ ಅನುದಾನ ಒದಗಿಸಬೇಕು ಎಂದು ಸಮ್ಮೇಳನ ಒತ್ತಾಯಿಸಿತು.

ಪ್ರಶಸ್ತಿ: ಮೈಸೂರಿನ ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಶ್ರೀಮತಿ ಹರಿಪ್ರಸಾದ್, ಬೆಂಗಳೂರಿನ ವಿಜ್ಞಾನ ಸಂವಹನಕಾರ ಪ್ರೊ.ಎಂ.ಆರ್.ನಾಗರಾಜು, ವಿಜಯಪುರದ ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಆರ್.ಬಳೂರಗಿ ಮತ್ತು ಕುಲಬುರಗಿಯ ಶಿಕ್ಷಣ ತಜ್ಞ ಪ್ರೊ.ಬಿ.ಕೆ. ಚಳಗೇರಿ ಅವರಿಗೆ ಪರಿಷತ್ತಿನಿಂದ ಇದೇ ಮೊದಲಿಗೆ ರಾಜ್ಯಮಟ್ಟದ 'ಡಾ. ಎಚ್.ನರಸಿಂಹಯ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಇಸ್ರೊ ನಿವೃತ್ತ ಅಧ್ಯಕ್ಷ, ಖ್ಯಾತ ವಿಜ್ಞಾನಿ ಎ.ಎಸ್.ಕಿರಣ್‌ಕುಮಾರ್ ಸರ್ವಾಧ್ಯಕ್ಷತೆ ವಹಿಸಿದ್ದರು. ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್, ಭಾರತ್ ಸ್ಕೌಟ್ ಅಂಡ್ ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ. ಆರ್.ಸಿಂಧ್ಯಾ, ಪರಿಷತ್ತಿನ ಅಧ್ಯಕ್ಷ ಗಿರೀಶ್ ಕಡ್ಲೆವಾಡ, ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯೆ ಮೀನಾಕ್ಷಿ ಕುಡುಸೋಮಣ್ಣವರ, ಕೆಎಸ್‌ಒಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್, ಸಮ್ಮೇಳನದ ರಾಜ್ಯ ಸಂಯೋಜಕ ಎ.ಎನ್.ಮಹೇಶ್ ಇದ್ದರು.

ಮೈಸೂರಿನಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಆಯೋಜಿಸಿದ್ದ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನದಲ್ಲಿ ಪ್ರೊ.ಬಿ.ಕೆ.ಚಳಗೇರಿ, ಪ್ರೊ.ಡಿ.ಆರ್.ಬಳೂರಗಿ, ಪ್ರೊ.ಎಂ.ಆರ್.ನಾಗರಾಜು ಹಾಗೂ ಶ್ರೀಮತಿ ಹರಿಪ್ರಸಾದ್ ಅವರಿಗೆ 'ಡಾ.ಎಚ್. ನರಸಿಂಹಯ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಭಾನುವಾರದ ಪುರವಣಿ

ಭಾನುವಾರ, 11 ಸೆಪ್ಟೆಂಬರ್ 2022



ಭಾರತದ ವಿವೇಕ: ಆನಂದದರ್ಶನ

12 ಬಿರುಮಳೆ ಹಾಸಿದ ಸಂಪಿಗೆಯ ಹಾಸಿಗೆ

13 ರಾಗ ಬರತಾವ ಹುಡುಕಿ



ಮುಳುಗುವ ನಗರಗಳು!

ಸುಸ್ಥಿರ, ಸಮೃದ್ಧ ನಗರಗಳ ಕನಸು ನನಸಾಗಬೇಕಿದ್ದರೆ ನಾಗರಿಕ ಪ್ರಪಂಚದ ಕೆಲವು ಅನಾಗರಿಕ ವರ್ತನೆಗಳೂ ಕೊನೆಯಾಗಬೇಕಿದೆ. ಜನ ಸಮುದಾಯ, ಸರ್ಕಾರ ಮತ್ತು ಉದ್ದಿಮೆ ವಲಯ ಹೀಗೆ ಎಲ್ಲರ ಒಗ್ಗಟ್ಟಿನಿಂದ ಮಾತ್ರ ಉತ್ತಮ ನಗರ ನಿರ್ಮಾಣ ಸಾಧ್ಯ ಎಂಬುದನ್ನು ಮನಗಾಣಲೇಬೇಕು. ಇಲ್ಲವಾದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಪ್ರಕೃತಿಗೆ ಯಾರೂ ಹೇಳಿಕೊಡಬೇಕಿಲ್ಲವಷ್ಟೇ?

ಗಣಪತಿ ಶರ್ಮಾ

ನಗರ ಮಹಾಪೂರ (Urban flood) ಎಂಬ ಪದವು ಭಾರತದಲ್ಲಿ ಮೊದಲು ಬಳಕೆಯಾದ ಸಂದರ್ಭವೆಂದರೆ ಪ್ರಾಯಶಃ ಅದು 2000ನೇ ಇಸವಿ. ಹಳ್ಳ-ಕೊಳ್ಳ, ನದಿಗಳು ಉಕ್ಕಿ ಹರಿದಾಗ ಮಹಾಪೂರ ಉಂಟಾಗುವುದನ್ನು ಕೇಳಿದ್ದ ಜನ, ಅದೇ ಮೊದಲ ಬಾರಿಗೆ ನಗರ ಮಹಾಪೂರದ ಕುರಿತು ಕೇಳಿ ಮೂಗಿನ ಮೇಲೆ ಬೆರಳು ಇಟ್ಟಿದ್ದರು. ದೂರದ ನದಿ ತೀರದಲ್ಲೆಲ್ಲೊ ಕಾಣಿಸಿಕೊಳ್ಳುತ್ತಿದ್ದ ಅಂತಹ ಪ್ರವಾಹ ಕಾಂಕ್ರಿಟ್ ಕಾಡಿನ ನಡುವಿನ ಮನೆ ಅಂಗಳವನ್ನು ಹುಡುಕಿಕೊಂಡು ಬಂದ ವಿದ್ಯಮಾನವೇನು ಸುಮ್ಮನೆಯೇ ಮತ್ತೆ?

ಮೊದಮೊದಲು ಹೈದರಾಬಾದ್, ನಂತರ ಮುಂಬೈ, ದೆಹಲಿ, ಅಹಮದಾಬಾದ್, ಕೋಲ್ಕತ್ತ, ಚೆನ್ನೈ ಬಳಿಕ ಬೆಂಗಳೂರು... ಹೀಗೆ ‘ಮೆಟ್ರೊ ಸಿಟಿ’ಗಳನ್ನು ಹುಡುಕಿಕೊಂಡು ಈ ‘ನಗರ ಮಹಾಪೂರ’ ಧಾವಿಸಿ ಬಂದಾಗ ‘ಏಕೆ ಹೀಗೆ’ ಎಂದು ಜನ ತಲೆ ಕೆರೆದುಕೊಂಡರು. ಆಮೇಲೆ ಸುಮ್ಮನಾದರು. ಸಮಸ್ಯೆಯ ಆಳಕ್ಕೆ ಇಳಿಯಲಿಲ್ಲ. ಪರಿಹಾರದ ಮಾರ್ಗೋಪಾಯಗಳನ್ನೂ ಕಂಡುಕೊಂಡಲಿಲ್ಲ. ಅದರ ಪರಿಣಾಮವೇ ನಗರ ಮತ್ತು ಮಹಾಪೂರದ ನಿರಂತರ ಮುಖಾಮುಖಿ.

ನದಿ ತಟದ ನಾಗರಿಕತೆ ಹಾಗೂ ನಗರಗಳ ವಿಕಾಸದ ಸಮೃದ್ಧ ಇತಿಹಾಸ ಹೊಂದಿರುವ ದೇಶ ನಮ್ಮದು. ಸಿಂಧೂ ನದಿ ಪಾತ್ರದಲ್ಲಿ ಮೈತಳೆದ ಹರಪ್ಪ, ಮೊಹೆಂಜೊ-ದಾರೋ ನಾಗರಿಕತೆಯ ಬಗ್ಗೆ ಕೇಳುತ್ತಲೇ ಬೆಳೆದವರು ನಾವು. ಪುರಾತನ ನಾಗರಿಕತೆಯಲ್ಲಿ ಅಂತಹ ವ್ಯವಸ್ಥಿತ ಜನವಸತಿ ಪ್ರದೇಶ ಬೇರೆ ಇರಲಿಲ್ಲ ಎಂದು ತಿಳಿದವರೂ ನಾವು. ಹಾಗಿದ್ದೂ ನಮ್ಮ ನಗರಗಳಲ್ಲಿ ನಾವೀಗ ಈ ಪರಿಯ ಮಹಾಪೂರಕ್ಕೆ ಆಮಂತ್ರಣ ಕೊಟ್ಟು ಕರೆಯುತ್ತಿರುವುದೇಕೆ, ಮತ್ತೆ?

ನಗರವನ್ನು ಜನವಸತಿಗೆ ಬೇಕಾದ ಹೆಚ್ಚಿನ ಸೌಲಭ್ಯಗಳನ್ನು ಹೊಂದಿದ ಪ್ರದೇಶ ಎಂದು ಗುರ್ತಿಸಲಾಗುತ್ತದೆ. ನಮ್ಮಲ್ಲಿ ನಗರೀಕರಣದ ಭರಾಟೆ ಯಾವ ಪರಿ ನಡೆದಿದೆ ಎಂದರೆ ಅದರ ನಾಗಾಲೋಟದ ಹೊಡೆತಕ್ಕೆ ಹಳ್ಳಿಗಳೇ ಮಾಯವಾಗುತ್ತಿವೆ. ಬೆಂಗಳೂರಿನ ಉದಾಹರಣೆಯನ್ನೇ ತೆಗೆದುಕೊಂಡರೆ ನೂರೈವತ್ತು ಹಳ್ಳಿಗಳನ್ನು ಆಪೋಶನ ತೆಗೆದುಕೊಂಡು ಅಮೀಬಾದಂತೆ ಬೆಳೆದ ಊರಲ್ಲವೇ ಇದು? ಹೋಗಲಿ, ನಗರ ಸಂಸ್ಕೃತಿ ವಿಕಾಸ ಹೊಂದುವಾಗ ಅದು ಜನವಸತಿಗೆ ಇನ್ನಷ್ಟು ಉತ್ಕೃಷ್ಟವಾದ, ಪ್ರಕೃತಿ ವಿಕೋಪಗಳನ್ನೂ ತಾಳಿಕೊಳ್ಳುವಂತಹ ಧಾರಣಾಶಕ್ತಿಯುಳ್ಳ ಪ್ರದೇಶವಾಗಿ ರೂಪುಗೊಳ್ಳಬೇಕಿತ್ತಲ್ಲವೇ? ಹಾಗಾದರೆ ಏಕೆ ಈ ಪರಿಯ ಮಹಾಪೂರದ ಆಟಾಟೋಪ? ಎಡವಿ ಬಿದ್ದದ್ದಾದರೂ ಎಲ್ಲಿ?

ನಗರ ಮಹಾಪೂರದ ಕುರಿತು ನಾವು ಮೊದಲು ಕೇಳಿದ್ದು 2000ರಲ್ಲಿ ಅಲ್ಲವೇ? ಆ ವೇಳೆಗೆ ದೇಶ ಜಾಗತೀಕರಣಕ್ಕೆ ತೆರೆದುಕೊಂಡು ಒಂದು ದಶಕವಾಗಿತ್ತು. ನೂರಾರು ಉದ್ಯಮಗಳು ಭರದಿಂದ ತಲೆ ಎತ್ತುತ್ತಿದ್ದ ಕಾಲಘಟ್ಟ ಅದಾಗಿತ್ತು. ನಗರಗಳು ಅತಿಯಾದ ಹುಮ್ಮಸ್ಸಿನಿಂದ ಬೆಳೆಯತೊಡಗಿದ್ದವು. ಹಳ್ಳಿಗಳ ಜನ ನಗರದತ್ತ ದಾಂಗುಡಿ ಇಟ್ಟಿದ್ದರು. ದೇಶದ ಬೇರೆ ಬೇರೆ ಭಾಗಗಳಿಂದಲೂ ದೊಡ್ಡ ದೊಡ್ಡ ನಗರಗಳಿಗೆ ವಲಸೆ ಶುರುವಾಗಿತ್ತು. ಜನವಸತಿಗೆ ಜಾಗ ಸಾಲದಾದಾಗ ಕೆರೆ-ಕಟ್ಟೆ, ಕಾಲುವೆಗಳನ್ನು ಸಮಾಧಿ ಮಾಡಿ ಮನೆಗಳನ್ನು ನಿರ್ಮಿಸುವ ಭರಾಟೆ ಶುರುವಾಗಿತ್ತು. ಮಳೆಗಾಲದಲ್ಲಿ ಅಲ್ಲಿಯ ‘ಮೂಲನಿವಾಸಿ’ ಮತ್ತೆ ಬಂದೇ ಬರುತ್ತಾನೆ ಎಂಬುದನ್ನು ಜನ ಮರೆತುಬಿಟ್ಟಿದ್ದರು. ನಗರ ಮಹಾಪೂರ ಕೂಡ ಅಲ್ಲಿ ಜನ ವಾಸವಾಗಿದ್ದಾರೆ ಎಂಬುದನ್ನು ಮರೆತು ಮತ್ತೆ ಮತ್ತೆ ಕಾಣಿಸಿಕೊಳ್ಳತೊಡಗಿತು.

ಇಷ್ಟಕ್ಕೂ ಸುಸ್ಥಿರ ನಗರವೊಂದರ ಪ್ರಮುಖ ಲಕ್ಷಣಗಳಾದರೂ ಏನು? ಕುಡಿಯಲು ಸದಾ ಶುದ್ಧ ನೀರು ಸಿಗಬೇಕು. ಬಳಕೆಯಾದ ನೀರು ಅಡೆತಡೆ ಇಲ್ಲದೆ ಹರಿದು ಹೋಗಬೇಕು. ಮಳೆ ನೀರನ್ನು ಕೆರೆಗೋ, ಹೊಳೆಗೋ ಸಾಗಿಸಲು ಪ್ರತ್ಯೇಕ ರಾಜಕಾಲುವೆ ಇರಬೇಕು. ಓಡಾಡುವ ರಸ್ತೆಗಳು ದಟ್ಟಣೆಯಿಂದ, ಗುಂಡಿಗಳಿಂದ ಮುಕ್ತವಾಗಿರಬೇಕು ಮತ್ತು ನಿರಂತರ ವಿದ್ಯುತ್ ಪೂರೈಕೆಯೂ ಆಗುತ್ತಿರಬೇಕು. ನಗರವೊಂದರ ಬಹುಪಾಲು ಜನ ಬಯಸುವುದು ಇಷ್ಟನ್ನು ಮಾತ್ರ. ಆದರೆ, ಈ ಮೂಲ ಅಗತ್ಯಗಳನ್ನು ಪೂರೈಸಲಾಗದೆ ಆಡಳಿತ ವ್ಯವಸ್ಥೆಗಳು ಸೋತು ಕೈಚೆಲ್ಲಿವೆಯಲ್ಲ?

ಮಳೆಗಾಲದಲ್ಲಿ ಮಹಾಪೂರ, ಬೇಸಿಗೆಯಲ್ಲಿ ಬರ!

ಮಹಾಪೂರವೆಲ್ಲ ತಗ್ಗಿ, ಚಳಿಗಾಲವನ್ನು ಕಳೆದ ಮೇಲೆ ಮತ್ತೆ ಬೇಸಿಗೆ ಬರುತ್ತದೆ. ಈಗ ಪ್ರವಾಹಕ್ಕೀಡಾಗಿರುವ ಪ್ರದೇಶಗಳಲ್ಲಿ ಆಗ ಕುಡಿಯುವ ನೀರಿಗೂ ತತ್ವಾರ ಕಂಡುಬರುತ್ತದೆ (ಬೇಸಿಗೆಯ ಮಾತು ಬದಿಗಿರಲಿ, ರಸ್ತೆಯಲ್ಲಿ ಪ್ರವಾಹ ಸೃಷ್ಟಿಯಾಗಿರುವ ಈ ಸಂದರ್ಭದಲ್ಲೇ ಮನೆಗಳಲ್ಲಿ ಕುಡಿಯುವ ನೀರಿಗೆ ಬರವಿರುವುದು ನಿಜವಷ್ಟೆ). ಇದೆಂತಹ ಸೋಜಿಗ? ಪರಿಶುದ್ಧವಾದ ನೀರು ಭಾರಿ ಪ್ರಮಾಣದಲ್ಲಿ ಹರಿದುಹೋದ ಪ್ರದೇಶದಲ್ಲಿ ಆ ಬಳಿಕ ಕುಡಿಯಲು ನೀರೇ ಇರುವುದಿಲ್ಲ! ಮುಂದಿನ ವರ್ಷ ಮತ್ತೆ ಮಳೆಗಾಲ, ಪ್ರವಾಹ ಬರುತ್ತದೆ ಎಂಬ ಒಂದಿನಿತೂ ಭಯ-ಭೀತಿ ಇಲ್ಲದೆ ಅತಿಕ್ರಮಣಗಳೂ ಮತ್ತೆ ನಡೆಯುತ್ತವೆ!

ಕೆರೆಗಳ ನಾಡೆಂದೇ ಪ್ರಸಿದ್ಧಿ ಪಡೆದಿದ್ದ, ಸಾವಿರಾರು ಕೆರೆಗಳಿದ್ದ ಬೆಂಗಳೂರಿಗೆ ಅವುಗಳೇ ಕುಡಿಯುವ ನೀರಿನ ಮುಖ್ಯ ಮೂಲಗಳಾಗಿದ್ದವು. ಪ್ರವಾಹ ಉಂಟಾಗದಂತೆ ನೀರನ್ನು ಸಂಗ್ರಹಿಸುವ ನೈಸರ್ಗಿಕ ಬೋಗುಣಿಗಳು ಅವಾಗಿದ್ದವು. ಈಗ ಉಳಿದಿರುವ ಕೆರೆಗಳ ಸಂಖ್ಯೆ ಅಜಮಾಸು ನೂರು. ಅವುಗಳೂ ಕೊಚ್ಚೆ ಗುಂಡಿಗಳಾಗಿವೆ. ಉಳಿದ ಕೆರೆಗಳೆಲ್ಲ ಎಲ್ಲಿ ಹೋದವು? ಅವುಗಳ ಜಾಗದಲ್ಲಿ ಹಾಗೂ ಅವುಗಳ ಕೋಡಿ ಬಿದ್ದು ನೀರು ಹರಿಯಬೇಕಾದ ಸ್ಥಳಗಳಲ್ಲಿ ವಸತಿ ಸಮುಚ್ಚಯಗಳು, ವಾಣಿಜ್ಯ ಸಂಕೀರ್ಣಗಳು, ಕ್ರೀಡಾಂಗಣಗಳು ತಲೆ ಎತ್ತಿವೆ. ಇತ್ತ ಕುಡಿಯಲು ನೀರು ಕೊಡುವ ಕೆರೆಗಳಿಲ್ಲ, ಅತ್ತ ಮಳೆನೀರು ಹರಿದುಹೋಗಲು ಕಾಲುವೆಗಳಿಲ್ಲ.



ಯಾವುದೇ ನಗರ ಒಂದು ಚೆಸ್ ಬೋರ್ಡ್ ಮಾದರಿಯಲ್ಲಿ ಅಭಿವೃದ್ಧಿಯಾಗಬೇಕು. ಚೆಸ್ ಬೋರ್ಡ್‌ನ ಬಿಳಿ ಮನೆಗಳು ಕಟ್ಟಡನಿರ್ಮಿತ ಪ್ರದೇಶವಾಗಿಯೂ ಕಪ್ಪು ಮನೆಗಳು ಹಸಿರು ಪ್ರದೇಶವಾಗಿಯೂ ಇರಬೇಕು.

ಲಂಚ ಪಡೆದು ಎಲ್ಲೆಂದರಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವುದು, ಅಕ್ರಮವಾಗಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸುವುದು ದೇಶದ ಮಹಾನಗರಗಳಲ್ಲಿ ಮಾಮೂಲಿ ಆಗಿಬಿಟ್ಟಿದೆ. ಬಳಿಕ ಒತ್ತುವರಿ ತೆರವಿನ ಹೆಸರಿನಲ್ಲಿ ಮತ್ತೊಂದಷ್ಟು ದುಡ್ಡು ಮಾಡುವುದೂ ಗುಟ್ಟಾಗಿ ಉಳಿದಿಲ್ಲ. ರಾಜಕಾಲುವೆ ಒತ್ತುವರಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೊಳೆಗೇರಿ ಅಭಿವೃದ್ಧಿ ಮಂಡಳಿಗಳೇ ಭಾಗಿಯಾಗಿರುವುದೂ ತನಿಖೆಗಳಿಂದ ಬಯಲಾಗಿದೆಯಲ್ಲ?

11ನೇ ಪುಟಕ್ಕೆ...

ಮಳೆಗಾಲದ ಶಿಮ್ಲಾ

ಶಿಮ್ಲಾದ ಕಣಿವೆಗಳಲ್ಲಿ ಮುಂಗಾರು ಮಳೆ ಮೋಡಗಳು ಆಗೊಮ್ಮೆ ಈಗೊಮ್ಮೆ ನಗರದ ಸೌಂದರ್ಯವನ್ನು ತೆರೆದಿಡುತ್ತಾ ಕಣ್ಣಾಮುಚ್ಚಾಲೆ ಆಡತೊಡಗಿದಾಗ...

ಪ್ರವಾಸ

ಸುಪ್ರೀತಾ ಹೆಬ್ಬಾರ್

ಪ್ರವಾಸ ಎಲ್ಲರಿಗೂ ಪ್ರಿಯ. ಆಯಾ ಋತುವಿನಲ್ಲಿ ಅದಕ್ಕೆ ಹೊಂದುವ ಸ್ಥಳಗಳಿಗೆ ಪ್ರವಾಸ ಹೋಗುವ ಜನರು ಅಲ್ಲಿನ ಪ್ರಕೃತಿ, ಐತಿಹಾಸಿಕ ಮೆರುಗುಗಳ ಅನಾವರಣಕ್ಕೆ ಬೆರಗಾಗುತ್ತಾರೆ. ಆದರೆ, ಈ ಪ್ರವಾಸದಲ್ಲಿ ಇನ್ನೊಂದು ಬಗೆಯಿದೆ. ಅದೇ ಆಫ್-ಬೀಟ್ ಪ್ರವಾಸ. ಇದು ಬಿರುಸಾದ ಮಳೆಗಾಲದಲ್ಲಿ ಮಲೆನಾಡಿಗೆ ಟ್ರಿಪ್ ಹೋದಂತೆ. ಪ್ರಯಾಣ ಕಷ್ಟಕರ. ಆದರೆ, ಕಣ್ಣಿಗೆ ಮಾತ್ರ ಸಮೃದ್ಧ ಹಬ್ಬ.

ಮಳೆಗಾಲದ ಪ್ರವಾಸಗಳಿಗೆ ಸೂಕ್ತ ಸ್ಥಳವೆಂದರೆ ಹಿಮಾಚಲ ಪ್ರದೇಶದ ಶಿಮ್ಲಾ. ಹಿಮಾಚಲ ಪ್ರದೇಶದಾದ್ಯಂತ ಅತಿ ಹೆಚ್ಚು ಮಳೆ ಬೀಳುವ ತಿಂಗಳು ಆಗಸ್ಟ್. ಈ ಮಾಸದಲ್ಲಿ ತಾಪಮಾನ 14 ಡಿಗ್ರಿ ಸೆಲ್ಸಿಯಸ್‌ಗೆ ಕುಸಿಯುತ್ತದೆ. ಈ ತಿಂಗಳಲ್ಲಿ ಒಟ್ಟು 300 ಮಿಲಿಮೀಟರ್ ಮಳೆಯಾಗುತ್ತದೆ ಎಂದು ಅಂದಾಜಿಸಲಾಗುತ್ತದೆ. ಅಂದರೆ, ತಿಂಗಳಲ್ಲಿ ಸರಾಸರಿ 16 ದಿನ ಮಳೆಯನ್ನು ನಿರೀಕ್ಷಿಸಬಹುದು. ದಿನದಲ್ಲಿ ತಣ್ಣಗಿನ ವಾತಾವರಣ ಇಲ್ಲಿರುತ್ತದೆ.

ಶಿಮ್ಲಾ ತನ್ನ ಒಡಲಲ್ಲಿನ ಹಸಿರುಹೊದ್ದ ಬೆಟ್ಟ ಗುಡ್ಡಗಳು, ಅದರಲ್ಲಿ ಅಂಟಿಸಿದಂತೆ ಕಾಣುವ ಬಣ್ಣ ಬಣ್ಣದ ಮನೆಗಳ ಸಾಲು, ಮುದ ನೀಡುವ ತಣ್ಣಗಿನ ವಾತಾವರಣ ಹಾಗೂ ಮಂಜಿನಿಂದ ಆವೃತ್ತವಾಗಿರುವ ಪೈನ್ ಮರಗಳಿಗೆ ಹೆಸರುವಾಸಿ. ಬೇಸಿಗೆಯ ಬೇಗೆಯಿಂದ ದೂರಾಗಲು ಹಾಗೂ ಕೊರೆಯುವ ಚಳಿಯಲ್ಲಿ ಬೀಳುವ ಮಂಜಿನ ಮಜಾ ಪಡೆಯಲು ಪ್ರವಾಸಿಗರು ಶಿಮ್ಲಾದೆಡೆಗೆ ಪಯಣಿಸುತ್ತಾರೆ. ಆದರೆ, ಮಳೆಗಾಲವನ್ನು ಇಲ್ಲಿ ಆಫ್-ಸೀಸನ್ ಎಂದು ಪರಿಗಣಿಸಲಾಗುತ್ತದೆ.

ಈ ಅವಧಿಯಲ್ಲಿ ಧಾರಾಕಾರ ಮಳೆ ಬಿಟ್ಟೂಬಿಡದೆ ಸುರಿಯುತ್ತದೆ. ದೀರ್ಘಾವಧಿಯ ಮಳೆಯ ಕಾರಣದಿಂದ ನಗರದಲ್ಲಿ ಓಡಾಟ ಕಷ್ಟವಾಗುವ ಸಾಧ್ಯತೆಗಳಿರುತ್ತವೆ. ಜೊತೆಗೆ, ಕಡಿದಾದ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಭೂಕುಸಿತ, ರಸ್ತೆ ತಡೆಯ ಅಪಾಯವಿರುತ್ತದೆ. ಈ ಹಿನ್ನೆಲೆಯಲ್ಲಿ ಜನರು ಮಳೆಗಾಲದಲ್ಲಿ ಈ ಬೆಟ್ಟಗಳ ನಾಡಿನ ಪಯಣದತ್ತ ಆಸಕ್ತಿ ತೋರುವುದಿಲ್ಲ. ಆದರೆ, ವಾಸ್ತವದಲ್ಲಿ ಏಳು ಬೆಟ್ಟಗಳ ನಾಡು- ಬೆಟ್ಟಗಳ ರಾಣಿ (ಕ್ವೀನ್ ಆಫ್ ಹಿಲ್ಸ್) ಎಂದೇ ಕರೆಸಿಕೊಳ್ಳುವ ಶಿಮ್ಲಾ ಎಂದಿಗೂ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುವುದಿಲ್ಲ. ಮಳೆಯಲ್ಲಿ ನೆಂದ ಈ ರಾಣಿ, ತನ್ನ ಹಸಿರನ್ನು ಇನ್ನಷ್ಟು ಹೊಳಪಾಗಿಸಿ ಇಡೀ ನಗರಕ್ಕೆ ಹೊಸ ಅನುಭವ ನೀಡುತ್ತಾಳೆ. ಕೈಯಲ್ಲಿ ಒಂದು ಕೊಡೆ ಹಿಡಿದು, ಕಾಲಿಗೊಂದು ಶೂ ಧರಿಸಿ ಹೊರಟಲ್ಲಿ ಈ ಮಳೆಯಲ್ಲೂ, ನಿಸರ್ಗದ ನಡುವಿನ ಈ ಅದ್ಭುತ ನಗರದ ಸೌಂದರ್ಯವನ್ನು ಸಂಪೂರ್ಣವಾಗಿ ಸವಿಯಬಹುದು. ಅಲ್ಲದೆ, ಈ ಆಫ್-ಸೀಸನ್‌ಗಳಲ್ಲಿ ಕಡಿಮೆ ಬೆಲೆಯ ಪ್ಯಾಕೇಜ್‌ಗಳ ಲಾಭವನ್ನು ಕೂಡ ಪ್ರವಾಸಿಗರು ಪಡೆಯಬಹುದು.

ಸೇಬು ಹಣ್ಣಿನ ತೋಟದಲ್ಲೀಗ ಕಟಾವಿನ ಸಮಯ

ಏನೇನು ಆಕರ್ಷಣೆ?

ಶಿಮ್ಲಾದ ಪ್ರಮುಖ ಆಕರ್ಷಣೆಗಳೆಂದರೆ, ಬೆಟ್ಟದ ತುದಿಯಲ್ಲಿನ ಜಾಕು ಟೆಂಪಲ್, ಚರ್ಚ್ ಹಾಗೂ ಮಾಲ್ ರಸ್ತೆ. ಜಾಕು ದೇಗುಲ (ಹನುಮನ ದೇಗುಲ) ಶಿಮ್ಲಾದ ಏಳು ಬೆಟ್ಟಗಳ ಪೈಕಿ ಅತಿ ಎತ್ತರದ ಬೆಟ್ಟದ ಮೇಲಿದೆ. ಸಮುದ್ರ ಮಟ್ಟದಿಂದ 2,455 ಮೀಟರ್ ಎತ್ತರದಲ್ಲಿರುವ ಇದನ್ನು ತಲುಪಲು ನೀವು ಸುಮಾರು ಒಂದು ಕಿ.ಮೀ.ಯಷ್ಟು ನಡೆದುಕೊಂಡು ಹೋಗಬೇಕಾಗುತ್ತದೆ. ಅಲ್ಲಿಂದ ಸ್ವಲ್ಪ ದೂರ ಮೆಟ್ಟಿಲುಗಳನ್ನು ಹತ್ತಿ ದೇಗುಲ ತಲುಪಬೇಕು. ಮಳೆಗಾಲದಲ್ಲಿ ಈ ಮಾರ್ಗ ಬಹಳ ಕಠಿಣವಾಗಿರುತ್ತದೆ. ದೂರದೂರದವರೆಗೂ ಮಂಜು ಕವಿದ ಮೆಟ್ಟಿಲುಗಳ ನಡುವೆ ಹುಷಾರಾಗಿ ಹತ್ತಿ ಹೋಗಬೇಕಾಗುತ್ತದೆ. ನಿಮ್ಮೊಂದಿಗೆ ವಯಸ್ಸಾದವರಿದ್ದರೆ ಬಹಳ ಎಚ್ಚರಿಕೆಯಿಂದಿರಬೇಕು. ಇಲ್ಲಿ ಪ್ರತಿ ವರ್ಷ ದಸರಾ ಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಇಲ್ಲಿನ ಪ್ರಮುಖ ಆಕರ್ಷಣೆಯೆಂದರೆ 108 ಅಡಿ ಎತ್ತರದ ಬೃಹತ್ ಹನುಮಾನ್ ಪ್ರತಿಮೆ. ಇದು 2010ರಲ್ಲಿ ಉದ್ಘಾಟನೆಗೊಂಡಿದ್ದು, ನಗರದ ಹಲವು ಭಾಗಗಳಿಂದ ಗೋಚರವಾಗುತ್ತದೆ.

ಈ ದೇಗುಲದಿಂದ ಮಾಲ್ ರಸ್ತೆಗೆ ಝಿಪ್‌ಟ್ರಾಲಿಯ ವ್ಯವಸ್ಥೆಯಿದೆ. ಅದು ಕೇವಲ 6 ನಿಮಿಷದಲ್ಲಿ ನಿಮ್ಮನ್ನು ಮಾಲ್‌ರೋಡ್‌ಗೆ ತಲುಪಿಸಿಬಿಡುತ್ತದೆ. ಸುತ್ತಲಿನ ನೈಸರ್ಗಿಕ ಸೌಂದರ್ಯ ಸವಿಯುತ್ತಾ ಕುಟುಂಬ ಸದಸ್ಯರು, ಸ್ನೇಹಿತರೊಂದಿಗೆ ಟ್ರಾಲಿಯ ಅನುಭವ ಆನಂದಿಸಬಹುದು. ಆದರೆ, ಮಳೆಗಾಲದಲ್ಲಿ ಇದು ಇನ್ನೂ ಅದ್ಭುತವಾಗಿ ಕಾಣುತ್ತದೆ. ಮರಗಿಡಗಳನ್ನು ಸಂಪೂರ್ಣವಾಗಿ ಆವರಿಸಿರುವ ಮಂಜು ಕವಿದ ವಾತಾವರಣದಲ್ಲಿ ದೂರದಲ್ಲಿ ಕಾಣುವ ಒಂದು ಹಗ್ಗವನ್ನಷ್ಟೇ ಭರವಸೆಯನ್ನಾಗಿಸಿಕೊಂಡು ಸಾಗುವ ಒಂದು ವಿಶೇಷ ಅನುಭವ ಪಡೆಯಬಹುದು.

ಇಲ್ಲಿಂದ ಮಾಲ್ ರಸ್ತೆ ತಲುಪುತ್ತಿದ್ದಂತೆ, ಉತ್ತರ ಭಾರತದ ಎರಡನೇ ಅತಿ ಪುರಾತನ ಚರ್ಚ್ ಆದ ಕ್ರೈಸ್ಟ್ ಚರ್ಚ್ ಎದುರಾಗುತ್ತದೆ. ಅದನ್ನು ವೀಕ್ಷಿಸಿದ ನಂತರ ನಿಮ್ಮ ಶಾಪಿಂಗ್ ಸಮಯ ಶುರು. ಇಲ್ಲಿನ ಮಾಲ್ ರಸ್ತೆಯಲ್ಲಿ ಹಿಮಾಚಲಿ ಶಾಲ್‌ಗಳು, ಟೋಪಿ, ಸ್ವೆಟರ್‌ಗಳು ಸೇರಿ ಹಲವು ಉಣ್ಣೆಯ ಬಟ್ಟೆಗಳು ವಿಶೇಷವಾಗಿ ಲಭ್ಯವಿರುತ್ತವೆ. ನಿಮ್ಮ ಅಗತ್ಯಕ್ಕೆ ಹಾಗೂ ಬಜೆಟ್‌ಗೆ ತಕ್ಕಂತೆ ಇಲ್ಲಿ ಶಾಪಿಂಗ್ ಮಾಡಬಹುದು.

ಹಿಮಾಚಲ ಪ್ರದೇಶದ ಬೆಟ್ಟದ ರಸ್ತೆಗಳಲ್ಲಿ ಸಾಗುತ್ತಿದ್ದಂತೆಯೇ, ಬೆಟ್ಟದ ಅಂಚಿಗೆ ಹೊಂದಿಕೊಂಡಂತಿರುವ ಮನೆಗಳ ಸಾಲು ಗಮನ ಸೆಳೆಯುತ್ತವೆ. ಅಪಾಯಕಾರಿ ಎನ್ನಿಸುವಷ್ಟು ತುದಿಯಲ್ಲಿ ಮನೆಗಳನ್ನು ನಿರ್ಮಿಸಿರುವುದು ಹಾಗೂ ಅದನ್ನು ವರ್ಣಮಯವಾಗಿಸಿ ಕಣ್ಣಿಗೆ ಹಬ್ಬವನ್ನುಂಟು ಮಾಡುವುದು ಇವುಗಳ ವಿಶೇಷ. ದೂರದಿಂದ ಬಣ್ಣದ ಬೆಂಕಿಪೊಟ್ಟಣಗಳಂತೆ ಕಾಣುವ ಈ ಮನೆಗಳು ಬೆಟ್ಟದ ಮೇಲಿನ ಜೀವನದ ತುಣುಕನ್ನು ಸಾರುತ್ತವೆ. ಈಗ ಈ ಮನೆಗಳ ತಾರಸಿಗಳನ್ನು ಏಕಬಣ್ಣವಾಗಿ ಪರಿವರ್ತಿಸಲು ಸರ್ಕಾರ ಮುಂದಾಗಿದೆ.



ಮಂಜು ಮುಸುಕಿದ ವಾತಾವರಣದಲ್ಲಿ ಸುರಿಯುವ ವರ್ಷಧಾರೆಯಲ್ಲಿ ಹೀಗೊಂದು ಪಯಣ...

ಶಿಮ್ಲಾದ ಏಳು ಬೆಟ್ಟಗಳ ಪೈಕಿ ಅತಿ ಎತ್ತರದ ಬೆಟ್ಟದ ಮೇಲಿದೆ ಈ ಹನುಮನ ದೇವಾಲಯ

ಇರಲಿ ಎಚ್ಚರ...

- ದೀರ್ಘ ಅವಧಿಯ ಮಳೆಯಿಂದ ಪ್ರಯಾಣದ ಯೋಜನೆಗಳನ್ನು ರದ್ದುಗೊಳಿಸಬೇಕಾಗಬಹುದು.
- ಮಾರ್ಗ ಮಧ್ಯದಲ್ಲಿ ಭೂಕುಸಿತದಿಂದ ತಲುಪಬೇಕಾದ ಸ್ಥಳ ತಲುಪದೇ ಮರಳಬೇಕಾಗಬಹುದು.
- ಇಲ್ಲಿ ಮನಸೆಳೆಯುವ ಹೊರಾಂಗಣ ರೆಸ್ಟೋರೆಂಟ್‌ಗಳಿವೆಯಾದರೂ, ಮಳೆಯ ಕಾರಣದಿಂದ ಉಪಯೋಗಕ್ಕೆ ಬರದಿರಬಹುದು.
- ತೀವ್ರ ಮಳೆ ಅಥವಾ ಮೋಡ ಕವಿದ ವಾತಾವರಣದಿಂದ ಬಯಸಿದಷ್ಟು ಪ್ರಕೃತಿ ಸೌಂದರ್ಯ ಸವಿಯಲು ಸಾಧ್ಯವಾಗದೆ ಇರಬಹುದು.

ಮುಳುಗುವ ನಗರಗಳು

10ನೇ ಪುಟದಿಂದ...

ಇಷ್ಟೆಲ್ಲ ಸಮಸ್ಯೆಗಳ ನಡುವೆ ಸರ್ಕಾರದ ಯೋಜನೆಗಳ ಆಮಗತಿಯ ಅನುಷ್ಠಾನ, ಕಾಮಗಾರಿಯಲ್ಲಿನ ಲೋಪಗಳು ಪ್ರಕೃತಿಯ ಮುನಿಸಿಗೆ ಮತ್ತಷ್ಟು ಇಂಬು ನೀಡುತ್ತಿವೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಕಾಮಗಾರಿಯ ವಿಳಂಬ ರಾಮನಗರ ಹಾಗೂ ಇತರ ಕೆಲವು ಕಡೆಗಳಲ್ಲಿ ಪ್ರವಾಹಕ್ಕೆ ಕಾರಣವಾದ ಉದಾಹರಣೆ ನಮ್ಮ ಕಣ್ಣ ಮುಂದಿದೆ. ಶಿರಾಡಿ ಘಾಟಿ ರಸ್ತೆಯಲ್ಲಿ ಪ್ರತಿವರ್ಷ ಆಗುತ್ತಿರುವ ಅನಾಹುತಕ್ಕೆ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿರುವುದೂ ಒಂದು ಕಾರಣವಷ್ಟೆ.

ನಮಗೆ ಎಂತಹ ನಗರ ಬೇಕು?

ದೂರದೃಷ್ಟಿತ್ವದಿಂದ ಕೂಡಿದ, ಸುಸಜ್ಜಿತ ಹಾಗೂ ಯೋಜನಾಬದ್ಧ ನಗರಗಳ ನಿರ್ಮಾಣ ಆಗದಿರುವುದೇ ಇಂದಿನ ಪ್ರಮುಖ ಸಮಸ್ಯೆ. ಜನಸಂಖ್ಯೆ ಹೆಚ್ಚಿದಂತೆಲ್ಲ ನಗರಗಳು ತನ್ನಿಂತಾನೆ, ಯೋಜನೆ ಇಲ್ಲದೆ ಬೆಳೆಯುತ್ತಾ ಹೋಗುವುದು ಒಂದು ದುರಂತ.

‘ಸುಸ್ಥಿರ ನಗರ ನಿರ್ಮಾಣದಲ್ಲಿ ಮೂರು ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ. ಅವುಗಳೆಂದರೆ ‘ಸಮಾಜ, ಸರ್ಕಾರ, ಬಜಾರ (ಉದ್ದಿಮೆ ಅಥವಾ ಮಾರುಕಟ್ಟೆ)’. ಇವು ಮೂರೂ ಒಟ್ಟಾಗಿ ತಮ್ಮ ಜವಾಬ್ದಾರಿ ನಿರ್ವಹಿಸಬೇಕು’ ಎನ್ನುತ್ತಾರೆ ಜಲತಜ್ಞ ಹಾಗೂ ನಗರ ಯೋಜನಾ ತಜ್ಞ ವಿಶ್ವನಾಥ್ ಎಸ್.

ಸಮಾಜವು ಸರ್ಕಾರದ ಮೇಲೆ ಸದಾ ಕಣ್ಣಿಟ್ಟಿರಬೇಕು. ಆಡಳಿತದ ಮೇಲೆ ಒತ್ತಡ ತಂದು ಭ್ರಷ್ಟಾಚಾರ ರಹಿತವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಸರ್ಕಾರದ ಮೇಲೆ ಹದ್ದಿನ ಕಣ್ಣಿಡಬೇಕು. ಇದರ ಜತೆ, ತನ್ನ ಕರ್ತವ್ಯಗಳನ್ನೂ ಸಮರ್ಥವಾಗಿ ನಿಭಾಯಿಸಬೇಕು. ತ್ಯಾಜ್ಯ ನಿರ್ವಹಣೆಗೆ ಪೂರಕವಾಗಿ ಕಾರ್ಯನಿರ್ವಹಿಸುವುದು, ಮಳೆ ನೀರು ಸಂಗ್ರಹ, ಸಸ್ಯ ಸಂಪತ್ತಿನ ರಕ್ಷಣೆಗೆ ಬದ್ಧವಾಗಿರುವ ಮೂಲಕ ಮಾದರಿ ನಗರ ನಿರ್ಮಾಣಕ್ಕೆ ಕಟಿಬದ್ಧವಾಗಿರಬೇಕು ಎಂಬುದು ಅವರ ಅಭಿಪ್ರಾಯ.

ಸರ್ಕಾರವು ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಅಧಿಕಾರ ವಿಕೇಂದ್ರೀಕರಣ ಮಾಡಿ ನಗರ ನಿರ್ಮಾಣಕ್ಕೆ ಒತ್ತು ನೀಡಬೇಕು. ಮಾರುಕಟ್ಟೆ ಅಥವಾ ಉದ್ದಿಮೆಗಳು ಜನರು ಸರ್ಕಾರದ ಮೇಲೆ ಒತ್ತಡ ತಂದು ಉಳಿದ ವ್ಯವಸ್ಥೆಗಳು ಚೆನ್ನಾಗಿರುವಂತೆ ನೋಡಿಕೊಳ್ಳಲು ಪ್ರೇರಕವಾಗಬೇಕು. ಇವು ಮೂರು ಅಂಶಗಳೂ ಸಮರ್ಪಕವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಮಾದರಿ ನಗರ ನಿರ್ಮಾಣ ಸಾಧ್ಯ ಎಂದು ಅವರು ವಿಶ್ಲೇಷಿಸುತ್ತಾರೆ.

ನಗರೀಕರಣ ಆದಾಗ ಮಳೆ ನೀರು ನಿಲ್ಲುವ ಪ್ರಮಾಣ ಜಾಸ್ತಿ ಆಗುತ್ತದೆ. ಕೆರೆ ಕೋಡಿ, ಕಾಲುವೆಗಳನ್ನು ನಿಭಾಯಿಸುವುದು ಕಷ್ಟ. ಇದಕ್ಕಾಗಿ ಆಧುನಿಕ ತಡೆಗೋಡೆಗಳನ್ನು ನಿರ್ಮಿಸಬೇಕು, ಕೆರೆಗಳಿಗೆ ಕಟ್ಟೆಗಳ ನಿರ್ಮಾಣ ಮಾಡಬೇಕು. ಕಾಲುವೆಗಳನ್ನು ತುಸು ಆಧುನೀಕರಣಗೊಳಿಸಿ ಕಾಂಕ್ರೀಟ್ ಗೋಡೆಗಳನ್ನು ಹಾಕಬೇಕು. ಕೆರೆ, ಕಾಲುವೆ ಒತ್ತುವರಿ ಮಾಡಿಕೊಂಡು ಕಟ್ಟಡ ಅಥವಾ ವಸತಿ ಸಂಕೀರ್ಣ ನಿರ್ಮಾಣ ಮಾಡಿರುವ ಪ್ರದೇಶಗಳ ಮಾಹಿತಿ ಸಾರ್ವಜನಿಕವಾಗಿ ಲಭ್ಯವಾಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಅಂಥ ಕಡೆಯಿಂದ ಜನರು ನಿವೇಶನ ಅಥವಾ ನಿವಾಸಗಳನ್ನು ಖರೀದಿಸಬಾರದು. ಈ ವಿಚಾರದಲ್ಲಿ ಜನರೇ ಎಚ್ಚರ ವಹಿಸಬೇಕು ಎಂದು ಸಲಹೆ ನೀಡುತ್ತಾರೆ ವಿಶ್ವನಾಥ್.

‘ತಮ್ಮ ಮಗು ಸುರಕ್ಷಿತವಾಗಿ ಶಾಲೆಗೆ, ಶಾಲೆಯಿಂದ ಮನೆಗೆ ತಲುಪಲಿದೆ ಎಂಬ ಭರವಸೆ ಅಪ್ಪ–ಅಮ್ಮನಲ್ಲಿ ಮೂಡಬೇಕು. ಆರಾಮದಾಯಕವಾಗಿ ಕಚೇರಿ ತಲುಪಲು ಉದ್ಯೋಗಿಗಳಿಗೆ ಸಾಧ್ಯವಾಗಬೇಕು. ನೆಮ್ಮದಿಯ ಜೀವನ ನಡೆಸುವುದಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸಬೇಕು. ಇವುಗಳಿಗೆ ತಕ್ಕ ಮೂಲಸೌಕರ್ಯಗಳಿರುವ ನಗರವನ್ನು ಸರ್ಕಾರವು ಅಭಿವೃದ್ಧಿಪಡಿಸಿದಲ್ಲಿ ಜನರಿಂದ ಹೆಚ್ಚಿನ ಉತ್ಪಾದಕತೆ ನಿರೀಕ್ಷಿಸಲು ಸಾಧ್ಯ’ ಎಂದು ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಹೇಳುತ್ತಾರೆ.

ಗುಂಡಿಗಳಿಲ್ಲದ ರಸ್ತೆ, ನಿರ್ಮಲ ಬಡಾವಣೆಗಳು, ಬಡತನ ಮುಕ್ತ ಸಮಾಜ ನಗರಗಳಲ್ಲಿರಬೇಕು. ಅದಕ್ಕೆ ತಕ್ಕುದಾದ ವ್ಯವಸ್ಥೆಯನ್ನು ಆಡಳಿತ ವರ್ಗ ಮಾಡಿಕೊಡಬೇಕು. ಮುಖ್ಯವಾಗಿ ನಿಗದಿತ ಕಾಲಮಿತಿಯೊಳಗೆ, ನಿರ್ದಿಷ್ಟ ರೂಪುರೇಷೆಯಿಂದ ಕೂಡಿದ ಸುಸಜ್ಜಿತ ಹಾಗೂ ಸುಸಂಸ್ಕೃತ ನಗರ ನಿರ್ಮಾಣವಾಗಬೇಕು ಎಂಬ ಅವರ ಅಂಬೋಣ ಸರಿಯಷ್ಟೆ.

ಯಾವುದೇ ನಗರ ಒಂದು ಚೆಸ್ ಬೋರ್ಡ್ ಮಾದರಿಯಲ್ಲಿ ಅಭಿವೃದ್ಧಿಯಾಗಬೇಕು ಎನ್ನುತ್ತಾರೆ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ, ದೇಶದ ಪ್ರಮುಖ ಭೌತಶಾಸ್ತ್ರಜ್ಞ ಪ್ರೊ. ವಿಕ್ರಂ ಸೋನಿ. ಅಂದರೆ, ಚೆಸ್ ಬೋರ್ಡ್‌ನ ಬಿಳಿ ಮನೆಗಳು ಕಟ್ಟಡನಿರ್ಮಿತ ಪ್ರದೇಶವಾಗಿಯೂ ಕಪ್ಪು ಮನೆಗಳು ಹಸಿರು ಪ್ರದೇಶವಾಗಿಯೂ ಇರಬೇಕು. ಇಡೀ ನಗರ ಈ ರೀತಿ ಪುಟ್ಟ–ಪುಟ್ಟ ಪ್ರದೇಶಗಳಲ್ಲಿ ವಿಭಜನೆಯಾಗಬೇಕು. ಇದರಿಂದ ಪ್ರಾಕೃತಿಕ ಸಮತೋಲನ ಕಾಯ್ದುಕೊಳ್ಳುವುದು ಸಾಧ್ಯ ಎನ್ನುತ್ತಾರೆ ಅವರು. ಸೋನಿ ಅವರು ಬಿಡಿಸಿಟ್ಟ ಯೋಜನೆಯನ್ನು ಬೆಂಗಳೂರಿನಂತಹ ಬೆಳೆದ ನಗರದಲ್ಲಿ ಹೇಗೆ ಅನುಷ್ಠಾನಕ್ಕೆ ತರುವುದು ಎಂಬುದು ನಿಮ್ಮ ಪ್ರಶ್ನೆ ಆಗಿರಬಹುದು. ಆದರೆ, ಹೊಸ ಬಡಾವಣೆಗಳನ್ನು ಅಭಿವೃದ್ಧಿ ಮಾಡುವಾಗ ಇಂತಹ ಮಾದರಿ ಅಳವಡಿಸಿಕೊಳ್ಳಲು ಏನು ಕಷ್ಟ? ಪ್ರವಾಹಪೀಡಿತ ಬೆಂಗಳೂರಿನ ಪೂರ್ವಭಾಗದ ಹಲವು ಪ್ರದೇಶಗಳು ಹೊಸದಾಗಿಯೇ ಅಭಿವೃದ್ಧಿ ಆದಂಥವು. ಆಗ ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಿದ್ದರೆ ಇಂದಿನ ಹಳಹಳಿಕೆಗೆ ಕಾರಣ ಇರುತ್ತಿರಲಿಲ್ಲ.

ತನ್ನ ಬಹುಪಾಲು ಆಹಾರವನ್ನು ತಾನೇ ಬೆಳೆದುಕೊಳ್ಳುವ, ನೀರಿನ ಸ್ವಂತ ಮೂಲ ಹೊಂದುವ, ವಿದ್ಯುತ್ ಬಳಕೆ ಕಡಿಮೆ ಮಾಡುವ, ನಿಸರ್ಗದತ್ತವಾದ ವಾತಾನುಕೂಲ ವ್ಯವಸ್ಥೆ ಪಡೆದಿರುವ ಸುಸ್ಥಿರ, ನೈಸರ್ಗಿಕ ನಗರ ರೂಪುಗೊಳ್ಳಬೇಕು ಎಂಬ ಸೋನಿ ಅವರ ಅಭಿಪ್ರಾಯದ ಕುರಿತು ಸರ್ಕಾರ, ಸಮುದಾಯ ಎರಡೂ ಚಿಂತಿಸಬೇಕು.

ನಾಗರಿಕವಾಗಿರಲಿ ನಗರವಾಸಿಗಳ ವರ್ತನೆ!

ನಗರವೊಂದರ ಅಂದ, ಚೆಂದ, ಸಮತೋಲಿತ ಅಭಿವೃದ್ಧಿಯಲ್ಲಿ ಜನರ ಪಾತ್ರ ಬಹಳ ಹಿರಿದು. ನಗರದಲ್ಲಿದ್ದು ಅನಾಗರಿಕರಂತೆ ವರ್ತಿಸಿದರೆ ಮತ್ತೆ ಸರ್ಕಾರವನ್ನು ದೂರಲು ನಮಗೆಲ್ಲಿಯ ಅರ್ಹತೆಯಿದೆ? ನಿಯಮಗಳನ್ನು ಗಾಳಿಗೆ ತೂರಿ ಕಟ್ಟಡಗಳ ನಿರ್ಮಾಣಕ್ಕೆ ಮುಂದಾಗುವುದು, ಸಮ್ಮತಿ ಸಿಗದಿದ್ದರೆ ಲಂಚ ನೀಡಿಯಾದರೂ ದಕ್ಕಿಸಿಕೊಳ್ಳುವುದು, ಎಲ್ಲೆಂದರಲ್ಲಿ ಕಸ ಬಿಸಾಡುವುದು ಇತ್ಯಾದಿಗಳು ನಗರದಲ್ಲಿದ್ದು ಪ್ರದರ್ಶಿಸುವ ಅನಾಗರಿಕ ವರ್ತನೆಯಷ್ಟೆ.

ಅಲ್ಲಲ್ಲಿ ಎಸೆಯುವ ಪ್ಲಾಸ್ಟಿಕ್ ತ್ಯಾಜ್ಯಗಳು ಚರಂಡಿ ನೀರಿನ ಹರಿವಿಗೆ ತಡೆಯೊಡ್ಡಿ ಕೃತಕ ನೆರೆ ಸೃಷ್ಟಿಗೆ ಕಾರಣವಾಗುವುದು ಸುಳ್ಳಲ್ಲವಲ್ಲ. ವರ್ತಮಾನದಲ್ಲಿ ದೇಶದ ಮಹಾನಗರಗಳಲ್ಲಿ ಸೃಷ್ಟಿಯಾಗುವ ಕೃತಕ ನೆರೆಗಳಿಗೆ ಚರಂಡಿ ವ್ಯವಸ್ಥೆಯಲ್ಲಿನ ತೊಡಕುಗಳೂ ಮುಖ್ಯ ಕಾರಣವೆಂದರೆ ಅತಿಶಯೋಕ್ತಿ ಆಗಲಾರದು.

ಸುಸ್ಥಿರ, ಸಮೃದ್ಧ ನಗರಗಳ ಕನಸು ನನಸಾಗಬೇಕಿದ್ದರೆ ನಾಗರಿಕ ಪ್ರಪಂಚದ ಕೆಲವು ಅನಾಗರಿಕ ವರ್ತನೆಗಳೂ ಕೊನೆಯಾಗಬೇಕಿದೆ. ಜನಸಮುದಾಯ, ಸರ್ಕಾರ, ಉದ್ದಿಮೆ ವಲಯ ಹೀಗೆ ಎಲ್ಲರ ಒಗ್ಗಟ್ಟಿನಿಂದ ಮಾತ್ರ ಉತ್ತಮ ನಗರ ನಿರ್ಮಾಣ ಸಾಧ್ಯ ಎಂಬುದನ್ನು ಮನಗಾಣಲೇಬೇಕು. ಇಲ್ಲವಾದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಪ್ರಕೃತಿಗೆ ಯಾರೂ ಹೇಳಿಕೊಡಬೇಕಿಲ್ಲವಷ್ಟೆ? ಅದು ತನ್ನ ಪಾಡಿಗೆ ತನ್ನ ಕೆಲಸ ಮುಂದುವರಿಸುತ್ತದೆ. ನಾವು ಒತ್ತುವರಿ ಮಾಡಿದ ಕೆರೆಯನ್ನು ಮರಳಿ ಜಲಾವೃತಗೊಳಿಸುವ ತಾಕತ್ತು ನಿಸರ್ಗಕ್ಕಿದೆ. ನಾವು ಅತಿಕ್ರಮಣ ಮಾಡಿರುವ ಕಾಲುವೆಗಳಲ್ಲಿ, ನದಿಗಳಲ್ಲಿ ಮರಳಿ ನೀರು ಹರಿಸುವ ಸಾಮರ್ಥ್ಯ ಪ್ರಕೃತಿಗಿದೆ. ಆಗ ಸಂತ್ರಸ್ತರಾಗುವ ಸರದಿ ಮರಳಿ ನಮ್ಮದಾಗುತ್ತದೆ. ಕೋಲ್ಕತ್ತವನ್ನು ಸಾಯುವ ನಗರಿ ಎಂದು ಕರೆಯಲಾಗುತ್ತದೆ. ಬೆಂಗಳೂರು ಮುಳುಗುವ ನಗರ ಆಗಬಾರದಷ್ಟೆ.

ಮುನ್ನೋಟ 11-09-2022 ರಿಂದ 17-09-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕೆಲವರ ಕೌಟುಂಬಿಕ ವಿವಾದಗಳು ರಾಜಿ ಸಂಧಾನದ ಮೂಲಕ ಪರಿಹಾರವಾಗುತ್ತವೆ. ಆದಾಯಕ್ಕಿಂತ ಖರ್ಚು ಹೆಚ್ಚಾಗುವ ಸಂಭವವಿದೆ. ವ್ಯವಹಾರಗಳಲ್ಲಿ ನಿಮ್ಮ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಸರಿಯಾಗಿ ವ್ಯವಹರಿಸುವುದರಿಂದ ಲಾಭ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲಗಳು ದೊರೆಯುತ್ತವೆ. ನರದೌರ್ಬಲ್ಯ ಇರುವವರು ಹೆಚ್ಚು ಎಚ್ಚರವಹಿಸಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಂಶಪಾರಂಪರ್ಯದ ವೃತ್ತಿಯನ್ನು ಮುಂದುವರಿಸುವುದರಿಂದ ಆದಾಯ ಇರುತ್ತದೆ. ಕೆಲವು ರಾಜಕಾರಣಿಗಳಿಗೆ ರಾಜಕೀಯ ವಿದ್ಯಮಾನಗಳಿಂದ ಹೆಚ್ಚಿನ ಓಡಾಟವಿರುತ್ತದೆ. ನಿಮ್ಮ ಕೆಲವೊಂದು ಕೆಲಸಗಳಲ್ಲಿ ಅನುಭವದ ಕೊರತೆ ಎದುರಾಗಬಹುದು. ಮಾತಿನಲ್ಲಿ ಹಾಗೂ ವ್ಯವಹಾರದಲ್ಲಿ ನೀವು ತೋರುವ ದಕ್ಷತೆಯಿಂದ ವ್ಯವಹಾರದಲ್ಲಿ ಲಾಭ ಬರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕಾರ್ಯದೊತ್ತಡದ ನಡುವೆಯೂ ಕುಟುಂಬದ ಕಡೆಗೆ ಗಮನ ಕೊಡುವುದು ಅಗತ್ಯ. ವೃತ್ತಿಯಲ್ಲಿ ಹೊಸ ಜವಾಬ್ದಾರಿಯನ್ನು ಹಿರಿಯ ಅಧಿಕಾರಿಗಳು ನಿಮಗೆ ಕೊಟ್ಟಾಗ ಜಾಣ್ಮೆಯಿಂದ ಒಪ್ಪಿಕೊಳ್ಳುವುದು ಒಳಿತು. ಮುದ್ರಣಕಾರರಿಗೆ ಪ್ರಮುಖ ಮುದ್ರಣದಲ್ಲಿ ಹೆಚ್ಚಿನ ತಪ್ಪಾಗುವ ಸಂದರ್ಭಗಳಿವೆ, ಎಚ್ಚರವಹಿಸಿರಿ. ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಸ್ವಲ್ಪ ಕುಂಠಿತವಾಗುವ ಸಂದರ್ಭಗಳಿವೆ, ಗಮನಕೊಡಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆಲಸ್ಯ ದೂರವಾಗಿ ಕೆಲಸಕಾರ್ಯಗಳಲ್ಲಿ ಅತಿಯಾದ ಉತ್ಸಾಹವನ್ನು ಕಾಣುವಿರಿ. ಕೆಲಸದಲ್ಲಿ ಬರುವ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಖರ್ಚು ವೆಚ್ಚಗಳಲ್ಲಿ ಮಿತವ್ಯಯ ಸಾಧಿಸುವುದು ಉತ್ತಮ. ಸ್ವತ್ತಿನ ಮಾರಾಟ ವಿಚಾರದಲ್ಲಿ ಹಿರಿಯರ ಮಾತಿನಂತೆ ನಡೆದು ಹೆಚ್ಚು ಲಾಭಾಂಶ ಪಡೆಯುವಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಸ್ತ್ರ ವಿನ್ಯಾಸದಲ್ಲಿ ಪರಿಣಿತಿಯನ್ನು ಪಡೆದಿರುವವರಿಗೆ ಬೇಡಿಕೆ ಬರುತ್ತದೆ. ಸಾಮಾಜಿಕ ಕ್ಷೇತ್ರದಲ್ಲಿ ಜನರು ನಿಮ್ಮ ಸೇವೆಯನ್ನು ಗುರುತಿಸಿ ಗೌರವ ಕೊಡುವರು. ಕಾನೂನು ಶಾಸ್ತ್ರ ಅಧ್ಯಯನ ಮಾಡುತ್ತಿರುವವರಿಗೆ ಉತ್ತಮ ಫಲಿತಾಂಶವಿರುತ್ತದೆ. ಅಕ್ಕಪಕ್ಕದವರೊಡನೆ ಹೆಚ್ಚಿನ ಸ್ನೇಹದಿಂದ ಇರುವುದು ಬಹಳ ಒಳ್ಳೆಯದು. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಇರುವುದಿಲ್ಲ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ಯೋಜನೆಗಳ ಬಗ್ಗೆ ಸರಿಯಾದ ತಿಳಿವಳಿಕೆ ನಿಮಗಿರಲಿ. ಉನ್ನತ ಅಧಿಕಾರಿಗಳಿಗೆ ವರ್ಗಾವಣೆಯ ಸಾಧ್ಯತೆಯಿದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಕುಟುಂಬದ ಏಳಿಗೆಗಾಗಿ ಧಾರ್ಮಿಕ ಕಾರ್ಯಗಳನ್ನು ಮಾಡುವಿರಿ. ಆಶಿಸುತ್ತಿದ್ದ ಆಸ್ತಿ ದೊರೆಯುವ ಸಂದರ್ಭವಿದೆ. ವಿದೇಶಕ್ಕೆ ಹೋಗಬೇಕೆನ್ನುವವರು ದಾಖಲಾತಿಗಳನ್ನು ಸರಿಯಾಗಿ ಇಟ್ಟು ಕೊಳ್ಳುವುದು ಉತ್ತಮ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಪಾಲುದಾರಿಕೆ, ಸಹಭಾಗಿತ್ವದ ವ್ಯವಹಾರಗಳಲ್ಲಿ ನಿಮಗೆ ಲಾಭವಿದೆ. ಒಳಾಂಗಣ ವಿನ್ಯಾಸಕಾರರಿಗೆ ಹೆಚ್ಚಿನ ಕೆಲಸ ದೊರೆಯುತ್ತದೆ. ವ್ಯವಹಾರದಲ್ಲಿನ ಕೆಲವು ನಿರ್ಧಾರಗಳನ್ನು ನಿಮ್ಮ ಒಳಿತಿಗಾಗಿ ಬದಲಿಸಿ ಹೊಸ ನಿರ್ಧಾರ ಪ್ರಕಟಿಸುವ ಅಗತ್ಯ ಇರುತ್ತದೆ. ರಾಜಕೀಯ ನಾಯಕರುಗಳ ವಶೀಲಿಯಿಂದ ಸ್ಥಾನಮಾನ ಗಿಟ್ಟಿಸಿಕೊಳ್ಳಲು ಓಡಾಡುತ್ತೀರಿ. ವ್ಯಾಪಾರದಲ್ಲಿ ಮಧ್ಯವರ್ತಿಗಳ ಉಪಟಳ ಇರುತ್ತದೆ, ಎಚ್ಚರಿಕೆವಹಿಸಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವೃತ್ತಿಯಲ್ಲಿ ಮೇಲಧಿಕಾರಿಯ ಮೃದು ವರ್ತನೆಯಿಂದ ನಿಮ್ಮ ಮೇಲಿನ ದೂರುಗಳು ನಿವಾರಣೆಯಾಗುವುದು. ನಿಮ್ಮ ಬಾಲ್ಯದ ಸ್ನೇಹಿತರನ್ನು ಭೇಟಿಯಾಗುವ ಯೋಗವಿದೆ. ನ್ಯಾಯವಾದಿಗಳಿಗೆ ಹೆಚ್ಚಿನ ಕೇಸ್‌ಗಳು ದೊರೆತು ಹೆಚ್ಚು ಸಂಪಾದನೆಯಾಗುತ್ತದೆ. ವೈದ್ಯರ ಸಲಹೆಯಂತೆ ದೇಹಕ್ಕೆ ಪುಷ್ಟಿ ಕೊಡುವ ಆಹಾರ ಸೇವಿಸುವುದು ಒಳ್ಳೆಯದು. ನಿಮ್ಮ ವೈಯಕ್ತಿಕ ಜೀವನದ ಬಗ್ಗೆ ನಿಮಗೆ ತೃಪ್ತಿ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ವ್ಯವಹಾರದ ಕೆಲಸಗಳಿಂದಾಗಿ ಬಿಡುವಿಲ್ಲದೆ ದೇಹಶ್ರಮ ಆಗುವುದು. ನಿಮ್ಮ ಜೀವನ ಶೈಲಿಗೆ ತಕ್ಕಂತೆ ನಿರ್ಧಾರವನ್ನು ಈಗ ತೆಗೆದುಕೊಳ್ಳಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ತೆರಿಗೆ ತಜ್ಞರಿಗೆ ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸವಿದ್ದು ಆದಾಯ ಹೆಚ್ಚುತ್ತದೆ. ವ್ಯಾವಹಾರಿಕ ವಿಷಯದಲ್ಲಿ ಪ್ರಯತ್ನಗಳು ಈಗ ಫಲ ಕೊಡಲಾರಂಭಿಸುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಬಹಳ ಶ್ರಮಪಟ್ಟು ಕೆಲಸ ಮಾಡುವಿರಿ. ಹಣದ ನಿರ್ವಹಣೆಯನ್ನು ಬಹಳ ಜಾಣ್ಮೆಯಿಂದ ಮಾಡುವಿರಿ. ಒಡಹುಟ್ಟಿದವರಿಗಾಗಿ ಸಾಕಷ್ಟು ಸಹಾಯ ಮಾಡುವಿರಿ. ಹೊಸ ಆಸ್ತಿ ಖರೀದಿಗೆ ಮುಂದಾಗುವುದು ಬೇಡ. ಉನ್ನತ ವಿದ್ಯೆಯನ್ನು ಓದುತ್ತಿರುವವರಿಗೆ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ. ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸ್ವಂತ ಉದ್ಯೋಗ ಮಾಡುವವರಿಗೆ ಬಿಡುವಿಲ್ಲದ ಕೆಲಸ ದೊರೆತು ಕೆಲಸಗಳನ್ನು ಪೂರ್ತಿ ಮಾಡಬೇಕಾದ ಅನಿವಾರ್ಯವಿರುತ್ತದೆ. ಆದಾಯವೂ ಹೆಚ್ಚು ಇರುತ್ತದೆ. ಭಾಷಣಕಾರರಿಗೆ ಮತ್ತು ಉಪನ್ಯಾಸಕರಿಗೆ ಉತ್ತಮ ವೇದಿಕೆಗಳು ದೊರೆತು ಅವರ ವಿಷಯಗಳನ್ನು ಸಂಪೂರ್ಣವಾಗಿ ಮಂಡಿಸಲು ಅವಕಾಶ ದೊರೆತು ಸಂತಸವಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಿವಾದಾಸ್ಪದ ವಿಷಯಗಳಲ್ಲಿ ತಲೆ ಹಾಕದಿರುವುದು ಬಹಳ ಉತ್ತಮ. ಶಸ್ತ್ರಚಿಕಿತ್ಸೆಯನ್ನು ಮಾಡುವ ವೈದ್ಯರಿಗೆ ಸಂಪಾದನೆ ಮಾಡುವ ಯೋಗವಿದೆ. ವಾಹನ ರಿಪೇರಿ ಮಾಡುವವರಿಗೆ ಬಿಡುವಿಲ್ಲದ ಕೆಲಸವಿದ್ದು ಆದಾಯ ಹೆಚ್ಚುತ್ತದೆ. ವಾಹನ ಮಾರಾಟಗಾರರಿಗೆ ಅಭಿವೃದ್ಧಿಯ ಯೋಗವಿದೆ. ಕೃಷಿ ವಿಸ್ತರಣೆಯ ಬಗ್ಗೆ ಸಾಕಷ್ಟು ಗಮನ ಕೊಡುವಿರಿ. ನೂತನ ಮಾದರಿಯ ಕೃಷಿ ಮಾಡುವ ಬಗ್ಗೆ ತಿಳಿವಳಿಕೆ ಪಡೆಯುವಿರಿ.

ಪದಬಂಧ 2755



ಮೇಲಿನಿಂದ ಕೆಳಕ್ಕೆ

1. ಅತಿವೃಷ್ಟಿಯಂತಹ ವಿಪತ್ತಿನಿಂದ ಆಗುತ್ತಿರುವ ಮಂದಿಯ ನಷ್ಟ 4
2. ವಿವಿಧ ರೀತಿಯ ಕಾಯಿ ಪಲ್ಲೆ 4
3. ಭೂಮಿಯಲ್ಲಿ ಬಂಗಾರ ಬೆಳೆಯಲು ವರ್ಷಧಾರೆಗೆ ರಾಜನ ಪಟ್ಟ 4
4. ರಸದ ಸವಿ ತುಂಬಿದ ಕದಳಿ 4
8. ಅರಸನಿಗೆ ಮಾಡಬೇಕಾದ ಆದರ ಮರ್ಯಾದೆ 5
9. ಈ ಬುದ್ಧಿವಂತಿಕೆಯ ಪರಿಹಾರ ಬಹಳ ಸರಳ 5
10. ಮನ್ಮಥನ ಮಹಾಪಿತ 5
11. ಗಾದೆಯ ಮಾತಿನಲ್ಲಿ ಊರಿಗೆ ಉಪಕಾರಿಯಾದವರಿಗೆ ಸಲ್ಲುವ ಬಿರುದು 5
14. ಸಾಗುತ್ತಾ ಬರುವ ವಿಷ್ಣುವಿನ ಹೆಸರು 4
15. ಮದವೇರಿಸುವ ಬೇಲೂರಿನ ಶಿಲಾಬಾಲಿಕೆ 4
17. ನಿರ್ಧಾರಕ್ಕೆ ಪೂರಕವಾದ ಘಟ್ಟ 4
18. ಬಾನಿನ ಬಸಿರೊಡೆದು ಒಂದೇ ಸಮನೆ ಬಿಡದೆ ಕೆಳಕ್ಕಿಳಿಯುವ ಹನಿ 4

ಎಡದಿಂದ ಬಲಕ್ಕೆ

1. ಮಳೆಬಂದು ಸುತ್ತಲೂ ಆವರಿಸಿರುವ ನೀರು 4
3. ಇದು ಬಂದರೆ ಗ್ರಾಮ ಗ್ರಾಮಗಳೇ ಕೊಚ್ಚಿ ಹೋಗಬಹುದು 4
5. ಇದು ಮೊಳಗಿದರೆ ಯುದ್ಧ ಸನ್ನದ್ಧ 5
7. ಬೇಡವೆಂದು ತ್ಯಜಿಸು 5
10. ಮದಗಾದ ಕೆರೆಗೆ ಇದ್ದಕ್ಕಿದ್ದ ಹಾಗೆ ಬಿದ್ದು ಕಣ್ಮರೆಯಾಗುವ ವರ್ಷಧಾರೆ 5
12. ಮಧುರವಾದ ರಸಭರಿತ ಮಾವು ಹಿಂದುಮುಂದಾಗಿದೆ 3
13. ಪುಣ್ಯ ಸಂಚಯದಿಂದ ಪವಿತ್ರವಾದದ್ದು 3
14. ಶಿವನಿಗೆ ಮೀಸಲಾದ ಕಾಲ 5
16. ಯಾರಿಗಾದರೂ ವ್ಯಥೆ ಪಟ್ಟು ಅನುಕಂಪ ತೋರು 5
19. ಇದೀಗ ಮಳೆಯಿಂದ ಪ್ರತಿ ದಿನ ನಡೆಯುತ್ತಿರುವ ನೈಸರ್ಗಿಕ ಅನಾಹುತ 5
20. ಮರಳುಗಾಡಿನಲ್ಲಿ ಕಂಡು ಕಾಣದ ಮೃಗ ಮಾಯಾ ಜಾಲ 4
21. ಸುವಾಸಿನಿಯರ ಕೈಯಲ್ಲಿ ಶೋಭಿಸುವ ಕಪ್ಪು ಗಾಜು 4

ಪದಬಂಧ ಉತ್ತರ -2754

ಮೇಲಿಂದ ಕೆಳಕ್ಕೆ

1. ಬಯಲುಸೀಮೆ 2.ಮದುಮಗಳು 3.ಭಾವಸಂಗ 4.ವಿಧಾನಮಂಡಲ 5.ಸುತ್ತಿಬಳಸು 6.ವನಜೀವನ 11.ದುಬಾರಿ 13.ಮಧುರ 14.ವಿಜಯವಿಠಲ 15.ಹರಿವಾಸರ 16.ತರುಕಾನನ 17.ಗೌರಿಗಣೇಶ 18.ವರಾನ್ವೇಷಣೆ 20.ನರನಾರಿ

ಎಡದಿಂದ ಬಲಕ್ಕೆ

1.ಬರಮ 3.ಭಾರ್ಗವಿ 5.ಸುದೈವ 7.ಸಂಧಾನ 8.ಗದಗ 9.ಮಂಗಳ 10.ಮೆದುಳು 12.ಸುಮನ 14.ವಿಶಾಲ 15.ಹರಿತ 17.ಗೌರವ 19.ರುಪಯ 20.ನರ್ಸರಿ 21.ವಿಕಾರ 22.ರದನ 23.ಲಹರಿ 24.ಶರಣೆ

ಭಾರತದ ವಿವೇಕ: ಆನಂದದರ್ಶನ

ಭಾರತೀಯ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಗಟ್ಟಿಗೊಳಿಸಿದ ಅಗ್ರ ಚಿಂತಕರಲ್ಲಿ ಆನಂದ ಕುಮಾರಸ್ವಾಮಿ ಅವರೂ ಒಬ್ಬರು. 'ನೀವು ನೀವಾಗಿರಿ' ಎಂಬುದು ಅವರು ಕೊಟ್ಟ ಸಂದೇಶ. ದಿನಗಳು ಕಳೆದಂತೆ ಈ ದಾರ್ಶನಿಕನ ಚಿಂತನೆಗಳು ಹೆಚ್ಚು ಪ್ರಸ್ತುತವಾಗುತ್ತಾ ಹೊರಟಿರುವುದು ಸುಳ್ಳಲ್ಲ...



ಎಸ್. ಸೂರ್ಯಪ್ರಕಾಶ ಪಂಡಿತ್

ಸ್ಮರಣೆ

ಈಗಷ್ಟೆ ನಾವು ಭಾರತದ ಸ್ವಾತಂತ್ರ್ಯೋತ್ಸವದ ಅಮೃತಮಹೋತ್ಸವವನ್ನು ಸಂಭ್ರಮದಿಂದ ಆಚರಿಸಿದ್ದೇವೆ. ಹಳೆಯ ಸಾಧನೆಗಳನ್ನು ಮೆಲುಕು ಹಾಕುತ್ತಿದ್ದೇವೆ; ಹೊಸ ಸಂಕಲ್ಪಗಳನ್ನು ಗಟ್ಟಿಮಾಡಿಕೊಳ್ಳುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ನಾವು ಮರೆಯಬಾರದ ಹೆಸರು: ಆನಂದ ಕುಮಾರಸ್ವಾಮಿ (1877–1947). ಇದು ವ್ಯಕ್ತಿಯೊಬ್ಬರ ಹೆಸರಷ್ಟೆ ಅಲ್ಲ, ಇದೊಂದು ತತ್ತ್ವವೇ ಹೌದು. ಪ್ರಾಚೀನ–ನವೀನಗಳ ಸೇತುವೆ; ಪೂರ್ವ–ಪಶ್ಚಿಮಗಳ ಸಂಗಮದ ತತ್ತ್ವ ಅದು. ಮಾತ್ರವಲ್ಲ, ಭಾರತೀಯತೆ–ಅಭಾರತೀಯತೆಗಳ ಗಡಿಗಳನ್ನು ಸ್ಪಷ್ಟವಾಗಿ ಗುರುತಿಸಿಕೊಟ್ಟ ತತ್ತ್ವ.

ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಆನಂದ ಕುಮಾರಸ್ವಾಮಿ ಅಮೆರಿಕೆಯಲ್ಲಿದ್ದರು. ಆಗ ಭಾರತೀಯರಿಗೆ ಸಂದೇಶವೊಂದನ್ನು ಕೊಡುವಂತೆ ಅವರನ್ನು ಆಪ್ತರು ಕೇಳಿದರು. ಅಂದು ಅವರು ಕೊಟ್ಟ ಸಂದೇಶ ಅದು ಸ್ವಾತಂತ್ರ್ಯೋತ್ಸವದ ಅಮೃತೋತ್ಸವದ ಇಂದಿನ ಸಂದರ್ಭದಲ್ಲೂ ಸಲ್ಲುತ್ತದೆ:

'Be yourself. Follow Mahatma Gandhi, Bharatan Kumarappa, D. V. Gundappa, Abul Kalam Azad, Abdul Gaffar Khan, and Sri Ramana Maharshi. Co-operate with such men as the Earl of Portsmouth, George Bourne, Wilfred Wellock, Jean Giono, and Fernando Nobre. Why consider the inferior Philosophers? Be not deceived: evil communications corrupt good manners.'

'ನೀವು ನೀವಾಗಿರಿ' ಇದು ಕುಮಾರಸ್ವಾಮಿ ಅವರು ಹೇಳಿದ ಮೊದಲ ಮಾತು. ನಾವು ಯಾರನ್ನು ಅನುಸರಿಸಬೇಕೆಂದು ಅವರು ಸೂಚಿಸಿರುವ ಪಟ್ಟಿಯೂ ಗಮನಾರ್ಹವಾಗಿದೆ. ಎರಡನೆಯ ಪಂಕ್ತಿಯನ್ನು ಸದ್ಯಕ್ಕೆ ಬಿಡೋಣ; ಪ್ರಥಮ ಪಂಕ್ತಿಯನ್ನಷ್ಟೆ ನೋಡೋಣ: ಮಹಾತ್ಮ ಗಾಂಧಿ, ಭರತನ್ ಕುಮಾರಪ್ಪ, ಡಿ. ವಿ. ಗುಂಡಪ್ಪ, ಅಬುಲ್ ಕಲಾಮ್ ಅಜಾದ್, ಅಬ್ದುಲ್ ಗಫಾರ್ ಖಾನ್ ಮತ್ತು ಶ್ರೀ ರಮಣ ಮಹರ್ಷಿ – ಇವರನ್ನು ಅನುಸರಿಸಿ ಎನ್ನುತ್ತಿದ್ದಾರೆ, ಕುಮಾರಸ್ವಾಮಿ. ಕಡಿಮೆ ದರ್ಜೆಯ, ಎಂದರೆ ಅಧಮರಾದ ತತ್ತ್ವಜ್ಞರನ್ನು ಲೆಕ್ಕಿಸಬೇಡಿ ಎಂಬ ಬುದ್ಧಿಯ ಮಾತನ್ನು ಹೇಳುತ್ತಿದ್ದಾರೆ. ಮೋಸ ಹೋಗದಿರಿ: ಕೇಡಿನ ಸಂಪರ್ಕದಿಂದ ಒಳಿತು ಕೂಡ ಕೆಟ್ಟುಹೋಗುತ್ತದೆ ಎಂದೂ ಎಚ್ಚರಿಸುತ್ತಿದ್ದಾರೆ.

ಕುಮಾರಸ್ವಾಮಿ ಉಲ್ಲೇಖಿಸಿರುವವರಲ್ಲಿ ಇಬ್ಬರನ್ನು ಸದ್ಯಕ್ಕೆ ಗಮನಿಸಿದರೆ, ರಾಷ್ಟ್ರನಿರ್ಮಾಣದಲ್ಲಿ ನಮಗೆ ವ್ಯಕ್ತಿಗಳು ಹೇಗೆ ಮಾರ್ಗದರ್ಶಕರಾಗಿ ಒದಗಬೇಕು ಎಂಬುದರ ಸೂಕ್ಷ್ಮ ತಿಳಿಯುತ್ತದೆ. ಮಹಾತ್ಮ ಗಾಂಧೀಜಿ. ಈ ಹೆಸರನ್ನು ಹೇಳಿದ್ದಾರೆ ಎಂಬ ಕಾರಣದಿಂದಲೇ ಕೆಲವರು ಕುಮಾರಸ್ವಾಮಿ ಅವರನ್ನು ಕುರಿತು ಸುಲಭದಲ್ಲಿ ಒಂದು ತೀರ್ಮಾನಕ್ಕೆ ತಲುಪುತ್ತಾರೆನ್ನುವುದು ಸುಳ್ಳಲ್ಲ. ಆದರೆ ಕುಮಾರಸ್ವಾಮಿ ಅವರು ತಮ್ಮ ಸಮಕಾಲೀನರನ್ನು ಹೇಗೆ ವಿಮರ್ಶಿಸಿದ್ದಾರೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಗಾಂಧಿಯವರ ಹಿರಿಮೆಯ ಜೊತೆಜೊತೆಗೆ ಅವರ ದೌರ್ಬಲ್ಯಗಳನ್ನೂ ನೇರವಾಗಿಯೇ ಹೇಳಿದವರು ಕುಮಾರಸ್ವಾಮಿ. ಸಾರ್ವಜನಿಕ ಜೀವನದಲ್ಲಿ ಹೇಗಿರಬೇಕು ಎಂಬುದಕ್ಕೆ ಮಾದರಿ ಎಂದು ಗಾಂಧಿಯವರನ್ನು ಪ್ರಶಂಸಿಸಿದರು; ಆದರೆ ಕಲೆಯ ಬಗ್ಗೆ ಗಾಂಧಿಯವರ ಅಭಿಪ್ರಾಯಗಳನ್ನು ಉಗ್ರವಾಗಿ ಖಂಡಿಸಿದರು. 'ಮಹಾತ್ಮ' ಎಂಬ ಒಂದು ಪ್ರಬಂಧವನ್ನೇ ಬರೆದಿದ್ದಾರೆ, ಕುಮಾರಸ್ವಾಮಿ.

ಡಿ. ವಿ. ಗುಂಡಪ್ಪನವರು, ಎಂದರೆ ಡಿವಿಜಿಯವರನ್ನು ಎಲ್ಲೋ ದೂರದ ಅಮೆರಿಕೆಯಲ್ಲಿದ್ದ ಕುಮಾರಸ್ವಾಮಿ ಉಲ್ಲೇಖಿಸಿರುವುದು ಗಮನಾರ್ಹ. ಡಿವಿಜಿಯವರು ಕಗ್ಗದ ಕವಿಗಳಾಗಿ, ಸಾಹಿತಿಗಳಾಗಿ ಮಾತ್ರವೇ ಹೆಚ್ಚು ಪರಿಚಿತರು. ಅವರ ಕಾರ್ಯಕ್ಷೇತ್ರವಾದರೂ ಕರ್ನಾಟಕ, ಅದರಲ್ಲೂ ಬೆಂಗಳೂರು ಕೇಂದ್ರಸ್ಥಾನ; ದಿಟ, ಅವರ ಚಿಂತನೆಯ ಬೀಸು ವಿಶ್ವವ್ಯಾಪಕವಾಗಿತ್ತು. ಅವರು ಶ್ರೇಷ್ಠ ರಾಜನೀತಿತಜ್ಞರಾಗಿದ್ದರು; ರಾಜಕಾರಣಿಯಾಗಿಯೂ ಅವರ ಕೊಡುಗೆ ಅನನ್ಯವಾಗಿತ್ತು. ರಾಷ್ಟ್ರಕ, ಎಂದರೆ 'ಸಿಟಿಜನ್'ನ ಕರ್ವವ್ಯ–ಹಕ್ಕುಗಳ ಸೂತ್ರಗಳನ್ನು ಸ್ಪಷ್ಟವಾಗಿ ಕಾಣಿಸಿದವರು. ಅವರೊಬ್ಬ ವಿಶ್ವಸ್ತರದ ರಾಜಕೀಯ ಚಿಂತಕರಾಗಿದ್ದರು ಎಂಬುದು ಅವರ ಇಂಗ್ಲಿಷ್ ಬರಹಗಳನ್ನು ಗಮನಿಸಿದರೆ ತಿಳಿಯುತ್ತದೆ. ವಿಶೇಷ ಎಂದರೆ ಕುಮಾರಸ್ವಾಮಿ ಅವರು, ಆ ಕಾಲದಲ್ಲಿಯೇ, ಅಷ್ಟು ದೂರದಿಂದಲೇ, ಡಿವಿಜಿಯವರ ಸತ್ತ್ವವನ್ನು ಗುರುತಿಸಿದ್ದು; ಅವರನ್ನು ನಮ್ಮ ಆದರ್ಶಪುರುಷರ ಸಾಲಿನಲ್ಲಿ ಪ್ರತಿಷ್ಠಾಪಿಸಿದ್ದು.

ಕುಮಾರಸ್ವಾಮಿ ಅವರ ವೈಶ್ವಿಕದೃಷ್ಟಿಗೆ ಈ ಎರಡು ಉಲ್ಲೇಖಗಳು ಸಾಕಲ್ಲವೆ?

'ನೀವು ನೀವಾಗಿರಿ' ಎಂದ ಕುಮಾರಸ್ವಾಮಿ, 'ನಮ್ಮತನ'ದ ಲಕ್ಷಣವನ್ನು ನಿರೂಪಿಸಲು ಮೊದಲು ಕಲೆಯ ಮೂಲತತ್ತ್ವಗಳನ್ನು ಆರಿಸಿಕೊಂಡರು. ಕಲೆಗೂ ಜೀವನಕ್ಕೂ ರಾಷ್ಟ್ರನಿರ್ಮಾಣಕ್ಕೂ ಅಧ್ಯಾತ್ಮಕ್ಕೂ ಆನಂದಕ್ಕೂ ಇರುವ ಸಂಬಂಧಗಳನ್ನು ಹಲವು ನೆಲೆಗಳಲ್ಲಿ ಸ್ಥಾಪಿಸಿದರು. 'ರಾಷ್ಟ್ರವೊಂದರ ನಿರ್ಮಾಣವಾಗುವುದು ಕವಿ ಮತ್ತು ಕಲಾವಿದರಿಂದಲೇ ಹೊರತು ಉದ್ಯಮಿಗಳು ಮತ್ತು ರಾಜಕಾರಣಿಗಳಿಂದಲ್ಲ' ಎಂದ ಅವರು ಕಲೆಯನ್ನೂ ಕಲಾವಿದರನ್ನೂ ನಿರ್ವಚಿಸಿದ ರೀತಿಯೂ ಅನನ್ಯವಾಗಿದೆ. ಕಲೆಯನ್ನು ಧಾರ್ಮಿಕ ಕಲಾಪ ಎಂದೇ ಸಮೀಕರಿಸಿದರು. 'ಕಲಾವಿದನಲ್ಲದವನಿಗೆ ಯಾವುದೇ ಸಾಮಾಜಿಕ ಅಂತಸ್ತನ್ನು ಪಡೆಯುವ ಹಕ್ಕೇ ಇಲ್ಲ' ಎಂದು ಕಂಠೋಕ್ತವಾಗಿ ಸಾರಿದರು. ಮಾತ್ರವಲ್ಲ, ಕಲಾವಿದ ಯಾರು ಎಂಬುದನ್ನು ಸ್ಪಷ್ಟಪಡಿಸಲು ಅವರು ಮರೆಯಲಿಲ್ಲ. ಬಡಗಿ, ಚಿತ್ರಕಾರ, ವಕೀಲ, ರೈತ, ಪುರೋಹಿತ – ಹೀಗೆ ಎಲ್ಲ ವೃತ್ತಿಪರರೂ ಕಲಾವಿದರೇ ಹೌದು; ಅವರವರ ಸ್ವಭಾವಕ್ಕೆ ತಕ್ಕಂತೆ ಕರ್ತವ್ಯಗಳನ್ನು ನಿರ್ವಹಿಸುವುದೇ ದಿಟವಾದ ಕಲೆ; ಸಮಾಜದ ಏಳಿಗೆಯಲ್ಲೂ ತನ್ನ ಏಳಿಗೆಯಲ್ಲೂ ಹೀಗೆ 'ಕಲಾವಿದ'ನಾಗದೆ ಕರ್ತವ್ಯಮುಖನಾಗದ ವ್ಯಕ್ತಿ ಅವನೊಬ್ಬ ಮೃಗಳ್ಳನಷ್ಟೆ ಎಂದು ಘೋಷಿಸಿದರು.

ಕುಮಾರಸ್ವಾಮಿ ಅವರು ಭೌತಿಕವಾಗಿ ನಮ್ಮನ್ನಗಲಿ ಎಪ್ಪತ್ತೈದು ವರ್ಷಗಳಾಗಿವೆ (ಸೆಪ್ಟೆಂಬರ್ 9, 1947); ಅವರ ಹಲವು ಬರಹಗಳು ನೂರು ವರ್ಷಗಳನ್ನು ಕಂಡಿವೆ. ಹೀಗಿದ್ದರೂ ಅವರ ಚಿಂತನೆಗಳ ಪ್ರಸ್ತುತತೆ ಕಡಿಮೆಯಾಗಿಲ್ಲ; ಅಷ್ಟೇಕೆ, ಅಂದಿಗಿಂತಲೂ ಇಂದು ಹೆಚ್ಚು ಅನಿವಾರ್ಯವಾಗಿವೆ. ಆದರೆ ಇನ್ನೂ ಅವರ ಕೃತಿಗಳ ಸಮಗ್ರ ಅಧ್ಯಯನ ನಡೆದಿಲ್ಲ ಎಂಬ ಕೊರಗು ಕೂಡ ಕಾಡುತ್ತಿದೆ. ವಿಶ್ವದಲ್ಲಿ ಭಾರತೀಯ ಕಲೆಗೆ ಯೋಗ್ಯಸ್ಥಾನವೊಂದು ದೊರೆಯಲು ಅವರ ಪ್ರತಿಪಾದನೆಗಳೇ ಪ್ರಮುಖ ಕಾರಣ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಅವರು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪಾಲ್ಗೊಂಡಿದ್ದವರು. ಸ್ವದೇಶಿಯ ಕಲ್ಪನೆಯನ್ನು ಅವರು ಗಾಂಧಿಯವರಿಗಿಂತಲೂ ಮೊದಲೇ ಪ್ರತಿಪಾದಿಸಿದವರು. ಭಾರತೀಯ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಗಟ್ಟಿಗೊಳಿಸಿದ ಅಗ್ರಚಿಂತಕರಲ್ಲಿ ಅವರೂ ಒಬ್ಬರು. ಖನಿಜಶಾಸ್ತ್ರ, ಕಲೆ, ಅಧ್ಯಾತ್ಮ – ಈ ಮೂರು ನೆಲೆಗಳಲ್ಲಿ ಅವರು ಮಾಡಿದ ಕೃಷಿ ಅಪೂರ್ವವಾದುದು. ಒಬ್ಬ ಮನುಷ್ಯ ಒಂದು ಜೀವಿತಾವಧಿಯಲ್ಲಿ ಇಷ್ಟೆಲ್ಲ ಸಾಧಿಸಲು ಸಾಧ್ಯವೆ ಎನ್ನುವಷ್ಟು ಅಗಾಧವೂ ಆಳವೂ ಆದ ನೂರಾರು ಪ್ರೌಢ ಪ್ರಬಂಧಗಳನ್ನು ರಚಿಸಿದ ಕೀರ್ತಿ ಕುಮಾರಸ್ವಾಮಿ ಅವರದ್ದು. 'ಕುಮಾರಸ್ವಾಮಿ ಅವರ ಸಿದ್ಧಿ–ಸಾಧನೆಗಳನ್ನು ವರ್ಣಿಸಲು ಪದಗಳು ಸೋಲುತ್ತವೆ' ಎಂದು ಉದ್ಗರಿಸಿದ ರವೀಂದ್ರನಾಥ ಟ್ಯಾಗೋರ್ ಅವರ ಮಾತು ಸ್ಮರಣೀಯ.

ನಾವಿಂದು ಧಾರ್ಮಿಕತೆಯಿಂದ ವಿಮುಖರಾಗುತ್ತಿರುವುದೇ ಆಧುನಿಕ ಜಗತ್ತಿನ ಎಲ್ಲ ಸಮಸ್ಯೆಗಳ ಮೂಲ ಎಂದು ಇತಿಹಾಸತಜ್ಞ ವಿಲ್ ಡ್ಯುರೆಂಟ್ ನೊಂದುಕೊಂಡಿದ್ದಾರೆ. ಧಾರ್ಮಿಕತೆ ಎಂದರೆ ಏನು, ಅದು ನಮ್ಮ ಜೀವನದಿಂದ ಹೇಗೆ ವಿಮುಖವಾಗಿದೆ ಎಂಬ ಅರಿವು ಮೂಡಬೇಕಾದರೆ ಕುಮಾರಸ್ವಾಮಿ ಅವರ ಬರಹಗಳೇ ನಮಗೆ ಶರಣ್ಯ. ಧಾರ್ಮಿಕತೆಗೂ ಜೀವನಕ್ಕೂ ಇರುವ ನಂಟಿನ ಬಗ್ಗೆ ನಮ್ಮ ಕಾಲದಲ್ಲಿ ಅವರಷ್ಟು ಸ್ಪಷ್ಟವಾಗಿ ಹೇಳಿದವರು ಮತ್ತೊಬ್ಬರಿಲ್ಲ ಎಂದರೆ ಅದೇನೂ ತಪ್ಪಾಗದು. ಆಧುನಿಕ ಜಗತ್ತು ದಾರಿದೀಪವಾಗಿ ಆರಿಸಿಕೊಂಡಿರುವ 'ಆದರ್ಶ'ಗಳು ಹೇಗೆ ಕೇಡಿನ ಸಂತತಿಗಳಾಗಿವೆ ಎಂಬದುನ್ನು ಅವರು ಎಳೆ ಎಳೆಯಾಗಿ ತೋರಿಸಿಕೊಟ್ಟಿದ್ದಾರೆ. 'ನಗರಗಳ ನಿರ್ಮಾಣ ಎಂದರೆ ಕೊಳಚೆಪ್ರದೇಶಗಳ ಸೃಷ್ಟಿಯಲ್ಲ' ಎಂದರು. 'ಯಾವುದೇ ವಸ್ತುಗಳ ಉತ್ಪಾದನೆ ಬಳಕೆಗೆ ಒದಗಬೇಕೆ ವಿನಾ ದುಡ್ಡಿನ ಲಾಭಕ್ಕಾಗಿ ಅಲ್ಲ' ಎಂದರು.

ಕುಮಾರಸ್ವಾಮಿ ಅವರ ಪ್ರಸ್ತುತತೆಯ ಬಗ್ಗೆ ಕೊನೆಯ ಮಾತೊಂದನ್ನು ಹೇಳಬಹುದು. ಈಗಷ್ಟೆ ಗಣೇಶನ ಹಬ್ಬ ಮುಗಿದಿದೆ. ಪ್ರತಿ ವರ್ಷವೂ ಈ ಹಬ್ಬದ ಸಂದರ್ಭದಲ್ಲಿ ಕೆಲವರು ಗಣಪತಿಯ ಕಲ್ಪನೆಯಲ್ಲಿ ಕಾಣುವ 'ಅಸಂಗತ'ಗಳ ಬಗ್ಗೆ ಉತ್ಸಾಹದಿಂದ ಮಾತನಾಡುತ್ತಲೇ ಇರುತ್ತಾರೆ. ಇಂಥ ಬಾಲಿಶ ಮಾತುಗಳಿಗೆ ಉತ್ತರ ಕುಮಾರಸ್ವಾಮಿ ಅವರ ಚಿಂತನೆಯಲ್ಲಿದೆ. ಪರಂಪರೆಯನ್ನು ಹೇಗೆ ನೋಡಬೇಕು, ಅದು ಮಾತನಾಡುವ ಭಾಷೆ ಯಾವುದು ಎಂದು ತಿಳಿಸಿಕೊಟ್ಟ ದಾರ್ಶನಿಕರು ಅವರು. 'ಪಶ್ಚಿಮದ ದುರಹಂಕಾರದ ಎದುರಿಗೆ ಇವತ್ತು ನಮಗೆ ಹೆಚ್ಚು ಪ್ರಸ್ತುತವಾಗಬಲ್ಲ ಚಿಂತಕ ಆನಂದ ಕುಮಾರಸ್ವಾಮಿ' ಎಂಬ ಡಿ. ಆರ್. ನಾಗರಾಜ್ ಅವರ ಮಾತು ಇಲ್ಲಿ ಉಲ್ಲೇಖಾರ್ಹ. ಅಂದು ಪಾಶ್ಚಾತ್ಯರಿಗೆ ಕುಮಾರಸ್ವಾಮಿ ನಿರೂಪಿಸಿದ ಭಾರತೀಯತೆಯ ಅರಿವು ಇಂದು ಪಶ್ಚಿಮಬುದ್ಧಿಯ 'ಭಾರತೀಯ'ರಿಗೂ ಬೇಕಾಗಿದೆಯೆನ್ನಿ!

(ಆನಂದ ಕುಮಾರಸ್ವಾಮಿ ಕುರಿತ ಸಂವಾದ ಕಾರ್ಯಕ್ರಮ ಇದೇ 16ರಂದು ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್'ನಲ್ಲಿ ಸಂಜೆ 6 ಗಂಟೆಗೆ ನಡೆಯಲಿದೆ.)

ಸಂಸ್ಕೃತಿಗಳೊಂದಿಗೆ ಸಂವಾದಿಸುವ ಕತೆಗಳು

ಎಚ್. ದಂಡಪ್ಪ

ವಿಮರ್ಶೆ

ಇಂದ್ರಜಿತ್ ಮತ್ತು ಇನ್ನಿತರ ಕಥೆಗಳು
ಲೇ: ವಿಕ್ರಂ ಚದುರಂಗ
ಪ್ರ: ಕನ್ನಡ ಸಂಘ, ಕ್ರೈಸ್ಟ್, ಬೆಂಗಳೂರು
ಸಂ:080–40129027
ಪು: 188
₹250

'ಇಂದ್ರಜಿತ್ ಮತ್ತು ಇನ್ನಿತರ ಕಥೆಗಳು' ಎಂಬ ಶೀರ್ಷಿಕೆಯಡಿಯಲ್ಲಿ ವಿಕ್ರಂ ಚದುರಂಗ ಅವರು ಜಗತ್ತಿನ ಪ್ರಸಿದ್ಧ ಲೇಖಕರ ಆರು ಕತೆಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. 'ಪ್ರಪಂಚ ಚಿಕ್ಕದಾಗುತ್ತಾ, ಎಲ್ಲಾ ಸಂಸ್ಕೃತಿಗಳ ಜನ ಹತ್ತಿರ ಬರುತ್ತಿರುವ ಈ ಹೊತ್ತಿನಲ್ಲಿ 'ಅನುವಾದಿಸು, ಇಲ್ಲ ಸಾಯಿ' ಎಂಬ ಮಾತನ್ನು ಪಾಲ್ ಏಂಜಲ್ ಹೇಳುತ್ತಾರೆ. ಈ ಮಾತು ಅನುವಾದದ ಮಹತ್ವವನ್ನು ಸೂಚಿಸುತ್ತದೆ.

ಅನುವಾದ ಮಾಡುವಾಗ ಮೂಲಪಠ್ಯದ ಸಾಮಾಜಿಕ, ಸಾಂಸ್ಕೃತಿಕ ಪರಿಸರವು ಕಾಣಿಸಿಕೊಳ್ಳಬೇಕು. ಆ ಪರಿಸರವು ಅನುವಾದವನ್ನು ಓದುವ ಓದುಗನ ಅನುಭವಕ್ಕೆ ಬರಬೇಕು. ಇಲ್ಲದಿದ್ದರೆ ಅದು ವ್ಯರ್ಥವಾದ ಅನುವಾದವಾಗುತ್ತದೆ. ಮೂಲಪಠ್ಯದಲ್ಲಿರುವ ಸಾಂಸ್ಕೃತಿಕ ಮೌಲ್ಯಗಳನ್ನು, ಮಾನವೀಯ ಮೌಲ್ಯಗಳನ್ನು ಅನುವಾದಕ ಓದುಗನಿಗೆ ತಲುಪಿಸುತ್ತಿರುತ್ತಾನೆ.

ಈ ದಿಕ್ಕಿನಲ್ಲಿ ಪ್ರಸ್ತುತ ಸಂಕಲನದಲ್ಲಿರುವ ಕ್ಯಾಥರಿನ್ ಮ್ಯಾನ್‌ಫೀಲ್ಡ್ ಅವರ 'ಗೊಂಬೆ ಮನೆ' (ದಿ ಡಾಲ್ಸ್ ಹೌಸ್) ಕತೆಯನ್ನು ನೋಡಬಹುದು. ಈ ಕತೆಯು ವರ್ಗ ತಾರತಮ್ಯದ ಅಮಾನವೀಯ ಸ್ಥಿತಿಯೊಂದನ್ನು ನಿರೂಪಿಸುತ್ತದೆ. ಕೆಲ್ವಿಯ ಮಕ್ಕಳು ಬಡವರಾಗಿರುವುದರಿಂದ ಶ್ರೀಮಂತರ ಮಕ್ಕಳೊಂದಿಗೆ ಶಾಲೆಯಲ್ಲಾಗಲಿ, ಮನೆಯ ಹೊರಗಡೆಯಾಗಲಿ ಬೆರೆತು ಮಾತನಾಡುವಂತಿಲ್ಲ. ಇದು ಮಕ್ಕಳಿಗೆ ತಂದೆ ತಾಯಿಯರೇ ವಿಧಿಸಿರುವ ಕಟ್ಟುಪಾಡು.

ವರ್ಗ ತಾರತಮ್ಯದ ಸ್ವಭಾವ, ಅದರಿಂದ ಉಂಟಾಗುವ ಅವಮಾನ, ಮೇಲ್ವರ್ಗದವರ ಮನಸ್ಥಿತಿಗಳ ವಿಕಾರ ಸ್ವರೂಪ, ಅಮಾನವೀಯ ನಡವಳಿಕೆ, ಬಡವರ ಮನೆಯಲ್ಲಿ ಹುಟ್ಟಿ ಅವಮಾನಕ್ಕೊಳಗಾಗುವ ಮಕ್ಕಳ ಮನಸ್ಥಿತಿ, ಕೊನೆಗೆ ಅವರಲ್ಲಿ ಹುಟ್ಟುವ ಆಶಾವಾದವನ್ನು ಈ ಕತೆ ಸರಳವಾಗಿ ದಾಟಿಸುವಂತಹ ನಿರೂಪಣೆಯಲ್ಲಿದೆ. ವರ್ಗ ತಾರಮ್ಯವುಳ್ಳ ಸಾಮಾಜಿಕ ಸಾಂಸ್ಕೃತಿಕ ಪರಿಸರವನ್ನು ಅದರ ಎಲ್ಲಾ ಆಯಾಮಗಳೊಂದಿಗೆ ಸರಳವಾಗಿ ಧ್ವನಿಪೂರ್ಣವಾಗಿ ಅನುವಾದಿಸಲಾಗಿದೆ.

ಕತೆಗಳ ಅನುವಾದವು, ವಿವೇಕವನ್ನು ಪ್ರಸಾರ ಮಾಡುವ, ವಿಶ್ವಾತ್ಮಕ ಮಾನವನನ್ನಾಗಿ ರೂಪಿಸುವ ಕರ್ತವ್ಯವೂ ಹೌದು. ಅನುವಾದಗೊಂಡ ಕತೆ ಕಾಲದೇಶಗಳನ್ನು ಮೀರಬೇಕಾಗುತ್ತದೆ. ಸಾರ್ವಕಾಲಿಕ, ಸಾರ್ವತ್ರಿಕ ಮತ್ತು ತತ್ಕಾಲಿನತೆಯನ್ನು ಒಳಗೊಳ್ಳದಿದ್ದರೆ ಅನುವಾದಕ್ಕೆ ಬೆಲೆ ಇರುವುದಿಲ್ಲ. ಮೂಲದಲ್ಲಿರುವ ಕಲಾತ್ಮಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅನುವಾದ ಮಾಡಬೇಕಾಗುತ್ತದೆ. ಅದಕ್ಕೆ ಡಿ.ಎಚ್. ಲಾರೆನ್ಸ್‌ನ 'ಮರದ ಕುದುರೆ' (ದಿ ರಾಂಕಿಂಗ್ ಹಾರ್ಸ್ ವಿನ್ನರ್) ಪ್ರಸಿದ್ಧ ಕತೆಯನ್ನು ಗಮನಿಸಬಹುದು.

ಅತೃಪ್ತಿ, ಅದೃಷ್ಟ, ದುರಾಸೆ ಮುಂತಾದ ಮನುಷ್ಯನ ಮಾನಸಿಕ ಪ್ರವೃತ್ತಿಗಳನ್ನು ಶೋಧಿಸುವ ಕತೆ ಇದು. ಈ ರೀತಿ ಶೋಧಿಸುತ್ತಲೇ ಸಾಮಾಜಿಕ ರಾಜಕೀಯ, ಆರ್ಥಿಕ ಸ್ಥಿತಿಗತಿಯನ್ನು ಮತ್ತು ಈಗಿನ ಕೊಳ್ಳುಬಾಕ ಸಂಸ್ಕೃತಿಯ ಸ್ವರೂಪವನ್ನು ಅನಾವರಣಗೊಳಿಸುವ ಕತೆಯೂ ಹೌದು. ಅದರಲ್ಲೂ ಹಣವೇ ಪ್ರಧಾನವಾಗಿರುವ ಈಗಿನ ಪರಿಸರದ ಎಲ್ಲಾ ಆಯಾಮಗಳನ್ನು ದುರಂತಗಳನ್ನೂ ನಿರೂಪಿಸುವ ಧ್ವನಿಪೂರ್ಣ ನಿರೂಪಣೆ ಇದೆ.

ಇಲ್ಲಿ ಬರುವ ಮರದ ಕುದುರೆ ಅದೃಷ್ಟವನ್ನೇನೂ ತರುವುದಿಲ್ಲ. ತನ್ನ ತಾಯಿ ಅದೃಷ್ಟವಂತೆಯಲ್ಲ ಎಂದು ಪದೇ ಪದೇ ಹೇಳುವುದನ್ನು ಕೇಳಿಸಿಕೊಂಡ ಮಗ ಮರದ ಕುದುರೆಯನ್ನೇರಿ ತನ್ನ ಅದೃಷ್ಟ ಪರೀಕ್ಷಿಸಿಕೊಂಡು ಜೂಜಾಡಿ ಸಾವಿಗೀಡಾಗುತ್ತಾನೆ. ಐಷಾರಾಮಿ ಬದುಕು ಬೇಕು, ಅದಕ್ಕಾಗಿ ಹಣಬೇಕು, ಆದ್ದರಿಂದ ಇಡೀ ಮನೆ ಹಣ ಹಣ ಎಂದು ಪ್ರತಿಧ್ವನಿಸುವುದು, ಮರದ ಕುದುರೆಯನ್ನೇರಿ ಅದೃಷ್ಟ ಪರೀಕ್ಷಿಸುವುದು, ಜೂಜಾಡುವುದು, ವಿಫಲವಾಗಿ ಹತಾಶೆ, ನೋವು, ಯಾತನೆ, ಅತೃಪ್ತಿಯಿಂದ ನರಳಿ ದರಂತಕ್ಕೊಳಗಾಗುವುದು ಇವೆಲ್ಲವನ್ನೂ ಈ ಕತೆ ಕಲಾತ್ಮಕವಾಗಿ ಹಿಡಿದಿಟ್ಟಿದೆ.

ಮೂಲ ಭಾಷೆಯ ಸ್ವರೂಪ ಮತ್ತು ಅದರ ಸಾಂಸ್ಕೃತಿಕ ಪರಿಸರದ ತಿಳಿವಳಿಕೆ ಇದ್ದರೆ ಅನುವಾದಿತ ಕತೆ ಹೆಚ್ಚು ಶಕ್ತಿಯುತವಾಗುತ್ತದೆ. ಈ ದಿಕ್ಕಿನಲ್ಲಿ ಜಾರ್ಜ್ ಲೂಯಿ ಬೋರ್ಹೆ ಅವರ 'ಬಿಲ್ಲೆ' (ದಿ ಡಿಸ್ಕ್), ಥಾಮಸ್ ಮನ್ ಅವರ 'ನಿಗೂಢ ದೇವ' (ಡೆತ್ ಇನ್ ವೆನಿಸ್ ಕೃತಿಯ ಆಯ್ದ ಮುಖ್ಯ ಭಾಗ) ಕತೆಗಳನ್ನು ಗಮನಿಸಬಹುದು. ಬೋರ್ಹೆಯ ದಿ ಡಿಸ್ಕ್ ಒಂದು ಫ್ಯಾಂಟಸಿ ಕತೆ, ಫ್ಯಾಂಟಸಿಯೊಂದಿಗೆ ತಾತ್ವಿಕವಿಚಾರಗಳು ಸಾವಯವ ಸಂಬಂಧದಲ್ಲಿ ಬೆರೆತಿವೆ. ಜೊತೆಗೆ ಬೋರ್ಹೆ ಮಾಂತ್ರಿಕ ವಾಸ್ತವವಾದದ ಮೊದಲನೆಯ ಕತೆಗಾರ ಎಂಬ ಹೆಗ್ಗಳಿಕೆಗೂ ಪಾತ್ರನಾಗಿರುವುದರಿಂದ ಈ ಕತೆಯಲ್ಲಿ ಅದರ ಛಾಯೆ ಇದ್ದೇ ಇದೆ. ಮಾಂತ್ರಿಕ ವಾಸ್ತವವಾದ, ಫ್ಯಾಂಟಸಿ, ಬದುಕಿನ ನಿಗೂಢ ತತ್ವಗಳ ಶೋಧನೆಯ ಈ ಕತೆಯನ್ನು ಅದರ ಎಲ್ಲಾ ಸಾಧ್ಯತೆ ಉಳಿಸಿಕೊಂಡು ಅನುವಾದ ಮಾಡಲಾಗಿದೆ.

ಕತೆಗಳಲ್ಲಿ ಸಂಕೇತಗಳಿರುತ್ತವೆ. ಜೊತೆಗೆ ಒಂದೊಂದು ಕತೆಯಲ್ಲಿ ಒಂದೇ ನಿರ್ದಿಷ್ಟ ಅರ್ಥವಿರುವುದಿಲ್ಲ. ಅನುವಾದವು ಮೂಲದ ವಿವರಗಳನ್ನು, ಪದಗಳನ್ನು, ಪ್ರತಿಮೆ, ಸಂಕೇತಗಳನ್ನು ಪುನರ್ ರೂಪಿಸಿಕೊಳ್ಳಬೇಕಾಗುತ್ತದೆ. ಅನುವಾದಕ ಈ ಬಗೆಯ ಭಾಷಾ ಚೈತನ್ಯವನ್ನು ತಂದಾಗ ಅದು ಒಳ್ಳೆಯ ಅನುವಾದವಾಗುತ್ತದೆ. ಈ ಹಿನ್ನೆಲೆಯಲ್ಲಿ ಮ್ಯಾಕ್ಸಿ ಗಾರ್ಕಿಯ 'ಹುಲ್ಲುಗಾವಲು' (ಇನ್ ದಿ ಸ್ಟೆಪೆ) ಮತ್ತು ಟಾಲ್‌ಸ್ಟಾಯ್ ಅವರ 'ಇಂದ್ರಜಿತ್' (ಫಾದರ್ ಸೆರ್ಗಿಯಸ್) ಕತೆಗಳನ್ನು ಗಮನಿಸಬಹುದು.

ಹುಲ್ಲುಗಾವಲು ಕತೆಯಲ್ಲಿ ಗಾರ್ಕಿ, ಮನುಷ್ಯನ ವಕ್ರತೆ, ಬಡತನದ ಸ್ವರೂಪ, ಮನುಷ್ಯನನ್ನು ಸದಾ ಕಿತ್ತು ತಿನ್ನುವ ಹಸಿವು, ಅದರಿಂದ ಉಂಟಾಗುವ ಮಾನಸಿಕ ಮತ್ತು ದೈಹಿಕ ಕ್ಷೋಭೆ, ಮನುಷ್ಯನ ಸ್ವಾರ್ಥ, ಅವನ ದುಷ್ಟಚರ್ಯೆ, ದುರ್ಬುದ್ಧಿ, ಮಾನವತೆಯನ್ನೆ ಕಳೆದುಕೊಳ್ಳುವ ಅವನ ಸ್ವಭಾವವನ್ನು ಈ ಕತೆಯಲ್ಲಿ ಸಮಾಜವಾದಿ ವಾಸ್ತವತೆಯ ಮಾರ್ಗದಲ್ಲಿ ನಿರೂಪಿಸಿದ್ದಾರೆ.

ಮನುಷ್ಯನ ಸ್ವಭಾವದಲ್ಲಿ ಪಾಶವೀತನವೂ ಇದೆ. ಹಾಗೆಯೇ ಒಳ್ಳೆಯತನವೂ ಸ್ವಲ್ಪಮಟ್ಟಿಗೆ ಇದೆ. ಸದ್ಯಕ್ಕೆ ಪಾಶವೀತನ ಮೇಲುಗೈ ಪಡೆದಿರಬಹುದು. ಅದನ್ನು ಸರಿಪಡಿಸಿಕೊಳ್ಳಬೇಕಾದದ್ದು ಎಲ್ಲರ ಕರ್ತವ್ಯ. ಈ ಕತೆಯಲ್ಲಿ ಬರುವ ಪಾತ್ರಗಳು, ತಮ್ಮ ಹಸಿವನ್ನು ತಣಿಸಿಕೊಳ್ಳಲು ಮಾಡುವ ಕಸರತ್ತುಗಳನ್ನು ನಿರೂಪಿಸುತ್ತಲೇ ಇಡೀ ಜಗತ್ತಿನ ಮಾನವರ ಹದಗೆಟ್ಟಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸರವನ್ನು ಅನಾವರಣಗೊಳಿಸಿರುವುದು ಗಾರ್ಕಿಯವರ ಕಲಾತ್ಮಕ ಶಕ್ತಿಗೆ ದ್ಯೋತಕ.

ಈ ಸಂಕಲನದ ನೀಳ್ಗತೆ ಟಾಲ್‌ಸ್ಟಾಯ್ ಅವರ ಇಂದ್ರಜಿತ್ (ಫಾದರ್ ಸೆರ್ಗಿಯಸ್). ಟಾಲ್‌ಸ್ಟಾಯ್ ವಾಸ್ತವತಾವಾದಿ ಬರಹಗಾರ. ವಿಜ್ಞಾನದೊಂದಿಗೆ ಚಲನಶೀಲವಾದ ಆಧ್ಯಾತ್ಮಿಕ ವಿಚಾರಗಳನ್ನು ಒಟ್ಟುಗೂಡಿಸಿ ರಚನೆಯಾಗಿರುವ ಕತೆಯು ತನ್ನ ಪ್ರಭಾವದಿಂದ ಮನುಷ್ಯನ ಬದುಕಿಗೆ ಶಾಂತಿ ಮತ್ತು ಸಂತೋಷವನ್ನು ಕೊಡುತ್ತದೆ. ಅದು ಮನುಷ್ಯನ ಉನ್ನತಿ, ಅವನ ಐಕ್ಯತೆ, ಸಹಬಾಳ್ವೆ, ಭ್ರಾತೃತ್ವಗಳಿಗೆ ಸಹಕಾರಿಯಾಗಿರುತ್ತದೆ ಎಂದು ನಂಬಿದ ಟಾಲ್‌ಸ್ಟಾಯ್ ಕಲೆಯನ್ನು, ಜಗತ್ತನ್ನು ಪ್ರಗತಿ ಪಥದಲ್ಲಿ ಸಾಗಿಸುವ ಒಂದು ಸಾಧನ ಎಂದು ಪರಿಗಣಿಸಿದವರು.

ಪ್ರಸ್ತುತ ಫಾದರ್ ಸೆರ್ಗಿಯಸ್ ಕತೆಯಲ್ಲಿ, ಕೋಪಗೊಳ್ಳದಿರು, ಕಾಮಿಯಾಗದಿರು, ಸಜ್ಜನ ದುರ್ಜನರಿಬ್ಬರಿಗೂ ಒಳ್ಳೆಯವನಾಗು ಮುಂತಾದ ಮನಷ್ಯನ ಬದುಕಿಗೆ ಬೇಕಾದ ತತ್ವಗಳನ್ನು ಅಂತರ್ಗತಗೊಳಿಸಿಕೊಳ್ಳಲಾಗಿದೆ. ಮನುಷ್ಯನನ್ನು ಇಲ್ಲಿ ಬಿಡಿಬಿಡಿಯಾಗಿ ನೋಡದೆ ಎಲ್ಲರನ್ನೂ ಒಂದು ಐಕ್ಯತೆಯ ಆವರಣದಲ್ಲಿ ನೋಡಲಾಗಿದೆ. ಈ ಕತೆಯಲ್ಲಿ ನೈತಿಕ ಮೌಲ್ಯಗಳ ಶ್ರದ್ಧೆ ಇದೆ. ಇಡೀ ಕತೆಗೆ ರೂಪ ಕೊಡುವ ಕಲಾತ್ಮಕತೆಯನ್ನು ಸಾಧಿಸಲು ನೆರವಾಗುವ ಕೇಂದ್ರ ಪ್ರಜ್ಞೆಯೂ ಇದೆ. ಈ ಕತೆಯನ್ನು ಓದಿ ಮುಗಿಸಿದಾಗ ಸಾಮಾಜಿಕ ಕಳಕಳಿಯುಳ್ಳ ಕತೆಯೂ ಎನಿಸಿಡುತ್ತದೆ. ಇಲ್ಲಿನ ಅನುವಾದ ಅರ್ಥಕೇಂದ್ರಿತವೂ ಹೌದು, ಸಂವಹನ ಕೇಂದ್ರಿತವೂ ಹೌದು.

ವಿಶ್ವನಾಥ ಎನ್. ನೇರಳಕಟ್ಟೆ
ಅವರ
ಅಂಬುರುಹ ದಳನೇತ್ರೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ದೊಡ್ಡರಂಗೇಗೌಡ
ಅವರ
ಈ ಲೋಕದ ಶಾಶ್ವತ ಸತ್ಯಗಳು
https://www.prajavani.net/poetry
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪೂರ್ವಗ್ರಹದಿಂದ ಕೂಡಿದ ಪ್ರತಿಕ್ರಿಯೆ

ಪ್ರತಿಕ್ರಿಯೆ

ಬಿ.ಎಸ್. ಜಯಪ್ರಕಾಶ ನಾರಾಯಣ ಅವರು ನನ್ನ ಲೇಖನಕ್ಕೆ ನೀಡಿದ ಪ್ರತಿಕ್ರಿಯೆಯನ್ನು ಗಮನಿಸಿದ್ದೇನೆ. ನನ್ನ ಹೆಸರನ್ನು ಉಲ್ಲೇಖಿಸಿ ಅವರಿಗೆ ಏನು ಬೇಕೋ ಅದನ್ನು ಬರೆದುಕೊಂಡದ್ದರಿಂದ ಅದನ್ನು 'ಲೇಖನಕ್ಕೆ ಪ್ರತಿಕ್ರಿಯೆ' ಎಂದು ಕರೆಯುವುದು ಕಷ್ಟ.

ಆರಂಭದಲ್ಲಿ ಅವರು 'ಬಿಳಿಮಲೆ ಮೆಚ್ಚಿಕೊಂಡವರಲ್ಲಿ ರಾಜೀವ್ ಗಾಂಧಿಯವರೂ ಒಬ್ಬರು' ಎಂದಿದ್ದಾರೆ. ಬುದ್ಧಿಜೀವಿಗಳ ಕುರಿತಾದ ನನ್ನ ಪ್ರಸ್ತುತ ಲೇಖನದಲ್ಲಾಗಲೀ ಮೊದಲಿನ ಇತರ ಯಾವುದಾದರೂ ಲೇಖನಗಳಲ್ಲಾಗಲೀ ಪುಸ್ತಕದಲ್ಲಾಗಲೀ ನಾನು ರಾಜೀವ್ ಗಾಂಧಿಯವರ ಬಗ್ಗೆ ಬರೆದೇ ಇಲ್ಲ. ಅಂದರೆ ಅವರ ಪೂರ್ವಗ್ರಹ ಸ್ಪಷ್ಟವೇ ಇದೆ.

ಹಿಂದಿನಕಾಲದಲ್ಲಿ ನಡೆದ ಘಟನೆಗಳಿಗೆ ಆ ಕಾಲದ ಲೇಖಕರು ಪ್ರತಿಕ್ರಿಯಿಸಿಲ್ಲ ಎಂದಾದರೆ ಅದು ಈಗಿನವರು ಮಾಡದೇ ಇರುವುದಕ್ಕೆ ಸಮರ್ಥನೆ ಆಗಬಾರದು. ಗಾಂಧಿಯ ಕೊಲೆ, ಚಿತ್ಪಾವನರ ಕೊಲೆ, ಸಿಖ್ಖರ ನರಮೇಧ, ಗುಜರಾತ್ ಹತ್ಯಾಕಾಂಡ ಎಲ್ಲವೂ ತಪ್ಪೇ. ಆದರೆ ಅದು ಹತ್ರಾಸ್ ಘಟನೆಯನ್ನೋ, ಬಡಪಾಯಿ ಮುಸ್ಲಿಮನ ಕೊಲೆಯನ್ನೋ ಸಮರ್ಥಿಸಲು ಕಾರಣ ಆಗಬಾರದು.

ಬುದ್ಧಿಜೀವಿಗಳ ಬಗ್ಗೆ ಜಯಪ್ರಕಾಶರು ಮಾಡಿದ ಆರೋಪಗಳಲ್ಲಿ ಹೊಸತೇನೂ ಇಲ್ಲ. ಅದು ಪ್ರಧಾನಿಯವರಿಂದಲೇ ಶುರು ಆಗಿದೆ. ಇಂಥ ಧೋರಣೆಗಳಿಂದಲೇ ಆಯಕಟ್ಟಿನ ಬೌದ್ಧಿಕ ಜಾಗಗಳಲ್ಲಿ 'ಬುದ್ಧಿ ಇಲ್ಲದವರು' ಕುಳಿತು ಕೆಲಸ ಮಾಡುತ್ತಿರುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಆರ್‌ಎಸ್‌ಎಸ್ ನಿಯಂತ್ರಿತ ಬಿಜೆಪಿಗೆ ಈ ಕುರಿತು ತಿಳಿವಳಿಕೆ ಇಲ್ಲದಿರುವುದು ವಿಷಾದನೀಯ. ಜಯಪ್ರಕಾಶ ನಾರಾಯಣರು ಅಂಥವರಿಗೆ ಬುದ್ಧಿ ಹೇಳುವಂಥ ಉಪಯುಕ್ತ ಕೆಲಸಗಳನ್ನು ಮಾಡಲಿ ಎಂದು ಹಾರೈಸುತ್ತೇನೆ.

ಪುರುಷೋತ್ತಮ ಬಿಳಿಮಲೆ, ನವದೆಹಲಿ

ಭಾನುವಾರದ ಪುರವಣಿಯಲ್ಲಿ ಪುರುಷೋತ್ತಮ ಬಿಳಿಮಲೆ ಅವರು 'ಗೌಣವಾಗುತ್ತಿರುವ ಬುದ್ಧಿಜೀವಿಗಳು' ಲೇಖನದಲ್ಲಿ 'ಎಲ್ಲಿದ್ದೀರಿ? ಏನು ಮಾಡುತ್ತಿದ್ದೀರಿ' ಎಂಬ ಸಾಂದರ್ಭಿಕ ಮತ್ತು ಬಹಳೇ ಮಹತ್ವದ ಪ್ರಶ್ನೆ ಎತ್ತಿದ್ದಾರೆ. ಈ ಪ್ರಶ್ನೆಗಳನ್ನು ಎಲ್ಲಾ ಬುದ್ಧಿಜೀವಿಗಳು ತಮಗೆ ಅಂಟಿದ ಎಡ, ಬಲ ಮತ್ತು ಸೆಕ್ಯುಲರಿಸ್ಟ್, ಕೋಮುವಾದಿ ಹಣೆಪಟ್ಟಿಗಳನ್ನು ಬದಿಗಿಟ್ಟು ಪ್ರಾಮಾಣಿಕವಾಗಿ ತುರ್ತಾಗಿ ಕೇಳಿಕೊಳ್ಳಬೇಕಾದ ಕಾಲವಿದು.

ಬುದ್ಧನ ಹಾಗೆ ಜೀವನವನ್ನೇ ಕೇಂದ್ರಬಿಂದುವಾಗಿ ನೋಡಿದ ಜೆ.ಕೆ. (ಜಿಡ್ಡು ಕೃಷ್ಣಮೂರ್ತಿ)ಅವರನ್ನು ಈ ಸಂಕಷ್ಟ ಸಮಯದಲ್ಲಿ ನೆನಪಿಸಿಕೊಳ್ಳುವುದು ಉಚಿತ. ನಮ್ಮ ಕಾಲದ ಅನುಭಾವಿ/ದಾರ್ಶನಿಕ ಜೆ.ಕೆ. ಅವರ 'ಬದುಕೇ ಶ್ರೇಷ್ಠ ಗುರು. ಸದ್ಯದ ಇರವಿಗೆ, ಸಂವೇದನಾಶೀಲತೆಯಿಂದ ಸ್ಪಂದಿಸುವುದೇ ಧೀಮಂತಿಕೆ' ಎಂಬ ಮಾತು ಸಾರ್ವಕಾಲಿಕ.

ವಿಷಯಕ್ಕೆ ಅನುಗುಣವಾಗಿ ಜೆ.ಕೆ. ಅವರ ಕೆಲವು ಮಾತುಗಳನ್ನಷ್ಟೇ ಇಲ್ಲಿ ಹೇಳಿರುವೆ. 'ಸ್ವಯಂಪ್ರೇರಣೆಯ, ಅಂತರಂಗದ ಅತೃಪ್ತಿ, ಆಳವಾದ ಅಸಮಾಧಾನದ ಒಡಲಿನಲ್ಲಿ ಸೃಜನಶೀಲತೆಯ ಬೇರುಗಳಿವೆ' ಎಂದು ಅವರು ಹೇಳಿದ್ದರು. ಆ ಅಸಮಾಧಾನಕ್ಕೆ ಹೆದರಬೇಡಿ. ಬದಲಾಗಿ ಆ ಬೆಂಕಿ, ಜ್ವಾಲೆ ಆಗಲಿ. ಆಗಮಾತ್ರ ನೀವು ನಿಜವಾಗಿಯೂ ಆಲೋಚಿಸಲು, ಹೊಸದನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇನ್ನಷ್ಟು ಆಹಾರ ನೀಡಿ. ಕಿಡಿಯನ್ನು ಉರಿಯಾಗಿಸಬೇಕು ಎಂದೂ ಅವರು ಹೇಳಿದ್ದರು.

ಎರಡು ಸಿದ್ಧಾಂತಗಳ ಕಚ್ಚಾಟದಲ್ಲಿ ಮನುಷ್ಯನನ್ನು ಮರೆತು ಬಿಡಲಾಗಿದೆ. ಬಾಹ್ಯಾಡಂಬರ ಹೆಚ್ಚಿದಷ್ಟೂ ಆಂತರ್ಯದ ದಾರಿದ್ರ್ಯವೂ ಹೆಚ್ಚುತ್ತದೆ. ಈ ಆಂತರಿಕ ದಾರಿದ್ರ್ಯವನ್ನು ಮುಚ್ಚಿಡಲು, ಪ್ರತಿಷ್ಠಿತರೆನಿಸಿಕೊಳ್ಳಲು ಹೆಣಗಾಡುತ್ತೇವೆ. ದೈಹಿಕ, ಭೌತಿಕ, ವೈಜ್ಞಾನಿಕ, ಪರಿಸರ ಅವಶ್ಯಕ ಜ್ಞಾನ ಬೇಕೇ ಬೇಕು. ಉಳಿದೆಲ್ಲ ಮಾನಸಿಕ ಜ್ಞಾನ ಸಂಗ್ರಹವು ಒಂದು ವ್ಯಸನ. ಈ ಅಪಾರವಾದ ಜ್ಞಾನ ಮಾಹಿತಿಯೂ ನಮ್ಮೆಲ್ಲಾ ಹಿಂಸೆ, ದ್ವೇಷಗಳಿಗೆ ಮಂಗಳ ಹಾಡಿದೆಯೇ? ಈ ಎಲ್ಲಾ ವ್ಯಕ್ತವಾಗುತ್ತಿರುವ ಬಹಿರಂಗದ ನಡವಳಿಕೆಯಿಂದ ಮಾನವೀಯ ಸಂಬಂಧಗಳಲ್ಲಿರಬೇಕಾದ ವಿನಯ, ಅನುಕಂಪ ಅಪರೂಪಕ್ಕೆ ಕಾಣಸಿಗುತ್ತವೆ.

ಅಂತರಂಗ ಶುದ್ಧಿಗಾಗಿ ಜೀವನವೇ ಧ್ಯಾನ ಎಂದ ಜೆ.ಕೆ. ಅವರ ಮಾತು. ಅಂತರಂಗದ ಸ್ವರೂಪವೇ ಯಾವತ್ತೂ ಬಹಿರಂಗದ ಆಕಾರವನ್ನು ಮೆಟ್ಟಿ ನಿಲ್ಲುತ್ತದೆ. ಹಣ್ಣೊಳಗಿನ ಸಣ್ಣ ಕ್ರಿಮಿ ಇಡೀ ಹಣ್ಣು ಕೊಳೆಸುತ್ತದೆ ಎಂಬ ಸತ್ಯದ ಅರಿವಿರಲಿ.

ಸಿದ್ರಾಮಪ್ಪ ದಿನ್ನಿ, ಬೆಂಗಳೂರು

ಆಗಸ್ಟ್ 28ರಂದು ಪುರುಷೋತ್ತಮ ಬಿಳಿಮಲೆ ಅವರು ಭಾನುವಾರದ ಪುರವಣಿಯಲ್ಲಿ ಪ್ರಕಟಿಸಿದ 'ಗೌಣವಾಗುತ್ತಿರುವ ಬುದ್ಧಿಜೀವಿಗಳು' ಎಂಬ ಲೇಖನಕ್ಕೆ ಬಿ.ಎಸ್. ಜಯಪ್ರಕಾಶ ನಾರಾಯಣ ಅವರು ಸೆಪ್ಟೆಂಬರ್ 4ರಂದು ಪ್ರತಿಕ್ರಿಯೆ ನೀಡುತ್ತಾ, 'ಬಿಳಿಮಲೆ ಅವರು ನೆಚ್ಚಿಕೊಂಡಿರುವ ನಾಯಕರಲ್ಲಿ ರಾಜೀವ್ ಗಾಂಧಿ ಕೂಡಾ ಒಬ್ಬರು' ಎಂದಿದ್ದಾರೆ. ಆದರೆ ಬಿಳಿಮಲೆಯವರ ಲೇಖನದಲ್ಲಿ ರಾಜೀವ್ ಗಾಂಧಿಯವರ ಪ್ರಸ್ತಾಪವೇ ಇಲ್ಲ. ಅದಲ್ಲದೇ ಬಿಳಿಮಲೆಯವರು ತಮ್ಮ ಲೇಖನದಲ್ಲಿ ಹೇಳದಿರುವ ವಿಷಯಗಳನ್ನು, ಮುಂದಿಡದಿರುವ ಅನೇಕ ಅಭಿಪ್ರಾಯಗಳನ್ನು ಜಯಪ್ರಕಾಶ ನಾರಾಯಣ ಅವರು ತಮ್ಮ ಪ್ರತಿಕ್ರಿಯೆಯ ಉದ್ದಕ್ಕೂ ಅವರಿಗೆ ಆರೋಪಿಸುತ್ತಾ ಗಳುಹಿದ್ದಾರೆ. ಬಿಳಿಮಲೆಯವರು ತಮ್ಮ ಲೇಖನದಲ್ಲಿ ಯಾವ ಮನೋಧರ್ಮ, ಯಾವ ಶಕ್ತಿಗಳ ಅಟಾಟೋಪವನ್ನು ಕುರಿತು ಆತಂಕಗೊಂಡಿದ್ದಾರೋ ಆ ಮನೋಧರ್ಮ ಮತ್ತು ಶಕ್ತಿಗಳ ಅನೃತ ಮತ್ತು ಕುಯುಕ್ತಿಯ ನಡೆನುಡಿಗೊಂದು ಉದಾಹರಣೆಯಾಗಿದೆ ಜಯಪ್ರಕಾಶ ನಾರಾಯಣರ ಪ್ರತಿಕ್ರಿಯೆ.

ರಘುನಂದನ, ಬೆಂಗಳೂರು

ಬಿರುಮಳೆ ಹಾಸಿದ ಸಂಪಿಗೆಯ ಹಾಸಿಗೆ

ಎಚ್.ಎಸ್. ಶಿವಪ್ರಕಾಶ್

1970ರ ದಶಕದ ಬೆಂಗಳೂರು ಮಳೆಯ ನೋಟ... ತರಗುಪೇಟೆಯಲ್ಲಿ ಕಂಡಂತೆ. ಬಾಲ್ಯವನ್ನು ಬೆಂಗಳೂರಿನಲ್ಲಿಯೇ ಕಳೆದಿರುವ ಕವಿ ಶಿವಪ್ರಕಾಶ್ ಅವರ ನೆನಪುಗಳ ಮಳೆ ಈ ಪೇಟೆಗಳ ಪ್ರಪಂಚದ ಮೇಲೆಯೇ ಸುರಿದಿದೆ

ಮಳೆ ಅಂದ್ರೆ... ಏನು ಅಂತೀರಾ? ನೆನಪುಗಳೂ ಹಂಗೇನೇ; ಮಳೆಯ ಹಾಗೇ ಧೋ ಅಂತ ಬಂದುಬಿಡ್ತಾವೆ. ಬಿಸಿಲು ಇದ್ದಾಗಲೂ ಒಮ್ಮೊಮ್ಮೆ ಮಳೆ ಸುರಿಯುತ್ತೆ ಅಲ್ವಾ? ಅದು ಏಕೆ ಗೊತ್ತಾ? ಕೋತಿಗೂ ನರಿಗೂ ಮದ್ವೆ ಮಾಡ್ತಾ ಇದ್ರೆ ಬಿಸಿಲಿನಲ್ಲಿ ಮಳೆ ಸುರಿಯುತ್ತಂತೆ. ಇದು ನಮ್ಮ ಬಾಲ್ಯ ಕಾಲದ ತಿಳಿವಳಿಕೆ. ಈಗ ನೆನಪಿಸ್ಕೊಂಡ್ರೆ ನಗು ಬರುತ್ತೆ.

ಕಾಟನ್‌ಪೇಟೆ– ಚಿಕ್ಕಪೇಟೆ ಮಧ್ಯೆ ರಂಗಸ್ವಾಮಿ ಗುಡಿ ಇದೆಯಲ್ಲಾ? ಅದರ ಹತ್ರ ನಮ್ಮ ಮನೆ ಇತ್ತು. ನಮ್ಮ ಮನೆಯ ಹಿಂದೆ–ಮುಂದೆ ದೊಡ್ಡ ಹಟ್ಟಿಗಳು ಇದ್ವು. ತುಂಬಾ ದೊಡ್ಡ ಹಟ್ಟಿ ಪ್ರದೇಶ ಅದು. ಎದುರಿಗೆ ಒಂದು ದೊಡ್ಡ ಸಂಪಿಗೆ ಮರ. ಸ್ವಲ್ಪ ದೂರದಲ್ಲೇ ಪಾರಿಜಾತದ ಗಿಡ. ಮಧ್ಯೆ ಬಾಳೆ ಗಿಡಗಳು ಇದ್ವು. ಒಂದು ದೊಡ್ಡ ಮಳೆ ಸುರೀತಂದ್ರೆ ಸಾಕು, ಈ ಸಂಪಿಗೆ, ಪಾರಿಜಾತ ಹೂಗಳೆಲ್ಲಾ ಪಟಪಟ ಉದುರಿ ಭುವಿಗೆ ಹೂವಿನ ಹಾಸಿಗೆ ಹಾಸುತ್ತಿದ್ದವು. ಅತ್ತ ಚಿಕ್ಕ ಲಾಲ್‌ಬಾಗ್‌ನಲ್ಲೂ ಅಷ್ಟೇ ಹುಚ್ಚೆ ಹೂವುಗಳು ಉದುರಿ ಹೂವಿನ ಹೊದಿಕೆ ಹಾಸಿ ಬಿಡುತ್ತಿದ್ವು.

ಒಂದಿನ ಏನಾಯ್ತು ಗೊತ್ತಾ? ಹೀಗೇ ಜೋರಾಗಿ ಮಳೆ ಸುರಿಯಿತು. ಗಾಳಿ ಮಳೆಗೆ ಸಂಪಿಗೆ ಮರದಲ್ಲಿ ಗೂಡು ಕಟ್ಟಿದ್ದ ಗುಬ್ಬಚ್ಚಿ ಗೂಡು ಕೆಳಗೆ ಬಿದ್ದು ಮರಿಗಳು ಸತ್ತು ಹೋದವು. ಸಾಮಾನ್ಯ ವೇಳೆಯಲ್ಲಿ ಆ ಮರದ ಹತ್ತಿರ ಹೋಗುವುದೂ ಸಾಧ್ಯವಿರಲಿಲ್ಲ. ಗುಬ್ಬಚ್ಚಿಗಳು ಪುಟ್ಟ ಕೊಕ್ಕಿನಿಂದ ಕುಕ್ಕಿ ಬಿಡುತ್ತಿದ್ದವು. ಮಳೆಗೆ ಮರಿಗಳ ಸಾವನ್ನು ಕಂಡು ಆ ಗುಬ್ಬಚ್ಚಿಗಳು ಅದೆಷ್ಟು ರೋದಿಸಿದ್ದವೋ... ನಾನೂ ಅತ್ತಿದ್ದೆ. ಅದೇ ಮಳೆಗೆ ಹಟ್ಟಿಯ ಮುಂದೆ ನೆಟ್ಟ ಬಾಳೆಗಿಡಗಳು ಮಗುಚಿಬಿದ್ದದ್ದು ಕೂಡ ಸ್ಮೃತಿಪಟಲದಲ್ಲಿದೆ. ಹೀಗೆ ಅಂದು ಮಳೆ ಸೃಷ್ಟಿಸಿದ ಪಲ್ಲಟಗಳು ಅವೆಷ್ಟೊ...

ಜೋರಾಗಿ ಮಳೆ ಬಂದ ದಿನ ನಮ್ಮ ಕೆಂಪೇಗೌಡ ರಸ್ತೇಲಿರೋ ವಸಂತ ಮಹಲ್ ಹೋಟೆಲ್‌ಗೆ ದೋಸೆ ತಿನ್ನೋದಿಕ್ಕೆ ಹೋಗ್ತಾ ಇದ್ದೆ. ಗರಿಗರಿಯಾದ ದೋಸೆ ಅದು. ಆ ದಾರಿಯಲ್ಲಿ ತಬೂಬಿಯಾ ಹೂಗಳು ಬಿದ್ದಿರುತ್ತಿದ್ವು. ಒಂಥರಾ ಚಿತ್ತಾರ ಬರೆದ ಹಾಗೆ ಆ ದೃಶ್ಯ.

ಮಳೆಗಾಲದಲ್ಲಿ ನಕ್ಷತ್ರ ಹಣ್ಣು, ಸೀಬೆ ಹಣ್ಣು ಸೇರಿದಂತೆ ಹಲವು ಹಣ್ಣುಗಳು ಸಿಗೋವು. ನಾನು ತುಂಬಾ ಸವಿದಿದ್ದೆ. ಮಳೆಯ ನಡುವೆ ಬರುವ ಗಣೇಶನ ಹಬ್ಬವನ್ನೂ ಆನಂದಿಸಿದ್ದೆ. ಜೋರು ಮಳೆ ಬಂದರೆ ಈ ಸಂಭ್ರಮಕ್ಕೂ ಅಡ್ಡಿಯುಂಟಾಗುತ್ತಿತ್ತು. ಆದರೆ ಅದು ಅಪರೂಪ.

ನಂಗಂತೂ ಮಳೆಯಲ್ಲಿ ನೆನೆಯೋದು ಅಂದ್ರೆ ತುಂಬಾ ಇಷ್ಟ. ಮಳೆ ಬಂದ್ರೆ ಮನೆಯ ಚಾವಣಿ ಹತ್ತಿ ಮಳೇಲಿ ನೆನೀತಾ ಬೆಂಗಳೂರಿನ ನೋಟ ನೋಡುವ ಮಜಾನೇ ಬೇರೆ. ಶಾಲೆಗೆ ಹೋಗುವಾಗಲೂ ಅಷ್ಟೆ. ಮಳೆ ಬಂದರೆ ದಾರಿಯಲ್ಲೆಲ್ಲಾ ಮೊಣಕಾಲೆತ್ತರಕ್ಕೆ ನೀರು. ಆದರೆ, ಅದು ಬಲು ಬೇಗ ಜಾಗ ಖಾಲಿ ಮಾಡ್ತಿತ್ತು. ಈಗಿನಂತೆ ಬೋಟ್‌ನಲ್ಲಿ ಹೋಗುವ ಪ್ರಮೇಯ ಸೃಷ್ಟಿ ಆಗ್ತಿರಲಿಲ್ಲ. ನೀರ ದಾರಿಯಲ್ಲೇ ನನ್ನ ನಡಿಗೆ. ನನ್ನ ನೆನೆಯುವಿಕೆ ನೋಡಿದ ಹಿರಿಯರು ನಂಗೊಂದು ರೈನ್ ಕೋಟ್ ಕೊಡಿಸಿದ್ರು. ಆಗ್ಲೂ ಅಷ್ಟೆ. ರೈನ್‌ಕೋಟ್ ಹಾಕಿಕೊಂಡೂ ಬರೋವಾಗ ನೆನೆದುಕೊಂಡೇ ಬಂದ ಅನುಭೂತಿ ಅನುಭವಿಸಿದ್ದೆ. ಬೇಜಾರು ಅಂದ್ರೆ ನನ್ನ ನೆನೆಯುವಿಕೆಯ ಸಂಭ್ರಮಕ್ಕೆ ಯಾರೂ ಜೊತೆಗಾರರು ಇರುತ್ತಿರಲಿಲ್ಲ. ಅವರೆಲ್ಲಾ ಮಳೆ ಬಂದೊಡನೆ ಮನೆಯೊಳಗೆ ಸೇರಿಬಿಡುತ್ತಿದ್ದರು.

ಮಳೆ ಅಂದೂ ಬಂದರೆ ಹಾಗೆಯೇ ಧೋ ಅಂತ ಬರುತ್ತಿತ್ತು. ಮೋಡ ಕಟ್ಟುವುದನ್ನು ನೋಡೋದೇ ಒಂದು ಅದ್ಭುತ. ಯಾವ ಕ್ಷಣದಲ್ಲೂ ಮಳೆ ಸುರಿಯಬಹುದಲ್ವಾ? ಸಿಡಿಲು, ಮಿಂಚುಗಳ ಸದ್ದೂ ಅಷ್ಟೇ ಆಪ್ಯಾಯಮಾನವೂ ಆತಂಕಕಾರಿಯೂ ಆಗಿರುತ್ತಿತ್ತು. ಸಿಡಿಲು, ಮಿಂಚು ಒಟ್ಟಿಗೆ ಬಂದಾಗ ದೇವರು ಕಾಣಿಸಿಕೊಂಡ ಅನ್ನುವ ಭಾವವನ್ನು ನಮ್ಮ ಹಟ್ಟಿಯಲ್ಲಿ ಅನುಭವಿಸಿದ್ದುಂಟು. ಮಳೆ ಜೋರಾಗಿಯೂ ಇತ್ತು. ತುಂತುರಾಗಿಯೂ ಬರುತ್ತಿತ್ತು. ಎರಡೂ ಮಳೆಗಳಿಗೂ ಅವುಗಳದ್ದೇ ಆದ ಸೊಬಗು ಅದರ ನಡುವೆ ನೆನೆಯುವ ಆನಂದ ಇತ್ತೆನ್ನಿ.

ನೀರು ತುಂಬುವುದು, ರಸ್ತೆ ಮೇಲೆಲ್ಲಾ ಹರಿಯುವುದು ಅಂದೂ ಇತ್ತು. ಆದರೆ ಇಂದಿನಂತಲ್ಲ ಬಿಡಿ. ನಗರ್ತಪೇಟೆ, ಚಾಮರಾಜಪೇಟೆ, ಅವೆನ್ಯೂ ರಸ್ತೆಗಳಲ್ಲಿ ನೀರು ತುಂಬಿ ಹರಿದ ದಿನಗಳನ್ನೂ ನಾನು ನೋಡಿದ್ದೇನೆ.

ಮಳೆ ನನ್ನ ಪ್ರಕಾರ ಪುನರ್‌ಜನ್ಮದ ಸಂಕೇತ. ಅದನ್ನು ಹಿನ್ನೆಲೆ ಆಗಿಟ್ಟುಕೊಂಡೇ 'ಮಳೆ ಬಿದ್ದ ನೆಲದಲ್ಲಿ', 'ಮಳೆಯೇ ಮಂಟಪ' ಕವನ ಸಂಕಲನಗಳನ್ನು ಪ್ರಕಟಿಸಿದ್ದೇನೆ. ಮದುವೆ ಹೆಣ್ಣು ನಾಟಕ ನೋಡಿದ್ರಲ್ಲಾ? ಅದರಲ್ಲಿ ಕಥೆಗೆ ತಿರುವು ಕೊಡುವುದೇ ಮಳೆ. ಹಾಗಾಗಿ ಮಳೆ ನನ್ನ ಬದುಕಿನ ಎಲ್ಲ ಆಯಾಮಗಳಲ್ಲಿ ಗಟ್ಟಿಯಾದ ಪಾತ್ರ ವಹಿಸಿದೆ.

ಅಂದಿನ ಮಳೆಗಾಲದಲ್ಲಿ ಚಳಿಯೂ ಹಿತವಾಗಿಯೇ ಇತ್ತು. ಮಳೆಯನ್ನು ಆನಂದಿಸಲು ವಿಸ್ತಾರದ ನೋಟ ಸಿಗುತ್ತಿತ್ತು. ಈಗ ಗಗನಚುಂಬಿ ಕಟ್ಟಡಗಳು ಎದ್ದುನಿಂತು ಮಳೆ ನೋಡುವ ಖುಷಿಯನ್ನು ಕಸಿದುಕೊಂಡಿವೆ. ಏಕಪ್ರಕಾರವಾಗಿ ಮಳೆ ಸುರಿಯಲು ತೆರೆದ ಜಾಗಗಳೇ ಇಲ್ಲವೇನೋ ಅನ್ನಿಸುವಂತಾಗಿದೆ. ಋತುಮಾನದಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿವೆ. ಮಳೆ ಕೂಡ ತನ್ನ ಲಯಬದ್ಧತೆ ಕಳೆದುಕೊಂಡಿದೆ. ಹವೆಯೂ ಸಾಕಷ್ಟು ಬದಲಾಗಿದೆ. ಹಾಗಾಗಿ ಮಳೆ ಹೇಗ್ಹೇಗೋ ಬಂದು ಸುರಿಯುತ್ತಿದೆ. ಮಳೆಯ ಇಂದಿನ ಅವತಾರ ನೋಡುವಾಗ ಸಣ್ಣಗೆ ವಿಷಾದವೂ ಮೂಡುತ್ತದೆ.

ರಾಗ ಬರತಾವ ಹುಡುಕಿ ಸಮಯ ಅಪ್ಪೋದ್ಯಾಕ ದುಡುಕಿ

ಕಲೆ: ಕರಿಯಪ್ಪ ಹಂಚಿನಮನಿ

ಕಿರಾಣಾ – ಘರಾಣೆಯ ಒಳಗಿದ್ದುಕೊಂಡೇ, ಆ ಘರಾಣೆಯ ದೀಪವನ್ನು ಸದಾ ಬೆಳಗುತ್ತಲೇ, ಕಳೆದ ಏಳು ದಶಕಗಳಿಂದ ಪ್ರತಿಯೊಂದನ್ನೂ ಪ್ರಶ್ನಿಸುತ್ತಾ, ಒರೆಗೆ ಹಚ್ಚುತ್ತಾ ಬಂದಿರುವ ಹಿರಿಯ ಗಾಯಕಿ ಡಾ. ಪ್ರಭಾ ಅತ್ರೆಯವರ ಆಳದಲ್ಲಿ ಇಂದಿಗೂ ಸಂಗೀತದ ಶಾಸ್ತ್ರಗಳನ್ನು ಮರುವ್ಯಾಖ್ಯಾನಿಸುವ, ಸುಧಾರಣೆಯ ದಿಕ್ಕಿನಲ್ಲಿ ಆಲೋಚಿಸುವ, ಹೊಸ ಚಿಂತನೆಗಳಿಗೆ ತಮ್ಮನ್ನು ಒಡ್ಡಿಕೊಳ್ಳುವ ಅದೇ ಕ್ರಾಂತಿಕಾರಿ ಸ್ವಭಾವ ಹುದುಗಿದೆ. ಸೆ. 13ರಂದು 90 ವರ್ಷ ಪೂರೈಸಲಿರುವ ಈ ಸಾಧಕಿ ಹಿಂದೂಸ್ತಾನಿ ಸಂಗೀತದಲ್ಲಿ ರಾಗ-ರಸ ಹಾಗೂ ರಾಗ-ಸಮಯ ಪರಿಕಲ್ಪನೆಯ ಕುರಿತು ತಮ್ಮ ಕೆಲವು ಚಿಂತನೆಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಸಂಗೀತ ಬಂಧುಗಳಿಗೆ ಅವರು ಕೇಳಿದ ಈ ಹರಿತವಾದ ಪ್ರಶ್ನೆಗಳಿಗೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ ತಾರ್ಕಿಕ ಉತ್ತರಗಳನ್ನು ಕಂಡುಕೊಳ್ಳುವ ಅಗತ್ಯವಿದೆ.

ಪ್ರಭಾ ಅತ್ರೆ

ಪರಂಪರೆಯು ನಿಂತ ನೀರಲ್ಲ ಎನ್ನುವುದು ನಮಗೆಲ್ಲ ಅರಿವಿದೆ. ಅದು ಕಾಲದೊಂದಿಗೆ ಹರಿಯುತ್ತಿರುವ ನದಿಯಂತೆ, ಹೊಸ ಪ್ರವೃತ್ತಿಗಳನ್ನು ತನ್ನೊಳಗೆ ಕರಗಿಸಿಕೊಳ್ಳುತ್ತ, ಹಳತಾದ ರೂಢಿಗಳನ್ನು ಬಿಸಾಕುತ್ತದೆ. ನಾವು ಇಂದಿನ ಸಂಗೀತ ಪ್ರಸ್ತುತಿಗಳನ್ನು ಪ್ರಸ್ತುತ ಕಾಲದ ಸಂದರ್ಭದಲ್ಲಿ ಪರೀಕ್ಷಿಸಬೇಕಿದೆ. ನಮ್ಮ ಸಂಗೀತವನ್ನು ಇನ್ನಷ್ಟು ಸಮೃದ್ಧಗೊಳಿಸಲು ಅಗತ್ಯವಾದ ಬದಲಾವಣೆಗಳನ್ನು ತಾರ್ಕಿಕತೆ ಹಾಗೂ ವೈಜ್ಞಾನಿಕ ತಳಹದಿಯ ಆಧಾರದ ಮೇಲೆ ಮಾಡಬೇಕಿದೆ ಎಂದು ನಿಮಗನ್ನಿಸುವುದಿಲ್ಲವೇ?

ರಾಗ-ರಸ ಮತ್ತು ರಾಗ-ಸಮಯ

ಸಂಗೀತವನ್ನು ಕಲೆಯ ಅತ್ಯಂತ ಶುದ್ಧ ಸ್ವರೂಪ ಎಂದು ಪರಿಗಣಿಸುತ್ತೇವೆ. ಅದು ಈ ವಿಶ್ವದಲ್ಲಿ ಏನನ್ನೂ ಪ್ರತಿನಿಧಿಸುವುದಿಲ್ಲ. ಸಂಗೀತಕ್ಕೆ ಅದರದ್ದೇ ಆದ ಭಾಷೆ ಹಾಗೂ ಅರ್ಥವಿದೆ. ಅದರ ಅಮೂರ್ತ ಲಕ್ಷಣವು ವಿಶ್ವದಲ್ಲಿ ಎಲ್ಲ 'ಪರಿಚಿತ' ವಸ್ತುಗಳಿಂದಲೂ ಅದನ್ನು ಪ್ರತ್ಯೇಕಗೊಳಿಸುತ್ತದೆ. ಮನುಷ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಸಂಗೀತವನ್ನು ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಬಳಸಿದ್ದಾರೆ. ಹೀಗೆ ಸಂಗೀತದಲ್ಲಿನ ಅಮೂರ್ತತೆಯು ಮನುಷ್ಯರಿಗೆ ನಿಶ್ಚಿತ ರೂಪದ್ದೂ, ನಿರ್ದಿಷ್ಟವೂ ಆಯಿತು. ಭಾರತೀಯ ಸಂಗೀತ ಪದ್ಧತಿಯಲ್ಲಿ ರಾಗದ ಪರಿಕಲ್ಪನೆಯು ಸಂಗೀತದ ಅಮೂರ್ತ ಗುಣವನ್ನು ಉತ್ತಮವಾಗಿ ಪ್ರತಿನಿಧಿಸುತ್ತದೆ. ರಾಗವನ್ನು ಅದರ ಬರಿದಾದ ಅಥವಾ ನಗ್ನ ಸ್ವರೂಪದಲ್ಲಿ ಕಾಣುವುದು ಕಲಾವಿದರು ಹಾಗೂ ಸಾಮಾನ್ಯ ಕೇಳುಗರು, ಇಬ್ಬರಿಗೂ ಕಷ್ಟವೇ.

ಏನಾದರೊಂದು 'ಪರಿಚಿತ' ವಸ್ತುವಿನ ಜೊತೆಗೆ ರಾಗದ ಸಂಬಂಧ ಕಲ್ಪಿಸುವುದು ರಾಗಕ್ಕೆ ಸ್ವರೂಪವೊಂದನ್ನು ನೀಡಲು ಕಲಾವಿದರಿಗೆ ಸಹಾಯ ಮಾಡುತ್ತದೆ. ಹೀಗಾಗಿ ಕಲಾವಿದರು ಸಿದ್ಧಾಂತ ಹಾಗೂ ತಂತ್ರಗಳ ಉತ್ತಮ ಜ್ಞಾನವನ್ನು ಹೊಂದಿದ್ದರೂ, ರಾಗವೊಂದನ್ನು ಸೃಜಿಸುವ ಪ್ರಕ್ರಿಯೆಯಲ್ಲಿ ರಾಗದೊಳಗಿನ 'ಅಮೂರ್ತತೆ'ಯನ್ನು 'ನಿಶ್ಚಿತ ರೂಪ'ಕ್ಕೆ ರೂಪಾಂತರಿಸುವುದಕ್ಕಾಗಿ ಹೊರಗಿನ ಸಹಾಯವನ್ನು ಅರಸುತ್ತಾರೆ.

ರಾಗ-ರಸ ಹಾಗೂ ದಿನದ ಯಾವ ಸಮಯದಲ್ಲಿ ಯಾವ ರಾಗ ಹಾಡಬೇಕೆಂಬ ರಾಗ-ಸಮಯದ ಪರಿಕಲ್ಪನೆಯು ರಾಗದಲ್ಲಿರುವ 'ಅಮೂರ್ತ'ಕ್ಕೆ ಒಂದು 'ನಿಶ್ಚಿತ ರೂಪ'ವನ್ನು ಕೊಡುವ ಪ್ರಯತ್ನವಾಗಿದೆ. ಧ್ವನಿಮಾಧುರ್ಯವನ್ನು ದೇವರು, ಋತುಗಳು, ದಿನದ ಗಂಟೆಗಳು ಇತ್ಯಾದಿಗಳ ಜೊತೆಗೆ ಗುರುತಿಸುತ್ತ, ರಸ ಅಥವಾ ಮೂಡ್‌ಗಳು ಮಾಧುರ್ಯಕ್ಕೆ ಕಾರಣ ಎನ್ನುತ್ತೇವೆ. ಇದು ಸಂಗೀತವನ್ನು ಅದರ ಒಂದು ವಿಶಿಷ್ಟ ಲಕ್ಷಣದೊಂದಿಗೆ ಸೃಜಿಸುವುದಕ್ಕೆ ಸಹಾಯ ಮಾಡಿದೆ.

ಹಿಂದಿನ ಕಾಲದಲ್ಲಿ ಮನುಷ್ಯರು ನಿಸರ್ಗಕ್ಕೆ ಬಹು ಹತ್ತಿರವಿದ್ದರು ಎಂಬ ಅಂಶವು ಬಹುಶಃ ಒಂದುರಾಗ ಹಾಗೂ ಒಂದು ನಿರ್ದಿಷ್ಟ ಸಮಯದ ನಡುವಣ ಸಂಬಂಧವನ್ನು ವಿವರಿಸಬಹುದು. ಇಂದು ಮನುಷ್ಯ ನಿಸರ್ಗದಿಂದ ಬಹುದೂರ ಸಾಗಿದ್ದು, ಗೋಡೆಗಳ ನಡುವೆ, ಕೃತಕ ಪರಿಸರದಲ್ಲಿ ಬದುಕುತ್ತಿದ್ದಾನೆ. ಮನುಷ್ಯನ ಜೀವನಶೈಲಿ ಹಾಗೂ ಹವ್ಯಾಸಗಳು ಸಾಕಷ್ಟು ಬದಲಾಗಿವೆ. ಇಂತಹ ಸನ್ನಿವೇಶಗಳಲ್ಲಿ, ನಾವು ಸಮಯದೊಂದಿಗೆ ರಾಗದ ಸಂಬಂಧವನ್ನು ಕಲ್ಪಿಸಬಹುದೇ?

ಕೆಲವು ದೃಶ್ಯಗಳು, ಮೌಖಿಕ ಸಂವಹನ ಅಥವಾ ಏನಾದರೂ ಹಿಂದಿನ ಸಂಬಂಧಗಳು ಇದ್ದಾಗ ಸಂಗೀತದೊಳಗಣ ಅಮೂರ್ತವನ್ನು ಅನುಭವಿಸಬಲ್ಲೆವು. ಸಮಯ ಸಿದ್ಧಾಂತವು ವಿಶೇಷವಾಗಿ ಒಂದೇ ಬಗೆಯ ಲಕ್ಷಣಗಳನ್ನುಳ್ಳ ಸ್ವರ ಪ್ರಸ್ತಾರಗಳ ನಡುವೆ ವ್ಯತ್ಯಾಸ ಕಂಡುಕೊಳ್ಳಲು ಅಗತ್ಯವಾದ ಸಂದರ್ಭ ಒದಗಿಸಿತು.

ರಸಾನುಭೂತಿಯ ಭಾವನೆಗಳು ಮುಖ್ಯವಾಗಿ ಧ್ವನಿಯ ಭಾವಗರ್ಭಿತತೆ, ಸಾಂಗೀತಕ ಅಂಶಗಳ ಪ್ರಸ್ತುತಿ ಮತ್ತು ಸಂಗೀತದ ಗತಿಯ ಮೂಲಕ ಹುಟ್ಟುತ್ತವೆ ಎಂದು ಸಂಗೀತಾನುಭವದ ಆಧುನಿಕ ಸಿದ್ಧಾಂತವು ಪ್ರತಿಪಾದಿಸುತ್ತದೆ. ಸಂಗೀತದಲ್ಲಿ ಮೌಖಿಕ ಪಠ್ಯ, ದೃಶ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿದರೆ, ಅದು ಕೂಡ ನಿರ್ದಿಷ್ಟವಾದ ರಸ ಅಥವಾ ಮೂಡ್ ಹುಟ್ಟುಹಾಕಲು ಸಹಕಾರಿ. ರಾಗವೊಂದು ಆಲಾಪ, ತಾನ್, ಸರಗಮ್ ಅಥವಾ ಬೋಲ್‌ಗಳು, ಇವುಗಳಲ್ಲಿ ಯಾವುದನ್ನು ಬಳಸುತ್ತಿದೆ ಎಂಬುದನ್ನು ಅವಲಂಬಿಸಿ ಒಂದೇ ಮೂಡ್‌ನ ವಿವಿಧ ಛಾಯೆಗಳನ್ನು ವ್ಯಕ್ತಪಡಿಸಬಲ್ಲದು. ಆದಾಗ್ಯೂ ಗತಿಯು ಮೂಡ್ ಹುಟ್ಟು ಹಾಕುವಲ್ಲಿ ಮಹತ್ವದ ಪಾತ್ರವನ್ನು ವಹಿಸಬಲ್ಲದು.

ರಾಗ-ರಸ ಮತ್ತು ರಾಗ ಸಮಯ ಸಿದ್ಧಾಂತದ ಹಿನ್ನೆಲೆಯಲ್ಲಿ ಹಲವಾರು ಪ್ರಶ್ನೆಗಳು ಹುಟ್ಟುತ್ತವೆ:

- ರಾಗಗಳು ನಿರ್ದಿಷ್ಟ ರಸವನ್ನು ಉಂಟು ಮಾಡುತ್ತದೆ ಎನ್ನುತ್ತೇವೆ. ಆದರೆ ಎಷ್ಟೋ ಸಲ ಬಂದಿಶ್‌ಗಳ ವಿಷಯವಸ್ತು ಅಂದರೆ ಹಾಡಿನ ಪಠ್ಯವು ರಸಕ್ಕೆ ವಿರುದ್ಧವಾಗಿರುತ್ತದೆ. ಉದಾಹರಣೆಗೆ ಭೈರವಿ ರಾಗವು ಕರುಣ ರಸವನ್ನುಂಟು ಮಾಡುತ್ತದೆ. ಭೈರವಿಯಲ್ಲಿ ಹಾಡಿನ ವೈವಿಧ್ಯಮಯ ವಿಷಯವಸ್ತುವು ರಾಗಕ್ಕೆ ಅರ್ಥವನ್ನು ಕೊಡುತ್ತಿರುವಂತೆ ತೋರುತ್ತದೆ ಹಾಗೂ ಕೇಳುಗರು ಇದನ್ನು ಆನಂದದಿಂದ ಆಲಿಸುತ್ತಾರೆ. ಭೈರವಿ ರಾಗವನ್ನು ಯಾವುದೇ ಸಮಯದಲ್ಲಾದರೂ ಹಾಡಬಹುದು.
- ಹೆಚ್ಚು ಕಡಿಮೆ ಎಲ್ಲ ರಾಗಗಳು, ಯಾವುದೇ ಸಮಯದಲ್ಲಾದರೂ, ವೇಗದ ಗತಿಗೆ ಬರುತ್ತಿದ್ದಂತೆ ಒಂದು ಲವಲವಿಕೆಯ, ಉಲ್ಲಾಸದ ವಾತಾವರಣವನ್ನು ಹುಟ್ಟುಹಾಕುತ್ತವೆ.
- ವರ್ಷಗಳು ಕಳೆದಂತೆ, ಕೆಲವು ರಾಗಗಳು ತಮ್ಮ ಹಳೆಯ ಹೆಸರನ್ನು ಉಳಿಸಿಕೊಂಡೇ, ಸಾಕಷ್ಟು ಬದಲಾಗಿವೆ. ಹಾಗಿದ್ದಾಗ ಅವುಗಳ ರಸ ಹಾಗೂ ಸಮಯವೂ ಬದಲಾದವೇ?
- ಭಿನ್ನರಸಗಳನ್ನು ಹೊಂದಿದ ಎರಡು ಅಥವಾ ಮೂರು ರಾಗಗಳ ಸಂಯೋಜನೆಯಿಂದ ಹುಟ್ಟಿದ ಮಿಶ್ರರಾಗಗಳ ರಸ ಹಾಗೂ ಸಮಯ ಯಾವುದಿರುತ್ತದೆ?
- ಹೊಸದಾಗಿ ಸೃಜಿಸಿದ ರಾಗದ ರಸ ಹಾಗೂ ಸಮಯ ಯಾವುದಿರುತ್ತದೆ?
- ಶ್ರೋತೃಗಳು - ಭಾರತೀಯ ಅಥವಾ ವಿದೇಶೀ ಕೇಳುಗರು ಒಂದು ನಿರ್ದಿಷ್ಟ ಸಮಯದಲ್ಲಿ ರಾಗವೊಂದರ ರಸವನ್ನು ಒಂದೇ ರೀತಿಯಾಗಿ ಅನುಭವಿಸುತ್ತಾರೆಯೇ?
- ಒಂದೇ ರಾಗವನ್ನು ವಿವಿಧ ಕಲಾವಿದರು ಪ್ರಸ್ತುತಪಡಿಸಿದಾಗ ಅಥವಾ ಒಂದೇ ಕಲಾವಿದ ಅದೇ ರಾಗವನ್ನು ಬೇರೆ ಬೇರೆ ಸಮಯದಲ್ಲಿ ಪ್ರಸ್ತುತಪಡಿಸಿದರೆ, ಪ್ರತಿಯೊಬ್ಬ ಕೇಳುಗನಿಗೂ ಒಂದೇ ಬಗೆಯ ಅನುಭವ ಸಿಗುತ್ತದೆಯೇ?

ಈ ಎಲ್ಲವೂ ರಾಗ-ಲಕ್ಷಣ ಹಾಗೂ ರಾಗದ ಮೂಡ್ ತನ್ನದೇ ಆದ ಸಂಗೀತದ ಸಂಗತಿಗಳು ಹಾಗೂ ಅದರ ನಿರೂಪಣೆಯೊಂದಿಗೆ ಒಂದು ಅಂತರ್ಗತವಾದ ಸಂಬಂಧವನ್ನು ಹೊಂದಿವೆ ಎಂಬುದನ್ನು ಸಾಬೀತುಪಡಿಸುತ್ತವೆ. ಪ್ರತಿಯೊಂದು ರಾಗದ ವಿಶಿಷ್ಟ ಚಹರೆಯನ್ನು ಹೇಳುವಂತಹ ಸಂಗತಿಗಳು ಹಾಗೂ ಅವುಗಳ ವಿನ್ಯಾಸವು ಅದಕ್ಕೆ ಸಂಗೀತಾತ್ಮಕ ಅನನ್ಯತೆ ಮತ್ತು ಸೌಂದರ್ಯವನ್ನು ನೀಡಿ, ರಸಾನುಭೂತಿಯ ಭಾವನೆಗಳನ್ನು ಹುಟ್ಟುಹಾಕುತ್ತದೆ.

ಈ ರಸಾನುಭೂತಿಯ ಭಾವನೆಗಳು ಕಲಾವಿದರ ಅಥವಾ ಕೇಳುಗರ ಮನಸ್ಥಿತಿಯನ್ನು ಅವಲಂಬಿಸಿ ಒಂದು ನಿರ್ದಿಷ್ಟ ರಸವಾಗಿ ಅಥವಾ ಮೂಡ್ ಆಗಿ ಪರಿವರ್ತನೆಯಾಗುತ್ತದೆ.

ರಾಗ ಸಮಯದ ಸಿದ್ಧಾಂತವು ಇಂದು ಎಷ್ಟರಮಟ್ಟಿಗೆ ಪ್ರಸ್ತುತ ಎಂಬ ಕುರಿತು ಚಿಂತನೆಗೆ ಹಚ್ಚುವ ಹಲವಾರು ಬೇರೆ ಸಂಗತಿಗಳೂ ಇವೆ.

1) ರೇಡಿಯೊ, ಟಿವಿ ಮತ್ತು ರೆಕಾರ್ಡಿಂಗ್ ಕಂಪನಿಗಳು ಯಾವ ಸಮಯದಲ್ಲಾದರೂ ಯಾವ ರಾಗವನ್ನಾದರೂ ಧ್ವನಿ ಮುದ್ರಿಸಿಕೊಳ್ಳುತ್ತವೆ. ಇದು ರಾಗದ ಪ್ರಸ್ತುತಿಯ ಮೇಲೆ ಯಾವುದೇ ಪರಿಣಾಮವನ್ನು ಉಂಟುಮಾಡಿದಂತೆ ಕಾಣುವುದಿಲ್ಲ. ಅಷ್ಟೇ ಅಲ್ಲ, ರೇಡಿಯೊ ಹಾಗೂ ಟಿವಿಗಳು ಯಾವುದೇ ಸಮಯದಲ್ಲಾದರೂ ತಮ್ಮ ಅಗತ್ಯಕ್ಕೆ ಅನುಗುಣವಾಗಿ ಹೀಗೆ ಧ್ವನಿ ಮುದ್ರಿಸಿಕೊಂಡಿದ್ದನ್ನು ಪ್ರಸಾರಮಾಡುತ್ತವೆ. ಸಾರ್ವಜನಿಕ ಕಛೇರಿಗಳಲ್ಲಿ ಮಾತ್ರವೇ ರಾಗದ ಮೂಡ್ ಹುಟ್ಟುಹಾಕಲು ಇಂಥ ಸಮಯದಲ್ಲಿ ಇಂಥದೇ ರಾಗವನ್ನು ಪ್ರಸ್ತುತಪಡಿಸಬೇಕೆಂದು ನಿರ್ಬಂಧ ವಿಧಿಸಲಾಗಿದೆ.
2) ಕಲಾವಿದರು ತಮ್ಮ ಅನುಕೂಲತೆಗೆ ಅನುಗುಣವಾಗಿ ಯಾವುದೇ ರಾಗವನ್ನು ಯಾವುದೇ ಸಮಯದಲ್ಲಾದರೂ ಅಭ್ಯಾಸ ಮಾಡುತ್ತಾರೆ, ಅದು ರಾಗದ ಮೂಡನ್ನು ಅಥವಾ ಅದರ ಲಕ್ಷಣವನ್ನು ಪರಿಣಾಮಿಸಿದಂತೆ ಅಥವಾ ಕುಂದಿಸಿದಂತೆ ತೋರುವುದಿಲ್ಲ.
3) ಮಿಶ್ರರಾಗಗಳ ಕುರಿತು ಏನು ಹೇಳಬಹುದು? ಭೈರವಿ-ಬಹಾರ್ ಮತ್ತು ಯಮನಿ-ಬಿಲಾವಲ್ ರಾಗಗಳನ್ನು ಬೆಳಗ್ಗೆ ಮಾತ್ರವೇ ಏಕೆ ಪ್ರಸ್ತುತಪಡಿಸಬೇಕು? ಬಹಾರ್ ಹಾಗೂ ಯಮನ್ ರಾತ್ರಿಯ ರಾಗಗಳು. ಹಾಗಿದ್ದಾಗ ಇವುಗಳ ಮಿಶ್ರರಾಗಗಳನ್ನೂ ರಾತ್ರಿ ಏಕೆ ಪ್ರಸ್ತುತಪಡಿಸಬಾರದು?
4) ಶುದ್ಧರಾಗವನ್ನು ಆಧರಿಸಿದ ಸಿನಿಮಾ ಸಂಗೀತ, ನಾಟ್ಯ ಸಂಗೀತ ಅಥವಾ ರಂಗಗೀತೆಗಳನ್ನು ಅಥವಾ ಭಕ್ತಿಗೀತೆಗಳನ್ನು ಆಲಿಸುವಾಗ, ಈ ರಾಗ-ಸಮಯದ ನಿಯಮವು ನಮ್ಮ ಮನಸ್ಸಿನಲ್ಲಿ ಎಳ್ಳಷ್ಟೂ ಸುಳಿಯುವುದಿಲ್ಲ. ಪ್ರತಿಯಾಗಿ ನಾವು ಯಾವುದೇರಾಗವನ್ನುಯಾವುದೇಸಮಯದಲ್ಲಾದರೂಆನಂದಿಸುತ್ತೇವೆ,ಅಲ್ಲವೇ?
5) ಕರ್ನಾಟಕ ಸಂಗೀತವು ಪರಂಪರೆಗೆ ಹೆಚ್ಚು ಬದ್ಧವಾಗಿದೆ ಎಂದು ಪರಿಗಣಿಸಲಾಗಿದೆ; ಆದಾಗ್ಯೂ ಅದು ಸಮಯ ಸಿದ್ಧಾಂತವನ್ನು ಕಟ್ಟುನಿಟ್ಟಾಗಿ ಪಾಲಿಸುವುದಿಲ್ಲ. ಆದರೆ, ಹೊಂದಾಣಿಕೆಯ ಲಕ್ಷಣವಿರುವ ಹಿಂದೂಸ್ತಾನಿ ಸಂಗೀತ ಮಾತ್ರ ಇನ್ನೂ ಸಮಯ ಸಿದ್ಧಾಂತವನ್ನೇ ಪ್ರತಿಪಾದಿಸುತ್ತಿದೆ!

ಸಮಯ ಸಿದ್ಧಾಂತವನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ, ಕಛೇರಿಯ ಸಮಯದಿಂದ ಹೊರಗುಳಿಯುವ ಅಪರೂಪದ ರಾಗಗಳನ್ನು ಕಳೆದುಕೊಳ್ಳುವ ಅಪಾಯವಿದೆ. ಇದು ಭಾರತೀಯ ಸಂಗೀತಕ್ಕೆ ಅಪಾರ ನಷ್ಟವಲ್ಲವೇ?

ಈ ಎಲ್ಲಾ ಪ್ರಶ್ನೆಗಳನ್ನು ವೈಜ್ಞಾನಿಕವಾಗಿ, ತಾರ್ಕಿಕವಾಗಿ ಒರೆಗೆ ಹಚ್ಚುವ ಅಗತ್ಯವಿದೆ.

ಇಂದು ರಾಗ-ರಸ ಹಾಗೂ ರಾಗ-ಸಮಯ ಪರಿಕಲ್ಪನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಕ್ಕಿಂತ ಹೆಚ್ಚಾಗಿ ರೂಢಿಗತ ಪರಂಪರೆಗೆ ಜೋತು ಬಿದ್ದ ಕಾರಣದಿಂದ ಉಲ್ಲೇಖಿಸಲಾಗುತ್ತದೆ. ಈ ಪರಿಕಲ್ಪನೆಗಳು ಹಿಂದಿನಿಂದ ಬಂದ ಸಂಪ್ರದಾಯಗಳು ಎಂಬ ಕಾರಣದಿಂದಾಗಿ ನಮ್ಮ ಆತ್ಮದಾಳದಲ್ಲಿ ಹುದುಗಿಹೋಗಿವೆ. ಕಾಲ ಸರಿದಂತೆ ಅವು ತಮ್ಮ ಪ್ರಸ್ತುತತೆಯನ್ನು, ಸಂದರ್ಭವನ್ನು ಕಳೆದುಕೊಂಡಿವೆ, ಆದರೆ ಅವುಗಳನ್ನು ಇನ್ನೂ ಕುರುಡಾಗಿ ಪಾಲಿಸುತ್ತಿದ್ದೇವೆ. ಅವುಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸುವುದು ಬೇಡವೇ? ಪರಂಪರೆಯೇ ಹೊಸ ಮಾರ್ಗಗಳನ್ನು ಹುಟ್ಟುಹಾಕುತ್ತದೆ. ಪರಂಪರೆಯು ಪ್ರಗತಿ ಹಾಗೂ ಬೆಳವಣಿಗೆಗೆ ಅಡ್ಡಿಯಾಗ ತೊಡಗಿದರೆ, ಆಗ ಅದನ್ನು ಬದಲಾದ ಸಂದರ್ಭದಲ್ಲಿ ಮರುವ್ಯಾಖ್ಯಾನಿಸುವ ಅಗತ್ಯವಿದೆ. ಅಂತಹ ಸನ್ನಿವೇಶಗಳಲ್ಲಿ, ಪರಂಪರೆಯು ಭಗ್ನವಾಗುವುದಿಲ್ಲ ಅಥವಾ ಊನಗೊಳ್ಳುವುದಿಲ್ಲ, ಬದಲಾಗಿ ಹೊಸ ದಿಕ್ಕುಗಳನ್ನು ತೋರಿಸಲು ಪುನರುಜ್ಜೀವನಗೊಳ್ಳುತ್ತದೆ.

ಹೀಗಾಗಿ ಕಛೇರಿಯಲ್ಲಿ ರಾಗಗಳ ಪ್ರಸ್ತುತಿಯ ಸಮಯ ಮುಖ್ಯವಲ್ಲ; ಪ್ರಸ್ತುತಿಯ ಗುಣಮಟ್ಟ ಹಾಗೂ ಪ್ರಭಾವವು ಮುಖ್ಯ. ರಸ ಹಾಗೂ ಸಮಯವನ್ನು ಲೆಕ್ಕಿಸದೆ, ರಾಗ-ರೂಪವು ಉತ್ತಮವಾಗಿ ಹೊರಹೊಮ್ಮಬೇಕು; ಜೊತೆಗೆ ಕಲಾವಿದ ಹಾಗೂ ಕೇಳುಗರಿಬ್ಬರಿಗೂ ಅದು ಆನಂದಾನುಭೂತಿಯನ್ನು ನೀಡುವಂತಿರಬೇಕು.

ಕನ್ನಡಕ್ಕೆ: ಸುಮಂಗಲಾ

ಟ್ವೆಂಟಿ – 20 ಮ್ಯಾಚ್

A ಭಾರತದ ಪ್ರಮುಖ ಕ್ರೀಡಾಂಗಣಗಳ ಹೆಸರುಗಳಿಗೂ ಅವುಗಳು ಇರುವ ಸ್ಥಳಗಳಿಗೂ ಹೊಂದಿಸಿ

1	ಅಂಬೇಡ್ಕರ್ ಕ್ರೀಡಾಂಗಣ	A	ಪಟಿಯಾಲಾ
2	ಬಾರಾಮತಿ ಕ್ರೀಡಾಂಗಣ	B	ಅಹಮದಾಬಾದ್
3	ಚಿದಂಬರಂ ಕ್ರೀಡಾಂಗಣ	C	ಕೋಲ್ಕತ್ತ
4	ಚಿನ್ನಸ್ವಾಮಿ ಕ್ರೀಡಾಂಗಣ	D	ಗ್ವಾಲಿಯರ್
5	ಧ್ಯಾನ್‌ಚಂದ್ ಕ್ರೀಡಾಂಗಣ	E	ಚೆನ್ನೈ
6	ಈಡನ್ ಗಾರ್ಡನ್	F	ಕಾನ್ಪುರ
7	ಗ್ರೀನ್ ಪಾರ್ಕ್	G	ನಾಗ್ಪುರ
8	ಇಂದಿರಾ ಪ್ರಿಯದರ್ಶಿನಿ	H	ನವದೆಹಲಿ
9	ಲಾಲ್‌ಬಹದ್ದೂರ್	I	ವಿಶಾಖಪಟ್ಟಣ
10	ಮಯೂರ	J	ಬೆಂಗಳೂರು
11	ಮೋತಿಬಾಗ್ ಕ್ರೀಡಾಂಗಣ	K	ಫರೀದಾಬಾದ್
12	ರೂಪಸಿಂಗ್ ಕ್ರೀಡಾಂಗಣ	L	ಲಕ್ನೋ
13	ವಲ್ಲಭಬಾಯಿ ಕ್ರೀಡಾಂಗಣ	M	ಕಟಕ್
14	ಯದುವಿಂದರ್ ಕ್ರೀಡಾಂಗಣ	N	ಹೈದರಾಬಾದ್
15	ವಿದರ್ಭ ಸಿ.ಎ. ಮೈದಾನ	O	ಬರೋಡಾ

B ಕಾಮನ್‌ವೆಲ್ತ್ ಕ್ರೀಡೆಗಳು ಹಾಗೂ ಅವುಗಳ ಇಸವಿಯನ್ನು ಹೊಂದಿಸಿ

1	ಕ್ವಾಲಾಲಂಪುರ	A	2014
2	ಮ್ಯಾಂಚೆಸ್ಟರ್	B	2002
3	ಮೆಲ್ಬರ್ನ್	C	2010
4	ದೆಹಲಿ	D	1998
3	ಗ್ಲಾಸ್ಗೊ	E	2006

ಪದ ಸಂಕಲನ

ಇಲ್ಲಿ ಕೊಟ್ಟಿರುವ ಮೂರು ಅಕ್ಷರ ಪದ ಮತ್ತು ಎರಡು ಅಕ್ಷರಗಳ ಪದ ಸೇರಿಸಿ ಐದು ಅಕ್ಷರ ಬಳಸಿಕೊಂಡು ಒಂದೇ ಪದ ಮಾಡಿ.

1 ರಭಸ + ತರಿ = ____________
2 ಕವನ + ಸುರಿ = ____________
3 ನಕಾಶ + ಆಯಾ = ____________
4 ವಿಮಾನ + ಗಿಡ = ____________
5 ಹುರಿಸು + ದುಂಬಿ = ____________
6 ಜೀವನ + ವಿಮಾ = ____________
7 ಹಳಸು + ನದಿ = ____________

ಬಾಲವಿಜ್ಞಾನ

ಆನೆಬಲ: ಆನೆಯು ತನ್ನ ಸೊಂಡಿಲಿನಲ್ಲಿ 2 ಗ್ಯಾಲನ್ ನೀರನ್ನು ಹೊತ್ತೊಯ್ಯಬಲ್ಲದು. ಆನೆಯ ಸೊಂಡಿಲಿನಲ್ಲಿ 40 ಸಾವಿರ ಮಾಂಸಖಂಡಗಳಿವೆ. ಆದರೆ, ಒಂದು ಮೂಳೆಯೂ ಇಲ್ಲ.

ಕೀಟ-ಲೆ ಪ್ರಶ್ನೆ
ಇಲ್ಲಿರುವ ಕೀಟದ ಹೆಸರನ್ನು ಹೇಳಬಲ್ಲಿರಾ?

ಎಂಟರ ನಂಟು

ಮೊದಲು ನಿಮ್ಮ ಮಿತ್ರನಿಗೆ ಈ ಸ್ವಾರಸ್ಯ ಸಂಖ್ಯೆ 12345679ನ್ನು ಬರೆದುಕೊಳ್ಳುವಂತೆ ತಿಳಿಸಿ (ಈ ಸಂಖ್ಯೆಯನ್ನು ಸುಲಭವಾಗಿ ನೆನಪಿಡಬಹುದು. ಏಕೆಂದರೆ ಈ ಸಂಖ್ಯೆಯಲ್ಲಿ ಎಲ್ಲ ಅಂಕೆಗಳು 1ರಿಂದ 9ರವರೆಗೆ ಕ್ರಮವಾಗಿವೆ. ಆದರೆ 8 ಮಾತ್ರ ಇಲ್ಲ). ಈಗ ಈ ಅಂಕಿಗಳಲ್ಲಿ ನಿಮ್ಮ ಪ್ರೀತಿಯ ಅಂಕಿ ಯಾವುದೆಂದು ನಿಮ್ಮ ಗೆಳೆಯನನ್ನು ಕೇಳಿ. ಅವನು ಹೇಳಿದ ಅಂಕಿಯನ್ನು 9ರಿಂದ ನಿಮ್ಮ ಮನಸ್ಸಿನಲ್ಲಿಯೇ ಗುಣಿಸಿರಿ. ಬಂದ ಉತ್ತರವನ್ನು ನಿಮ್ಮ ವಿಶಿಷ್ಟ ಸಂಖ್ಯೆಯ ಕೆಳಗೆ ಬರೆಯಿರಿ. ಈಗ ಆತ ಗುಣಿಸಿ ನೋಡಲಿ. ಆಶ್ಚರ್ಯ! ಆತನ ಪ್ರೀತಿಯ ಅಂಕಿಗಳೇ ಆ ಲೆಕ್ಕದ ಉತ್ತರದಲ್ಲಿ ಬಂದಿರುತ್ತದೆ. ಏಕೆಂದರೆ ಅದು ಆತನ ಮೆಚ್ಚಿನ ಅಂಕಿ ಹೌದು ತಾನೆ? ಈ ರೀತಿ ಯಾವುದೇ ಅಂಕಿಯನ್ನು ಬಳಸಿದರೂ (12345679) ಈ ಸ್ವಾರಸ್ಯ ಉಂಟಾಗುತ್ತದೆ.

12345679 X 63
37037037
74074074
777777777

ಹೌದು! ಮಿತ್ರನ ಪ್ರೀತಿಯ ಅಂಕಿಗಳೇ ಬಂದಿವೆ. ನೀವೂ ಮಾಡಿ ನೋಡಿ

ಡಜ್ಞ ಚಕ್ಕು ಕೀಳ್ರಷ್ಣ ಕಥೆಯ | ಕಾಗೆ ಮತ್ತು ಕೋಗಿಲೆ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ಇದು ಕೋಗಿಲೆ. ವಸಂತ ಋತುವಿನಲ್ಲಿ ಕುಹೂ ಕುಹೂ ಎಂದು ಇಂಪಾಗಿ ಕೂಗುತ್ತಾ ಗಮನ ಸೆಳೆಯುವ ಹಕ್ಕಿಯಿದು. ಮಾವಿನ ಮರದ ಎಲೆಗಳು ಚಿಗುರುವ ಹೊತ್ತಿನಲ್ಲಿ ಕೋಗಿಲೆ ತುಂಬಾ ಚಟುವಟಿಕೆಯಿಂದ ಇರುತ್ತದೆ. ಈ ಕೋಗಿಲೆ ಮರಿಯಾಗಿ ಬೆಳೆಯುವ ಪರಿಯನ್ನು ತಿಳಿಯೋಣ

ಕೋಗಿಲೆ ತಾನು ಗೂಡು ಕಟ್ಟುವುದಿಲ್ಲ. ಮೊಟ್ಟೆಯಿಡುವ ಸಮಯ ಬಂದಾಗ ಕಾಗೆಯ ಗೂಡಿನಲ್ಲಿ ಮೊಟ್ಟೆ ಇಟ್ಟು ಬರುತ್ತದೆ. ಕಾಗೆ ಮತ್ತು ಕೋಗಿಲೆ ದೇಹ ಸ್ವರೂಪ, ಬಣ್ಣದಲ್ಲಿ ಒಂದೇ ರೀತಿ ಕಾಣಿಸುವುದುಂಟು. ಹಾಗಾಗಿ ಕೋಗಿಲೆ ಕಾಗೆಯ ಗೂಡನ್ನು ಮೊಟ್ಟೆ ಇಡಲು ಬಳಸುತ್ತದೆ


ಕಾಗೆಯು ಕೋಗಿಲೆಯ ಮೊಟ್ಟೆಗಳನ್ನು ತನ್ನದೇ ಮೊಟ್ಟೆಗಳು ಎಂದುಕೊಂಡು ಜೋಪಾನ ಮಾಡಿ ಕಾವು ಕೊಟ್ಟು ಮರಿ ಮಾಡುತ್ತದೆ. ಗುಟುಕು ಕೊಟ್ಟು ಬೆಳೆಸುತ್ತದೆ. ಹಾಗಾಗಿ ಕೋಗಿಲೆಗೆ ಪರಪುಟ್ಟ (ಬೇರೆಯವರು ಸಾಕಿ ಬೆಳೆಸಿದ ಮಗು ಎಂಬ ಅರ್ಥ) ಎಂದೂ ಕರೆಯುವುದುಂಟು


ಮರಿಗಳು ಬೆಳೆದಂತೆ ಕಾಗೆಗೆ ಕೋಗಿಲೆ ಮರಿಗಳು ಭಿನ್ನವಾಗಿರುವುದು ಗೊತ್ತಾಗುತ್ತದೆ. ಕೊನೆಗೆ ಕಾಗೆಯು ಕೋಗಿಲೆಯ ಮರಿಗಳನ್ನು ಬೇರ್ಪಡಿಸಿ ಗೂಡಿನಿಂದ ಹೊರ ಹಾಕುತ್ತದೆ. ಸ್ವಲ್ಪ ಬೆಳೆದ ಮರಿಗಳು ತಾವೇ ಆಹಾರ ಹುಡುಕುತ್ತಾ ಬೆಳೆಯುತ್ತವೆ. ಎಂದಿನಂತೆ ಇಂಪಾಗಿ ಕೂಗುತ್ತವೆ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳನ್ನು ಬಳಸಿಕೊಂಡು ಪಕ್ಕದಲ್ಲಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಹೊಸ ಪದ ರಚಿಸಿ

ಬ	ಗ	ಸುಳಿವು
		ರೀತಿ
		ಹೆಮ್ಮೆಪಡು
		ಮಣೆ
		ಬಿಸಿಲು
		ಕೋಪ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್: 1-M 2-I 3- G 4-K 5-E 6-P 7-O 8-R 9-J 10-T 11-Q 12-L 13-S 14-N 15-H 16-F 17-D 18-C 19-B 20-A

ಅದಲುಬದಲು: 1 ವಾಣಿಕದನ 2 ಸಮಾನ 3 ಕುಂದರಸ 4 ನರಳಿದ ಮಗು

ಜಾಣಪದ ಆಟ: 1 ಕೀಲಿ 2 ಕಾಲಿ 3 ಕುಲ 4 ಕಲಿ 5 ಕೂಲಿ

ಪದ ಆಟ: 1 ಗಣಿತ ಕುಣಿತ 2 ತಕ್ಕಡಿ ಚಕ್ಕಡಿ 3 ಹರಗು ಸೆರಗು 4 ಚಿಗುರು ಉಗುರು 5 ಶಂಕರ ಕಿಂಕರ 6 ಸರಳ ವಿರಳ 7 ಶರಣ ಹರಣ 8 ಸರಾಗ ಪರಾಗ

ದುಲೀಪ್ ಟ್ರೋಫಿ: ಪಶ್ಚಿಮ, ಉತ್ತರ ವಲಯ ತಂಡಗಳಿಗೆ ಇನಿಂಗ್ಸ್ ಮುನ್ನಡೆ

ಪುದುಚೇರಿ/ ಚೆನ್ನೈ (ಪಿಟಿಐ): ಪಶ್ಚಿಮ ವಲಯ ಮತ್ತು ಉತ್ತರ ವಲಯ ತಂಡಗಳು ದುಲೀಪ್ ಟ್ರೋಫಿ ಕ್ರಿಕೆಟ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇನಿಂಗ್ಸ್ ಮುನ್ನಡೆ ಪಡೆದುಕೊಂಡಿವೆ.

ಪುದುಚೇರಿಯಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಯಶ್ ಧುಲ್ ಅವರ ಶತಕದ (193) ನೆರವಿನಿಂದ ಉತ್ತರ ವಲಯ ತಂಡ, ಪೂರ್ವ ವಲಯದ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಗಳಿಸಿದೆ.

ಚೆನ್ನೈನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಪಶ್ಚಿಮ ವಲಯ ತಂಡ ಈಶಾನ್ಯ ವಲಯವನ್ನು 235 ರನ್‌ಗಳಿಗೆ ಆಲೌಟ್ ಮಾಡಿಸಿ, 355 ರನ್‌ಗಳ ಭಾರಿ ಮುನ್ನಡೆ ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಶ್ಚಿಮ ವಲಯ 123 ಓವರ್‌ಗಳಲ್ಲಿ 2ಕ್ಕೆ 590 ಡಿಕ್ಲೇರ್ಡ್. ಈಶಾನ್ಯ ವಲಯ 81.5 ಓವರ್‌ಗಳಲ್ಲಿ 235 (ಅಂಕುರ್ ಮಲಿಕ್ 81, ಆಶೀಶ್ ಥಾಪಾ 43, ಚಿಂತನ್ ಗಜ 38ಕ್ಕೆ 4, ಜಯದೇವ್ ಉನದ್ಕತ್ 35ಕ್ಕೆ 3) ಎರಡನೇ ಇನಿಂಗ್ಸ್: ಪಶ್ಚಿಮ ವಲಯ 9 ಓವರ್‌ಗಳಲ್ಲಿ 1 ವಿಕೆಟ್‌ಗೆ 12

ಪುದುಚೇರಿ ಪಂದ್ಯ: ಮೊದಲ ಇನಿಂಗ್ಸ್: ಪೂರ್ವ ವಲಯ 136.4 ಓವರ್‌ಗಳಲ್ಲಿ 397. ಉತ್ತರ ವಲಯ 111 ಓವರ್‌ಗಳಲ್ಲಿ 3 ವಿಕೆಟ್‌ಗೆ 433 (ಯಶ್ ಧುಲ್ 193, ಮನನ್ ವೋಹ್ರಾ 44, ಧ್ರುವ್ ಶೋರೆ 81, ಮನ್‌ದೀಪ್ ಸಿಂಗ್ ಬ್ಯಾಟಿಂಗ್ 34, ಹಿಮಾನ್ಶು ರಾಣಾ ಬ್ಯಾಟಿಂಗ್ 62)

75ನೇ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ಗೆ ತೆರೆ

ಕರ್ನಾಟಕಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ಈಜು ಸ್ಪರ್ಧೆಯಲ್ಲಿ ಪ್ರಾಬಲ್ಯ ಮುಂದುವರಿಸಿದ ಕರ್ನಾಟಕ ತಂಡ, ಶನಿವಾರ ಇಲ್ಲಿ ಕೊನೆಗೊಂಡ 75ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಡಾ.ಜಾಕಿರ್ ಹುಸೇನ್ ಈಜು ಕೇಂದ್ರದಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ಒಟ್ಟು 250 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಗಳಿಸಿತು. ಪುರುಷರ ವಿಭಾಗದಲ್ಲಿ 129 ಹಾಗೂ ಮಹಿಳೆಯರ ವಿಭಾಗದಲ್ಲಿ 121 ಪಾಯಿಂಟ್‌ಗಳು ಬಂದವು.

ರಾಜ್ಯದ ಈಜುಪಟುಗಳು 14 ಚಿನ್ನ, 4 ಬೆಳ್ಳಿ ಮತ್ತು 11 ಕಂಚು ಸೇರಿದಂತೆ ಒಟ್ಟು 29 ಪದಕ ಜಯಿಸಿದರು. 6 ಚಿನ್ನ, 4 ಬೆಳ್ಳಿ ಮತ್ತು 2 ಕಂಚಿನ ಪದಕ ಗೆದ್ದ ಎಸ್‌ಎಸ್‌ಸಿಬಿ ಎರಡನೇ ಸ್ಥಾನ ಗಳಿಸಿತು.

ಕರ್ನಾಟಕದ ಎಸ್.ಶಿವ ಹಾಗೂ ಗುಜರಾತ್‌ನ ಮಾನಾ ಪಟೇಲ್ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ 'ಶ್ರೇಷ್ಠ ಈಜುಪಟು' ಗೌರವ ಪಡೆದುಕೊಂಡರು. ಮೂರು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗೆದ್ದ ಶಿವ, ಒಂದು ಕೂಟ ದಾಖಲೆಯನ್ನೂ ಮಾಡಿದ್ದಾರೆ.

ಕೊನೆಯ ದಿನವಾದ ಶನಿವಾರ, ಕರ್ನಾಟಕ ಎರಡು ಚಿನ್ನ ಹಾಗೂ ಮೂರು ಕಂಚಿನ ಪದಕ ಗೆದ್ದುಕೊಂಡಿತು. ಅನೀಶ್ ಎಸ್.ಗೌಡ ಅವರು ಪುರುಷರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 1 ನಿ. 52.49 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ದೆಹಲಿಯ ವಿಶಾಲ್ ಗ್ರೆವಾಲ್ ಬೆಳ್ಳಿ ಹಾಗೂ ಕರ್ನಾಟಕದ ಆರ್.ಸಂಭವ್ ಕಂಚು ಪಡೆದರು.

ಎಸ್.ಶಿವ ಅವರು 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 57.59 ಸೆ.ಗಳಲ್ಲಿ ಗುರಿತಲುಪಿ ಚಿನ್ನ ತಮ್ಮದಾಗಿಸಿಕೊಂಡರು. ಎಸ್‌ಎಸ್‌ಸಿಬಿಯ ವಿ.ವಿನಾಯಕ್ ಬೆಳ್ಳಿ ಗೆದ್ದರೆ, ಕರ್ನಾಟಕದ ಉತ್ಕರ್ಷ್ ಎಸ್.ಪಾಟೀಲ್ (58.38 ಸೆ.) ಕಂಚು ಪಡೆದರು.

ಮಾನವಿ ವರ್ಮಾ ಅವರು ಮಹಿಳೆಯರ 100 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಮೂರನೇ ಸ್ಥಾನ (1 ನಿ. 16.99 ಸೆ.) ಪಡೆದರು. ಪಂಜಾಬ್‌ನ ಚಾಹತ್ ಅರೋರಾ (1:13.61 ಸೆ.) ಚಿನ್ನ ಗೆದ್ದರೆ, ಮಹಾರಾಷ್ಟ್ರದ ಜ್ಯೋತಿ ಪಾಟೀಲ್ (1:16.33 ಸೆ.) ಬೆಳ್ಳಿ ಪಡೆದರು.

ಚಾಹತ್ ಅರೋರಾ ಅವರು ಈ ವಿಭಾಗದಲ್ಲಿ ಕೂಟ ದಾಖಲೆಯನ್ನು ಮಾಡಿದರು. ಮಾನಾ ಪಟೇಲ್ ಅವರು 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ತಮ್ಮದೇ ಹೆಸರಿನಲ್ಲಿದ್ದ ಕೂಟ ದಾಖಲೆ ಸರಿಗಟ್ಟಿದ ಸಾಧನೆ ಮಾಡಿದರು.

ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡ ಕರ್ನಾಟಕ ತಂಡ

ಮುಖ್ಯಾಂಶಗಳು
- ಕರ್ನಾಟಕಕ್ಕೆ ಒಟ್ಟು 250 ಪಾಯಿಂಟ್ಸ್
- 14 ಚಿನ್ನ ಸೇರಿದಂತೆ 29 ಪದಕ
- ಎಸ್.ಶಿವ 'ಶ್ರೇಷ್ಠ ಈಜುಪಟು'

ಆರ್ಚರಿ: 18ಕ್ಕೆ ಟ್ರಯಲ್ಸ್

ಬೆಂಗಳೂರು: ರಾಷ್ಟ್ರೀಯ ಸಬ್‌ಜೂನಿಯರ್ ಆರ್ಚರಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡಗಳ ಆಯ್ಕೆಗಾಗಿ ಇದೇ 18ರಂದು ಟ್ರಯಲ್ಸ್ ನಡೆಯಲಿದೆ.ಇಲ್ಲಿಯ ಕಂಠೀರವ ಕ್ರೀಡಾಂಗಣದ ಆರ್ಚರಿ ಮೈದಾನದಲ್ಲಿ ಟ್ರಯಲ್ಸ್ ನಡೆಯಲಿದೆ ಎಂದು ಕರ್ನಾಟಕ ಆರ್ಚರಿ ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ಅನಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್ ಅಕ್ಟೋಬರ್ 15ರಿಂದ 20ರವರೆಗೆ ಛತ್ತೀಸಗಡದ ರಾಯಪುರದಲ್ಲಿ ನಿಗದಿಯಾಗಿದೆ.

ಫೈನಲ್ ಇಂದು; ಪ್ರಬಲ ಪೈಪೋಟಿ ನಿರೀಕ್ಷೆ

ಲಂಕಾ–ಪಾಕ್: ಯಾರಿಗೆ ಕಪ್?

ದುಬೈ (ಪಿಟಿಐ): ಏಷ್ಯಾದ 'ಕ್ರಿಕೆಟ್ ಶಕ್ತಿ' ಯಾರೆಂಬುದನ್ನು ನಿರ್ಧರಿಸುವ ಏಷ್ಯಾ ಕಪ್ ಟಿ20 ಟೂರ್ನಿಯ ಫೈನಲ್‌ನಲ್ಲಿ ಭಾನುವಾರ ಶ್ರೀಲಂಕಾ –ಪಾಕಿಸ್ತಾನ ತಂಡಗಳು ಸೆಣಸಾಡಲಿದ್ದು, ಜಿದ್ದಾಜಿದ್ದಿನ ಹೋರಾಟ ನಿರೀಕ್ಷಿಸಲಾಗಿದೆ.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯ, ಶ್ರೀಲಂಕಾ ಆಟಗಾರರ ಪಾಲಿಗೆ ಮಹತ್ವದ್ದಾಗಿದೆ. ಈ ಪುಟ್ಟ ದ್ವೀಪರಾಷ್ಟ್ರವು ಕಳೆದ ಕೆಲ ಸಮಯಗಳಿಂದ ರಾಜಕೀಯ ಬಿಕ್ಕಟ್ಟು ಮತ್ತು ಆರ್ಥಿಕ ಸಂಕಷ್ಟದಿಂದ ನಲುಗಿದೆ. ಏಷ್ಯಾ ಕಪ್ ಗೆದ್ದು ತನ್ನ ದೇಶದ ಜನರ ನೋವನ್ನು ಅಲ್ಪ ಮರೆಸುವ ಅವಕಾಶ ದಸುನ್ ಶನಕ ಬಳಗಕ್ಕೆ ದೊರೆತಿದೆ.

ಈ ಬಾರಿಯ ಏಷ್ಯಾ ಕಪ್ ಟೂರ್ನಿ ನಿಗದಿತ ವೇಳಾಪಟ್ಟಿಯಂತೆ ಶ್ರೀಲಂಕಾದಲ್ಲಿ ನಡೆಯಬೇಕಿತ್ತು. ಅಲ್ಲಿ ಬಿಕ್ಕಟ್ಟು ತಲೆದೋರಿದ್ದರಿಂದ ದುಬೈಗೆ ಸ್ಥಳಾಂತರಿಸಲಾಗಿತ್ತು. ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಲ್ಲದೆ ದುಬೈನಲ್ಲಿರುವ ಬಹುತೇಕ ಕ್ರಿಕೆಟ್ ಪ್ರೇಮಿಗಳು ಫೈನಲ್‌ನಲ್ಲಿ ಭಾರತ– ಪಾಕಿಸ್ತಾನ ಎದುರಾಗಬೇಕು ಎಂದೇ ಬಯಸಿದ್ದರು. ಆದರೆ ಲಂಕಾ ತಂಡ ಅಮೋಘ ಆಟವಾಡಿ ಪ್ರಶಸ್ತಿ ಸುತ್ತು ತಲುಪಿದೆ.

ಶುಕ್ರವಾರ ನಡೆದ 'ಸೂಪರ್ 4' ಹಂತದ ಕೊನೆಯ ಪಂದ್ಯದಲ್ಲಿ ಶ್ರೀಲಂಕಾ ತಂಡ, ಪಾಕ್ ಎದುರು ಐದು ವಿಕೆಟ್‌ಗಳ ಜಯ ಪಡೆದಿತ್ತು. ಈ ಗೆಲುವು ನೀಡಿದ ಆತ್ಮವಿಶ್ವಾಸದೊಂದಿಗೆ ಭಾನುವಾರ ಕಣಕ್ಕಿಳಿಯಲಿದೆ. .

ಲಂಕಾ ತಂಡದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಉತ್ತಮ ಲಯದಲ್ಲಿದ್ದಾರೆ. ಕುಸಾಲ್ ಮೆಂಡಿಸ್ ಮತ್ತು ಪಥುಮ್ ನಿಸಾಂಕ ಉತ್ತಮ ಆರಂಭ ನೀಡುತ್ತಿದ್ದಾರೆ. ಧನುಷ್ಕಾ ಗುಣತಿಲಕ, ಭಾನುಕ ರಾಜಪಕ್ಸ ಮತ್ತು ದಸುನ್ ಶನಕ ಅವರು ಆ ಬಳಿಕ ಇನಿಂಗ್ಸ್‌ಗೆ ಬಲ ತುಂಬುವರು.

ಲಂಕಾ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಕಟ್ಟಿಲ್ಲ. ಆದರೆ ಬಿರುಸಿನ ವೇಗದಲ್ಲಿ 25–30 ರನ್ ಕಲೆ ಹಾಕುವರು. ಟೂರ್ನಿಯಲ್ಲಿ ಆಡಿದ ಐದು ಪಂದ್ಯಗಳಲ್ಲಿ ಲಂಕಾ ಬ್ಯಾಟರ್‌ಗಳು 28 ಸಿಕ್ಸರ್ ಮತ್ತು 62 ಬೌಂಡರಿ ಹೊಡೆದಿದ್ದಾರೆ. ಇದು ಅವರ ಆಕ್ರಮಣಕಾರಿ ಮನೋಭಾವವನ್ನು ತೋರಿಸುತ್ತದೆ. ಬೌಲಿಂಗ್ ವಿಭಾಗದಲ್ಲಿ ಮಹೀಶ್ ತೀಕ್ಷಣ, ವನಿಂದು ಹಸರಂಗ ಮತ್ತು ದಿಲ್ಶನ್ ಮಧುಶನಕಾ ಅವರನ್ನು ನೆಚ್ಚಿಕೊಂಡಿದೆ.

ಮತ್ತೊಂದೆಡೆ ಪಾಕಿಸ್ತಾನ ಕೂಡಾ ಟ್ರೋಫಿಯ ಮೇಲೆ ಕಣ್ಣಿಟ್ಟಿದೆ. ನಾಯಕ ಬಾಬರ್ ಅಜಂ ಈ ಟೂರ್ನಿಯಲ್ಲಿ ಇನ್ನೂ ಲಯ ಕಂಡುಕೊಳ್ಳದೇ ಇರುವುದು ತಂಡದ ಚಿಂತೆಗೆ ಕಾರಣವಾಗಿದೆ. ಆದರೆ ಮೊಹಮ್ಮದ್ ರಿಜ್ವಾನ್ ಮತ್ತು ಮೊಹಮ್ಮದ್ ನವಾಜ್ ಎದುರಾಳಿ ಬೌಲಿಂಗ್ ದಾಳಿಯ ದಿಕ್ಕುತಪ್ಪಿಸುವ ತಾಕತ್ತು ಹೊಂದಿದ್ದಾರೆ.

ಪಾಕ್ ತಂಡದ ಬಲ ಬೌಲಿಂಗ್ ವಿಭಾಗದಲ್ಲಿ ಅಡಗಿದೆ. ನಸೀಮ್ ಶಾ, ಹ್ಯಾರಿಸ್ ರವೂಫ್ ಮತ್ತು ಮೊಹಮ್ಮದ್ ಹಸನೈನ್ ಈಗಾಗಲೇ ತಮ್ಮ ಸಾಮರ್ಥ್ಯ ತೋರಿಸಿದ್ದಾರೆ. ಸ್ಪಿನ್ನರ್‌ಗಳಾದ ಶಾದಾಬ್ ಖಾನ್ ಮತ್ತು ಮೊಹಮ್ಮದ್ ನವಾಜ್ ಅವರೂ ರನ್ ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಂದ್ಯ ಆರಂಭ: ಸಂಜೆ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಡಿಸ್ನಿ ಪ್ಲಸ್ ಹಾಟ್‌ಸ್ಟಾರ್ ಆ್ಯಪ್

ಪಾಕಿಸ್ತಾನ ತಂಡದ ನಾಯಕ ಬಾಬರ್ ಅಜಂ (ಎಡ) ಮತ್ತು ಶ್ರೀಲಂಕಾ ತಂಡದ ನಾಯಕ ದಸುನ್ ಶನಕ –ಎಪಿ ಚಿತ್ರ

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಆಸ್ಟ್ರೇಲಿಯಾ, ಚೀನಾ

ಬೆಂಗಳೂರು: ಇಸಾಬೆಲ್ ಬೋರ್‌ಫೆಸ್ ಅವರ ಅಮೋಘ ಆಟದ ಬಲದಿಂದ ಆಸ್ಟ್ರೇಲಿಯಾ ತಂಡವು 18 ವರ್ಷದೊಳಗಿನವರ ಏಷ್ಯನ್ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಎ ಡಿವಿಷನ್‌ನಲ್ಲಿ ಫೈನಲ್ ಪ್ರವೇಶಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಶನಿವಾರ ಆಸ್ಟ್ರೇಲಿಯಾ 70–61ರಿಂದ ಚೀನಾ ತೈಪೆ ವಿರುದ್ಧ ಗೆದ್ದಿತು.

ಇಸಾಬೆಲ್ 19 ಪಾಯಿಂಟ್ಸ್ ಸೂರೆ ಮಾಡಿದರು. ಐಸ್ಲಾ ಜಫರ್‌ಮನ್ಸ್ (15 ಪಾಯಿಂಟ್ಸ್) ಮತ್ತು ನಾಯಕಿ ಡಲ್ಲಾಸ್ ಲಾಫ್‌ರಿಜ್ (14) ಆಸ್ಟ್ರೇಲಿಯಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಚೀನಾ ತಂಡದ ಲೀ ವೆನ್‌ಜಿಯಾ (ಎಡ) ಮತ್ತು ಜಪಾನ್‌ನ ಯಾಬು ಮಿನಾಮಿ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ತೈಪೆ ಪರ ಎನ್‌ಸಿನ್ ಲಿ ಗಳಿಸಿದ 25 ಪಾಯಿಂಟ್ಸ್ ವ್ಯರ್ಥವಾದವು.

ನಾಲ್ಕರ ಘಟ್ಟದ ಇನ್ನೊಂದು ಜಿದ್ದಾಜಿದ್ದಿನ ಪಂದ್ಯದಲ್ಲಿ ಚೀನಾ 54–51ರಿಂದ ಜಪಾನ್ ಎದುರು ಗೆದ್ದು ಫೈನಲ್‌ಗೆ ಕಾಲಿಟ್ಟಿತು.